ಬುಧವಾರ, ಆಗಸ್ಟ್ 14, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

‘ತಿರಂಗ’ ಚಹರೆ

ಸ್ವಾತಂತ್ರ್ಯೋತ್ಸವದ ಅಂಗವಾಗಿ ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ವಿದ್ಯಾರ್ಥಿನಿಯರು ಮುಖದ ಮೇಲೆ ರಾಷ್ಟ್ರಧ್ವಜದ ತ್ರಿವರ್ಣ ಬಳಿದುಕೊಂಡು ಸಂಭ್ರಮಿಸಿದರು





ತುಂಗಭದ್ರಾ ಜಲಾಶಯದಲ್ಲಿ ತಜ್ಞರ ಸಲಹೆಯಂತೆ ಸುರಕ್ಷತಾ ಕ್ರಮ: ಮುಖ್ಯಮಂತ್ರಿ ಸಿದ್ದರಾಮಯ್ಯ

ಅವಧಿ ಮೀರಿದ್ದರೂ ಬದಲಾಗದ ಗೇಟ್

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ತುಂಗಭದ್ರಾ ಜಲಾಶಯದಲ್ಲಿ 70 ವರ್ಷಗಳಲ್ಲಿ ಮೊದಲ ಬಾರಿಗೆ ಗೇಟ್ ತುಂಡಾಗಿದೆ. 50 ವರ್ಷಗಳಿಗೊಮ್ಮೆ ಗೇಟ್ ಹಾಗೂ ಸರಪಳಿ ಬದಲಾಯಿಸಬೇಕಾಗಿತ್ತು ಎಂದು ತಜ್ಞರು ತಿಳಿಸಿದ್ದಾರೆ. ಇನ್ನು ಮುಂದೆ ಅವರ ಸಲಹೆಯಂತೆ ತುಂಗಭದ್ರಾ ಮಂಡಳಿ ಹಾಗೂ ಸಂಬಂಧಪಟ್ಟ ಮೂರೂ ರಾಜ್ಯಗಳು ಈ ಕುರಿತು ಕ್ರಮ ಕೈಗೊಳ್ಳಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾಲ್ಲೂಕಿನ ಮುನಿರಾಬಾದ್‌ನಲ್ಲಿ ತುಂಗಭದ್ರಾ ಜಲಾಶಯದಲ್ಲಿ ಕೊಚ್ಚಿ ಹೋದ 19ನೇ ಗೇಟ್ ಸ್ಥಳವನ್ನು ಮಂಗಳವಾರ ಪರಿಶೀಲಿಸಿ, ಜಲಾಶಯದ ಗೇಟ್‌ಗಳ ನಿರ್ಮಾಣ ಮತ್ತು ಸುರಕ್ಷತಾ ತಜ್ಞ ಎಂಜಿನಿಯರ್ ಕನ್ನಯ್ಯ ನಾಯ್ಡು ಅವರ ಜೊತೆ ಚರ್ಚಿಸಿದರು. ಆಂಧ್ರಪ್ರದೇಶದ ಹಣಕಾಸು ಸಚಿವ ಪಿ. ಕೇಶವ್, ಅಲ್ಲಿಂದ ಬಂದಿದ್ದ ಶಾಸಕರು ಹಾಗೂ ಸಂಸದರಿಗೆ ಸಿದ್ದರಾಮಯ್ಯ ಅವರು, 'ಎಲ್ಲ ರಾಜ್ಯಗಳ ರೈತರ ಹಿತ ಕಾಯಲು ಬದ್ಧ. ಗೇಟ್ ಅಳವಡಿಕೆ ವಿಳಂಬವಾಗುವುದಿಲ್ಲ' ಎಂದು ಅವರು ಭರವಸೆ ನೀಡಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ, 'ರೈತರ ಮೊದಲ ಬೆಳೆಗೆ 90 ಟಿಎಂಸಿ ಅಡಿ ನೀರು ಬೇಕಾಗಿದೆ. ಜಲಾಶಯದ 50ರಿಂದ 60 ಟಿಎಂಸಿ ಅಡಿ ನೀರು ಹೊರಬಿಡದೆ ದುರಸ್ತಿ ಕಾರ್ಯ ಕೈಗೊಳ್ಳಲು ಸಾಧ್ಯವಿಲ್ಲ. ನೀರಿನ ಮಟ್ಟ ಕಡಿಮೆ ಮಾಡಲಾಗುತ್ತಿದ್ದು, ನಂತರವೂ 64 ಟಿಎಂಸಿ ಅಡಿ ನೀರು ಉಳಿಯುತ್ತದೆ. ಗೇಟ್ ದುರಸ್ತಿ ತ್ವರಿತವಾಗಿ ಮುಗಿಸಲು ಸೂಚಿಸಲಾಗಿದ್ದು ರೈತರು ಆತಂಕಪಡುವ ಅಗತ್ಯವಿಲ್ಲ' ಎಂದರು.

'ಹವಾಮಾನ ಇಲಾಖೆ ಮುನ್ಸೂಚನೆಯಂತೆ ಆಗಸ್ಟ್ 17ರ ಬಳಿಕ ಮತ್ತೆ ಮಳೆಯಾಗಲಿದೆ. ತುಂಗಭದ್ರಾ ಜಲಾಶಯದಿಂದ ಪೋಲಾಗಿರುವ ನೀರು ಮತ್ತೆ ತುಂಬಿಕೊಳ್ಳಲಿದೆ. ಆಗ ನಾನೇ ಬಂದು ಬಾಗಿನ ಅರ್ಪಿಸುತ್ತೇನೆ. ಯಾರೂ ಆತಂಕಗೊಳ್ಳುವ ಅಗತ್ಯವಿಲ್ಲ' ಎಂದು ತಿಳಿಸಿದರು.



ಅಪಾರ ಪ್ರಮಾಣದಲ್ಲಿ ನೀರು ಹೊರಬಿಟ್ಟ ಕಾರಣ ತುಂಗಭದ್ರಾ ಜಲಾಶಯದಲ್ಲಿ ನೀರಿನ ಪ್ರಮಾಣ ಇಳಿಕೆಯಾಗಿದೆ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

'ಜಲಾಶಯ ಮಂಡಳಿ ನಿರ್ವಹಣೆ ಯಾರ ಕೈಯಲ್ಲಿದೆ?'

ಕೊಪ್ಪಳ: ಜಲಾಶಯದ ವಿಚಾರವನ್ನು ಬಿಜೆಪಿ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದ್ದು, ಈ ವಿಷಯದಲ್ಲಿ ರಾಜಕಾರಣದ ಮಾತು ಆಡುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

'ತುಂಗಭದ್ರಾ ಜಲಾಶಯದ ಸಂಪೂರ್ಣ ನಿರ್ವಹಣೆ ಜವಾಬ್ದಾರಿ ಜಲಾಶಯ ಮಂಡಳಿಯದ್ದಾಗಿದೆ. ಭಾರತ ಸರ್ಕಾರ ನೇಮಿಸಿದ ಅಧ್ಯಕ್ಷರು, ಕೇಂದ್ರ ಜಲ ಆಯೋಗ, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಕರ್ನಾಟಕದ ಸದಸ್ಯರು ಮಂಡಳಿಯಲ್ಲಿರುತ್ತಾರೆ. ಇನ್ನೊಬ್ಬರ ಮೇಲೆ ಗೂಬೆ ಕೂರಿಸುವ ಬದಲು ವಿಶ್ಲೇಷಣೆ ಮಾಡುವುದು ಅಗತ್ಯ. ಆದ್ದರಿಂದ ಈ ವಿಷಯದಲ್ಲಿ ಯಾರನ್ನೂ ದೂಷಿಸುವುದಿಲ್ಲ' ಎಂದರು.

ಗೇಟ್ ನಿರ್ಮಾಣ: ಮತ್ತೊಂದು ಕಂಪನಿಗೆ ಹೊಣೆ

ತುಂಗಭದ್ರಾ ಜಲಾಶಯದಲ್ಲಿ ಕೊಚ್ಚಿ ಹೋಗಿರುವ 19ನೇ ಗೇಟ್ ಜಾಗದಲ್ಲಿ ಶಾಶ್ವತ ಗೇಟ್ ಬದಲಿಗೆ ತಾತ್ಕಾಲಿಕವಾಗಿ 'ಸ್ಟಾಪ್‌ಲಾಗ್ ಗೇಟ್' ಅಳವಡಿಸುವುದು ಖಚಿತವಾಗಿದ್ದು, ಇದರ ನಿರ್ಮಾಣದ ಹೊಣೆಯನ್ನು ಮತ್ತೊಂದು ಕಂಪನಿಗೂ ನೀಡಲಾಗಿದೆ.

ನಾರಾಯಣ ಎಂಜಿನಿಯರಿಂಗ್ಸ್ ಮತ್ತು ಹಿಂದೂಸ್ತಾನ್ ಎಂಜಿನಿಯರಿಂಗ್ಸ್ ಕಂಪನಿಗಳು ಈಗಾಗಲೇ ಗೇಟ್‌ಗಳ ತಯಾರಿಕಾ ಕೆಲಸ ಆರಂಭಿಸಿವೆ. ಇದನ್ನು ಚುರುಕುಗೊಳಿಸಲು ಈಗ ಜಿಂದಾಲ್ ಕಂಪನಿಗೂ ನೀಡಲಾಗಿದೆ. ಯಾವ ಕಂಪನಿ ವೇಗವಾಗಿ ಕೆಲಸ ಮುಗಿಸುತ್ತದೆಯೊ ಅದನ್ನೇ ಮೊದಲು ಅಳವಡಿಸಲಾಗುತ್ತದೆ.

'ಸ್ಥಳೀಯವಾಗಿ ತಯಾರಿಸಲಾಗುತ್ತಿರುವ ಗೇಟ್‌ಗಳ ವಿನ್ಯಾಸಕ್ಕೆ ಈಗಾಗಲೇ ಮಂಡಳಿಯ ಸಭೆಯಲ್ಲಿ ಅನುಮೋದನೆ ಲಭಿಸಿದ್ದು, ಒಂದೆರಡು ದಿನಗಳಲ್ಲಿ ಗೇಟ್ ಅಳವಡಿಕೆ ಕೆಲಸ ಆರಂಭಿಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

'ಕೆಆರ್‌ಎಸ್ ಸುಭದ್ರ, ಆತಂಕ ಬೇಡ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕೆ.ಆರ್.ಎಸ್ ಅಣೆಕಟ್ಟೆ ನಿರ್ಮಾಣವಾಗಿ 90 ವರ್ಷವಾಗಿದ್ದು, ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮೊನ್ನೆಯಷ್ಟೇ ವರದಿ ಬಂದಿದ್ದು, ಸದ್ಯ ಅಣೆಕಟ್ಟೆ ಸುಭದ್ರವಾಗಿದೆ. ಯಾರೂ ಆತಂಕಪಡುವ ಅಗತ್ಯವಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯದ ಎಲ್ಲಾ ಅಣೆಕಟ್ಟೆಗಳ ಸುರಕ್ಷತೆಗೆ ರಚಿಸಲಾಗಿರುವ ಸಮಿತಿಯು ನಿಗಾ ವಹಿಸಲಿದೆ. ತುಂಗಭದ್ರಾ ಅಣೆಕಟ್ಟೆಯ ಕ್ರಸ್ಟ್ ಗೇಟ್ ತುಂಡಾಗಿದ್ದು, ವರದಿ ಬರುವವರೆಗೆ ವಿರೋಧ ಪಕ್ಷಗಳು ಸುಮ್ಮನಿದ್ದರೆ ಒಳ್ಳೆಯದು' ಎಂದರು.

'ಅಣೆಕಟ್ಟೆ ವಿಚಾರದಲ್ಲಿ ರಾಜಕೀಯ ಬೆರೆಸುವುದು ಸರಿಯಲ್ಲ. ಕಾಮಾಲೆ ಕಣ್ಣಿನವರಿಗೆ ಕಾಣೋದೆಲ್ಲ ಹಳದಿ ಎಂಬಂತೆ, ಬಿಜೆಪಿಯವರಿಗೆ ದೇಶವೆಲ್ಲಾ ಹಳದಿಯಾಗಿ ಕಾಣುತ್ತಿದೆ. ಇದು ರಾಜಕೀಯ ಮಾಡುವ ಸಂದರ್ಭವಲ್ಲ' ಎಂದು ತಿರುಗೇಟು ನೀಡಿದರು.

'ಕಾಸಿಗಾಗಿ ಹುದ್ದೆ ನೀಡಿದ್ದರ ಫಲ'

ಬೆಂಗಳೂರು: ಪ್ರಮುಖ ಜವಾಬ್ದಾರಿ ಹೊಂದಿರುವ ಹುದ್ದೆಗಳಿಗೂ ಹಣ ಪಡೆದು ವರ್ಗಾವಣೆ ಮಾಡುವ ಪರಿಪಾಟದಿಂದಾಗಿಯೇ ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್ ಅವಘಡದಂತಹ ಘಟನೆಗಳು ನಡೆಯುತ್ತಿವೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಹಣಕೊಟ್ಟು ಪ್ರಮುಖ ಸ್ಥಾನಕ್ಕೆ ಬರುವ ಮುಖ್ಯ ಎಂಜಿನಿಯರ್, ಕಾರ್ಯನಿರ್ವಾಹಕ ಎಂಜಿನಿಯರ್‌ಗಳು ತಾವು ಆ ಹುದ್ದೆಯಲ್ಲಿ ಇರುವಷ್ಟು ದಿನವೂ ಕೊಟ್ಟ ಹಣ ಮರಳಿ ಪಡೆಯುವ ಕುರಿತು ಯೋಚಿಸುತ್ತಾರೆ. ಜಲಾಶಯಗಳ ಸುರಕ್ಷತೆ ಅವರಿಗೆ ಪ್ರಮುಖ ವಿಷಯವೇ ಆಗುವುದಿಲ್ಲ ಎಂದರು.

ತುಂಗಭದ್ರಾ ಅಣೆಕಟ್ಟು ಪ್ರಕರಣದ ಕುರಿತು ವಿಸ್ತೃತ ತನಿಖೆ ಮಾಡಬೇಕು. ತಂತ್ರಜ್ಞರನ್ನು ಒಳಗೊಂಡ ಸಮಿತಿ ರಚಿಸಬೇಕು. ರೈತರ ಬೆಳೆಗಳಿಗೆ ನೀರು ಸಿಗದಂತೆ ಆಗಿರುವ ಅನ್ಯಾಯಕ್ಕೆ ಹೊಣೆಗಾರರನ್ನು ಗುರುತಿಸಬೇಕು. ಇಂತಹ ಘಟನೆಗಳು ಮರುಕಳುಹಿಸದಂತೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

'ಅರೆಕಾಲಿಕ ಮಂತ್ರಿ'

ಚಿತ್ರದುರ್ಗ: 'ಭ್ರಷ್ಟಾಚಾರದಲ್ಲಿ ಮುಳುಗಿರುವ ರಾಜ್ಯ ಸರ್ಕಾರ ನೀರಾವರಿ ಕ್ಷೇತ್ರವನ್ನು ಸಂಪೂರ್ಣ ನಿರ್ಲಕ್ಷಿಸಿದೆ. ರಾಜ್ಯದಲ್ಲಿ ಅರೆಕಾಲಿಕ ಜಲಸಂಪನ್ಮೂಲ ಸಚಿವರಿದ್ದು, ರೈತರು ಪರದಾಡುವಂತಾಗಿದೆ' ಎಂದು ಸಂಸದ ಗೋವಿಂದ ಕಾರಜೋಳ ಮಂಗಳವಾರ ವ್ಯಂಗ್ಯವಾಡಿದರು.

ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಲಸಂಪನ್ಮೂಲ ಇಲಾಖೆ ಸಚಿವ ಸ್ಥಾನ ಹೊಂದುವುದರ ಜೊತೆಗೆ ಕೆಪಿಸಿಸಿ ಅಧ್ಯಕ್ಷರೂ ಆಗಿದ್ದಾರೆ. ಇಲಾಖೆಯ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತಿಲ್ಲ ಎಂದು ದೂರಿದರು.

ಹೊಸಪೇಟೆ ಬಳಿಯ ತುಂಗಭದ್ರಾ ಜಲಾಶಯದ 13ರಿಂದ 33ನೇ ಗೇಟ್ ನೋಡಿಕೊಳ್ಳುವ ಜವಾಬ್ದಾರಿ ರಾಜ್ಯ ಸರ್ಕಾರಕ್ಕಿದೆ. ಜಲಾಶಯ ಸುರಕ್ಷತಾ ಸಮಿತಿಯ ಸಲಹೆ ಸೂಚನೆಗಳನ್ನು ಮೊದಲೇ ಪಡೆಯಬೇಕಾಗಿತ್ತು' ಎಂದು ಅಭಿಪ್ರಾಯಪಟ್ಟರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

> **ಹೇಮಾವತಿ ಜಲಾಶಯಕ್ಕೆ ಭೇಟಿ ನೀಡಿ, ಪರಿಶೀಲಿಸಲಾಗಿದೆ. ಜಲಾಶಯದ ಗೇಟ್‌ಗಳು ಸುಭದ್ರವಾಗಿದ್ದು, ಸರ್ಕಾರಕ್ಕೆ ವರದಿ ನೀಡಲಾಗಿದೆ**
> **ಸಿ.ಸತ್ಯಭಾಮಾ,** ಜಿಲ್ಲಾಧಿಕಾರಿ ಹಾಸನ

> **ಗ್ಯಾರಂಟಿಗಳನ್ನು ಜಾರಿ ಮಾಡುವ ಭರದಲ್ಲಿ ರಾಜ್ಯ ಸರ್ಕಾರವು ಖಜಾನೆ ಖಾಲಿ ಮಾಡಿದೆ. ಹೊಸ ಅಣೆಕಟ್ಟೆ ಮತ್ತು ಏತನೀರಾವರಿ ಮಂಜೂರು ಮಾಡುವುದಿರಲಿ, ಅಣೆಕಟ್ಟೆಗಳ ನಿರ್ವಹಣೆಗೆ ಹಣವಿಲ್ಲ. ತುಂಗಭದ್ರಾ ಜಲಾಶಯವೇ ಇದಕ್ಕೆ ಉದಾಹರಣೆ. ಖುದ್ದು ನಾನು ಅಣೆಕಟ್ಟೆ ನೋಡಿದ್ದೇನೆ. ಅದರ ನಿರ್ವಹಣೆಗೆ ಸಿಬ್ಬಂದಿ, ಎಂಜಿನಿಯರ್‌ಗಳಿಲ್ಲ**
> **ಜಗದೀಶ ಶೆಟ್ಟರ್,** ಸಂಸದ, ಬೆಳಗಾವಿ

ಸುದ್ದಿ 2 ನಿಮಿಷ

ಕೆನೆಪದರ; ಖರ್ಗೆ ಅಪಸ್ವರ ಸಲ್ಲ: ಮಾದಾರ ಚನ್ನಯ್ಯ ಸ್ವಾಮೀಜಿ

ಚಿತ್ರದುರ್ಗ: 'ಪರಿಶಿಷ್ಟ ಜಾತಿ, ಪಂಗಡಗಳ ಮೀಸಲಾತಿಗೆ ಕೆನೆಪದರ ವಿಚಾರದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಪಸ್ವರ ಎತ್ತಿರುವುದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಒಳ್ಳೆಯದಲ್ಲ' ಎಂದು ಮಾದಾರ ಚನ್ನಯ್ಯ ಗುರುಪೀಠದ ಪೀಠಾಧ್ಯಕ್ಷ ಬಸವಮೂರ್ತಿ ಮಾದಾರ ಚನ್ನಯ್ಯ ಮಂಗಳವಾರ ಅಸಮಾಧಾನ ವ್ಯಕ್ತಪಡಿಸಿದರು.

'ಕೆನೆಪದರಕ್ಕೂ ಒಳ ಮೀಸಲಾತಿಗೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದೆ. ಇಂತಹ ಸಂದರ್ಭದಲ್ಲಿ ಖರ್ಗೆ ಅವರು ಗೊಂದಲ ಮೂಡಿಸುತ್ತಿರುವುದು ಸರಿಯಲ್ಲ' ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಸುಪ್ರೀಂ ಕೋರ್ಟ್ ತೀರ್ಪು ಜಾರಿ ಕುರಿತು ಸಂಪುಟ ಸಮಿತಿ, ಪರಿಶೀಲನಾ ಸಮಿತಿ, ಅಧ್ಯಯನ ಸಮಿತಿ ರಚಿಸಿ ಕಾಲಹರಣ ಮಾಡುವುದು ಬೇಡ. ಒಳ ಮೀಸಲಾತಿ ಜಾರಿಗೊಳಿಸುವವರೆಗೂ ಕೆಪಿಎಸ್‌ಸಿ ಸೇರಿ ಎಲ್ಲಾ ಸರ್ಕಾರಿ ಇಲಾಖೆಗಳ ನೇಮಕಾತಿಯನ್ನು ಸ್ಥಗಿತಗೊಳಿಸಬೇಕು' ಎಂದು ಒತ್ತಾಯಿಸಿದರು.

'ಒಳಮೀಸಲಾತಿ ಹೋರಾಟ ಮಾದಿಗ ಸಮುದಾಯದ್ದೇ ಆದರೂ ತೀರ್ಪಿನಿಂದ 103 ಪರಿಶಿಷ್ಟ ಜಾತಿಗಳಿಗೆ ಸಾಮಾಜಿಕ ನ್ಯಾಯ ಸಿಗಲಿದೆ. ಪರಿಶಿಷ್ಟ ಪಂಗಡದವರಿಗೂ ಅನುಕೂಲ' ಎಂದರು.

'ರಾಜ್ಯ ಸರ್ಕಾರ ತೀರ್ಪು ಜಾರಿಗೊಳಿಸಲು ಮೀನ–ಮೇಷ ಎಣಿಸುತ್ತಿದೆ. ಶೀಘ್ರ ಜಾರಿಗೊಳಿಸದಿದ್ದರೆ ರಾಜ್ಯದಾದ್ಯಂತ ಹೋರಾಟ ರೂಪಿಸಲಾಗುವುದು' ಎಂದು ಮಾದಿಗ ಹೋರಾಟ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎಚ್. ಹನುಮಂತಪ್ಪ ಎಚ್ಚರಿಸಿದರು.

'ವಿಜಯಪುರ ನೋಡಲ್ ಜಿಲ್ಲೆ'



> **ವಿಜಯಪುರದಲ್ಲಿ ಇನ್ಫೊಸಿಸ್ ಘಟಕ ಆರಂಭಿಸುವ ಉದ್ದೇಶವಿಲ್ಲ. ಒಂದು ಕಂಪನಿ ಸ್ಥಾಪಿಸಲು ಅದರ ಹಿಂದೆ ವಾಣಿಜ್ಯ ನಿರ್ಧಾರ ಇರುತ್ತವೆ. ಭಾವನಾತ್ಮಕ ನಿರ್ಧಾರವಲ್ಲ**
> **ಸುಧಾಮೂರ್ತಿ,** ರಾಜ್ಯಸಭಾ ಸದಸ್ಯೆ

ವಿಜಯಪುರ: 'ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಅವಿಭಜಿತ ವಿಜಯಪುರವನ್ನು ನೋಡಲ್ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡಿರುವೆ' ಎಂದು ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ತಿಳಿಸಿದರು.

'ಅವಿಭಜಿತ ವಿಜಯಪುರ ಜಿಲ್ಲೆಯ ಜಮಖಂಡಿ (ಈಗಿನ ಬಾಗಲಕೋಟೆ ಜಿಲ್ಲೆ) ತಾಲ್ಲೂಕಿನ ಸಾವಳಗಿಯಲ್ಲಿ ನಮ್ಮ ಪೂರ್ವಿಕರು ಇದ್ದಾರೆ. ಆ ಜಿಲ್ಲೆಯೊಂದಿಗೆ ಭಾವನಾತ್ಮಕ ಸಂಬಂಧವಿದೆ. ವಿಜಯಪುರ ಜಿಲ್ಲೆಯ ಮೇಲೆ ವಿಶೇಷ ಪ್ರೀತಿಯಿದೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಸಂಸದರ ಅನುದಾನದಲ್ಲಿ ವಿಜಯಪುರ ಜಿಲ್ಲೆಯ ಜನರಿಗೆ ಅನುಕೂಲ ಆಗುವಂತೆ 'ಧರ್ಮಶಾಲೆ' ಅಭಿವೃದ್ಧಿ ಯೋಜನೆ ಕೈಗೆತ್ತಿಕೊಳ್ಳಲಾಗುವುದು. ಜಿಲ್ಲೆಯ ನರ್ಸಿಂಗ್ ವಿದ್ಯಾರ್ಥಿಗಳಿಗೆ ಅನುಕೂಲ ಆಗುವಂತೆ ಗ್ರಂಥಾಲಯ, ಸಭಾಂಗಣ ನಿರ್ಮಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಇನ್ಫೋಸಿಸ್ ಪ್ರತಿಷ್ಠಾನದಿಂದ ₹ 2 ಕೋಟಿ ಅನುದಾನದಲ್ಲಿ ಕುಮಟಗಿ ಬೇಸಿಗೆ ಅರಮನೆ ನವೀಕರಣ ಮಾಡಲಾಗುವುದು' ಎಂದರು.

'ಯುನೆಸ್ಕೊ ಪಟ್ಟಿಗೆ ಗೋಳಗುಮ್ಮಟ ಸೇರಿಸಲು ಪ್ರಯತ್ನ ನಡೆಯಬೇಕಿದ್ದು, ಈ ಸಂಬಂಧ ಕೇಂದ್ರ ಸರ್ಕಾರದ ಮಟ್ಟದಲ್ಲಿ ಪ್ರಯತ್ನ ನಡೆಸುವೆ' ಎಂದು ಅವರು ಹೇಳಿದರು.

ಕೊಪ್ಪದಲ್ಲಿ 17ರಂದು ದೊಡ್ಡಮಟ್ಟದ ಹೋರಾಟ

'ಒತ್ತುವರಿ ತೆರವು ಕಾರ್ಯವನ್ನು ಅರಣ್ಯ ಇಲಾಖೆ ಕೈಬಿಡಲೇಬೇಕು. ಇಲ್ಲದಿದ್ದರೆ ಮಲೆನಾಡು ಉಳಿವಿಗಾಗಿ ಹೋರಾಟ ಅನಿವಾರ್ಯ'

ಒತ್ತುವರಿ ತೆರವು: ವ್ಯಾಪಕ ವಿರೋಧ

ಚಿಕ್ಕಮಗಳೂರು: ಪಶ್ಚಿಮ ಘಟ್ಟದಲ್ಲಿ ಅರಣ್ಯ ಒತ್ತುವರಿ ತೆರವು ಕಾರ್ಯಾಚರಣೆ ಆರಂಭವಾಗಿರುವ ಬೆನ್ನಲ್ಲೇ ಇದರ ವಿರುದ್ಧ ಮಲೆನಾಡಿನ ರೈತರಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ. ಆ.17ರಂದು ಕೊಪ್ಪದಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಸಲು ಅವರು ಸಜ್ಜಾಗಿದ್ದಾರೆ.



ಶೃಂಗೇರಿ, ಕೊಪ್ಪ, ಬಾಳೆಹೊನ್ನೂರಿನಲ್ಲಿ ರೈತರು ಪ್ರತ್ಯೇಕ ಸಭೆಗಳನ್ನು ನಡೆಸಿದ್ದು, ರೆಸಾರ್ಟ್ ಮತ್ತು ಹೋಂಸ್ಟೇ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲಿ. ಆದರೆ, ಸಣ್ಣ ರೈತರು ಮಾಡಿರುವ ಒತ್ತುವರಿ ತೆರವಿಗೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ತಿಳಿಸಿದ್ದಾರೆ.

'ಬುದ್ದಿಜೀವಿಗಳು ನಗರದಲ್ಲಿ ಕುಳಿತು ತಪ್ಪು ಮಾಹಿತಿ ನೀಡುತ್ತಿದ್ದಾರೆ. ಮಲೆನಾಡಿನ ರೈತರೇ ನಿಜವಾದ ಪರಿಸರವಾದಿಗಳು.ಮಲೆನಾಡಿಗರು ಮುಗ್ಧರು ಎಂದು ಕಾನೂನುಗಳನ್ನು ಹೇರಲು ಸರ್ಕಾರ ಹೊರಟಿದೆ. ' ಎಂದು ಶೃಂಗೇರಿಯಲ್ಲಿ ಸೋಮವಾರ ಸಂಜೆ ನಡೆದ ಪೂರ್ವಭಾವಿ ಸಭೆಯಲ್ಲಿ ಮಲೆನಾಡು ರೈತ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಎಂ.ಎನ್.ನಾಗೇಶ್ ಹೇಳಿದರು.

ಸಭೆಯಲ್ಲಿ ಪಕ್ಷಾತೀತವಾಗಿ ಮುಖಂಡರು, ಹೋರಾಟಗಾರರು, ಲೇಖಕರು ಭಾಗವಹಿಸಿದ್ದರು. ಇನ್ನೊಂದೆಡೆ ಕಳಸದಲ್ಲಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ನಡೆಸಿದ ಜನಸಂಪರ್ಕ ಸಭೆಯಲ್ಲೂ ಇದೇ ವಿಷಯ ಪ್ರಸ್ತಾಪವಾಗಿದೆ. 'ಅರಣ್ಯ ಒತ್ತುವರಿ ತೆರವು ಕೈ ಬಿಡದಿದ್ದರೆ ರಕ್ತಪಾತ ಆಗಬಹುದು' ಎಂದು ಜೆಡಿಎಸ್ ಮುಖಂಡ ಮಂಜಪ್ಪಯ್ಯ ಎಚ್ಚರಿಕೆ ನೀಡಿದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಸೂಚನೆ ನೀಡಿದ ಬಳಿಕ ಜಿಲ್ಲೆಯಲ್ಲಿ 56 ಎಕರೆಯಷ್ಟು ಅರಣ್ಯ ಭೂಮಿ ಅಧಿಕಾರಿಗಳು ತೆರವುಗೊಳಿಸಿದ್ದಾರೆ. ಅಲ್ಲಿದ್ದ ಕಾಫಿ ಗಿಡಗಳನ್ನು ತೆಗೆದಿದ್ದಾರೆ.

ಒತ್ತುವರಿ ತೆರವು: ರೈತರಿಗೆ ಆತಂಕ ಬೇಡ

ಕೋರ್ಟ್‌ನಲ್ಲಿ ಇತ್ಯರ್ಥವಾದ ಪ್ರಕರಣಗಳಲ್ಲಷ್ಟೇ ತೆರವು: ಸಚಿವ ಈಶ್ವರ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯಭೂಮಿ ಒತ್ತುವರಿ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಇತ್ಯರ್ಥವಾಗಿದ್ದರೂ ತೆರವಾಗಿರದ ಒತ್ತುವರಿಗಳನ್ನು ಮಾತ್ರ ತೆರವು ಮಾಡಲು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ರೈತರು ಆತಂಕಪಡುವ ಅಗತ್ಯವಿಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ವಿಧಾನ ಸೌಧದಲ್ಲಿ ಮಂಗಳವಾರ ತಮ್ಮನ್ನು ಭೇಟಿಯಾದ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ನೇತೃತ್ವದ ಜನಪ್ರತಿನಿಧಿಗಳು ಮತ್ತು ಕರಾವಳಿ ಜನಪರ ಒಕ್ಕೂಟದ ಪ್ರತಿನಿಧಿಗಳ ನಿಯೋಗಕ್ಕೆ ಸಚಿವರು ಈ ಭರವಸೆ ನೀಡಿದರು.

'ಒತ್ತುವರಿ ತೆರವುಗೊಳಿಸುವ ಕುರಿತು ಈಗಾಗಲೇ ಸ್ಪಷ್ಟವಾಗಿ ಆದೇಶ ಕೊಟ್ಟಿದ್ದೇನೆ. ಒತ್ತುವರಿ ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥವಾಗಿದ್ದರೂ ತೆರವಾಗದೇ ಇರುವ ಬಗ್ಗೆ ನ್ಯಾಯಾಲಯವು ಸರ್ಕಾರಕ್ಕೆ ನೋಟಿಸ್ ನೀಡುತ್ತಿದೆ. ಆದ್ದರಿಂದ ಇಂತಹ ಒತ್ತುವರಿಗಳನ್ನು ಹಾಗೂ 2015ರ ನಂತರ ಅತಿಕ್ರಮಣವಾಗಿರುವುದನ್ನು ಮಾತ್ರ ತೆರವಿಗೆ ಸೂಚನೆ ನೀಡಲಾಗಿದೆ. ಉಳಿದಂತೆ ಮೂರು ಎಕರೆ ಒಳಗಿನ ಒತ್ತುವರಿ ಹಾಗೂ ಅರ್ಜಿಗಳು ವಿಲೇವಾರಿ ಆಗದೆ ಇರುವ ಒತ್ತುವರಿಗಳನ್ನು ಮುಟ್ಟಬಾರದು' ಎಂದು ಸೂಚಿಸಿರುವುದಾಗಿ ನಿಯೋಗಕ್ಕೆ ತಿಳಿಸಿದರು.



ಶೃಂಗೇರಿ ಕ್ಷೇತ್ರದ ಶಾಸಕ ಟಿ.ಡಿ. ರಾಜೇಗೌಡ ನೇತೃತ್ವದ ನಿಯೋಗವು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿತು. ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಹಾಗೂ ಮಲೆನಾಡು ಜನಪರ ಒಕ್ಕೂಟದ ಅನಿಲ್ ಹೊಸಕೊಪ್ಪ ಜತೆಗಿದ್ದರು

'ಒತ್ತುವರಿ ತೆರವುಗೊಳಿಸುವಂತೆ ಸಚಿವರು ನೀಡಿದ ಸೂಚನೆಯಿಂದಾಗಿ ಮಲೆನಾಡಿಗರಲ್ಲಿ ಆತಂಕ ಸೃಷ್ಟಿಯಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ಮನೆ ಕಟ್ಟಿಕೊಂಡವರೆಲ್ಲ ಭಯಭೀತರಾಗಿದ್ದಾರೆ. ಇಲಾಖೆಯ ಈ ನಿಲುವಿನಿಂದಾಗಿ ಹಳ್ಳಿಗಳಲ್ಲಿ ಸಣ್ಣ ಪುಟ್ಟ ರೈತರ ಮೇಲೆ ಅಧಿಕಾರಿಗಳು ದಬ್ಬಾಳಿಕೆ ನಡೆಸುತ್ತಿದ್ದಾರೆ. ಹಾಗಾಗಿ ನಿಮ್ಮ ಸ್ಪಷ್ಟವಾದ ನಿಲುವು ತಿಳಿಸಬೇಕು. ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುವ ಕೃಷಿ ಭೂಮಿಯನ್ನು ಮುಂದಿನ ಫಸಲು ಕೊಯ್ಯುವವರೆಗೆ ತೆರವು ಮಾಡಬಾರದು' ಎಂದು ನಿಯೋಗ ಮನವಿ ಮಾಡಿಕೊಂಡಿತು.

ಇದಕ್ಕೆ ಸ್ಪಂದಿಸಿದ ಸಚಿವರು, 'ನಿಮ್ಮೆಲ್ಲರ ಕೋರಿಕೆ ಮೇರೆಗೆ ಇನ್ನೊಂದು ಸ್ಪಷ್ಟವಾದ ಸೂಚನೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳಿಗೆ ನೀಡುತ್ತೇನೆ. ಯಾವುದನ್ನು ತೆರವು ಮಾಡಬೇಕು ಮತ್ತು ಯಾವುದನ್ನು ತೆರವು ಮಾಡಬಾರದು ಹಾಗೂ ಯಾವ ಕಾರಣಕ್ಕಾಗಿ ಒತ್ತುವರಿ ತೆರವು ಮಾಡುತ್ತೇವೆ ಎಂಬ ಸ್ಪಷ್ಟ ಮಾಹಿತಿಯನ್ನು ಅಧಿಕಾರಿಗಳು ಮತ್ತು ಜನಸಾಮಾನ್ಯರಿಗೆ ತಲುಪುವಂತೆ ವ್ಯವಸ್ಥೆ ಮಾಡುತ್ತೇನೆ' ಎಂಬ ಆಶ್ವಾಸನೆಯನ್ನು ನೀಡಿದರು.

'ಒತ್ತುವರಿ ಮಾಡಿಕೊಂಡು ಕೃಷಿ ಮಾಡುತ್ತಿದ್ದಲ್ಲಿ, ಫಸಲನ್ನು ಪಡೆಯಲು ಅವಕಾಶ ಮಾಡಿಕೊಡಬೇಕು. ಸದ್ಯ ಜಾಗದ ಗಡಿ ಗುರುತಿಸಿ ಈಗ ಬಂದಿರುವ ಫಸಲನ್ನು ರೈತರು ಕೊಯ್ಲು ಮಾಡುವವರೆಗೂ ಕಾದು, ನಂತರ ಒತ್ತುವರಿ ತೆರವು ಮಾಡಲು ಅಧಿಕಾರಿಗಳಿಗೆ ಸೂಚಿಸುತ್ತೇನೆ' ಎಂದು ಈಶ್ವರ ಖಂಡ್ರೆ ಅವರು ನಿಯೋಗಕ್ಕೆ ಭರವಸೆ ನೀಡಿದರು.

ನಿಯೋಗದಲ್ಲಿ ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ, ತರೀಕೆರೆ ಶಾಸಕ ಶ್ರೀನಿವಾಸ್, ಮಾಜಿ ಸಚಿವ ಕಿಮ್ಮನೆ ರತ್ನಾಕರ್, ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್ , ವಿಧಾನಪರಿಷತ್‌ನ ಮಾಜಿ ಸದಸ್ಯ ಗೋಪಾಲಸ್ವಾಮಿ ಹಾಗೂ ಮಲೆನಾಡು ಜನಪರ ಒಕ್ಕೂಟದ ಅನಿಲ್ ಹೊಸಕೊಪ್ಪ, ಸುಖೇಶ್ ದಾಸನಕೊಡಿಗೆ ಇದ್ದರು.

ಕೊಡಗಿನಲ್ಲಿ ಹಲವೆಡೆ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗಿನ ಹಲವೆಡೆ ಮಂಗಳವಾರ ಸಂಜೆ ನಂತರ ಭಾರಿ ಮಳೆಯಾಗಿದೆ. ಚೆಂಬು ಗ್ರಾಮದಲ್ಲಿ 13 ಸೆಂ.ಮೀನಷ್ಟು ಮಳೆ ದಾಖಲಾಗಿದೆ. ಮಡಿಕೇರಿ, ಸೋಮವಾರಪೇಟೆ ಭಾಗದಲ್ಲಿ ಭಾರಿ ಮಳೆ ಮುಂದುವರಿದಿದೆ.

ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣದಲ್ಲಿ ದಿಢೀರ್ ಏರಿಕೆ ಕಂಡು ಬಂದಿತು. ಹೊರ ಹರಿವನ್ನೂ ಸಹ ರಾತ್ರಿ 9 ಗಂಟೆಯ ಹೊತ್ತಿಗೆ 10,300 ಕ್ಯುಸೆಕ್‌ಗೆ ಏರಿತು

ಗೋಡೆ ಕುಸಿದು ವೃದ್ಧೆ ಸಾವು

ಹನೂರು (ಚಾಮರಾಜನಗರ ಜಿಲ್ಲೆ): ಸೋಮವಾರ ತಡರಾತ್ರಿ ಸುರಿದ ಭಾರಿ ಮಳೆಗೆ, ತಾಲ್ಲೂಕಿನ ಸಿಂಗನಲ್ಲೂರಿನ ಮನೆಯ ಗೋಡೆ ಕುಸಿದು ರಂಗಮ್ಮ(82) ಮೃತಪಟ್ಟರು.

ಮಕ್ಕಳಾದ ಲಕ್ಷ್ಮಮ್ಮ ಹಾಗೂ ರಂಗಯ್ಯ ಅವರು, ಗೋಡೆ ಕುಸಿದ ಶಬ್ದದಿಂದ ಎಚ್ಚರಗೊಂಡು ದಿಢೀರನೆ ಹೊರಗೆ ಬಂದು ಪ್ರಾಣಾಪಾಯದಿಂದ ಪಾರಾದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.05	15,445	14,518
ಹಾರಂಗಿ	2,859	2,857.44	9,520	10,300
ಕಬಿನಿ	2,284.00	2,282.71	6,350	6,350
ಹೇಮಾವತಿ	2,922	2,920.80	9,977	9,375
ಲಿಂಗನಮಕ್ಕಿ	1,819	1,816.65	7,741	7,619
ಸೂಪಾ (ಮೀ)	564	558.52	5,182	4,270.80
ಮಾಣಿ	595	588.80	901	-
ತುಂಗಭದ್ರಾ	1,633	1,629.26	35,426	1,09,526
ಮಲಪ್ರಭಾ	2,079.5	2,077	1,794	1,794
ಘಟಪ್ರಭಾ	2175	2,174.96	5,796	5,632
ಭದ್ರಾ	186	180.1	6,075	7,811
ಆಲಮಟ್ಟಿ (ಮೀ)	519.6	519.42	37,089	17,541
ನಾರಾಯಣಪುರ (ಮೀ)	492.25	492.21	15,000	6,000

* ನೆಲಮಟ್ಟದಿಂದ

ಮಾಲೂರು ಕ್ಷೇತ್ರದ ಫಲಿತಾಂಶದ ತಕರಾರು

ಇವಿಎಂ ಉಗ್ರಾಣ, ಖಜಾನೆ ತಡಕಾಡಿದರೂ ಸಿಗದ ದಾಖಲೆ!

ಪ್ರಜಾವಾಣಿ ವಾರ್ತೆ

ಕೋಲಾರ: 2023ರ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಮಾಲೂರು ವಿಧಾನಸಭಾ ಕ್ಷೇತ್ರದ ಫಲಿತಾಂಶದ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ಕೇಳಿದ ನಿರ್ದಿಷ್ಟ ದಾಖಲೆಗಳು ವಿದ್ಯುನ್ಮಾನ ಮತಯಂತ್ರದ (ಇವಿಎಂ) ಉಗ್ರಾಣ ಹಾಗೂ ಮಾಲೂರು ಖಜಾನೆಯಲ್ಲಿ ಲಭ್ಯವಾಗಿಲ್ಲ.

ಮತ ಎಣಿಕೆ ಕೇಂದ್ರದಲ್ಲಿ ಅಳವಡಿಸಿದ್ದ ಸಿಸಿಟಿವಿ ದೃಶ್ಯಾವಳಿ, ಹಾರ್ಡ್ ಡಿಸ್ಕ್ ಮತ್ತು 17(ಸಿ) ಫಾರಂ ಸೇರಿದಂತೆ ಹಲವು ದಾಖಲೆಗಳನ್ನು ನ್ಯಾಯಾಲಯ ಕೇಳಿತ್ತು. ಆದರೆ, ಇವಿಎಂ ಉಗ್ರಾಣದಲ್ಲಿ ಈ ಯಾವ ದಾಖಲೆಗಳೂ ಲಭ್ಯವಾಗಲಿಲ್ಲ.

ಇದರಿಂದ ಆತಂಕಕ್ಕೆ ಒಳಗಾದ ಜಿಲ್ಲಾಡಳಿ ಮಾಲೂರಿನ ಖಜಾನೆಯಲ್ಲಿ ದಾಖಲೆಗಳಿಗೆ ಇರಬಹುದೇ ಎಂದು ಪರಿಶೀಲಿಸುವಂತೆ ಮಾಲೂರು ತಹಶೀಲ್ದಾರ್‌ಗೆ ಸೂಚಿಸಿತು. ಸಂಜೆವರೆಗೂ ತಡಕಾಡಿದರೂ ಖಜಾನೆಯಲ್ಲೂ ಸಿಸಿಟಿವಿ ದೃಶ್ಯಾವಳಿ, ಹಾರ್ಡ್ ಡಿಸ್ಕ್ ಸಿಗಲಿಲ್ಲ. ಆದರೆ, ಯಾವ ಅಭ್ಯರ್ಥಿಗೆ ಯಾವ ಸುತ್ತಿನಲ್ಲಿ ಎಷ್ಟು ಮತ ಬಂದಿದೆ ಎಂಬ ಸಮಗ್ರ ವಿವರವುಳ್ಳ 17(ಸಿ) ಫಾರಂ ಕಾರ್ಬನ್ ಕಾಪಿ ಮಾತ್ರ ಸಿಕ್ಕಿತು.

'ಚುನಾವಣೆ ವೇಳೆ ಮತ ಎಣಿಕೆ ಕೇಂದ್ರದಲ್ಲಿ ಸಿಸಿಟಿವಿ ಅಳವಡಿಸುವ ಗುತ್ತಿಗೆ ಪಡೆದ ಕಂಪನಿ ಬಳಿ ದೃಶ್ಯಾವಳಿ ಮತ್ತು ಹಾರ್ಡ್ ಡಿಸ್ಕ್ ಇರಬಹುದು. ಕಂಪನಿಯಿಂದ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಲು ಅನುಮತಿ ಕೋರಿ ಚುನಾವಣಾ ಆಯೋಗಕ್ಕೆ ಪತ್ರ ಬರೆಯಲಾಗುವುದು' ಎಂದು ಜಿಲ್ಲಾಧಿಕಾರಿ ಹೇಳಿದರು.

ನ್ಯಾಯಾಲಯದ ಸೂಚನೆಯಂತೆ ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲಿರುವ ಉಗ್ರಾಣದ ಬಾಗಿಲನ್ನು ಜಿಲ್ಲಾಧಿಕಾರಿ ತೆರೆದರು.

ಪೊಲೀಸರ ಬಿಗಿ ಭದ್ರತೆ ಹಾಗೂ ರಾಜಕೀಯ ಪಕ್ಷಗಳ ಸಮ್ಮುಖದಲ್ಲಿ ಎಲ್ಲಾ ಪ್ರಕ್ರಿಯೆ ನಡೆಯಿತು.ಎಷ್ಟು ಹೊತ್ತು ತಡಕಾಡಿದರೂ ನ್ಯಾಯಾಲಯ ಕೇಳಿದ ದಾಖಲೆ, ಮಾಹಿತಿ ಉಗ್ರಾಣದಲ್ಲಿ ಸಿಗಲಿಲ್ಲ.

'ಉಗ್ರಾಣದಲ್ಲಿ ಚುನಾವಣಾ ಪ್ರಕ್ರಿಯೆ ಮುಗಿದ ನಂತರದ ಮಾಹಿತಿಗಳಿವೆ. ಲಭ್ಯವಾದ ದಾಖಲೆ ನ್ಯಾಯಾಲಯಕ್ಕೆ ಒಪ್ಪಿಸುತ್ತೇವೆ' ಎಂದು ಪರಿಶೀಲನೆ ಬಳಿಕ ಜಿಲ್ಲಾಧಿಕಾರಿ ಅಕ್ರಂ ಪಾಷಾ ತಿಳಿಸಿದರು.

ರಾಜಕೀಯ ಪಕ್ಷಗಳ ಮುಖಂಡರು ಮತ್ತು ನೂರಾರು ಕಾರ್ಯಕರ್ತರು ಉಗ್ರಾಣದ ಹೊರಗೆ ಕುತೂಹಲದಿಂದ ಕಾದು ನಿಂತಿದ್ದರು. ಸಂಸದ ಎಂ.ಮಲ್ಲೇಶ್ ಬಾಬು, ಬಿಜೆಪಿ ಅಭ್ಯರ್ಥಿ ಕೆ.ಎಸ್.ಮಂಜುನಾಥ್ ಗೌಡ ಸೇರಿದಂತೆ ಮಾಲೂರು ಕ್ಷೇತ್ರದಿಂದ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಉಗ್ರಾಣದ ಒಳಗೆ ತೆರಳಿದರು. ಶಾಸಕ ನಂಜೇಗೌಡ ಪುತ್ರರು ಮಾತ್ರ ಹೊರಗಡೆ ಕಾಯುತ್ತಿದ್ದರು.

ಮಾಲೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ವೈ.ನಂಜೇಗೌಡ ಪ್ರತಿಸ್ಪರ್ಧಿ ಬಿಜೆಪಿಯ ಕೆ.ಎಸ್. ಮಂಜುನಾಥ ಗೌಡ ವಿರುದ್ಧ 248 ಮತಗಳಿಂದ ಗೆಲುವು ಸಾಧಿಸಿದ್ದರು. ಮರು ಎಣಿಕೆಗೆ ಅವಕಾಶ ನೀಡುವಂತೆ ಮಂಜುನಾಥ್ ಗೌಡ ಹೈಕೋರ್ಟ್ ಮೆಟ್ಟಿಲೇರಿದ್ದರು.

ಟೋಲ್ ಕಂಪನಿ ಸಿಬ್ಬಂದಿ ಅಟ್ಟಾಡಿಸಿದ ಹೋರಾಟಗಾರರು

ಪ್ರಜಾವಾಣಿ ವಾರ್ತೆ

ಪಡುಬಿದ್ರಿ (ಉಡುಪಿ): ಪಡುಬಿದ್ರಿ–ಕಾರ್ಕಳ ರಾಜ್ಯ ಹೆದ್ದಾರಿ 1ರ ಕಂಚಿನಡ್ಕದ ಬಳಿ ನಿರ್ಮಿಸಲು ಉದ್ದೇಶಿಸಿರುವ ಟೋಲ್‌ಗೇಟ್ ಸ್ಥಳಕ್ಕೆ ಪರಿಶೀಲನೆಗೆ ಬಂದಿದ್ದ ಕಂಪನಿಯ ಸಿಬ್ಬಂದಿಯನ್ನು ಹೋರಾಟಗಾರರು ಮಂಗಳವಾರ ಅಟ್ಟಾಡಿಸಿದ್ದಾರೆ.

ಅಧಿಕಾರಿಗಳನ್ನು ಟೋಲ್ ವಿರೋಧಿ ಹೋರಾಟ ಸಮಿತಿಯ ಪ್ರಮುಖರು ಆರಂಭದಲ್ಲಿ ತರಾಟೆಗೆ ತೆಗೆದುಕೊಂಡರು. ಈ ವೇಳೆ ಸ್ಥಳದಲ್ಲಿದ್ದ ಟೋಲ್ ಗೇಟ್ ಗುತ್ತಿಗೆ ವಹಿಸಿಕೊಂಡ ಕಂಪನಿ ಸಿಬ್ಬಂದಿಯನ್ನು ಕಂಡು ಅಸಮಾಧಾನ ವ್ಯಕ್ತಪಡಿಸಿ, ಅವರೊಂದಿಗೂ ವಾಗ್ವಾದ ನಡೆಸಿದರು. ಮಾತಿಗೆ ಮಾತು ಬೆಳೆದು ಸಿಬ್ಬಂದಿಯನ್ನು ಅವರು ಬಂದಿದ್ದ ಕಾರಿನವರೆಗೂ ಹೋರಾಟಗಾರರು ಅಟ್ಟಾಡಿಸಿಕೊಂಡು ಹೋದರು.

ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಬಳಿಕ ಪಡುಬಿದ್ರಿ ಎಸ್.ಐ. ಪ್ರಸನ್ನ ಅವರು ಪರಿಸ್ಥಿತಿ ತಿಳಿಗೊಳಿಸಿದರು.

ಇಲ್ಲಿ ಟೋಲ್ ಗೇಟ್ ನಿರ್ಮಿಸುವುದು ಬೇಡ ಎಂದು ಸ್ಥಳೀಯರು ಹೋರಾಟ ನಡೆಸುತ್ತಿದ್ದಾರೆ.

ಸಾಲ ಮರು ಪಾವತಿಸದ ಅಜ್ಜಿ ಮನೆಗೆ ಬೀಗ ಜಡಿದ ಫೈನಾನ್ಸ್ ಸಿಬ್ಬಂದಿ

ಕುರಿ, ಮೇಕೆಗೆ ಗೃಹಬಂಧನ: ಚಾವಣಿಯಿಂದಲೇ ಮೇವು

• ಎಂ. ಮುನಿನಾರಾಯಣ

ವಿಜಯಪುರ (ದೇವನಹಳ್ಳಿ): ಯಾರೋ ಮಾಡಿದ ತಪ್ಪಿಗೆ ಇನ್ನಾರಿಗೋ ಶಿಕ್ಷೆ ಎನ್ನುವಂತೆ ತಮ್ಮದಲ್ಲದ ತಪ್ಪಿಗೆ ವಿಜಯಪುರದಲ್ಲಿ ಕುರಿ, ಮೇಕೆ ಹಾಗೂ ಪಾರಿವಾಳ ಎರಡು ತಿಂಗಳಿಂದ ಗೃಹ ಬಂಧನ ಶಿಕ್ಷೆ ಅನುಭವಿಸುತ್ತಿವೆ.

ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಪಡೆದ ಸಾಲ ಮರು ಪಾವತಿಸಿಲ್ಲ ಎಂದು ದೇವನಹಳ್ಳಿಯ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಸಿಬ್ಬಂದಿ ಎರಡು ತಿಂಗಳ ಹಿಂದೆ, ಚೌಡೇಶ್ವರಿ ಸರ್ಕಲ್ ಸಮೀಪ ವಾಸಿಸುತ್ತಿರುವ 65 ವರ್ಷದ ಜಯಲಕ್ಷ್ಮಮ್ಮ ಹಾಗೂ ಎಂಟನೇ ತರಗತಿ ಓದುತ್ತಿರುವ ಅವರ ಮೊಮ್ಮಗಳನ್ನು ಮನೆಯಿಂದ ಹೊರ ಹಾಕಿ ಬೀಗ ಜಡಿದಿದ್ದಾರೆ.

ಮನೆಗೆ ಬೀಗ ಜಡಿಯುವ ಭರದಲ್ಲಿ ಮನೆಯೊಳಗಿದ್ದ ಕುರಿ, ಮೇಕೆಯನ್ನು ಗಮನಿಸದ ಫೈನಾನ್ಸ್ ಸಿಬ್ಬಂದಿ ಅವುಗಳನ್ನು ಒಳಗೆ ಬಿಟ್ಟು ಬೀಗ ಹಾಕಿ ಹೋಗಿದ್ದಾರೆ. ಅಂದಿನಿಂದ ಅವು ಮನೆಯೊಳಗೆ ಪರದಾಡುತ್ತಿವೆ. ಅಜ್ಜಿ ಮನೆಯ ಛತ್ತಿನಿಂದ ಪ್ರತಿದಿನ ಆಹಾರ ಕೊಡುತ್ತಿದ್ದಾಳೆ.



ಖಾಸಗಿ ಹಣಕಾಸು ಸಂಸ್ಥೆ ಮನೆಗೆ ಬೀಗ ಹಾಕಿದ್ದು, ಮನೆಯ ಹೊರಗೆ ಕುಳಿತಿರುವ ಜಯಲಕ್ಷ್ಮಮ್ಮ ಮತ್ತು ಅವರ ಪತಿ ನಾಗಪ್ಪ

ಮೊಮ್ಮಗಳನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಕಳಿಸಿರುವ ಅಜ್ಜಿ, ತನ್ನ ಸಾಕು ನಾಯಿಯೊಂದಿಗೆ ಮನೆ ಮುಂದಿನ ಅಂಗಳದ ಪುಟ್ಟ ಕೋಣೆಯಲ್ಲಿ ವಾಸಿಸುತ್ತಿದ್ದಾರೆ. ಎರಡು ತಿಂಗಳಿಂದ ಮನೆಯೊಳಗಿರುವ ಆ ಪ್ರಾಣಿಗಳನ್ನು ಹೊರಗೆ ತರಲಾದರೂ ಬೀಗ ತೆರೆಯುವಂತೆ ಜಯಲಕ್ಷ್ಮಮ್ಮ ಮಾಡಿಕೊಂಡ ಮನವಿಗೆ ಫೈನಾನ್ಸ್ ಸಿಬ್ಬಂದಿ ಮನಸ್ಸು ಕರಗಿಲ್ಲ.

> **ಆನ್‌ಲೈನ್ ಮೂಲಕ ಸಾಲ ಮರು ಪಾವತಿಸಿದ್ದೇವೆ. ಅದು ಬಡ್ಡಿಗೆ ಜಮೆಯಾಗಿದೆ. ₹1 ಲಕ್ಷ ಕಾನೂನು ಪ್ರಕ್ರಿಯೆಗೆ ಖರ್ಚು ಆಗಿದೆ ಎಂದು ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಸಿಬ್ಬಂದಿ ಹೇಳುತ್ತಿದ್ದಾರೆ**
> **ಮಹೇಶ,** ಜಯಲಕ್ಷ್ಮಮ್ಮನವರ ಪುತ್ರ

ಜಯಲಕ್ಷ್ಮಮ್ಮ ಪ್ರತಿದಿನ ಏಣಿಯಿಂದ ಚಾವಣಿ ಏರಿ, ಶೀಟ್ ಸರಿಸಿ ಮೇಕೆ, ಕುರಿ ಮತ್ತು ಪಾರಿವಾಳಗಳಿಗೆ ಮೇಲಿನಿಂದ ಆಹಾರ ಮತ್ತು ನೀರು ಕೊಡುತ್ತಿದ್ದಾರೆ. ಒಮ್ಮೆ ಹೀಗೆ ಮೇವು ಹಾಕುವಾಗ ಏಣಿಯಿಂದ ಜಾರಿ ಬಿದ್ದು ಗಾಯ ಮಾಡಿಕೊಂಡಿದ್ದಾರೆ.

ಕೋವಿಡ್ ಸಾಲದ ಹೊರೆ: '2021ರಲ್ಲಿ ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ನನ್ನ ಪತಿ ನಾಗಪ್ಪ ಆರೋಗ್ಯ ಹದಗೆಟ್ಟಿತ್ತು. ಆಸ್ಪತ್ರೆಗೆ ದಾಖಲಿಸಿದಾಗ ಯಾರಿಂದಲೂ ಹಣದ ಸಹಾಯ ಸಿಗಲಿಲ್ಲ. ಅನಿವಾರ್ಯವಾಗಿ ದೇವನಹಳ್ಳಿಯ ಫೈನಾನ್ಸ್‌ವೊಂದರಿಂದ ₹2.50 ಲಕ್ಷ ಸಾಲ ಪಡೆದೆವು. ಇದುವರೆಗೂ ₹2.30 ಲಕ್ಷ ಸಾಲ ಮರು ಪಾವತಿಸಿದ್ದೇವೆ. ಆದರೆ, ಬಡ್ಡಿ ಮತ್ತು ಇತರ ಶುಲ್ಕ ಸೇರಿ ಇನ್ನೂ ₹3 ಲಕ್ಷ ಬಾಕಿ ಇದೆ ಎಂದು ಫೈನಾನ್ಸ್ ಸಿಬ್ಬಂದಿ ಹೇಳುತ್ತಿದ್ದಾರೆ' ಎಂದರು.

> **ಏಕಾಏಕಿ ಮನೆಗೆ ಬೀಗ ಹಾಕಿಲ್ಲ. ಕೋರ್ಟ್‌ನಿಂದ ಸಾಲಗಾರರಿಗೆ ನೋಟಿಸ್ ಕಳುಹಿಸಲಾಗಿದೆ. ಸಾಲ ಪಾವತಿಸದ ಕಾರಣ ಬೀಗ ಹಾಕಿದ್ದೇವೆ**
> **ಕಾರ್ತಿಕ್,** ಸಾಲ ವಸೂಲಿ ವ್ಯವಸ್ಥಾಪಕ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್, ದೇವನಹಳ್ಳಿ

'ಮುಂಚಿತವಾಗಿ ನೋಟಿಸ್ ನೀಡದೆ ಏಕಾಏಕಿ ಪೊಲೀಸರೊಂದಿಗೆ ಬಂದ ಫೈನಾನ್ಸ್ ಸಿಬ್ಬಂದಿ ಮನೆಯಲ್ಲಿದ್ದ 14 ವರ್ಷದ ಮೊಮ್ಮಗಳನ್ನು ಹೊರ ಹಾಕಿ, ಮನೆಗೆ ಬೀಗ ಜಡಿದು ಹೋಗಿದ್ದಾರೆ. ತಕ್ಷಣಕ್ಕೆ ₹1.50 ಲಕ್ಷ ಪಾವತಿಸಿದರೆ ಬೀಗ ತೆಗೆಯುತ್ತೇವೆ. ಇಲ್ಲವಾದರೆ ಹರಾಜು ಮಾಡುತ್ತೇವೆ ಎನ್ನುತ್ತಿದ್ದಾರೆ' ಎಂದು ಜಯಲಕ್ಷ್ಮಮ್ಮ ಅಳಲು ತೋಡಿಕೊಂಡರು.

'ಮನೆಗೆ ಬೀಗ ಹಾಕಿದ ಮೇಲೆ ನನ್ನ ಪತಿ ಪರಿಚಿತರೊಬ್ಬರ ಮನೆಯಲ್ಲಿದ್ದಾರೆ. ನಾನು ಮನೆ ಮುಂದಿನ ಕೋಣೆಯಲ್ಲಿ ಮಲಗುತ್ತಿದ್ದೇನೆ. ಪುಟ್ಟ ಕೋಣೆಯಲ್ಲಿ ಅಡುಗೆ ಮಾಡಿಕೊಳ್ಳಲು ಜಾಗ ಇಲ್ಲ. ಎಲ್ಲ ಪಾತ್ರೆ, ಪಗಡ ಮನೆಯೊಳಗೆ ಉಳಿದಿವೆ. ಹಾಗಾಗಿ ಪ್ರತಿದಿನ ಹೋಟೆಲ್‌ನಲ್ಲಿ ತಿಂಡಿ, ಊಟ ಮಾಡಿ ಪತಿಗೆ ಪಾರ್ಸೆಲ್ ಕಳಿಸುತ್ತಿದ್ದೇನೆ' ಎಂದು ಹೇಳಿದರು.

'ಅಕ್ಕಪಕ್ಕದ ಮನೆಗಳಲ್ಲಿ ಸ್ನಾನ ಮಾಡುತ್ತಿದ್ದೇನೆ. ಕೆಲವರು ಕೊಟ್ಟ ಸೀರೆಯಲ್ಲಿಯೇ ಕಾಲ ಕಳೆಯುತ್ತಿದ್ದೇನೆ. ಮನೆಗೆ ಹಾಕಿರುವ ಬೀಗ ತೆಗೆಸಿ ಕುರಿ, ಮೇಕೆ ಹೊರಗೆ ತರುವುದಕ್ಕಾದರೂ ಅವಕಾಶ ಕೊಡಿ' ಎಂದು ಜಯಲಕ್ಷ್ಮಮ್ಮ ಅವಲತ್ತುಕೊಂಡರು.

ಬುಧವಾರ, ಆಗಸ್ಟ್ 14, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 226 | ಪುಟ 18


● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮನುಷ್ಯರಂತೆಯೇ ಟೇಬಲ್ ಟೆನಿಸ್ ಆಡಬಲ್ಲ ರೋಬೋಟ್ ಸಿದ್ಧವಾಗಿದೆಯಂತೆ



ಸೆನ್ಸೆಕ್ಸ್	ನಿಫ್ಟಿ	₹/$
78,956	24,139	83.97



ನಿರೀಕ್ಷೆ



ನುಡಿ ಬೆಳಗು
ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ
ಗವಿಮಠ, ಕೊಪ್ಪಳ

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಯೋಜನೆಗಳ ಸಾಧಕ–ಬಾಧಕಗಳ ಕುರಿತು ಸುರ್ಜೇವಾಲಾ ಅವರಿಗೆ ವಿವರಣೆ

ಗ್ಯಾರಂಟಿಗೆ ಕತ್ತರಿ: ಸಚಿವರ 'ಗುರಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಗ್ಯಾರಂಟಿ ಯೋಜನೆಗಳ ಸ್ವರೂಪದಲ್ಲಿ ಬದಲಾವಣೆ ಮಾಡಬೇಕು ಎಂದು ಖುದ್ದು ಸಚಿವರೇ ಹೈಕಮಾಂಡ್ ಮೇಲೆ ಒತ್ತಡ ಹೇರಿದ್ದಾರೆ. ಈ ಯೋಜನೆಗಳ ವ್ಯಾಪ್ತಿಯಿಂದ ಶ್ರೀಮಂತರನ್ನು ಹೊರಗಿಡಬೇಕು ಎಂದು ಒತ್ತಾಯಿಸಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಪಕ್ಷದ ರಾಜ್ಯ ಘಟಕಗಳ ಅಧ್ಯಕ್ಷರ ಸಭೆಯಲ್ಲಿ ಭಾಗಿಯಾಗಲು ರಾಷ್ಟ್ರ ರಾಜಧಾನಿಗೆ ಬಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಬೆಳವಣಿಗೆಗಳ ಕುರಿತು ರಾಷ್ಟ್ರೀಯ ನಾಯಕರಿಗೆ ಮಾಹಿತಿ ನೀಡಿದರು. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಅವರು ಹೈಕಮಾಂಡ್‌ನ ನಾಯಕರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಚರ್ಚಿಸಿದರು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ನವದೆಹಲಿಯಲ್ಲಿ ಮಂಗಳವಾರ ಭೇಟಿ ಮಾಡಿದ ಸಚಿವರು, ಗ್ಯಾರಂಟಿಯ ಸಾಧಕ-ಬಾಧಕ, ಲೋಪ–ದೋಷಗಳ ಬಗ್ಗೆ ಮಾಹಿತಿ ನೀಡಿದರು. ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಜತೆಗೆ ಚರ್ಚಿಸುವುದಾಗಿ ಸುರ್ಜೇವಾಲಾ ಭರವಸೆ ನೀಡಿದರು ಎಂದು ಮೂಲಗಳು ತಿಳಿಸಿವೆ.

ಗ್ಯಾರಂಟಿಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಈ ಯೋಜನೆಗಳ ವಿರುದ್ಧ ಹೇಳಿಕೆ ನೀಡದಂತೆ ಪಕ್ಷದ ನಾಯಕರು ಹಾಗೂ ಶಾಸಕರಿಗೆ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರು ಸೂಚಿಸಿದ್ದಾರೆ. ಆದರೆ, ಗ್ಯಾರಂಟಿ ಸ್ವರೂಪದಲ್ಲಿ ಪರಿಷ್ಕರಣೆ ಮಾಡುವ ಬಗ್ಗೆ ಮುಖ್ಯಮಂತ್ರಿ ಅವರಿಗೂ ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದು ಸಚಿವರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ಕಾರವು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ವಾರ್ಷಿಕ ₹59 ಸಾವಿರ ಕೋಟಿ ವೆಚ್ಚ ಮಾಡುತ್ತಿದೆ. ಈ ಯೋಜನೆಗಳ ಅನುಷ್ಠಾನದಿಂದಾಗಿ ಅಭಿವೃದ್ಧಿ ಕಾಮಗಾರಿಗಳಿಗೆ ಹಿನ್ನಡೆಯಾಗಿದೆ ಎಂದು ಹಲವು ಶಾಸಕರು ಅಳಲು ತೋಡಿಕೊಂಡಿದ್ದಾರೆ. ಗ್ಯಾರಂಟಿ ಅನುಷ್ಠಾನ ಹಾಗೂ ಅಭಿವೃದ್ಧಿ ಕಾರ್ಯಗಳು ಜತೆ ಜತೆಯಾಗಿ ಸಾಗಬೇಕು' ಎಂದು ಸಚಿವರೊಬ್ಬರು ತಿಳಿಸಿದರು.

9ನೇ ಪುಟ ನೋಡಿ

ಹೈಕಮಾಂಡ್ ಮುಂದಿಟ್ಟ ವಾದವೇನು?

1 ಗ್ಯಾರಂಟಿ ಯೋಜನೆಗಳಿಗೆ ಭಾರಿ ಮೊತ್ತ ವಿನಿಯೋಗವಾಗುತ್ತಿದೆ. ಇದರಿಂದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನದ ಕೊರತೆ ಎದುರಾಗಿದೆ

2 ಶ್ರೀಮಂತರು 'ಗ್ಯಾರಂಟಿ'ಗಳ ಪ್ರಯೋಜನ ಪಡೆದರೂ ಅವುಗಳ ಕುರಿತು ಲೇವಡಿ ಮಾಡುತ್ತಾರೆ. ಅಲ್ಲದೆ, ಕಾಂಗ್ರೆಸ್ ಪರವಾಗಿಯೂ ಅವರು ನಿಲ್ಲುವುದಿಲ್ಲ

3 ಉಳ್ಳವರನ್ನು ಯೋಜನೆಯ ವ್ಯಾಪ್ತಿಯಿಂದ ಕೈಬಿಟ್ಟರೆ ₹ 20 ಸಾವಿರ ಕೋಟಿಯಷ್ಟು ಮೊತ್ತ ಅಭಿವೃದ್ಧಿ ಯೋಜನೆಗಳಿಗೆ ಸಿಗುತ್ತದೆ

4 ಗೃಹಲಕ್ಷ್ಮಿ ಯೋಜನೆಗೆ ವೈಜ್ಞಾನಿಕ ಮಾನದಂಡ ರೂಪಿಸಿಲ್ಲ. ಬಡವರಿಗೆ ಮಾತ್ರ ಈ ಯೋಜನೆಯ ಲಾಭ ಸಿಗುವಂತೆ ನಿಯಮ ಪರಿಷ್ಕರಿಸಬೇಕು

5 ಆಂಧ್ರಪ್ರದೇಶದಲ್ಲಿ ಹಲವು ಜನಕಲ್ಯಾಣ ಯೋಜನೆ ರೂಪಿಸಿದರೂ ಜಗನ್ ಮೋಹನ್ ರೆಡ್ಡಿ ಸರ್ಕಾರ ಅಧಿಕಾರ ಕಳೆದುಕೊಂಡಿದ್ದು ಪಾಠವಾಗಬೇಕು

ಸಮೀಕ್ಷೆ ನಡೆಸಿ ಪರಿಷ್ಕರಣೆಗೆ ಒಲವು

'ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬರಲು ಗ್ಯಾರಂಟಿಗಳ ಘೋಷಣೆ ಸಹ ಕಾರಣ. ಸರ್ಕಾರ ಬಂದ ಕೂಡಲೇ ಐದು ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದೇವೆ. ಗ್ಯಾರಂಟಿ ಜಾರಿಯಾಗಿ 14 ತಿಂಗಳುಗಳು ಕಳೆದಿವೆ. ಯೋಜನೆಯ ವಿಮರ್ಶೆಗೆ ಇದು ಸೂಕ್ತ ಕಾಲ. ಹಾಗಾಗಿ, ಯೋಜನೆಯ ಬಗ್ಗೆ ಸರ್ವೆ ನಡೆಸಿ ಯೋಜನೆಗಳ ಸ್ವರೂಪದಲ್ಲಿ ಅಲ್ಪ ಬದಲಾವಣೆ ಮಾಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಸಹಮತ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪಕ್ಷದ ವೇದಿಕೆಯಲ್ಲಿ ಚರ್ಚೆ ಆಗಿದೆ' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಮಾಹಿತಿ ನೀಡಿದರು.



ತನಿಖೆಯ ಹೊಣೆ ಸಿಬಿಐಗೆ

ವೈದ್ಯ ವಿದ್ಯಾರ್ಥಿನಿ ಕೊಲೆ: ಕಲ್ಕತ್ತ ಹೈಕೋರ್ಟ್ ಆದೇಶ

ಕೋಲ್ಕತ್ತ (ಪಿಟಿಐ): ನಗರದ ಸರ್ಕಾರಿ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಆರೋಪ ಕುರಿತ ತನಿಖೆಯನ್ನು ಸಿಬಿಐಗೆ ವರ್ಗಾಯಿಸಿ ಕಲ್ಕತ್ತ ಹೈಕೋರ್ಟ್ ಮಂಗಳವಾರ ಆದೇಶಿಸಿದೆ.

ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಶಿವಜ್ಞಾನಂ ಹಾಗೂ ನ್ಯಾಯಮೂರ್ತಿ ಹಿರಣ್ಮಯ್ ಭಟ್ಟಾಚಾರ್ಯ ಅವರು ಇದ್ದ ವಿಭಾಗೀಯ ಪೀಠವು, ಕೇಸ್ ಡೈರಿಯನ್ನು ಸಂಜೆ ಒಳಗೆ ಹಾಗೂ ಇತರ ಎಲ್ಲ ದಾಖಲೆಗಳನ್ನು ಬುಧವಾರ ಬೆಳಿಗ್ಗೆ 10ರೊಳಗೆ ಸಿಬಿಐಗೆ ಹಸ್ತಾಂತರಿಸುವಂತೆ, ತನಿಖೆ ನಡೆಸುತ್ತಿರುವ ಕೋಲ್ಕತ್ತ ಪೊಲೀಸರಿಗೆ ನಿರ್ದೇಶಿಸಿತು.



ಹೈಕೋರ್ಟ್ ನಿರ್ದೇಶನ ಪ್ರಕಾರ, ರಾಜ್ಯ ಸರ್ಕಾರ ಮಧ್ಯಾಹ್ನ 1ಕ್ಕೆ ಕೇಸ್ ಡೈರಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತು. ನಂತರ, ಪೀಠವು ವಿಚಾರಣೆಯನ್ನು ಮೂರು ವಾರ ಮುಂದೂಡಿತು.

'ಘಟನೆ ನಡೆದು ಐದು ದಿನಗಳು ಕಳೆದಿವೆ. ಕೋಲ್ಕತ್ತ ಪೊಲೀಸರು ನಡೆಸುತ್ತಿರುವ ತನಿಖೆಯಲ್ಲಿ ಯಾವುದೇ ಗಮನಾರ್ಹ ಪ್ರಗತಿ ಇಲ್ಲ' ಎಂದು ಪೀಠ ಹೇಳಿದೆ.

ಇದಕ್ಕೂ ಮುನ್ನ, 'ಪ್ರಕರಣ ಕುರಿತಂತೆ ಒಬ್ಬ ವ್ಯಕ್ತಿಯನ್ನು ಬಂಧಿಸಲಾಗಿದ್ದು, 25ಕ್ಕೂ ಹೆಚ್ಚು ಜನರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಸೂಕ್ತ ರೀತಿಯಲ್ಲಿಯೇ ತನಿಖೆ ನಡೆಸಲಾಗುತ್ತಿದೆ' ಎಂದು ರಾಜ್ಯ ಸರ್ಕಾರ ಪರ ಹಾಜರಿದ್ದ ವಕೀಲರು ಪೀಠಕ್ಕೆ ತಿಳಿಸಿದರು.

10ನೇ ಪುಟ ನೋಡಿ

ಇಬ್ಬರು ರೋಗಿಗಳ ಮೇಲೆ 'ಅತ್ಯಾಚಾರ' ವೈದ್ಯನ ವಿರುದ್ಧ ಪ್ರಕರಣ

ಕಟಕ್(ಒಡಿಶಾ)(ಪಿಟಿಐ): ನಗರದ ಎಸ್.ಸಿ.ಬಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಇಬ್ಬರು ಮಹಿಳಾ ರೋಗಿಗಳ ಮೇಲೆ ಅತ್ಯಾಚಾರ ಎಸಗಿದ ಆರೋಪಕ್ಕೆ ಸಂಬಂಧಿಸಿ ವೈದ್ಯರೊಬ್ಬರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಮಂಗಳವಾರ ಹೇಳಿದ್ದಾರೆ.

ಈ ಘಟನೆ ಭಾನುವಾರ ನಡೆದಿದೆ. ಪರೀಕ್ಷೆಗಾಗಿ ಆಸ್ಪತ್ರೆಯ ಹೃದ್ರೋಗ ವಿಭಾಗಕ್ಕೆ ಈ ಮಹಿಳೆಯರು ಬಂದಿದ್ದಾಗ ಅತ್ಯಾಚಾರ ನಡೆದಿದೆ ಎನ್ನಲಾಗಿದೆ.

'ಸಂತ್ರಸ್ತ ಮಹಿಳೆಯರು ನೀಡಿರುವ ದೂರು ಆಧರಿಸಿ ಮಂಗಲಬಾಗ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ' ಎಂದು ಕಟಕ್‌ನ ಹೆಚ್ಚುವರಿ ಡಿಸಿಪಿ ಅನಿಲ್ ಮಿಶ್ರಾ ತಿಳಿಸಿದ್ದಾರೆ.

ವೈದ್ಯನ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮೂವರು ಸದಸ್ಯರ ಸಮಿತಿಯನ್ನು ರಚಿಸಿದೆ.

ರೋಗಿಗಳ ಕೆಲ ಸಂಬಂಧಿಕರು ಆರೋಪಿಯನ್ನು ಥಳಿಸಿದ್ದಾರೆ ಎನ್ನಲಾಗಿದೆ. ಆದರೆ, ಈ ಕುರಿತು ಪೊಲೀಸರಿಗೆ ಯಾವುದೇ ದೂರು ಬಂದಿಲ್ಲ ಎಂದು ಮಿಶ್ರಾ ಹೇಳಿದ್ದಾರೆ.



INDIA GATE
BASMATI RICE

This Independence Day, pledge for
#freedomfromhunger.

ಹಸಿವನ್ನು ಕಳೆದುಹೋದ ವಿಷಯವಾಗಿಸಲು ನೀವು ನಿಮ್ಮ ಪಾತ್ರ ನಿರ್ವಹಿಸಲು ಬಯಸುತ್ತೀರಿ ಎಂದು ನಮಗೆ ತಿಳಿದಿದೆ.
ಪ್ರಾರಂಭಿಸುವುದು ಸುಲಭವಲ್ಲ ಎಂದು ನಮಗೆ ತಿಳಿದಿದೆ.

ಭರವಸೆಯ ಧಾನ್ಯಗಳ ಅಭಿಯಾನದೊಂದಿಗೆ ಪ್ರತಿಜ್ಞೆ ತೆಗೆದುಕೊಳ್ಳಲು ಬನ್ನಿ.
ಪ್ರತಿ ವಾಗ್ದಾನಕ್ಕೂ ಇಂಡಿಯಾ ಗೇಟ್ ಹಿಂದುಳಿದ ಮಗುವಿಗೆ ಊಟವನ್ನು ನೀಡುತ್ತದೆ.

ಏಕೆಂದರೆ ಹಸಿವಿನಿಂದ ಮುಕ್ತರಾದಾಗ,
ಈ ಮಕ್ಕಳು ಅದ್ಭುತಗಳನ್ನು ಮಾಡಬಹುದು.

ಪ್ರಚಾರ ಮಾಡಿ,
ಅಭಿಯಾನದಲ್ಲಿ ಕೈಜೋಡಿಸಿ –

QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಪ್ರತಿಜ್ಞೆ ತೆಗೆದುಕೊಳ್ಳಲು
http://indiagategrainsofhope.com ಗೆ ಭೇಟಿ ನೀಡಿ!

#GrainsOfHope

ರಾಜಧಾನಿಗೆ ಶರಾವತಿ ಕೊಳ್ಳದಿಂದ ನೀರು ಪೂರೈಸಲು ಕಾರ್ಯಸಾಧ್ಯತಾ ವರದಿ; ವಿಜೆಎನ್‌ಎಲ್‌ಗೆ ಸೂಚನೆ

ಮಲೆನಾಡಲ್ಲಿ 'ಬೆಂಗಳೂರಿನ ದಾಹ'ದ ಸದ್ದು

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ಲಿಂಗನಮಕ್ಕಿ ಜಲಾಶಯದಿಂದ ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಯ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ವಿಶ್ವೇಶ್ವರಯ್ಯ ಜಲನಿಗಮ ನಿಯಮಿತ (ವಿಜೆಎನ್‌ಎಲ್) ಮುಂದಾಗಿದೆ. ಇದು ಮಲೆನಾಡಿನಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಏನಿದು ಯೋಜನೆ?: ಕಾವೇರಿ 5ನೇ ಹಂತದ ಯೋಜನೆ ಅನುಷ್ಠಾನದ ನಂತರ ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದ ನೀರಿನಲ್ಲಿ ಬೆಂಗಳೂರು ನಗರಕ್ಕೆ ಪಾಲು ಲಭಿಸುವುದಿಲ್ಲ. ಪ್ರಸ್ತುತ ಅಲ್ಲಿನ ಜಲಮಂಡಳಿಯು ಬೆಂಗಳೂರಿನ ಬೇಡಿಕೆಯ ಶೇ 62ರಷ್ಟು ನೀರನ್ನು (ಗೃಹ ಹಾಗೂ ವಾಣಿಜ್ಯ ಉದ್ದೇಶಗಳಿಗೆ ಸೇರಿ ನಿತ್ಯ 145 ಕೋಟಿ ಲೀಟರ್) ಒದಗಿಸುತ್ತಿದೆ. 2031ರ ಹೊತ್ತಿಗೆ ಈ ಬೇಡಿಕೆ 354 ಕೋಟಿ ಲೀಟರ್‌ಗಳಷ್ಟಾಗಲಿದೆ ಎಂಬ ಅಂದಾಜು ಇರುವುದರಿಂದ ಸರ್ಕಾರ ಪರ್ಯಾಯ ನೀರಿನ ಮೂಲ ಅರಸಲು ಮುಂದಾಗಿತ್ತು.

ಶರಾವತಿಯಿಂದ ನೀರು: ಬೆಂಗಳೂರಿನ ಭವಿಷ್ಯದ ಕುಡಿಯುವ ನೀರಿನ ಬೇಡಿಕೆಗೆ ಜಲಮೂಲಗಳ ಬಳಕೆ ಬಗ್ಗೆ 2013ರಲ್ಲಿ ಜಲಮಂಡಳಿಯ ನಿವೃತ್ತ ಮುಖ್ಯ ಎಂಜಿನಿಯರ್ ಬಿ.ಎನ್. ತ್ಯಾಗರಾಜ ನೇತೃತ್ವದ 10 ಜನರ ತಜ್ಞರ ಸಮಿತಿ ವರದಿ ನೀಡಿತ್ತು. ಅದಕ್ಕೆ ಜೀವ ನೀಡಿ ಶರಾವತಿ ಕೊಳ್ಳದಿಂದ ಬೆಂಗಳೂರಿಗೆ ನೀರು ತರಲು ಸರ್ಕಾರ ಯೋಜಿಸಿದೆ.

ಬಿ.ಎನ್. ತ್ಯಾಗರಾಜ ಸಮಿತಿ ತನ್ನ ವರದಿಯಲ್ಲಿ ಲಿಂಗನಮಕ್ಕಿ ಜಲಾಶಯದ ಗರಿಷ್ಠ ನೀರಿನ ಸಂಗ್ರಹಣಾ ಸಾಮರ್ಥ್ಯ 151 ಟಿಎಂಸಿ ಅಡಿ. ಆದರೆ, ಸಾಮಾನ್ಯವಾಗಿ ಪ್ರತಿ ವರ್ಷ ಜಲಾಶಯಕ್ಕೆ ಒಟ್ಟಾರೆ 181 ಟಿಎಂಸಿ ಅಡಿ ಒಳಹರಿವು ಇರುತ್ತದೆ. ಹೆಚ್ಚುವರಿ 30 ಟಿಎಂಸಿ ಅಡಿ ನೀರನ್ನು ಸಮುದ್ರಕ್ಕೆ ಹರಿಸುವ ಬದಲು ಬೆಂಗಳೂರಿಗೆ ತರಬಹುದು ಎಂದು ಹೇಳಿತ್ತು.

ಡಿಪಿಆರ್ ಸಿದ್ಧ: ಬೆಂಗಳೂರಿಗೆ ಸುಮಾರು 360 ಕಿ.ಮೀ. ದೂರದಿಂದ ನೀರು ತರುವ ಈ ಯೋಜನೆಗೆ 2018ರಲ್ಲಿ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿತ್ತು. ಶರಾವತಿಯಲ್ಲಿ ಲಭ್ಯವಾಗುವ 30 ಟಿಎಂಸಿ ಅಡಿ ನೀರಿನಲ್ಲಿ ಮೊದಲ ಹಂತದಲ್ಲಿ 15 ಟಿಎಂಸಿ ಅಡಿ ನೀರು ತಂದು ಅದರಲ್ಲಿ ಬಿಬಿಎಂಪಿಗೆ ವಾರ್ಷಿಕ 10 ಟಿಎಂಸಿ ಅಡಿ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಕುಡಿಯುವ ಉದ್ದೇಶಕ್ಕೆ 5 ಟಿಎಂಸಿ ಅಡಿ ನೀರು ಬಳಕೆ ಮಾಡಲು ನಿರ್ಧರಿಸಿ ಅಂದಾಜು ₹ 12,500 ಕೋಟಿ ವೆಚ್ಚದ ಯೋಜನೆ ರೂಪಿಸಲಾಗಿದೆ ಎಂದು ವಿಜೆಎನ್‌ಎಲ್ ಮೂಲಗಳು ಹೇಳುತ್ತವೆ.

ಆದರೆ ಈ ಯೋಜನೆ ಪಶ್ಚಿಮ ಘಟ್ಟದ ಸೂಕ್ಷ್ಮತೆಗೆ ಧಕ್ಕೆ ತರಲಿದೆ ಎಂದು ಶರಾವತಿ ಕೊಳ್ಳದ ಜನರಿಂದ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಅಂತೆಯೇ, 'ಯೋಜನೆ ಕಾರ್ಯಸಾಧುವಲ್ಲ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಅದನ್ನು ಅನುಷ್ಠಾನಗೊಳಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ' ಎಂದು 2019ರ ಆಗಸ್ಟ್ 13ರಂದು ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿಕೆ ನೀಡಿದ್ದರು. ನಂತರ ಜನಾಕ್ರೋಶ ತಣ್ಣಗಾಗಿತ್ತು. ಯೋಜನೆ ಕಪಾಟು ಸೇರಿತ್ತು. ಈಗ ಮತ್ತೆ ಮುನ್ನೆಲೆಗೆ ಬಂದಿದೆ.

ಪರಿಸರಕ್ಕೆ ಆಗುವ ಹಾನಿ ಅರಿತು ಶರಾವತಿ ಕೊಳ್ಳದ ಜನರು ವಿರೋಧ ವ್ಯಕ್ತಪಡಿಸಿದ್ದರಿಂದ ಹಿಂದಿನ ಸರ್ಕಾರ ಯೋಜನೆಯನ್ನು ಕೈಬಿಟ್ಟಿತ್ತು. ಈಗ ಮತ್ತೊಂದು ಹೋರಾಟಕ್ಕೆ ಅಣಿಯಾಗಲಿದ್ದೇವೆ.
ಅಖಿಲೇಶ್ ಚಿಪ್ಪಳಿ, ಪರಿಸರಾಸಕ್ತ, ಸಾಗರ



ಲಿಂಗನಮಕ್ಕಿ ಜಲಾಶಯದ ನೋಟ ಪ್ರಜಾವಾಣಿ ಚಿತ್ರ: ಶಿವಮೊಗ್ಗ ನಾಗರಾಜ್

ಶರಾವತಿ: ಕೇಂದ್ರಕ್ಕೆ ಶೀಘ್ರ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಅನುಷ್ಠಾನಗೊಳಿಸುವ ಸಂಬಂಧ ಕೇಂದ್ರದಿಂದ ಅನುಮತಿ ಪಡೆಯಲು ಒಂದು ತಿಂಗಳ ಒಳಗೆ ಪ್ರಸ್ತಾವ ಸಲ್ಲಿಸಬೇಕು' ಎಂದು ತಮ್ಮ ಇಲಾಖೆಯ ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ನಿರ್ದೇಶನ ನೀಡಿದರು.

ಅರಣ್ಯ ಮತ್ತು ಪರಿಸರಕ್ಕೆ ಹಾನಿ ಆಗದಂತೆ ಈ ಯೋಜನೆ ಅನುಷ್ಠಾನಗೊಳಿಸುವ ಕುರಿತು ಇಂಧನ ಸಚಿವ ಕೆ.ಜೆ. ಜಾರ್ಜ್ ಮತ್ತು ಈಶ್ವರ ಖಂಡ್ರೆ ನೇತೃತ್ವದಲ್ಲಿ ಹಿರಿಯ ಅಧಿಕಾರಿಗಳ ಸಭೆ ಮಂಗಳವಾರ ನಡೆಯಿತು.

ಶರಾವತಿ ಜಲ ವಿದ್ಯುತ್ ಯೋಜನೆ ವ್ಯಾಪ್ತಿಯ ಕಾರಿಡಾರ್‌ನಲ್ಲಿಯೇ ಈ ಯೋಜನೆ ಅನುಷ್ಠಾನಗೊಳ್ಳಲಿರುವುದರಿಂದ ಕನಿಷ್ಠ ಪ್ರಮಾಣದಲ್ಲಿ ಅರಣ್ಯ ಹಾನಿ ಆಗಲಿದೆ ಎಂದು ಕೆ.ಜೆ.ಜಾರ್ಜ್ ಮತ್ತು ಇಂಧನ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯು ಸದ್ಯ ವಿದ್ಯುತ್ ಉತ್ಪಾದನೆ ಮಾಡುವ ಜಲಾಶಯದಿಂದ ಹರಿಯುವ ನೀರನ್ನು ಮೋಟಾರ್ ಪಂಪ್‌ಗಳ ಮೂಲಕ ಮೇಲಕ್ಕೆ ಹರಿಸಿ ಮತ್ತೆ ವಿದ್ಯುತ್ ಉತ್ಪಾದಿಸುವ ಯೋಜನೆ. ಪರಿಸರ ಮತ್ತು ಅರಣ್ಯದ ಮೇಲೆ ಯಾವುದೇ ಗಂಭೀರ ಪರಿಣಾಮ ಉಂಟಾಗದಂತೆ ಸುಮಾರು 2 ಸಾವಿರ ಮೆಗಾ ವ್ಯಾಟ್‌ನಷ್ಟು ವಿದ್ಯುತ್ ಉತ್ಪಾದಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಅಗತ್ಯ ಅನುಮತಿಗಳನ್ನು ನೀಡಲು ಅರಣ್ಯ ಇಲಾಖೆ ಕ್ರಮ ತೆಗೆದುಕೊಳ್ಳಬೇಕು' ಎಂದು ಜಾರ್ಜ್ ಅವರು ಖಂಡ್ರೆ ಅವರಿಗೆ ಮನವಿ ಮಾಡಿದರು.

ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ ಇದ್ದರು.

ನಮ್ಮದೇನೂ ಅಭ್ಯಂತರವಿಲ್ಲ: ಬೇಳೂರು ಗೋಪಾಲಕೃಷ್ಣ




ಗೋಪಾಲಕೃಷ್ಣ

'ಶರಾವತಿಯಿಂದ ಕುಡಿಯುವ ಉದ್ದೇಶಕ್ಕೆ ಬೆಂಗಳೂರಿಗೆ ನೀರು ಒಯ್ಯಲು ನಮ್ಮದೇನೂ ಅಭ್ಯಂತರ ವಿಲ್ಲ. ಅದಕ್ಕೂ ಮುನ್ನ ಸರ್ಕಾರ ಶಿವಮೊಗ್ಗ ಜಿಲ್ಲೆಯಲ್ಲಿನ ಶರಾವತಿ ಯೋಜನೆ ಸಂತ್ರಸ್ತರಿಗೆ ದಿನದ 24 ಗಂಟೆ ವಿದ್ಯುತ್ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಿ' ಎಂದು ಸಾಗರ ಕ್ಷೇತ್ರದ ಶಾಸಕ ಬೇಳೂರು ಗೋಪಾಲಕೃಷ್ಣ ಆಗ್ರಹಿಸುತ್ತಾರೆ.

'ಶರಾವತಿ ನೀರನ್ನು ಕೃಷಿಗೆ ಒಯ್ಯುತ್ತಿಲ್ಲ .ಕುಡಿಯಲು ಕೊಡಲಾಗುತ್ತಿದೆ. ಮಲೆನಾಡಿನಲ್ಲಿ ಹೆದ್ದಾರಿ ಮಾಡಿದರೂ ಕಾಡು ನಾಶವಾಗುತ್ತದೆ. ಹಾಗೆಂದು ಕುಡಿಯುವ ನೀರಿಗೆ ವಿರೋಧ ಸಲ್ಲ. ಪರಿಸರವಾದಿಗಳ ಆಕ್ಷೇಪಕ್ಕೆ ಸರ್ಕಾರ ಉತ್ತರ ನೀಡಿ ಮನವರಿಕೆ ಮಾಡಲಿದೆ' ಎಂದು ಪ್ರತಿಕ್ರಿಯಿಸಿದರು.

'ಕಾರ್ಯಸಾಧ್ಯತೆ ಬದಲಿಗೆ ಜನಾಭಿಪ್ರಾಯ ಸಂಗ್ರಹಿಸಿ'



ನಾಗೇಶ ಹೆಗಡೆ

'ಯೋಜನೆಗೆ ಸರ್ಕಾರ ಈಗಾಗಲೇ ಡಿಪಿಆರ್ ಸಿದ್ಧಪಡಿಸಿದೆ. ಮತ್ತೆ ಈ ಹಂತದಲ್ಲಿ ₹74 ಲಕ್ಷ ಖರ್ಚು ಮಾಡಿ ಕಾರ್ಯಸಾಧ್ಯತಾ ವರದಿ ಪಡೆಯಲು ವಿಜೆಎನ್‌ಎಲ್ ಮುಂದಾಗಿರುವುದು ತಮಾಷೆಯ ಸಂಗತಿ. ಅದರ ಬದಲಿಗೆ ಸರ್ಕಾರ ಶಿವಮೊಗ್ಗ– ಉತ್ತರ ಕನ್ನಡ ಜಿಲ್ಲೆಗಳಲ್ಲಿ ನದಿಪಾತ್ರದ ಜನರ ಅಭಿಪ್ರಾಯ ಸಂಗ್ರಹಿಸಲಿ' ಎಂದು ಪರಿಸರ ತಜ್ಞ, ಪತ್ರಕರ್ತ ನಾಗೇಶ ಹೆಗಡೆ ಒತ್ತಾಯಿಸುತ್ತಾರೆ.

'ಸರ್ಕಾರ ಹೇಳುವಂತೆ ಅಲ್ಲಿ 30 ಟಿಎಂಸಿ ಅಡಿ ನೀರು ವ್ಯರ್ಥವಾಗಿ ಸಮುದ್ರ ಸೇರುತ್ತಿಲ್ಲ. ಶರಾವತಿಯಲ್ಲಿ ಹೊಸ ನೀರು ಹರಿಯದೇ ಸಮುದ್ರದ ನೀರು ವಾಪಸ್ ನದಿಗೆ ಬರುತ್ತಿದೆ. ಅದರ ಪರಿಣಾಮವನ್ನು ಸಮುದ್ರದ ಸಮೀಪದ ಅಳಿವೆ ಅಂಚಿನಲ್ಲಿ ವಾಸಿಸುವವರು ಅನುಭವಿಸುತ್ತಿದ್ದಾರೆ. ಉಪ್ಪು ನೀರು ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಗುಂಡಬಾಳ ದಾಟಿ ಬಂದಿದೆ' ಎನ್ನುತ್ತಾರೆ.

'ಬೆಂಗಳೂರಿನ ಕೆರೆ– ಕಟ್ಟೆ, ಜಲಮೂಲಗಳನ್ನು ಗುರುತಿಸಿ, ಹೂಳು ತೆಗೆಸಿ ಮಳೆ ನೀರು ಹಿಡಿದಿಟ್ಟರೆ ಅಂತರ್ಜಲ ಮಟ್ಟ ಏರುತ್ತದೆ. ಇದರಿಂದ ಈಗಿನ 18 ಟಿಎಂಸಿ ಅಡಿ ಜೊತೆಗೆ ಇಲ್ಲೇ ಇನ್ನೂ 31 ಟಿಎಂಸಿ ಅಡಿ ನೀರು ಪಡೆಯಬಹುದು ಎಂದು ಜಲ ತಜ್ಞರು ಹೇಳಿದ್ದಾರೆ. ₹ 2,200 ಕೋಟಿ ಖರ್ಚು ಮಾಡಿದರೆ ಬೆಂಗಳೂರಿನಲ್ಲಿನ 15 ಟಿಎಂಸಿ ಅಡಿ ಕೊಳೆ ನೀರನ್ನು ಸಿಂಗಾಪುರ ಮಾದರಿಯಲ್ಲಿ ಕುಡಿಯಲು ಯೋಗ್ಯವಾಗಿಸಬಹುದು ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಕಾರ್ಯದರ್ಶಿಯೇ ವರದಿ ನೀಡಿದ್ದಾರೆ. ಈ ಸಂಗತಿಗಳತ್ತ ಸರ್ಕಾರ ಗಮನಹರಿಸಲಿ' ಎನ್ನುತ್ತಾರೆ.

ಸುದ್ದಿ 2 ನಿಮಿಷ

ಮುಡಾ, ವಾಲ್ಮೀಕಿ ನಿಗಮದ ಹಗರಣ ಖಂಡಿಸಿ ದಸಂಸ ಪಾದಯಾತ್ರೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಯಲ್ಲಿ ಆಗಿರುವ ಹಗರಣ ಖಂಡಿಸಿ ಇದೇ 15ರಿಂದ ಮೈಸೂರಿನಿಂದ ಬೆಂಗಳೂರಿನ ವಿಧಾನಸೌಧದವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು' ಎಂದು ದಲಿತ ಸಂಘರ್ಷ ಸಮಿತಿ (ಭೀಮವಾದ) ಅಧ್ಯಕ್ಷ ಆರ್. ಮೋಹನರಾಜ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳನ್ನು ವಂಚಿಸುತ್ತ ಬಂದಿದೆ. ಒಂದು ವರ್ಷದಿಂದ ಪರಿಶಿಷ್ಟ ಸಮುದಾಯಗಳ ಅಭಿವೃದ್ಧಿ ಎಸ್‌ಸಿಎಸ್‌ಪಿ ಟಿಎಸ್‌ಪಿ ಯೋಜನೆಯ ₹25 ಸಾವಿರ ಕೋಟಿ ಹಣವನ್ನು 'ಗ್ಯಾರಂಟಿ'ಗೆ ಬಳಸುವ ಮೂಲಕ ದಲಿತರಿಗೆ ಅನ್ಯಾಯ ಮಾಡಲಾಗಿದೆ' ಎಂದು ದೂರಿದರು.

'ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಪ್ರೋತ್ಸಾಹ ಧನ ಹಂಚಿಕೆಯಲ್ಲೂ ಸಮಸ್ಯೆ ಆಗಿದೆ. ಈ ಎಲ್ಲ ಹಗರಣಗಳನ್ನು ಖಂಡಿಸಿ ಮೈಸೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಆಗಸ್ಟ್ 20ಕ್ಕೆ ಬೆಂಗಳೂರಿಗೆ ಬಂದು ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು' ಎಂದರು.

ಸುದ್ದಿಗೋಷ್ಠಿಯಲ್ಲಿ ಬೆಂಗಳೂರು ನಗರ ಘಟಕದ ಅಧ್ಯಕ್ಷ ಪರಶುರಾಮ, ಪ್ರಧಾನ ಕಾರ್ಯದರ್ಶಿ ನಾಗೇಶ್, ಸಂಚಾಲಕರಾದ ಜಯರಾಮ್, ಚನ್ನಕೇಶವ ಭಾಗವಹಿಸಿದ್ದರು.



17ರಿಂದ ಕುಂದಾಪ್ರ ಕನ್ನಡ ಹಬ್ಬ

ಬೆಂಗಳೂರು: ಕುಂದಾಪ್ರ ಕನ್ನಡ ಪ್ರತಿಷ್ಠಾನದ ವತಿಯಿಂದ ನಗರದ ಅರಮನೆ ಮೈದಾನದಲ್ಲಿ ಆಗಸ್ಟ್ 17ರಿಂದ ಐದನೇ 'ಕುಂದಾಪ್ರ ಕನ್ನಡ ಹಬ್ಬ' ಆಯೋಜಿಸಲಾಗಿದೆ.

ಕುಂದಾಪುರದ ಕನ್ನಡ ಭಾಷೆಯ ಸೊಗಡು, ಸಂಸ್ಕೃತಿ, ಆಚಾರ, ವಿಚಾರಗಳನ್ನು ಸಿಲಿಕಾನ್ ಸಿಟಿಯ ಜನರಿಗೆ ತಿಳಿಸುವ ಉದ್ದೇಶದಿಂದ ಎರಡು ದಿನ ಅರಮನೆ ಮೈದಾನದ ವೈಟ್ ಪೆಟಲ್ಸ್‌ನಲ್ಲಿ ಗ್ರಾಮೀಣ ಕ್ರೀಡಾಕೂಟ, ಯಕ್ಷಗಾನ ಜೋಡಾಟ ಹಾಗೂ ಇತರೆ ಕಾರ್ಯಕ್ರಮಗಳು ನಡೆಯಲಿವೆ ಎಂದು ಪ್ರತಿಷ್ಠಾನದ ಗೌರವ ಅಧ್ಯಕ್ಷ ಉದಯ ಹೆಗ್ಡೆ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

17ರ ಮಧ್ಯಾಹ್ನದಿಂದ ಕಾರ್ಯಕ್ರಮಗಳು ಪ್ರಾರಂಭವಾಗಲಿದ್ದು, ಸಂಜೆ 5 ಗಂಟೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಬ್ಬಕ್ಕೆ ಚಾಲನೆ ನೀಡುವರು. ಚಿತ್ರ ನಿರ್ದೇಶಕ ರಿಷಬ್ ಶೆಟ್ಟಿ ಮತ್ತು ಮಾಲತಿ ಕೆ.ಹೊಳ್ಳ ಅವರಿಗೆ ಊರ ಗೌರವ ಪ್ರಶಸ್ತಿ ನೀಡಲಾಗುವುದು. ಕರಾವಳಿ ಖಾದ್ಯ ಮೇಳ, ಕಡಲೂರಿನ ವಸ್ತು, ಆಭರಣ, ವಸ್ತ್ರಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಲಾಗಿದೆ ಎಂದರು.

'ರವಿ ಬಸ್ರೂರ್ ನೈಟ್ಸ್' ಸಂಗೀತ ಸಂಜೆ, ಕುಂದಾಪುರದ ರಂಗಗೀತೆ ಮತ್ತು ಜನಪದ ಗೀತೆಗಳ ಕಾಯಕ್ರಮ ನಡೆಯಲಿದೆ. ನಟರಾದ ರಾಜ್ ಬಿ.ಶೆಟ್ಟಿ, ಗಣೇಶ್, ನಟಿ ಪ್ರಿಯಾಂಕಾ ಉಪೇಂದ್ರ ಭಾಗವಹಿಸುವರು ಎಂದು ಹೇಳಿದರು.

ಗೋಷ್ಠಿಯಲ್ಲಿ ಪ್ರತಿಷ್ಠಾನದ ಅಧ್ಯಕ್ಷ ಡಾ.ದೀಪಕ್ ಶೆಟ್ಟಿ ಬಾರ್ಕೂರು, ಉಪಾಧ್ಯಕ್ಷ ನರಸಿಂಹ ಬೀಜಾಡಿ ಉಪಸ್ಥಿತರಿದ್ದರು.

ನರರೋಗ ಚಿಕಿತ್ಸಾ ಶಿಬಿರ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಪಟ್ಟಣಗೆರೆ ರಂಗನಾಥಶಾಸ್ತ್ರಿ ಕೃಷ್ಣವೇಣಮ್ಮ ಮೆಮೋರಿಯಲ್ ಟ್ರಸ್ಟ್‌ನಿಂದ ಇದೇ 15ರಂದು ಬಸವನಗುಡಿಯ ತ್ಯಾಗರಾಜನಗರದಲ್ಲಿರುವ ಶ್ರೀಪಾದ ಶ್ರೀವಲ್ಲಭ ಭವನದಲ್ಲಿ ಉಚಿತ ನರರೋಗ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ನಿವೃತ್ತ ಐಪಿಎಸ್ ಅಧಿಕಾರಿ ಗೋಪಾಲ್ ಹೊಸೂರ್ ಅವರು ಶಿಬಿರವನ್ನು ಉದ್ಘಾಟಿಸಲಿದ್ದಾರೆ.

ಸಂಸದ ಡಾ.ಸಿ.ಎನ್. ಮಂಜುನಾಥ್ ಅವರು 'ಅಪಸ್ಮಾರವನ್ನು ಅರ್ಥ ಮಾಡಿಕೊಳ್ಳುವುದು' ಪುಸ್ತಕವನ್ನು ಬಿಡುಗಡೆಗೊಳಿಸಲಿದ್ದಾರೆ. ನರರೋಗ ತಜ್ಞ ಡಾ.ಜಿ.ಟಿ. ಸುಭಾಷ್, 'ವಿಜಯವಾಣಿ' ದಿನ ಪತ್ರಿಕೆಯ ಸಂಪಾದಕ ಚನ್ನೇಗೌಡ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾರ್ಯದರ್ಶಿ ಶ್ರೀಧರ ಮೂರ್ತಿ, ಗುರು ಸಂಕಣ್ಣಾಶ್ರಮ ಟ್ರಸ್ಟ್, ದತ್ತಾತ್ರೇಯ ದೇವಸ್ಥಾನದ ಕಾರ್ಯದರ್ಶಿ ಶ್ರೀಪಾದ್ ಎನ್. ಎಲ್., ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಶಿಬಿರವು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1ಗಂಟೆಯವರೆಗೆ ನಡೆಯಲಿದೆ. ನೋಂದಣಿಗೆ: 98450 38669.

1,850 ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನ, 1,150 ಮಂದಿಯಿಂದ ಗೌರವ ರಕ್ಷೆ

ಸ್ವಾತಂತ್ರ್ಯ ದಿನಾಚರಣೆಯಲ್ಲಿ 'ಗ್ಯಾರಂಟಿ' ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಪರೇಡ್ ಮೈದಾನದಲ್ಲಿ ನಡೆಯುವ ರಾಜ್ಯಮಟ್ಟದ ಸ್ವಾತಂತ್ರ್ಯ ದಿನಾಚರಣೆಯಂದು ಸರ್ಕಾರದ ಗ್ಯಾರಂಟಿ ಯೋಜನೆಗಳ ಮಾಹಿತಿ, ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ಏಳು ಪ್ರದರ್ಶನಗಳನ್ನು ಆಯೋಜಿಸಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಅವರು ಮೈದಾನದಲ್ಲಿ ಮಂಗಳವಾರ ಪೂರ್ವ ಸಿದ್ಧತೆಯನ್ನು ವೀಕ್ಷಿಸಿ ಜಂಟಿ ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮಗಳ ಮಾಹಿತಿ ನೀಡಿದರು.

ಮುಖ್ಯಮಂತ್ರಿಯವರು ಗುರುವಾರ ಬೆಳಿಗ್ಗೆ 9ಕ್ಕೆ ಧ್ವಜಾರೋಹಣ ನೆರವೇರಿಸಲಿದ್ದು, ನಂತರ ತೆರೆದ ಜೀಪಿನಲ್ಲಿ ಪರೇಡ್ ವೀಕ್ಷಿಸಲಿದ್ದಾರೆ. ಕೆಎಸ್‌ಆರ್‌ಪಿ, ಸಿಆರ್‌ಪಿಎಫ್, ಬಿಎಸ್‌ಎಫ್, ಸಿಎಆರ್, ಗೋವಾ ಪೊಲೀಸ್, ಕೆಎಸ್‌ಐಎಸ್‌ಎಫ್, ಸಂಚಾರ ಪೊಲೀಸ್, ಮಹಿಳಾ ಪೊಲೀಸ್, ಹೋಂ ಗಾರ್ಡ್ಸ್, ಸಂಚಾರ ವಾರ್ಡನ್, ಅಗ್ನಿಶಾಮಕ ದಳ ಸಿಬ್ಬಂದಿ, ಶ್ವಾನದಳ ಮತ್ತು ಬ್ಯಾಂಡ್ ಒಟ್ಟು 35 ತುಕಡಿಗಳಲ್ಲಿ 1,150 ಮಂದಿ ಗೌರವ ರಕ್ಷೆಯಲ್ಲಿ ಭಾಗವಹಿಸಲಿದ್ದಾರೆ ಎಂದು ತುಷಾರ್ ಗಿರಿನಾಥ್ ಹೇಳಿದರು.

ಮಂಜುನಾಥ್, ಬಿ. ಸಿದ್ದರಾಜಯ್ಯ, ಐಶ್ವರ್ಯ ಮಹೇಶ್, ಮತ್ತಿಗುಂಟೆ ಕೃಷ್ಣಮೂರ್ತಿ ಅವರ ತಂಡ ನಾಡಗೀತೆ ಮತ್ತು ರೈತ ಗೀತೆಯನ್ನು ಹಾಡಲಿದೆ. ಯಲಹಂಕದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ 650 ಮಕ್ಕಳು 'ಜಯಭಾರತಿ' ನೃತ್ಯ ಪ್ರದರ್ಶನ ನೀಡಲಿದ್ದಾರೆ. ರಾಷ್ಟ್ರೀಯ ಯೋಜನೆ, ರಾಜ್ಯ ಎನ್‌ಎಸ್‌ಎಸ್ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಡೆಯುವ 'ಸರ್ಕಾರದ ಐದು ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆ'ಗಳ ಪ್ರದರ್ಶನದಲ್ಲಿ 400 ಮಕ್ಕಳು ಮಾಹಿತಿ ನೀಡಲಿದ್ದಾರೆ ಎಂದರು.

ಪಿಳ್ಳಣ್ಣ ಗಾರ್ಡನ್‌ನಲ್ಲಿರುವ ಬಿಬಿಎಂಪಿ ಸಂಯುಕ್ತ ಪದವಿಪೂರ್ವ ಕಾಲೇಜಿನ 700 ಮಕ್ಕಳು 'ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಅಬ್ಬಕ್ಕ ದೇವಿ' ಪ್ರದರ್ಶನ ನೀಡಲಿದ್ದಾರೆ. ವಿವೇಕ್ ಪವಾರ್ ನೇತೃತ್ವದಲ್ಲಿ ಮರಾಠಾ ಲೈಟ್ ಇನ್‌ಫೆಂಟ್ರಿ ರೆಜಿಮೆಂಟ್ ಸೆಂಟರ್‌ನ ತಂಡ 'ಮಲ್ಲಕಂಬ' ಪ್ರದರ್ಶನ ನೀಡಲಿದೆ. ಪ್ಯಾರಾಚ್ಯೂಟ್ ರೆಜಿಮೆಂಟ್ ಟ್ರೈನಿಂಗ್ ಸೆಂಟರ್‌ನ ಸೋಂಬೀರ್ ಮತ್ತು ಅವರ ತಂಡ 'ಪ್ಯಾರಾ ಮೋಟರ್' ಪ್ರದರ್ಶನ ನೀಡಲಿದೆ. ಕೋರ್ ಆಫ್ ಮಿಲಿಟರಿ ಪೊಲೀಸ್ ಸೆಂಟರ್ ಆ್ಯಂಡ್ ಸ್ಕೂಲ್‌ನ ಎಂ.ಕೆ. ಸಿಂಗ್ ಅವರ ತಂಡ 'ಮೋಟರ್ ಸೈಕಲ್' ಪ್ರದರ್ಶನ ನಡೆಸಿಕೊಡಲಿದೆ ಎಂದು ಮಾಹಿತಿ ನೀಡಿದರು.

ಅಂಗಾಂಗ ದಾನ ಮಾಡಿರುವ 64 ಜನರ ಕುಟುಂಬದ ಸದಸ್ಯರಿಗೆ ಮುಖ್ಯಮಂತ್ರಿ ಪ್ರಶಂಸಾಪತ್ರ' ನೀಡಲಿದ್ದಾರೆ ಎಂದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್, ಸಂಚಾರ ಪೊಲೀಸ್ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಅನುಚೇತ್, ಬಿಬಿಎಂಪಿ ಪೂರ್ವ ವಲಯ ಆಯುಕ್ತೆ ಸ್ನೇಹಲ್ ಉಪಸ್ಥಿತರಿದ್ದರು.



ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಮರಾಠಾ ಲೈಟ್ ಇನ್‌ಫೆಂಟ್ರಿ ರೆಜಿಮೆಂಟ್ ಸೆಂಟರ್‌ನ ತಂಡ 'ಮಲ್ಲಕಂಬ' ಪ್ರದರ್ಶನದ ತಾಲೀಮು ನಡೆಸಿತು – ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ದನ್

ಸಾರ್ವಜನಿಕ ಸಾರಿಗೆ ಬಳಸಿ: ಕಮಿಷನರ್

'ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಬರುವ ನಾಗರಿಕರು ಆಹ್ವಾನ ಪತ್ರದಲ್ಲಿರುವ ಗೇಟ್‌ನಲ್ಲೇ ಪ್ರವೇಶ ಪಡೆಯಬೇಕು. ವಾಹನ ನಿಲುಗಡೆ ಪ್ರದೇಶ ಕಡಿಮೆ ಇರುವುದರಿಂದ ನಮ್ಮ ಮೆಟ್ರೊ, ಬಿಎಂಟಿಸಿ ಸೇರಿದಂತೆ ಸಾರ್ವಜನಿಕ ಸಾರಿಗೆ ಬಳಸಬೇಕು' ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಮನವಿ ಮಾಡಿದರು.

ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಭದ್ರತೆ ಹಾಗೂ ಸುರಕ್ಷತೆಗೆ 100 ಸಿಸಿ ಟಿ.ವಿ ಕ್ಯಾಮೆರಾ, ಎರಡು ಬ್ಯಾಗೇಜ್ ಸ್ಕ್ಯಾನರ್, ಸಂಚಾರ ನಿಯಂತ್ರಣ ವ್ಯವಸ್ಥೆ ಮಾಡಲಾಗಿದೆ. ಅಗ್ನಿಶಾಮಕ ದಳ, ಆಂಬುಲೆನ್ಸ್‌ಗಳನ್ನು ನಿಯೋಜಿಸಲಾಗಿದೆ ಎಂದರು.

10 ಡಿಸಿಪಿ, 17 ಎಸಿಪಿ, 42 ಇನ್‌ಸ್ಪೆಕ್ಟರ್, 112 ಪಿಎಸ್‌ಐ, 62 ಎಎಸ್‌ಐ, 511 ಕಾನ್‌ಸ್ಟೆಬಲ್, 72 ಮಹಿಳಾ ಸಿಬ್ಬಂದಿಯನ್ನು ನೇಮಿಸಲಾಗಿದೆ.10 ಡಿಸಿಪಿ, 17 ಎಸಿಪಿ, 42 ಇನ್‌ಸ್ಪೆಕ್ಟರ್, 112 ಪಿಎಸ್‌ಐ, 62 ಎಎಸ್‌ಐ, 511 ಕಾನ್‌ಸ್ಟೆಬಲ್, 72 ಮಹಿಳಾ ಸಿಬ್ಬಂದಿಯನ್ನು ನೇಮಿಸಲಾಗಿದೆ. ಇದಲ್ಲದೆ ನಗರದ ಎಲ್ಲ ಕಡೆಗಳಲ್ಲೂ ರಕ್ಷಣೆಗಾಗಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ವಾಹನ ನಿಲುಗಡೆ ನಿಷೇಧ

ಸೆಂಟ್ರಲ್ ಸ್ಟ್ರೀಟ್, ಅನಿಲ್ ಕುಂಬ್ಳೆ ವೃತ್ತದಿಂದ ಶಿವಾಜಿನಗ ಬಸ್ ನಿಲ್ದಾಣದ ವರೆಗೆ; ಕಬ್ಬನ್ ರಸ್ತೆ, ಸಿಟಿಒ ವೃತ್ತದಿಂದ ಕೆ.ಆರ್. ರಸ್ತೆ ಮತ್ತು ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ; ಎಂ.ಜಿ. ರಸ್ತೆ, ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ಆಗಸ್ಟ್ 15ರ ಗುರುವಾರ ಬೆಳಿಗ್ಗೆ 8ರಿಂದ 11 ಗಂಟೆ ವರೆಗೆ ವಾಹನ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಜಿಎಸ್‌ಟಿ ಹೊರತುಪಡಿಸಿ ಟೆಂಡರ್: ಸರ್ಕಾರ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಎಸ್‌ಟಿ ಹೊರತುಪಡಿಸಿ ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸರ್ಕಾರದಿಂದ ಅನುಮೋದಿಸಲಾದ ಏಕರೂಪ ಅನುಸೂಚಿ ದರಗಳ ಅನ್ವಯ, ಅಂದಾಜು ಪಟ್ಟಿಯಲ್ಲಿ ಜಿಎಸ್‌ಟಿ ಮೊತ್ತವನ್ನು ಹೊರತುಪಡಿಸಿ ಟೆಂಡರ್ ಆಹ್ವಾನಿಸಬೇಕು ಎಂದು ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಸುತ್ತೋಲೆ ಹೊರಡಿಸಿದ್ದಾರೆ.

ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತಕ್ಕೆ ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ತುಲನೆ ಮಾಡಿ ಎಲ್– 1 ಟೆಂಡರ್‌ದಾರರನ್ನು ನಿರ್ಧರಿಸಲು ತಂತ್ರಾಂಶದಲ್ಲಿ ಕ್ರಮ ವಹಿಸಬೇಕು. ಟೆಂಡರ್‌ಗಿಟ್ಟ ಮೊತ್ತಕ್ಕೆ ಮಾತ್ರ ಇಎಂಡಿ, ಖಾತರಿ/ಭದ್ರತೆಗಳನ್ನು ಪಡೆಯಬೇಕು. ಟೆಂಡರ್‌ಗಿಟ್ಟ ಮೊತ್ತ ಹಾಗೂ ಜಿಎಸ್‌ಟಿ ಮೊತ್ತ ಸೇರಿದಂತೆ ಒಟ್ಟಾರೆ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳಬೇಕು ಎಂದು ರಾಜ್ಯದ ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳಿಗೆ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಇದಲ್ಲದೆ, ಜಿಎಸ್‌ಟಿ ವ್ಯತ್ಯಾಸ ಮೊತ್ತವನ್ನು ಸರ್ಕಾರದ ವತಿಯಿಂದ ಪಾವತಿಸಲು ಸುತ್ತೋಲೆ ಹೊರಡಿಸಲಾಗಿದೆ. ಮುಂದಿನ ಕಾಮಗಾರಿಗಳಿಗೆ, ಪರಿಷ್ಕರಣೆಯಾದಂತೆ ಜಿಎಸ್‌ಟಿ ಪಾವತಿಸಲು ಸರ್ಕಾರ ಮತ್ತು ಗುತ್ತಿಗೆದಾರರು ಬದ್ಧರಾಗಿರುತ್ತಾರೆ ಎಂಬ ಅಂಶವನ್ನು ಸೇರಿಸಿ ಪೂರಕ ಒಪ್ಪಂದ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಶೇ 12ರಷ್ಟು ಜಿಎಸ್‌ಟಿಗೆ ಕಾರ್ಯಾದೇಶ ನೀಡಲಾಯಿತು. 2017ರಿಂದ ಜಿಎಸ್‌ಟಿ ಶೇ 18ಕ್ಕೆ ಹೆಚ್ಚಾಯಿತು. ಶೇ 6ರಷ್ಟು ಹೆಚ್ಚುವರಿ ಜಿಎಸ್‌ಟಿಯನ್ನು ಗುತ್ತಿಗೆದಾರರು ಪಾವತಿಸಬೇಕಾಗಿತ್ತು. ಅದಕ್ಕೆ, ಈಗ ವಿನಾಯಿತಿ ನೀಡಲಾಗಿದೆ.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ನೇತೃತ್ವದ ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳಿಂದ ಮನವಿ ಸ್ವೀಕರಿಸಿದ ನಂತರ, ಜಿಎಸ್‌ಟಿ ಮೊತ್ತ ಸೇರಿಸಿ ಟೆಂಡರ್ ಕರೆಯುವುದನ್ನು ರದ್ದುಪಡಿಸಲು ಆರ್ಥಿಕ ಇಲಾಖೆಗೆ ನಿರ್ದೇಶಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜೂನ್ 3ರಂದು ಭರವಸೆ ನೀಡಿದ್ದರು.

'2017–18ರ ಹೆಚ್ಚುವರಿ ಜಿಎಸ್‌ಟಿಯನ್ನು ಸರ್ಕಾರದ ವತಿಯಿಂದ ಪಾವತಿಸಬೇಕೆಂಬ ನಮ್ಮ ಮನವಿಗೂ ಸ್ಪಂದನ ದೊರೆತಿದೆ. ನಮ್ಮ ಹಲವು ವರ್ಷಗಳ ಬೇಡಿಕೆಗೆ ಈಡೇರಿದೆ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

ಅಂಗಾಂಗ ದಾನ: ಕಿರುನಾಟಕ ಪ್ರದರ್ಶನ

ಬೆಂಗಳೂರು: ವಿಶ್ವ ಅಂಗಾಂಗ ದಾನ ದಿನದ ಅಂಗವಾಗಿ ರಾಜಾಜಿನಗರದ ಇಎಸ್‌ಐಸಿ ಆಸ್ಪತ್ರೆ ಆವರಣದಲ್ಲಿ ಅಂಗಾಂಗ ದಾನದ ಮಹತ್ವ ಮತ್ತು ಪ್ರಯೋಜನಗಳ ಬಗ್ಗೆ ಕಿರು ನಾಟಕದ ಮೂಲಕ ಜಾಗೃತಿ ಮೂಡಿಸಲಾಯಿತು. ಇಎಸ್‌ಐಸಿ ಡೀನ್ ಡಾ. ಆರ್. ಸಂಧ್ಯಾ, ವೈದ್ಯಕೀಯ ಅಧೀಕ್ಷಕ ಡಾ.ಅಶೋಕ್ ಕುಮಾರ್ ಸಮಂತಾ, ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ. ಎಂ.ಎಸ್.ಗಿರೀಶ್, ಅಂಗರಚನೆ ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ.ಸೀಮಾ, ಪ್ರಾಧ್ಯಾಪಕ ಡಾ.ಮಲ್ಲಿಕಾರ್ಜುನ್ ಉಪಸ್ಥಿತರಿದ್ದರು.

ನಿಯಮ ಉಲ್ಲಂಘಿಸಿದರೆ ಕ್ರಮ ಕೈಗೊಳ್ಳಿ: ಜಂಟಿ ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಲನಾ ಪರವಾನಗಿ ಇಲ್ಲದವರು ಮತ್ತು ಇತರ ನಿಯಮಗಳನ್ನು ಉಲ್ಲಂಘಿಸಿ ವಾಹನ ಚಲಾಯಿಸುವವರ ಮೇಲೆ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿ ವ್ಯಾಪ್ತಿಯ ಎಲ್ಲ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ನಗರ ವಿಭಾಗದ ಜಂಟಿ ಸಾರಿಗೆ ಆಯುಕ್ತ ನಿರ್ದೇಶನ ನೀಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಚಾಲನಾ ಪರವಾನಗಿ ಇಲ್ಲದೆ, ಅತಿ ವೇಗವಾಗಿ ಮತ್ತು ನಿಯಮ ಉಲ್ಲಂಘಿಸಿ ಕಸದ ಲಾರಿಗಳನ್ನು ಚಲಾಯಿಸಿ ಚಾಲಕರು ಅಪಘಾತಕ್ಕೆ ಕಾರಣರಾಗುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಮನವಿ ಮಾಡಿದ್ದರು.

ಮುಖ್ಯಮಂತ್ರಿಗೆ ಸಲ್ಲಿಸಿದ್ದ ಈ ಮನವಿಯಲ್ಲಿರುವ ಅಂಶಗಳನ್ನು ಉಲ್ಲೇಖಿಸಿ ಬೆಂಗಳೂರಿನ ಕೇಂದ್ರ, ಪಶ್ಚಿಮ, ದಕ್ಷಿಣ, ಪೂರ್ವ, ಉತ್ತರ, ಎಲೆಕ್ಟ್ರಾನಿಕ್ ಸಿಟಿ, ಕೆ.ಆರ್.ಪುರ, ಯಲಹಂಕ, ಚಂದಾಪುರ, ಜ್ಞಾನಭಾರತಿ, ಶಾಂತಿನಗರ ಮತ್ತು ದೇವನಹಳ್ಳಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಜಂಟಿ ಸಾರಿಗೆ ಆಯುಕ್ತರು ಈ ಸೂಚನೆ ನೀಡಿದ್ದಾರೆ.

ತಮ್ಮ ಕಚೇರಿ ವ್ಯಾಪ್ತಿಯಲ್ಲಿ ಸಂಚರಿಸುವ, ಬಿಬಿಎಂಪಿಗೆ ಸೇರಿದ ಎಲ್ಲ ವಾಹನಗಳು ಮತ್ತು ವಾಹನ ಚಾಲಕರನ್ನು ಕಡ್ಡಾಯವಾಗಿ ತಪಾಸಣೆ ನಡೆಸಬೇಕು. ಪರವಾನಗಿ ಇಲ್ಲದೆ ವಾಹನ ಚಲಾಯಿಸುವವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದೂ ಹೇಳಿದ್ದಾರೆ.



ಸೋಂಕು ತಡೆ ಪ್ರಚಾರಾಂದೋಲನಕ್ಕೆ ದಿನೇಶ್ ಗುಂಡೂರಾವ್ ಚಾಲನೆ

2030ರೊಳಗೆ ಎಚ್‌ಐವಿ ಸೋಂಕು ನಿರ್ಮೂಲನೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2.28 ಲಕ್ಷ ಎಚ್.ಐ.ವಿ ಸೋಂಕಿತರಿಗೆ ಎಆರ್‌ಟಿ ಚಿಕಿತ್ಸೆ ನೀಡಲಾಗುತ್ತಿದೆ. ಆದರೆ, ಸುಮಾರು 1.91 ಲಕ್ಷ ಸೋಂಕಿತರು ಮಾತ್ರ ನಿಯಮಿತವಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಯುವ ದಿನಾಚರಣೆ ಮತ್ತು ಎಚ್‌ಐವಿ ತಡೆಗಟ್ಟಲು ಐ.ಇ.ಸಿ ಪ್ರಚಾರಾಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದರು.

2030ರೊಳಗೆ ಎಚ್‌ಐವಿ ಸೋಂಕು ನಿರ್ಮೂಲನೆ ಮಾಡುವ ಗುರಿ ಹೊಂದಲಾಗಿದೆ. ಜನ ಸಾಮಾನ್ಯರಲ್ಲಿ ಎಚ್‌ಐವಿ ಹರಡುವಿಕೆಯ ಬಗ್ಗೆ ಸುಮಾರು ಎರಡು ತಿಂಗಳು ರಾಜ್ಯದ ವಿವಿಧೆಡೆ ಭಿತ್ತಿಪತ್ರಗಳ ಹಂಚಿಕೆ, ಬೀದಿ ನಾಟಕಗಳ ಮೂಲಕ ಪ್ರಚಾರಾಂದೋಲನ ಹಮ್ಮಿಕೊಳ್ಳಲಾಗಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಅರಿವು ಮೂಡಿಸಲಾಗುತ್ತದೆ. ವೈದ್ಯರು, ಆಶಾ ಕಾರ್ಯಕರ್ತೆಯರು ಈ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ ಎಂದು ಹೇಳಿದರು.

'ತಪಾಸಣೆ ವೇಳೆ ಎಚ್‌ಐವಿ ಸೋಂಕು ಪತ್ತೆಯಾದ ತಕ್ಷಣ ಭಯಪಡದೆ ವೈದ್ಯರ ಬಳಿ ಚಿಕಿತ್ಸೆ ಪಡೆಯಬೇಕು. ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಲಸಿಕೆ ನೀಡಲಾಗುತ್ತದೆ. ಸೋಂಕಿತರು ಪೌಷ್ಟಿಕ ಆಹಾರ ಸೇವನೆ, ನಿಯಮಿತ ಔಷಧದಿಂದ ಆರಾಮದಾಯಕ ಜೀವನ ಸಾಗಿಸಬಹುದು' ಎಂದರು.

'ಯುವಜನರು ಹೆಚ್ಚು ಈ ಸೋಂಕಿಗೆ ತುತ್ತಾಗುತ್ತಿದ್ದಾರೆ' ಎಂದು ಆತಂಕ ವ್ಯಕ್ತಪಡಿಸಿದ ಸಚಿವರು, 'ಬಿಟ್ಟೂ ಬಿಡದೇ ಜ್ವರ ಬರುವುದು, ಚರ್ಮ ಸಂಬಂಧಿತ ರೋಗಗಳು, ಟಿ.ಬಿ. ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಬೇಕು' ಎಂದು ಅವರು ಸಲಹೆ ನೀಡಿದರು.

ಯುವಜನರು ಮಾದಕ ವಸ್ತು ಸೇವನೆ, ಧೂಮಪಾನದಂತಹ ದುಶ್ಚಟಕ್ಕೆ ದಾಸರಾಗುತ್ತಿದ್ದಾರೆ. ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುತ್ತಾರೆ, ವ್ಹೀಲಿ ಮಾಡುತ್ತಾರೆ. ಇದರಿಂದ ಅಪಘಾತಕ್ಕೀಡಾಗಿ ಮೃತಪಡುವವರೇ ಹೆಚ್ಚು. ಧೂಮಪಾನದಿಂದ ಕ್ಯಾನ್ಸರ್ ಹಾಗೂ ಹೃದಯ ಸಂಬಂಧಿ ಕಾಯಿಲೆ ಬರುತ್ತದೆ ಎಂದು ಗೊತ್ತಿದ್ದರೂ ದುಶ್ಚಟ ಬಿಡುವುದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.



ಐ.ಇ.ಸಿ ಪ್ರಚಾರಾಂದೋಲನಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು.ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆ ಜಂಟಿ ನಿರ್ದೇಶಕ ಡಾ.ಎಸ್‌ಅನಿಲ್, ಸಂಸ್ಥೆ ಯೋಜನಾ ನಿರ್ದೇಶಕ ಎನ್‌.ಎಂ.ನಾಗರಾಜ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿರ್ದೇಶಕ ಡಾ.ಶ್ರೀನಿವಾಸ್, ಕೆಎಸ್‌ಎಪಿಎಸ್ ಹೆಚ್ಚುವರಿ ಜಂಟಿ ನಿರ್ದೇಶಕಿ ಡಾ.ಉಮಾ ಬುಗ್ಗಿ ಪಾಲ್ಗೊಂಡಿದ್ದರು

ಶಾಂತರಾಜಣ್ಣ ಮತ್ತೆ ಬಿಡಿಎಗೆ

ಬೆಂಗಳೂರು: ಬಿಡಿಎ ಎಂಜಿನಿಯರಿಂಗ್ ಸದಸ್ಯ ಹುದ್ದೆಗೆ ಎಚ್.ಆರ್. ಶಾಂತರಾಜಣ್ಣ ಅವರನ್ನು ಸರ್ಕಾರ ವರ್ಗಾಯಿಸಿದೆ. ಇದೇ ಹುದ್ದೆಯಿಂದ ವರ್ಗಾವಣೆಯಾದರೂ ಅಧಿಕಾರ ಹಸ್ತಾಂತರಿಸದೇ ಶಾಂತರಾಜಣ್ಣ ಕಚೇರಿಯಿಂದ ಜುಲೈ 23ರಂದು ನಿರ್ಗಮಿಸಿದ್ದರು.

'ಬಿಡಿಎಗೆ ಮತ್ತೆ ವರ್ಗಾವಣೆಯಾಗಿ ಬರುವುದಾಗಿ' ಹೇಳಿದ್ದ ಶಾಂತರಾಜಣ್ಣ ಬಿಡಿಎಯ ಕಾರನ್ನೂ ಹಿಂದಿರುಗಿಸಿರಲಿಲ್ಲ. ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಆಗಿದ್ದ ಶಾಂತರಾಜಣ್ಣ ಸ್ಥಳ ನಿರೀಕ್ಷಣೆಯಲ್ಲಿದ್ದರು.

ಜುಲೈ 23ರಂದು ಬಿಡಿಎ ಎಂಜಿನಿಯರಿಂಗ್ ಸದಸ್ಯರಾಗಿದ್ದ ಅಧಿಕಾರ ವಹಿಸಿಕೊಂಡಿದ್ದ ನಂಜುಂಡಪ್ಪ ಅವರನ್ನು ಸರ್ಕಾರ ವರ್ಗಾಯಿಸಿದ್ದು, ಹುದ್ದೆ ತೋರಿಸಿಲ್ಲ.



ನೌಕರರ ಕೌಶಲ ಹೆಚ್ಚಿಸುವ 'ಎಕ್ಸಿಕ್ಯೂಟಿವ್ ಎಂಬಿಎ' ಕೋರ್ಸ್‌ಗಾಗಿ ಏಸ್ ಡಿಸೈನರ್, ಮೈಕ್ರೊಮ್ಯಾಟಿಕ್ ಮಷಿನ್ ಟೂಲ್ಸ್ ಹಾಗೂ ಯುಕೆನ್ ಇಂಡಿಯಾ ಕಂಪನಿಗಳ ಜೊತೆ ಪಿಇಎಸ್ ವಿಶ್ವವಿದ್ಯಾಲಯ ಒಪ್ಪಂದ ಮಾಡಿಕೊಂಡಿದೆ. ಕುಲಪತಿ ಜೆ. ಸೂರ್ಯಪ್ರಸಾದ್, ಏಸ್ ಡಿಸೈನರ್ ಹಾಗೂ ಮೈಕ್ರೊಮ್ಯಾಟಿಕ್ ಮಷಿನ್ ಟೂಲ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಕೆ. ರಮೇಶ್, ಯುಕೆನ್ ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ಎಚ್.ಎಂ. ನರಸಿಂಗರಾವ್ ಭಾಗವಹಿಸಿದ್ದರು.

'39 ಮಾಲಿನ್ಯ ನಗರಗಳಲ್ಲಿ ಬೆಂಗಳೂರು'

ಜನ ಕೈಜೋಡಿಸಿದರೆ ವಾಯುಮಾಲಿನ್ಯ ನಿಯಂತ್ರಣ ಸಾಧ್ಯ: ಉಮಾಶಂಕರ್


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವದಲ್ಲೇ ಅತಿ ಹೆಚ್ಚು ಮಾಲಿನ್ಯಗೊಂಡ 39 ನಗರಗಳಲ್ಲಿ ಬೆಂಗಳೂರು ಕೂಡ ಒಂದಾಗಿದೆ' ಎಂದು ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ಹೇಳಿದರು.

'ಕಡಿಮೆ ಇಂಗಾಲದ ಕಡೆಗೆ, ಒಳಗೊಳ್ಳುವಿಕೆ ಮತ್ತು ವಾಸಯೋಗ್ಯ ಬೆಂಗಳೂರು' ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಸರ್ಕಾರದ ಜೊತೆ ನಾಗರಿಕರು ಕೈಜೋಡಿಸಿದರೆ ಮಾತ್ರ ನಗರದಲ್ಲಿ ವಾಯುಮಾಲಿನ್ಯವನ್ನು ನಿಯಂತ್ರಿಸಬಹುದಾಗಿದೆ. ಅದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಉತ್ತಮ ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನಕ್ಕೆ ತರಬೇಕಿದೆ' ಎಂದರು.

ನಗರದಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸಬೇಕಾದರೆ ನಾಗರಿಕರು ಖಾಸಗಿ ವಾಹನಗಳನ್ನು ಬಿಟ್ಟು, ಸಾರ್ವಜನಿಕ ವಾಹನಗಳನ್ನು ಹೆಚ್ಚಾಗಿ ಬಳಸಬೇಕು. ಇದರಿಂದ ವಾಯುಮಾಲಿನ್ಯ ಕ್ರಮೇಣ



ಕಡಿಮೆಯಾಗಲಿದೆ ಎಂದು ತಿಳಿಸಿದರು.

ನಾಗರಿಕರು ಜವಾಬ್ದಾರಿಯಿಂದ ವರ್ತಿಸಿದರೆ ಮಾತ್ರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ. ಪ್ರತಿಯೊಬ್ಬರ ಸಹಕಾರದಿಂದ ಉತ್ತಮ ನಗರವನ್ನು ರೂಪಿಸಬಹುದಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದ ಎಲ್ಲಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದಲ್ಲಿ ಹವಾಮಾನದಲ್ಲಿ ತ್ವರಿತವಾಗಿ ಬದಲಾವಣೆಗಳನ್ನು ಕಾಣಬಹುದೆಂದು ಹೇಳಿದರು.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, 'ನಗರದಲ್ಲಿ ಹೆಚ್ಚಾಗಿ ಗಿಡಗಳನ್ನು ನೆಡುವುದು, ರಾಜಕಾಲುವೆ ವ್ಯವಸ್ಥೆ ಸರಿಪಡಿಸುವುದು, ಸಂಚಾರ ದಟ್ಟಣೆ ನಿಯಂತ್ರಿಸುವುದು, ಘನತ್ಯಾಜ್ಯ ವ್ಯವಸ್ಥೆ ಸರಿಪಡಿಸುವುದು ಸೇರಿ ಇನ್ನಿತರೆ ವಿಷಯಗಳಲ್ಲಿ ನಾಗರಿಕರ ಪಾತ್ರ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಸಂಚಾರ ದಟ್ಟಣೆ ತಗ್ಗಿಸಲು ಸಾರ್ವಜನಿಕ ವಾಹನ ಬಳಕೆಗೆ ಒತ್ತು ನೀಡಬೇಕು
- ಉತ್ತಮ,ವಾಸಯೋಗ ನಗರ ನಿರ್ಮಿಸಲು ಎಲ್ಲರ ಸಹಕಾರ ಅಗತ್ಯ
- ರಾಜಕಾಲುವೆ ವ್ಯವಸ್ಥೆ ಸರಿಪಡಿಸುವುದು, ಘನತ್ಯಾಜ್ಯ ನಿರ್ವಹಣೆಯಲ್ಲಿ ಜನರ ಪಾತ್ರ ಮುಖ್ಯ

ಗೌರಿ ಕೊಲೆ ಆರೋಪಿ ಭೇಟಿ ಟೀಕೆಗೊಳಗಾದ ಪ್ರತಾಪ ಸಿಂಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಕೊಲೆ ಆರೋಪಿ ಮದ್ದೂರು ನವೀನ್ ಅವರನ್ನು ಮಾಜಿ ಸಂಸದ ಪ್ರತಾಪ ಸಿಂಹ ಅವರು ಭೇಟಿ ಮಾಡಿರುವುದು ವಿವಾದಕ್ಕೆ ಕಾರಣವಾಗಿದೆ.

ಪ್ರತಾಪ ಸಿಂಹ ಅವರು ಸೋಮವಾರ ತಮ್ಮ 'ಎಕ್ಸ್' ಖಾತೆಯಲ್ಲಿ ನವೀನ್ ಭೇಟಿ ವಿಚಾರವನ್ನು ಫೋಟೊ ಸಹಿತ ಹಂಚಿಕೊಂಡಿದ್ದರು. ಈ ವಿಚಾರ ಸಾಮಾಜಿಕ ಜಾಲತಾಣದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಕಾಂಗ್ರೆಸ್ ನಾಯಕರೂ ಪ್ರತಾಪ ಸಿಂಹ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದಾರೆ.

'ಗೌರಿ ಲಂಕೇಶ್ ಕೊಲೆ ಪ್ರಕರಣದಲ್ಲಿ ಮೊದಲಿಗೆ ಆರೋಪಿ ನಂ–1 ಆಗಿ, ನಂತರ ಎ–17 ಆಗಿ, ಆರೂವರೆ ವರ್ಷ ಜೈಲಿನಲ್ಲಿದ್ದು, ಇತ್ತೀಚೆಗೆ ಜಾಮೀನಿನ ಮೇಲೆ ಹೊರಬಂದಿರುವ ಸ್ನೇಹಿತ ಮದ್ದೂರು ನವೀನ್ ಅವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದೆ' ಎಂದು 'ಎಕ್ಸ್'ನಲ್ಲಿ ಹೇಳಿಕೊಂಡಿದ್ದರು.

ಇದನ್ನು ಕಟುವಾಗಿ ಟೀಕಿಸಿರುವ ಸಚಿವ ದಿನೇಶ್ ಗುಂಡೂರಾವ್, 'ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಯ ಆರೋಪಿ ಮದ್ದೂರಿನ ನವೀನ್ ತನ್ನ ಗೆಳೆಯ ಎಂದು ಮಾಜಿ ಸಂಸದ ಪ್ರತಾಪ ಸಿಂಹ ಹೇಳಿದ್ದಾರೆ. ಇದು ಗೋಡ್ಸೆ ಆರಾಧಕರ (ಬಿಜೆಪಿಯವರ) ಅಸಲಿಮುಖ. ಸಮಾಜದ ಶಾಂತಿ ಕದಡುವವರು, ಕೊಲೆ, ಸುಲಿಗೆಯಂತಹ ಕೃತ್ಯ ನಡೆಸುವವರೆಲ್ಲಾ ಬಿಜೆಪಿ ಗರ್ಭಗುಡಿಯಲ್ಲಿ ಇರುತ್ತಾರೆ ಎನ್ನುವುದಕ್ಕೆ ಇದೊಂದು ನಿದರ್ಶನ' ಎಂದಿದ್ದಾರೆ.

'ಆರೋಪಿ ಕೃತ್ಯವನ್ನು ಖಂಡಿಸುವ ಬದಲು, ಆತನ ಹೆಗಲ ಮೇಲೆ ಕೈಹಾಕಿ ಫೋಟೊ ತೆಗೆಸಿಕೊಂಡರೆ ಸಮಾಜಕ್ಕೆ ಯಾವ ಸಂದೇಶ ಹೋಗುತ್ತದೆ' ಎಂದು ದಿನೇಶ್ ಗುಂಡೂರಾವ್ ಪ್ರಶ್ನಿಸಿದ್ದಾರೆ.

ರೇಣುಕಸ್ವಾಮಿ ಕೊಲೆ ಪ್ರಕರಣ ಆರೋಪ ಪಟ್ಟಿ ಸಲ್ಲಿಕೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ಅಂತಿಮ ಹಂತ ತಲುಪಿದ್ದು, ಶೀಘ್ರದಲ್ಲೇ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸುವ ಸಾಧ್ಯತೆಯಿದೆ.

ತಾಂತ್ರಿಕ ಸಾಕ್ಷ್ಯಾಧಾರ ಕಲೆ ಹಾಕಿರುವ ಪೊಲೀಸರು, ಆರೋಪ ಪಟ್ಟಿ ಸಲ್ಲಿಕೆಗೆ ಸಿದ್ಧತೆಯಲ್ಲಿ ತೊಡಗಿದ್ದಾರೆ. ಈ ಪ್ರಕರಣದಲ್ಲಿ ಹಲವರನ್ನು ಸಾಕ್ಷೀದಾರರನ್ನಾಗಿ ಮಾಡಲಾಗಿದ್ದು, ನ್ಯಾಯಾಧೀಶರ ಎದುರು ಅವರ ಹೇಳಿಕೆ ದಾಖಲಿಸಿದ್ದಾರೆ.

ಆರೋಪಿಗಳಿಂದ ಜಪ್ತಿ ಮಾಡಿದ್ದ ಮೊಬೈಲ್, ಕೃತ್ಯ ನಡೆದ ಸ್ಥಳದಲ್ಲಿ ಜಪ್ತಿ ಮಾಡಲಾದ ಸಿ.ಸಿ ಟಿ.ವಿ. ಕ್ಯಾಮೆರಾದ ಡಿವಿಆರ್ ಹಾಗೂ ಬಟ್ಟೆಗಳನ್ನು ಬೆಂಗಳೂರು ಹಾಗೂ ಹೈದರಾಬಾದ್‌ನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿತ್ತು. ಎಫ್‌ಎಸ್‌ಎಲ್‌ನಿಂದ ಶೇ 70ರಷ್ಟು ವರದಿಗಳು ತನಿಖಾಧಿಕಾರಿಗಳ ಕೈಸೇರಿವೆ. ಇನ್ನು ಶೇ 30ರಷ್ಟು ವರದಿಗಳು ಬರಬೇಕಿವೆ ಎಂದು ಮೂಲಗಳು ತಿಳಿಸಿವೆ.

ನಟನ ಹೇಳಿಕೆ ದಾಖಲು: ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿ ನಡೆಸಿದ್ದ ಪಾರ್ಟಿಯಲ್ಲಿ ನಟ ದರ್ಶನ್ ಜೊತೆಗೆ ನಟ ಯಶಸ್ ಸೂರ್ಯ ಕೂಡ ಭಾಗಿಯಾಗಿದ್ದರು. ಹೀಗಾಗಿ, ಯಶಸ್ ಸೂರ್ಯ ಅವರಿಂದ ನ್ಯಾಯಾಧೀಶರ ಎದುರು ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಐಪಿಡಿ ಸಾಲಪ್ಪ ವರದಿಯ ಕುರಿತು ವಿಚಾರಸಂಕಿರಣ–2024: **ಆಯೋಜನೆ:** ಪೌರಕಾರ್ಮಿಕರು, ನೇರವೇತನ ಪೌರಕಾರ್ಮಿಕರು ಮತ್ತು ಚಾಲಕರ ಶುಚಿಗಾರರ ಸಂಘಟನೆಗಳ ಒಕ್ಕೂಟ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ಕನ್ನಡ ರಣಧೀರರಿಗೆ ನಮನ' ಕಾರ್ಯಕ್ರಮ: ಭಾಗವಹಿಸುವವರು: ಆಶಾದೇವಿ, ಹಂ.ಪ. ನಾಗರಾಜಯ್ಯ, ಚಂದ್ರಮೋಹನ್ ಪ್ರಸಾದ್, ವ.ಚ. ಚನ್ನೇಗೌಡ, ರೀಟಾರೀನಿ, ಐಸಾಕ್ ಆರೋಗ್ಯಸ್ವಾಮಿ, ಪ್ರಾಸ್ತಾವಿಕ ನುಡಿ: ರಫಾಯಲ್‌ರಾಜ್, ಅಧ್ಯಕ್ಷತೆ; ಸೈಮನ್ ಬರ್ತಲೋಮ್, ಆಯೋಜನೆ: ಅಖಿಲ ಕರ್ನಾಟಕ ಕಥೋಲಿಕ ಕ್ರೈಸ್ತರ ಕನ್ನಡ ಸಂಘ, ಸ್ಥಳ: ಮಹಿಳಾ ವಿಶ್ರಾಂತ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.30


'ಟ್ರಾನ್ಸ್‌ಫಾರ್ಮೇಶನ್ ಫಾರ್ ದಿ ನೇಷನ್' ವಿಚಾರಸಂಕಿರಣ: ಅತಿಥಿ: ರಾಮಲಿಂಗಾರೆಡ್ಡಿ, ಟಿ. ತಿಮ್ಮೇಗೌಡ, ಎಂ.ಎನ್. ಕೃಷ್ಣಮೂರ್ತಿ, ಜೆ.ಆರ್. ಬಂಗೇರ, ಸತೀಶ್ ಮಾಧವನ್, ಉಪನ್ಯಾಸಕರು: ವೂಡೇ ಪಿ. ಕೃಷ್ಣ, ಗುರುರಾಜ ಕರಜಗಿ, ಆಯೋಜನೆ: ವಿಶ್ವ ಮಾನವ ಯುವ ವೇದಿಕೆ, ಸ್ಥಳ: ಸರ್. ಪುಟ್ಟಣ್ಣ ಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

'ಕನ್ನಡ ಲಿಪಿಯ ವಿಕಾಸ ಮತ್ತು ಕನ್ನಡದ ಹಿರಿಮೆ' ಕುರಿತು ಉಪನ್ಯಾಸ: ಡಿ. ಸ್ಮಿತಾ ರೆಡ್ಡಿ, ಅತಿಥಿ: ಎ.ಎಸ್. ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ಬಿ. ವಿಜಯಕುಮಾರ್ ಸಭಾಂಗಣ, ವಿಮಾನಪುರ, ಮಧ್ಯಾಹ್ನ 3.30


'ದೇಶ ವಿಭಜನೆ ಕರಾಳ ದಿನ' ಕಾರ್ಯಕ್ರಮ: ಉಪನ್ಯಾಸಕರು: ಎಸ್.ಎನ್. ಸೇತುರಾಂ, ಆರ್. ಕೆ. ಮಟ್ಟೂ, ಎಂ.ಎಸ್. ಚೈತ್ರಾ, ರೋಹಿತ್ ಚಕ್ರತೀರ್ಥ, ಆಯೋಜನೆ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಸ್ಥಳ: ಉದಯಭಾನು ಕಲಾ ಸಂಘ, ರಾಮಕೃಷ್ಣ ಮಠ, ಕೆಂಪೇಗೌಡ ನಗರ, ಸಂಜೆ 5








ತಂತ್ರಜ್ಞಾನ





ಟೇಬಲ್ ಟೆನಿಸ್ ಆಡುವ ರೋಬೋಟ್

ಕೊಳ್ಳೇಗಾಲ ಶರ್ಮ

ರೋಬೋಟ್ ಮಾನವನನ್ನು ಸರಿಗಟ್ಟುವಂತೆ ಆಟಗಳನ್ನು ಆಡಬಲ್ಲುದೇ? ಪ್ಯಾರಿಸ್ಸಿನಲ್ಲಿ ಒಲಿಂಪಿಕ್ ಸ್ಪರ್ಧೆಗಳು ಈಗಷ್ಟೆ ಮುಕ್ತಾಯವಾಗಿದೆ. 'ಗೂಗಲ್' ಸಂಸ್ಥೆ ಮನುಷ್ಯನ ಜೊತೆಗೆ ಸರಿಸಾಟಿಯಾಗಿ ಟೇಬಲ್ ಟೆನಿಸ್ ಆಟವಾಡಬಲ್ಲ ರೋಬೋಟ್ ಅನ್ನು ಸಿದ್ಧಪಡಿಸಿದೆ – ಎನ್ನುವ ಸುದ್ದಿಯನ್ನು 'ಆರ್ಕೈವ್' ಪತ್ರಿಕೆ ವರದಿ ಮಾಡಿದೆ. ಟೇಬಲ್ ಟೆನ್ನಿಸನ್ನು ತರಬೇತಿ ನೀಡುವವರ ಜೊತೆಗೆ ನಡೆದ ಪಂದ್ಯಗಳಲ್ಲಿ ಅರ್ಧಕ್ಕರ್ಧದಷ್ಟನ್ನು ಈ ರೋಬೋಟ್‌ಗಳು ಗೆದ್ದುವು ಎನ್ನುತ್ತದೆ, ಆರ್ಕೈವ್ ವರದಿ. ಟೇಬಲ್ ಟೆನಿಸ್ ಆಡುವ ಯಂತ್ರವನ್ನು ಗೂಗಲ್‌ನ ಡೇವಿಡ್ ಆಂಬ್ರೋಸಿಯೋ ಹಾಗೂ ಪನ್ನಗ ಸಂಕೇತಿ ತಮ್ಮ ಸಂಗಡಿಗರ ಜೊತೆಗೆ ರೂಪಿಸಿದ್ದಾರೆ.


ಸ್ಪರ್ಧೆಗಳು, ತರಬೇತಿಯಲ್ಲಿ ಯಂತ್ರಗಳನ್ನು ಬಳಸುವುದು ಹೊಸತೇನಲ್ಲ. ಕ್ರಿಕೆಟ್ಟಿನಲ್ಲಿ ಆಟವಾಡುವಾಗ ಚೆಂಡು ಹಾರಿದತ್ತಲೇ ಕಣ್ಣು ಹಾಯಿಸುವ ಕ್ಯಾಮೆರಾ ಇಲ್ಲವೇ? ಬ್ಯಾಟ್ಸ್‌ಮನ್‌ಗಳಿಗೆ ಚೆಂಡನ್ನು ಎಸೆಯುವ ಯಂತ್ರಗಳೂ ಇವೆ. ಇನ್ನು ಚದುರಂಗದಲ್ಲಿಯಂತೂ ಮನುಷ್ಯನ ಜೊತೆಗೆ ಸ್ಪರ್ಧಿಸಿದ 'ಡೀಪ್ ಮೈಂಡ್', 'ಡೀಪ್ ಬ್ಲೂ' ಎನ್ನುವ ಗಣಕಯಂತ್ರ, ತಂತ್ರಾಂಶಗಳ ಬಗ್ಗೆಯೂ ಕೇಳಿದ್ದೀರಿ. ಹಾಗಿದ್ದ ಮೇಲೆ ಇದೇನು ವಿಶೇಷ ಎಂದಿರಾ?

ಇದೆ. ಕೆಲವು ವರ್ಷಗಳ ಹಿಂದೆ 'ಡೀಪ್ ಬ್ಲೂ' ಎನ್ನುವ ಮೆಶೀನ್ ಲರ್ನಿಂಗ್ ತಂತ್ರಜ್ಞಾನವು ಚದುರಂಗದಾಟದಲ್ಲಿ ಗ್ರ್ಯಾಂಡ್ ಚಾಂಪಿಯನನ್ನು ಸೋಲಿಸಿ ಸುದ್ದಿ ಮಾಡಿತ್ತು. ಇದು ಚದುರಂಗದ ನಡೆಗಳನ್ನು ಊಹಿಸಿ, ಆಲೋಚಿಸಿ ಮುನ್ನಡಿ ಇಡುತ್ತಿತ್ತು. ಚೆಸ್‌ನಲ್ಲಿ ಎದುರಾಳಿಯ ನಡೆಯನ್ನು ವಿಶ್ಲೇಷಿಸಿ, ಅದಕ್ಕೆ ತಕ್ಕಂತ ಯಾವ ನಡೆಯನ್ನು ನಡೆಸಬೇಕು ಎನ್ನುವುದು ಲೆಕ್ಕಾಚಾರದ ವಿಚಾರ. ಕ್ಷಣದಲ್ಲಿ ಲಕ್ಷಾನುಗಟ್ಟಲೆ ಲೆಕ್ಕಗಳನ್ನು ಮಾಡಬಲ್ಲ ಗಣಕಯಂತ್ರಗಳಿಗೆ ಇದು ಸುಲಭ. ಹಾಗೆಯೇ ಕ್ರಿಕೆಟ್ಟಿನಲ್ಲಿ ಚೆಂಡನ್ನು ಇಂತಿಷ್ಟು ವೇಗದಿಂದ, ಇಂತಹ ದಿಕ್ಕಿನಲ್ಲಿ ಎಸೆಯುವಂತೆ ಯಂತ್ರಕ್ಕೆ ನಿರ್ದೇಶಿಸುವುದು ಕಷ್ಟವೇನಲ್ಲ. ಆದರೆ ಅದೇ ಯಂತ್ರ, ತಾನು ಎಸೆದ ಚೆಂಡು ಮರಳಿ ಬರುವಾಗ ಅದನ್ನು ಹಿಡಿಯಬಲ್ಲುದೇ? ಇದು ಪ್ರಶ್ನೆ. ಏಕೆಂದರೆ ಯಂತ್ರ ಎಷ್ಟೇ ವೇಗದಿಂದ ಚೆಂಡನ್ನು ಎಸೆದರೂ, ಅದರ ದಿಕ್ಕು, ವೇಗವನ್ನು ಗುರುತಿಸಿ, ಅದು ಯಾವ ಕ್ಷಣದಲ್ಲಿ ಎಲ್ಲಿರುತ್ತದೆ ಎಂದು ಮನುಷ್ಯನ ಮಿದುಳು ಲೆಕ್ಕ ಹಾಕಬಲ್ಲುದು. ಅದು ಬ್ಯಾಟಿನ ಬಳಿಗೆ ಬರುವ ಕ್ಷಣವನ್ನು ಊಹಿಸಿ, ಬಾರಿಸಿ, ಸಿಕ್ಸರ್ ಕೂಡ ಹೊಡೆಯಬಹುದು. ಈ ಕ್ಷಣಾರ್ಧದ ಕೆಲಸವನ್ನು ಯಂತ್ರಗಳು ನಿರ್ವಹಿಸುವುದು ಸ್ವಲ್ಪ ಕಷ್ಟವೇ.

ಗೂಗಲ್ ಸಂಸ್ಥೆಯ ಡೀಪ್ ಮೈಂಡ್ ತಂತ್ರಾಂಶವನ್ನು ಬಳಸಿ ಆಂಬ್ರೋಸಿಯೋ ಮತ್ತು ಸಂಕೇತಿ ತಂಡ ಈ ಸಾಧನೆಯನ್ನು ಮಾಡಿದೆ. ಮೆಶೀನ್ ಲರ್ನಿಂಗ್ ಎಂದರೆ ಕೃತಕ ಬುದ್ಧಿಮತ್ತೆಯ ಮೂಲ ಸ್ವರೂಪ ಎನ್ನಿ. ರೋಬೋಟ್‌ಗಳು ಕಾರ್ಯನಿರ್ವಹಿಸುವಾಗ ಎದುರಾಗುವ ಅಡೆತಡೆಗಳನ್ನು ಗುರುತಿಸಿ, ಅವನ್ನು ನಿವಾರಿಸಿಕೊಳ್ಳುವ ವಿಧಾನವನ್ನು ಒಮ್ಮೆ ತೋರಿಸಿದರೆ, ನೆನಪಿಟ್ಟುಕೊಂಡು ಮುಂದೆ ಆ ಅಡೆತಡೆಗಳನ್ನು ಸರಾಗವಾಗಿ ದಾಟುವ ತಂತ್ರಜ್ಞಾನ ಎನ್ನಬಹುದು. ಯಂತ್ರಗಳೇ ಕಲಿಯುವಂತೆ ಮಾಡುವ ತಂತ್ರಜ್ಞಾನ. ಇದರಲ್ಲಿ ಅತಿ ಉನ್ನತ ಸ್ತರದ ತಂತ್ರಜ್ಞಾನವನ್ನು 'ಡೀಪ್ ಮೈಂಡ್' ಎನ್ನುತ್ತಾರೆ. ಆ ಕ್ಷಣದಲ್ಲಿ ತನಗೆ ದೊರೆತ ಮಾಹಿತಿ, ಸಂವೇದನೆಯನ್ನು ಬಳಸಿಕೊಂಡು ಮುಂದಿನ ಕ್ಷಣದ ನಡೆಯನ್ನು ಇಡುವ ಚಾಲಾಕಿತನ ಇದರಲ್ಲಿ ಇದೆ. ಸಾಮಾನ್ಯವಾಗಿ ಕಾರು, ರೋಬೋಟ್‌ಗಳನ್ನು ಚಾಲಿಸಲು ಇದು ಸಾಕು. ಆದರೆ ಮನುಷ್ಯನನ್ನು ಎದುರು ಹಾಕಿಕೊಳ್ಳಬಲ್ಲುದೇ? ಅವನೊಟ್ಟಿಗೆ, ಅವನ ಸಂವೇದನೆ, ಸ್ಪಂದನೆಗಳೊಂದಿಗೆ ಸ್ಪರ್ಧಿಸಬಲ್ಲುದೇ?. ಹೀಗೆ ಆ ಕ್ಷಣದಲ್ಲಿ ಸ್ಪಂದಿಸಿ, ತಿದ್ದಿಕೊಳ್ಳುವ ಸಾಮರ್ಥ್ಯವನ್ನು 'ರಿಯಲ್ ಟೈಂ' ಸಾಮರ್ಥ್ಯ ಎನ್ನುತ್ತೇವೆ. ಡೀಪ್ ಮೈಂಡ್‌ಗೆ ಈ ಸಾಮರ್ಥ್ಯ ಇದೆಯೇ ಎನ್ನುವ ಪರೀಕ್ಷೆ ನಡೆಯಬೇಕಿತ್ತು. ಅದಕ್ಕೆ ಆಂಬ್ರೋಸಿಯೋ-ಸಂಕೇತಿ ತಂಡ ಆಯ್ದುಕೊಂಡದ್ದು ಟೇಬಲ್ ಟೆನಿಸ್. ಇದರಲ್ಲಿ ಅತಿ ವೇಗವಾಗಿ ಬರುವ ಚೆಂಡನ್ನು ಅತಿ ಪುಟ್ಟ ಜಾಗದೊಳಗೆ ಬೀಳುವಂತೆ ಕ್ಷಣಾರ್ಧದಲ್ಲಿ ಆಡುತ್ತೇವಷ್ಟೆ. ನುರಿತ ತರಬೇತುದಾರರೊಟ್ಟಿಗೆ ಡೀಪ್ ಮೈಂಡ್ ಚಾಲಿಸುವ ರೋಬೋಟ್ ಕೈಯೊಂದನ್ನು ಟೇಬಲ್ ಟೆನಿಸ್ ಆಡುವಂತೆ ಆಂಬ್ರೊಸಿಯೋ-ಸಂಕೇತಿ ತಂಡ ರೂಪಿಸಿತು.

ರೋಬೋಟ್ ಕೈ ಟೇಬಲ್ಲಿನ ಒಂದು ಬದಿಯಲ್ಲಿ ಹಿಂದಕ್ಕೂ ಮುಂದಕ್ಕೂ ಚಲಿಸಲು ಗಾಲಿಯ ವ್ಯವಸ್ಥೆ ಮಾಡಿದ್ದರು. ಅದರ ಕೈಯಲ್ಲಿ ಕ್ಯಾಮೆರಾ ಹುದುಗಿಸಿದರು. ಈ ಕ್ಯಾಮೆರಾ ಟಿ.ವಿ ರಿಮೋಟುಗಳಲ್ಲಿ ಅಥವಾ ಸ್ಮಾರ್ಟ್ ಫೋನಿನ ಕ್ಯಾಮೆರಾ ಬಳಸುವ 'ಇನ್‌ಫ್ರಾರೆಡ್' ಬೆಳಕನ್ನು ಚೆಂಡಿನ ಮೇಲೆ ಇಟ್ಟು, ಅದರ ಚಲನೆಯನ್ನು ಹಿಂಬಾಲಿಸುವಂತೆ ಮಾಡಿದರು. ಇದು ಒಂದೇ ಕೈ ಆದ್ದರಿಂದ ಚೆಂಡನ್ನು ಸರ್ವ್ ಮಾಡಲು ಆಗುವುದಿಲ್ಲವಷ್ಟೆ. ಟೇಬಲ್ ಟೆನಿಸಿನ ಆಟದ ನಿಯಮವನ್ನು ತುಸು ಬದಲಿಸಿ, ಕೇವಲ ಎದುರಾಳಿಯನ್ನು ಸೋಲಿಸಲು ಈ ರೋಬೋಟ್ ಪ್ರಯತ್ನಿಸುವಂತೆ ಯೋಜಿಸಿದರು. ಎದುರಾಳಿಯ ಕೈಯಲ್ಲಿ ಇರುವ ಬ್ಯಾಟಿನಲ್ಲಿ 'ಎಲ್‌ಇಡಿ' ದೀಪಗಳಿದ್ದುದರಿಂದ ಅದರ ಚಲನೆಯನ್ನೂ ರೋಬೋಟ್‌ಸುಲಭವಾಗಿ ಗಮನಿಸಬಹುದಾಗಿತ್ತು.

ಆರಂಭದಲ್ಲಿ ರೋಬೋಗೆ ಸ್ವಲ್ಪ ತರಬೇತಿ ನೀಡಿದರು. ಇದಕ್ಕಾಗಿ ಟೇಬಲ್ ಟೆನಿಸ್ ಆಟವಾಡುವಾಗ ಚೆಂಡು ಹಾರುವ ದಿಕ್ಕು, ಅದರ ವೇಗ, ಅದು ಟೇಬಲ್ಲನ್ನು ಯಾವ ದಿಕ್ಕಿನಿಂದ ತಾಕಿದರೆ ಹೇಗೆ ಹಾರುತ್ತದೆ, ಗಿರ್ರನೆ ತಿರುಗುತ್ತಾ ಬರುವಾಗ ಅದರ ಚಲನೆ ಹೇಗಿರುತ್ತದೆ ಇವುಗಳ ಲೆಕ್ಕಾಚಾರಗಳನ್ನು ಡೀಪ್ ಮೈಂಡ್ ತಂತ್ರಾಂಶಕ್ಕೆ ಕಲಿಸಿದರು. ಹೀಗೆ ಅದು ಮುಂದೆ ಚೆಂಡು ಯಾವ ದಿಕ್ಕಿನಿಂದ ಎಷ್ಟು ವೇಗದಿಂದ ಹಾರಿ ಬರುತ್ತಿದೆ ಎಂಬುದನ್ನು ಗಮನಿಸಿದರೆ, ಅದರ ಮುಂದಿನ ಹಾದಿ ಎಲ್ಲಿ ಇರುತ್ತದೆ ಎಂದು ಲೆಕ್ಕ ಹಾಕಬಹುದಿತ್ತು. ಈ ತಂತ್ರಾಂಶವನ್ನು ಬಳಸಿಕೊಂಡು ಎದುರಾಳಿಯ ಚೆಂಡನ್ನು ಹೊಡೆದ ಕ್ಷಣ ಅದನ್ನು ಗುರುತಿಸಿ ಲೆಕ್ಕಾಚಾರ ಹಾಕುವಂತೆ ರೋಬೋ ಕಲಿತಿತ್ತು. ತದನಂತರ ಇಪ್ಪತ್ತೊಂಬತ್ತು ನುರಿತ ಆಟಗಾರರ ಜೊತೆಗೆ ಇದನ್ನು ಆಡಲು ಬಿಡಲಾಯಿತು. ಈ ಎಲ್ಲ ಆಟಗಳಲ್ಲಿಯೂ ಎಷ್ಟು ಬಾರಿ ಅದು ಚೆಂಡನ್ನು ಹೊಡೆಯಲು ತಪ್ಪುತ್ತದೆ, ಎಷ್ಟು ಬಾರಿ ಎದುರಾಳಿಗೆ ಹೊಡೆಯಲು ಕಷ್ಟವಾಗುವಂತೆ ಮಾಡುತ್ತದೆ ಎಂದೂ ಲೆಕ್ಕ ಹಾಕಿದ್ದಾರೆ. ಡೀಪ್ ಮೈಂಡ್ ರೋಬೋಟ್ ನಲವತ್ತೊಂಬತ್ತು ಶತಾಂಶಕ್ಕಿಂತ ಹೆಚ್ಚು ಆಟಗಳಲ್ಲಿ ಗೆದ್ದಿತ್ತು. ಅಂದರೆ ಹೆಚ್ಚೂ ಕಡಿಮೆ ಮನುಷ್ಯನಿಗೆ ಸಾಟಿ ಎನ್ನಬಹುದು ಹೀಗೆಂದು ಈಗಲೇ ಇದನ್ನು 'ವರ್ಲ್ಡ್ ಕಪ್' ಅನ್ನು ಆಡಲು ಕಳಿಸಲಾಗುವುದಿಲ್ಲ ಬಿಡಿ! ಏಕೆಂದರೆ ಗಿರ್ರನೆ ತಿರುಗುವ ಚೆಂಡಿನ ಚಲನೆಯನ್ನು ಇದು ನಿಖರವಾಗಿ ಗುರುತಿಸುವುದಿಲ್ಲ. ಹಾಗೆಯೇ ಗಿರ್ರನೆ ಎಸೆಯುವುದೂ ಬರುವುದಿಲ್ಲ. ಅತಿ ವೇಗದ ಶಾಟ್ ಬಂದಾಗ ಹೆಚ್ಚು ತಪ್ಪು ಮಾಡುತ್ತದೆ. ಥೇಟ್ ಹೊಸ ಆಟಗಾರರಂತೆ ಎನ್ನುತ್ತಾರೆ, ಸಂಕೇತಿ. ಆದರೆ ರಿಯಲ್ ಟೈಂನಲ್ಲಿ ಮನುಷ್ಯರ ಜತೆಗೆ ವರ್ತಿಸುವಂಥ ರೋಬೋಗಳ ಸೃಷ್ಟಿ ಸಾಧ್ಯ ಎಂದು ತಿಳಿಸಿದೆ. ಮುಂದೆ ಇದು ಟೇಬಲ್ ಟೆನಿಸ್ ಆಟಗಾರರಿಗೆ ತರಬೇತಿ ನೀಡುವ ಯಂತ್ರವಾಗಬಹುದು. ಇದ್ದಕ್ಕಿದ್ದ ಹಾಗೆ ದನ–ಕರುಗಳು ಎದುರಾದಾಗ ಸ್ವಯಂಚಾಲಿತ ಕಾರಿನಲ್ಲಿ ಏನು ಮಾಡಬೇಕು ಎನ್ನುವುದನ್ನು ರೂಪಿಸಲು ಸಹಾಯ ಮಾಡಬಹುದು. ಚೀನಾದ ವಿಶ್ವಚಾಂಪಿಯನ್ ಫಾನ್ ತ್ಸೆ ತುಂಗರನ್ನು ಪಟ್ಟದಿಂದ ಕೆಳಗಿಳಿಸಲೂಬಹುದು. ಕಾದು ನೋಡಬೇಕು. ❖



ಟಿಟಿ ಆಟವಾಡುತ್ತಿರುವ ರೋಬೋಟ್ ಕೃಪೆ: ಆರ್ಕೈವ್-ಡೀಪ್‌ಮೈಂಡ್



ಮಂಡಿಮೂಳೆಯ ಕೂಡಿಕೆಗೊಂದು 'ಉಂಡಿ'

ಅಮೃತೇಶ್ವರಿ ಬಿ.

ಮಂಡಿಗಳು ನಮ್ಮ ದೇಹವನ್ನು ಹೊರುವುದಕ್ಕೂ ಚಲನೆಗೂ ಬೇಕಾಗಿರುವ ಅತಿಮುಖ್ಯ ಅಂಗ. ಮಂಡಿಗಳು ಸುಲಭವಾಗಿ ಚಲಿಸಲು ಸಹಾಯವಾಗುವಂತೆ ಕಾರ್ಟಿಲೇಜು ಮೂಳೆಗಳಿರುತ್ತವೆ. ಇವು ನಮ್ಮ ದೇಹದ ಎಲ್ಲ ಸಂಧುಗಳಲ್ಲಿಯೂ ಇವೆ. ಕಾರ್ಟಿಲೇಜು ಮೂಳೆಗಳಲ್ಲಿ ನೈಸರ್ಗಿಕ ಪಾಲಿಮರುಗಳಾದ 'ಕೊಲಾಜೆನ್' ಮತ್ತು 'ಪ್ರೊಟಿಯೋಗ್ಲೈಕಾನ್'ಗಳು ಇರುತ್ತವೆ. ನೋವಿಲ್ಲದಂತೆ ನಮ್ಮ ಕೈಕಾಲುಗಳನ್ನು ಸುಲಭವಾಗಿ ಚಲಿಸಲು, ಅವುಗಳಿಂದ ಕೆಲಸ ಮಾಡಲು ಇದರಿಂದ ಸಹಾಯವಾಗುತ್ತದೆ. ನಮ್ಮ ಕಿವಿ ಹಾಗೂ ಮೂಗುಗಳು ಈ ಕಾರ್ಟಿಲೇಜು ಮೂಳೆಗಳಿಂದಲೇ ಮಾಡಲ್ಪಟ್ಟಿರುವುದು. ಈ ಸಂಧುಗಳಲ್ಲಿರುವ ಕಾರ್ಟಿಲೇಜು ಮೂಳೆಗಳು, ವಯಸ್ಸಾಗುತ್ತಿದ್ದಂತೆ ಅಥವಾ ಹೆಚ್ಚೆಚ್ಚು ಬಳಸುತ್ತಿದ್ದಂತೆ ಹರಿಯುವ ಸಾಧ್ಯತೆ ಹೆಚ್ಚು. ಇವು ಎಷ್ಟು ದುರ್ಬಲವಾಗಿದೆ ಎನ್ನುವುದರ ಆಧಾರದ ಮೇಲೆ ಗುಣಮುಖವಾಗುವ ಸಮಯವೂ ವ್ಯತ್ಯಾಸವಾಗುತ್ತದೆ. ಆದರೆ ಮಂಡಿಯ ಕಾರ್ಟಿಲೇಜು ಮೂಳೆಯನ್ನು ವೇಗವಾಗಿ ಹಾಗೂ ಯಶಸ್ವಿಯಾಗಿ ಪುನಃಶ್ಚೇತನಗೊಳಿಸುವ ಹೊಸದಾದ ಜೈವಿಕಕ್ರಿಯಾಶೀಲ ವಸ್ತುವೊಂದನ್ನು ನಾರ್ತ್ ವೆಸ್ಟರ್ನ್ ಯೂನಿವರ್ಸಿಟಿಯ ವಿಜ್ಞಾನಿಗಳಾದ ಸ್ಯಾಮ್ಯುಯೆಲ್ ಐ ಸ್ಟುಪ್ ಮತ್ತು ಸಂಗಡಿಗರು ಅಭಿವೃದ್ಧಿ ಪಡಿಸಿದ್ದಾರೆ.

ಒಮ್ಮೆ ಈ 'ಕಾರ್ಟಿಲೇಜು' ಮೂಳೆಗಳು ದುರ್ಬಲವಾದರೆ ಅಥವಾ ಮುರಿದರೆ ಅದು ನಮ್ಮ ಒಟ್ಟಾರೆ ಆರೋಗ್ಯದ ಮೇಲೆ ಗಂಭೀರವಾದ ಪರಿಣಾಮವನ್ನು ಉಂಟುಮಾಡುತ್ತದೆ. ವಯಸ್ಕರಲ್ಲಿ ಇವು ಸಹಜವಾಗಿ ಪುನಃಶ್ಚೇತನಗೊಳ್ಳಲಾರವು. ಅಕಸ್ಮಾತ್ ನಮ್ಮ ಚರ್ಮ ಹರಿದರೆ ಅದು ಕೆಲವು ದಿನಗಳಲ್ಲಿಯೇ ಮರುಬೆಳವಣಿಗೆ ಆಗಿಬಿಡುತ್ತದೆ. ಈ ಕಾರ್ಟಿಲೇಜು ಮೂಳೆಗಳು ಮೃದುವಾಗಿದ್ದರೂ ಅವಕ್ಕೆ ಸ್ವಾಭಾವಿಕವಾಗಿ ಪುನಃಶ್ಚೇತನಗೊಳ್ಳುವ ಗುಣಗಳಿರುವುದಿಲ್ಲ. ಆದರೆ ಸ್ಯಾಮ್ಯುಯೆಲ್ ಅವರು ಅಭಿವೃದ್ದಿಪಡಿಸಿರುವ ಹೊಸ ಥೆರಪಿಯು ಕಾರ್ಟಿಲೇಜು ಮೂಳೆಗಳನ್ನು ಸ್ವಾಭಾವಿಕವಾಗಿ ಮರುಬೆಳವಣಿಗೆ ಆಗುವಂತೆ ಮಾಡುತ್ತದೆಯಂತೆ. ಈ ಹೊಸ ವಸ್ತುವು ನೋಡಲು ರಬ್ಬರಿನಂತಿದ್ದು, ಆಣ್ವಿಕ ವಸ್ತುಗಳ ಸಂಕೀರ್ಣವಾದ ಜಾಲವ್ಯವಸ್ಥೆಯಂತಿದೆ. ಇವು ನಮ್ಮ ದೇಹದಲ್ಲಿರುವ ಕಾರ್ಟಿಲೇಜು ಮೂಳೆಗಳ ಲಕ್ಷಣಗಳನ್ನೇ ಹೊಂದಿದ್ದು, ಅವು ಮಾಡುವ ಕಾರ್ಯಗಳನ್ನು ಸುಲಭವಾಗಿ ಮಾಡುತ್ತವೆ. ವಿಜ್ಞಾನಿಗಳು ಈ ವಸ್ತುವನ್ನು ಕುರಿಯ ದುರ್ಬಲವಾಗಿರುವ ಮಂಡಿಮೂಳೆಯ ಜೊತೆ ಕೂಡಿಸಿ ಪರೀಕ್ಷಿಸಿದ್ದಾರೆ. ಆರು ತಿಂಗಳೊಳಗೇ ಈ ಮೂಳೆಗಳು ಗುಣವಾಗಿದ್ದು, ಪ್ರಾಣಿಯ ದೇಹದಲ್ಲಿನ ಕಾರ್ಟಿಲೇಜು ಮೂಳೆಯಲ್ಲಿಯೂ ಬೆಳವಣಿಗೆ ಕಂಡುಬಂದಿತ್ತಂತೆ. ಭವಿಷ್ಯದಲ್ಲಿ ಈ ವಸ್ತುವನ್ನು ಮಂಡಿಮೂಳೆಯನ್ನು ಬದಲಿಸುವಂತಹ ಸನ್ನಿವೇಶಗಳಲ್ಲಿ, 'ಆಸ್ಟಿಯೋ ಆರ್ಥ್ರೈಟಿಸ್'ನಂತಹ ರೋಗಿಗಳಲ್ಲಿ ಮತ್ತು ಆಟಗಾರರಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ 'ಆ್ಯಂಟರಿಯರ್ ಕ್ರೂಶಿಯೇಟ್ ಲಿಗಮೆಂಟ್ ಟೇರ್'ನಂತಹ ಸಮಸ್ಯೆಗಳನ್ನು ಗುಣಪಡಿಸಲು ಒಂದು ಸಮರ್ಥ ಸಾಧನವಾಗಿ ಬಳಸಬಹುದಂತೆ.

ಈ ಹಿಂದೆ ಕಾರ್ಟಿಲೇಜು ಮೂಳೆಗಳನ್ನು ಸಕ್ರಿಯಗೊಳಿಸಲು 'ಡಾನ್ಸಿಂಗ್' ಅಣುಗಳನ್ನು ಬಳಸಲಾಗುತ್ತಿತ್ತು. ಡಾನ್ಸಿಂಗ್ ಅಣುಗಳು ಅಂದರೆ ಇನ್ನೇನಲ್ಲ; ಹತ್ತರಿಂದ ಸಾವಿರಾರು ಅಣುಗಳಿರುವ, ಜೀವಕೋಶಗಳಿಗೆ ಸಂದೇಶಗಳನ್ನು ನೀಡಬಲ್ಲಂತಹ 'ನ್ಯಾನೋಫೈಬರು'ಗಳು. ಇವು ಅಂಗಾಂಶಗಳನ್ನು ವೃದ್ಧಿಸುವ ಪ್ರೊಟೀನುಗಳ ಉತ್ಪಾದನೆಯನ್ನು ಸಕ್ರಿಯಗೊಳಿಸುತ್ತವೆ. ಆದರೆ ಸ್ಯಾಮ್ಯುಯೆಲ್ ಮತ್ತು ಸಂಗಡಿಗರು ಈ ಡ್ಯಾನ್ಸಿಂಗ್ ಅಣುಗಳ ಬದಲಿಗೆ, ಹೊಸದಾದ ಹೈಬ್ರಿಡ್ ಜೈವಿಕ ವಸ್ತುವೊಂದನ್ನು ರೂಪಿಸಿದ್ದಾರೆ. ಇದು ಎರಡು ಅಂಶಗಳನ್ನು ಒಳಗೊಂಡಿದೆ. ಒಂದು, ಬೆಳವಣಿಗೆಯನ್ನು ವೃದ್ದಿಸುವ ಹಾಗೂ ನಿರ್ವಹಿಸುವ 'ಬೀಟಾ-1' ಪ್ರೊಟೀನಿಗೆ ಬೆಸೆದುಕೊಳ್ಳಬಲ್ಲ ಜೈವಿಕ ಕ್ರಿಯಾಶೀಲ 'ಪೆಪ್ಟೈಡ್'. ಮತ್ತೊಂದು, ರಾಸಾಯನಿಕವಾಗಿ ಮಾರ್ಪಡಿಸಿದ 'ಹಯಲಾರಿನಿಕ್' ಆಮ್ಲ. ಇದು ಸಂಧುಗಳಲ್ಲಿನ ಕೀಲೆಣ್ಣೆಯಲ್ಲಿರುವ ನೈಸರ್ಗಿಕ 'ಪಾಲಿಸ್ಯಾಕರೈಡ್' ಅಥವಾ ಸಕ್ಕರೆಯ ಅಂಶ. ಈ ಹಯಲರಾನಿಕ್ ಆಮ್ಲವನ್ನು ಚರ್ಮದ ರಕ್ಷಣಾ ಉತ್ಪನ್ನಗಳಲ್ಲಿ ಬಳಸುವುದರಿಂದ ಬಹಳಷ್ಟು ಜನರಿಗೆ ಇದರ ಪರಿಚಯವಿರುತ್ತದೆ. ಮಿದುಳು ಮತ್ತು ಕೀಲುಗಳು ಸೇರಿದಂತೆ ಮನುಷ್ಯನ ದೇಹದಾದ್ಯಂತ ಅನೇಕ ಅಂಗಗಳಲ್ಲಿ ಈ ಆಮ್ಲವು ಸ್ವಾಭಾವಿಕವಾಗಿಯೇ ಕಂಡುಬರುತ್ತದೆ

ಕಾರ್ಟಿಲೇಜುಗಳಲ್ಲಿ ಇರುವ ಸ್ವಾಭಾವಿಕ ಪಾಲಿಮರುಗಳನ್ನು ಈ ಆಮ್ಲವು ಹೋಲುವುದರಿಂದ ಇದನ್ನು ಕಾರ್ಟಿಲೇಜು ಮೂಳೆಗಳ ವೃದ್ಧಿಕಾರ್ಯಕ್ಕಾಗಿ ಬಳಸಿಕೊಳ್ಳಲಾಗಿದೆ. ಜೈವಿಕ ಕ್ರಿಯಾಶೀಲ ಪೆಪ್ಟೈಡು ಹಾಗೂ ರಾಸಾಯನಿಕವಾಗಿ ಮಾರ್ಪಡಿಸಿದ ಹಯಲರಾನಿಕ್ ಆಮ್ಲಗಳು ಸೇರಿ, ನ್ಯಾನೋಫೈಬರುಗಳನ್ನು ತನ್ನಂತಾನೇ ಜಾಲದಂತೆ ಹೆಣೆದುಕೊಂಡು ನೈಸರ್ಗಿಕ ಕಾರ್ಟಿಲೇಜಿನಂತೆಯೇ ಇರುವ ರಚನೆಯನ್ನು ಮಾಡುತ್ತದೆ. ಇವು ದೇಹದೊಳಗೆ ಹೋದರೆ ಜೀವಕೋಶಗಳ ಮರುಬೆಳವಣಿಗೆಯನ್ನು ಪ್ರಚೋದಿಸುತ್ತವೆ. ಮೊಣಕಾಲಿನ ಕೀಲುಗಳಲ್ಲಿ ಸಮಸ್ಯೆಯಿರುವ ಕುರಿಯನ್ನು ವಿಜ್ಞಾನಿಗಳು ಪ್ರಯೋಗಕ್ಕಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಕುರಿಯ 'ಸ್ಟಿಫಲ್ ಕೀಲು' (ಮೊಣಕಾಲು) ಮನುಷ್ಯರ ಮಂಡಿಯನ್ನೇ ಹೋಲುತ್ತದೆಯಂತೆ. ಸುಲಭವಾಗಿ ಮರುಬೆಳವಣಿಗೆಯಾಗದಂತಹ ಈ ಮಾದರಿಯನ್ನೇ ಸ್ಯಾಮ್ಯುಯೆಲ್ ಮತ್ತು ತಂಡ ತಾವು ಅಭಿವೃದ್ಧಿಪಡಿಸಿದ ಜೈವಿಕ ವಸ್ತುವನ್ನು ಪರೀಕ್ಷಿಸಲು ಆಯ್ದುಕೊಂಡರು. ದುರ್ಬಲವಾಗಿರುವ ಕಾರ್ಟಿಲೇಜು ಮೂಳೆಗಳಿರುವ ಕೀಲುಗಳಿಗೆ ಇಂಜೆಕ್ಷನ್ ಮೂಲಕ ಈ ವಸ್ತುವನ್ನು ಸೇರಿಸಿದ್ದಾರೆ. ಬಳಿಕ ಆರು ತಿಂಗಳು ಇದರ ಬೆಳವಣಿಗೆಯನ್ನು ಗಮನಿಸಿದ್ದಾರೆ. ಕಾರ್ಟಿಲೇಜು ಮೂಳೆ ಮರುಬೆಳವಣಿಗೆ ಆಗಿರುವುದಷ್ಟೇ ಅಲ್ಲದೆ, ಬಲಶಾಲಿಯಾಗಿರುವುದೂ ಕಂಡುಬಂದಿತ್ತಂತೆ. ಪ್ರಸ್ತುತ ಮಂಡಿನೋವಿನ ಸಮಸ್ಯೆಗೆ 'ಮೈಕ್ರೋಫ್ರ್ಯಾಕ್ಚರ್ ಸರ್ಜರಿ'ಯನ್ನು ಮಾಡಲಾಗುತ್ತದೆ. ಈ ವಿಧಾನದಲ್ಲಿ, ಶಸ್ತ್ರಚಿಕಿತ್ಸೆಯ ಸಮಯದಲ್ಲಿ ವೈದ್ಯರೇ ಸಣ್ಣದಾದ ಫ್ರ್ಯಾಕ್ಚರುಗಳನ್ನು ಮಾಡುತ್ತಾರಂತೆ. ಹೀಗೆ ಮಾಡುವುದರಿಂದ ಕಾರ್ಟಿಲೇಜು ಮೂಳೆಗಳ ಬೆಳವಣಿಗೆಗೆ ಅನುಕೂಲ ಆಗುವುದಂತೆ. ಕೆಲವೊಮ್ಮೆ ಕೀಲುಗಳಿಗೆ ಅವಶ್ಯವಾಗಿರುವಂತಹ 'ಹ್ಯಾಲೈನ್ ಕಾರ್ಟಿಲೇಜು'ಗಳ ಬದಲು 'ಫೈಬ್ರೋಕಾರ್ಟಿಲೇಜು'ಗಳು, ಅಂದರೆ ನಮ್ಮ ಕಿವಿಗಳಲ್ಲಿರುವ ಮೂಳೆಗಂತಹ ರಚನೆಗಳೂ ರೂಪುಗಳುತ್ತವಂತೆ. ಹ್ಯಾಲೈನ್ ಕಾರ್ಟಿಲೇಜುಗಳನ್ನು ಪುನಃಶ್ಚೇತನಗೊಳಿಸಿದರೆ, ಅದು 'ವೇರ್ ಅಂಡ್ ಟೇರ್' ಅನ್ನು ಸಹಿಸಿಕೊಂಡು, ಚಲನೆ ಮತ್ತು ಕೀಲುನೋವಿಗೆ ಸಂಬಂಧಿಸಿದ ಎಲ್ಲ ತೊಂದರೆಗಳನ್ನು ದೀರ್ಘಾವಧಿಯವರೆಗೆ ನಿಯಂತ್ರಿಸಬಲ್ಲದಂತೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ನಿಯಂತ್ರಣ ಮತ್ತು ಸಹಭಾಗಿತ್ವ

ಬಹು ಆಯ್ಕೆ ಪ್ರಶ್ನೆಗಳು

2) ಬೆಳವಣಿಗೆಯನ್ನು ಉತ್ತೇಜಿಸುವ ಸಸ್ಯ ಹಾರ್ಮೋನ್‌ಗೆ ಉದಾಹರಣೆ ....

ಎ) ಅಬ್ಸಿಸಿಕ್ ಆಮ್ಲ (abscisic acid) ಬಿ) ಆಕ್ಸಿನ್
ಸಿ) ಜಿಬ್ಬರ್‌ಲಿನ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಬಿ) ಆಕ್ಸಿನ್

3) ಸಸ್ಯಗಳ ಬೆಳವಣಿಗೆ ನಿಲ್ಲಲು ಯಾವ ಹಾರ್ಮೋನು ಕಾರಣವಾಗುತ್ತದೆ?

ಎ) ಅಬ್ಸಿಸಿಕ್ ಆಮ್ಲ (abscisic acid)
ಬಿ) ಆಕ್ಸಿನ್ ಸಿ) ಸೈಟೋಕೈನಿನ್
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಎ) ಅಬ್ಸಿಸಿಕ್ ಆಮ್ಲ (abscisic acid)

4) ರಕ್ತದ ಒತ್ತಡ, ಬಾಯಲ್ಲಿ ನೀರೂರುವಿಕೆ ಮತ್ತು ವಾಂತಿಯಾಗುವಿಕೆಗಳಂಥ ಎಲ್ಲಾ ಅನೈಚ್ಛಿಕ ಕ್ರಿಯೆಗಳನ್ನು ಯಾವುದು ನಿಯಂತ್ರಿಸುತ್ತದೆ?

ಎ) ಹಿಮ್ಮೆದುಳಿನ ಅನುಮಸ್ತಿಷ್ಕ
ಬಿ) ಹಿಮ್ಮೆದುಳಿನ ಮೆಡುಲ್ಲ ಸಿ) ಸೈಟೋಕೈನಿನ್
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಬಿ) ಹಿಮ್ಮೆದುಳಿನ ಮೆಡುಲ್ಲ

5) ನೇರ ರೇಖೆಯಲ್ಲಿ ನಡೆಯುವುದು, ಬೈಸಿಕಲ್ ಸವಾರಿ, ಒಂದು ಪೆನ್ಸಿಲ್‌ಅನ್ನು ಎತ್ತಿಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ಮಾಡಲು ಯಾರ ಅವಶ್ಯಕತೆ ಇದೆ?

ಎ) ಹಿಮ್ಮೆದುಳಿನ ಮೆಡುಲ್ಲ ಬಿ) ಸೈಟೋಕೈನಿನ್
ಸಿ) ಕಾಲುಗಳು ಡಿ) ಹಿಮ್ಮೆದುಳಿನ ಅನುಮಸ್ತಿಷ್ಕ

ಉತ್ತರ:– (ಡಿ) ಹಿಮ್ಮೆದುಳಿನ ಭಾಗವಾದ ಅನುಮಸ್ತಿಷ್ಕ

* * * * * * * * * * *

ವಿದ್ಯುಚ್ಛಕ್ತಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ವಿದ್ಯುತ್ ಮಂಡಲದ ಅರ್ಥವೇನು?

ಉತ್ತರ:– ವಿದ್ಯುತ್ ಪ್ರವಾಹದ ನಿರಂತರ ಮತ್ತು ಆವೃತ ಮಾರ್ಗವನ್ನು ವಿದ್ಯುತ್ ಮಂಡಲ ಎಂದು ಕರೆಯುತ್ತಾರೆ

2) ವಿದ್ಯುತ್ ಪ್ರವಾಹವನ್ನು ಹೇಗೆ ವ್ಯಕ್ತಪಡಿಸಲಾಗಿದೆ?

ಉತ್ತರ:– ವಿದ್ಯುತ್ ಪ್ರವಾಹವನ್ನು ಒಂದು ಏಕಮಾನ ಕಾಲದಲ್ಲಿ ಒಂದು ನಿರ್ದಿಷ್ಟ ಕ್ಷೇತ್ರದ ಮೂಲಕ ಪ್ರವಹಿಸುವ ಆವೇಶಗಳ ಪರಿಮಾಣ ಎಂದು ವ್ಯಕ್ತಪಡಿಸಲಾಗಿದೆ. (ಅಂದರೆ ವಿದ್ಯುದಾವೇಶಗಳ ಪ್ರವಾಹದ ದರವನ್ನು ವಿದ್ಯುತ್ ಪ್ರವಾಹ ಎಂದು ಕರೆಯುವರು.)

3) ವಿದ್ಯುದಾವೇಶದ SI ಏಕಮಾನ ಯಾವುದು?

ಉತ್ತರ:– ವಿದ್ಯುದಾವೇಶದ SI ಏಕಮಾನ ಕೂಲಂಬ್(coulomb)

4) ವಿದ್ಯುತ್ ಪ್ರವಾಹದ ಏಕಮಾನವನ್ನು ವ್ಯಾಖ್ಯಾನಿಸಿ

ಉತ್ತರ:– ವಿದ್ಯುತ್ ಪ್ರವಾಹದ ಏಕಮಾನ ಆಂಪೀಯರ್(A)
'ಒಂದು ಅಂಪಿಯರ್ ವಿದ್ಯುತ್ ಪ್ರವಾಹದ ರಚನೆಯು ಪ್ರತಿ ಸೆಕೆಂಡಿಗೆ ಒಂದು ಕೂಲಂಬ್ ಆವೇಶದ ಪ್ರವಾಹವಾಗಿದೆ.'

5) ಯಾವುದಕ್ಕೆ ವಿದ್ಯುತ್ ಮಂಡಲ ಎಂದು ಕರೆಯಲಾಗುತ್ತದೆ?

ಉತ್ತರ:– ವಿದ್ಯುತ್ ಪ್ರವಾಹದ ನಿರಂತರ ಮತ್ತು ಆವೃತ ಮಾರ್ಗವನ್ನು ವಿದ್ಯುತ್ ಮಂಡಲ ಎಂದು ಕರೆಯಲಾಗುತ್ತದೆ.

6) ವಿದ್ಯುತ್ ಪ್ರವಾಹದ ದರವನ್ನು ಅಳೆಯಲು ಉಪಯೋಗಿಸುವ ಉಪಕರಣ ಯಾವುದು?

ಉತ್ತರ:– ಅಮ್ಮೀಟರ್ (ಇದನ್ನು ಉಪಯೋಗಿಸಿ ವಿದ್ಯುತ್ ಮಂಡಲದಲ್ಲಿನ ವಿದ್ಯುತ್ ಪ್ರವಾಹವನ್ನು ಅಳೆಯುತ್ತಾರೆ)

7) 1 ಕೊಲಂಬ್ ಆವೇಶವನ್ನು ರೂಪಿಸಿದ ಇಲೆಕ್ಟ್ರಾನ್‌ಗಳ ಸಂಖ್ಯೆಯನ್ನು ಲೆಕ್ಕ ಮಾಡಿ

ಉತ್ತರ:–ಇಲೆಕ್ಟ್ರಾನ್‌ಗಳ ಸಂಖ್ಯೆ= ವಿದ್ಯುದಾವೇಶ/1 ಇಲೆಕ್ಟ್ರಾನ್ ಆವೇಶ

$$= \frac{1}{11.6 \times 10^{-19}} = 6.25 \times 10^{18}$$

ಒಂದು ಕೊಲಂಬ್ ವಿದ್ಯುದಾವೇಶವು ಸುಮಾರು 6.25×10^{18} ಇಲೆಕ್ಟ್ರಾನುಗಳಿಗೆ ಸಮನಾಗಿರುತ್ತದೆ

8) ವಿದ್ಯುತ್ ವಿಭವಾಂತರ ಎಂದು ಯಾವುದು ವ್ಯಾಖ್ಯಾನಿಸುತ್ತೇವೆ?

ಉತ್ತರ:– ವಿದ್ಯುತ್ ಪ್ರವಾಹವಿರುವ ವಿದ್ಯುತ್ ಮಂಡಲದಲ್ಲಿ ಎರಡು ಬಿಂದುಗಳ ನಡುವಿನ ವಿದ್ಯುತ್ ವಿಭವಾಂತರವನ್ನು ಒಂದು ಏಕಮಾನ ಆವೇಶವನ್ನು ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ತರುವಲ್ಲಿ ಆಗುವ ಕೆಲಸ ಎಂದು ವ್ಯಾಖ್ಯಾನಿಸುತ್ತೇವೆ.

9) ವಿದ್ಯುತ್ ವಿಭವಾಂತರದ SI ಏಕಮಾನ ಯಾವುದು? ಇದನ್ನು ಯಾವ ವಿಜ್ಞಾನಿಯ ಹೆಸರಿನಿಂದ ಸೂಚಿಸಲಾಗಿದೆ

ಉತ್ತರ:– ವಿದ್ಯುತ್ ವಿಭವಾಂತರದ SI ಏಕಮಾನ ಎಂದರೆ ವೋಲ್ಟ್(V). ಇದನ್ನು ಇಟಲಿಯ ಭೌತ ವಿಜ್ಞಾನಿ ಅಲೆಸ್ಸಾಂಡ್ರೋ ವೋಲ್ಟ್‌ನ ಹೆಸರಿನಿಂದ ಸೂಚಿಸಲಾಗಿದೆ.


10) ವೋಲ್ಟ್ ಅನ್ನು ಹೇಗೆ ವಾಖ್ಯಾನಿಸಬಹುದು?

ಉತ್ತರ:– ಯಾವುದೇ ಅನುಕ್ರಮ ವಿದ್ಯುತ್ ವಾಹಕದ ಎರಡು ಬಿಂದುಗಳ ನಡುವೆ, ಒಂದು ಕೂಲಮ್ ಆವೇಶವನ್ನು ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ತರುವಲ್ಲಿ 1 ಜೌಲ್ ಕೆಲಸ ನಡೆದರೆ, ಆ ಎರಡು ಬಿಂದುಗಳ ನಡುವಿನ ವಿಭವಾಂತರ 1 ವೋಲ್ಟ್ ಆಗಿರುತ್ತದೆ.

11) ವಿಭವಾಂತರವನ್ನು ಅಳೆಯುವ ಉಪಕರಣ ಯಾವುದು?

ಉತ್ತರ:– ವಿಭವಾಂತರವನ್ನು ಅಳೆಯುವ ಉಪಕರಣವನ್ನು ವೋಲ್ಟ್‌ಮೀಟರ್ ಎಂದು ಕರೆಯುತ್ತಾರೆ.
(ಎರಡು ಬಿಂದುಗಳ ನಡುವಿನ ವಿಭವಾಂತರವನ್ನು ಅಳೆಯಲು ವೋಲ್ಟ್‌ಮೀಟರ್‌ಅನ್ನು ಯಾವಾಗಲೂ ಸಮಾಂತರವಾಗಿ ಬಿಂದುಗಳ ತುದಿಗಳಿಗೆ ಜೋಡಿಸಲಾಗುತ್ತದೆ.)

*ವಿದ್ಯುತ್ ಮಂಡಳದಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಚಿನ್ಹೆಗಳು

ಕ್ರ ಸಂ	ಘಟಕಗಳು	ಚಿಹ್ನೆಗಳು
1	ವಿದ್ಯುತ್ ಕೋಶ (ಸೆಲ್)	
2	ಶುಷ್ಕ ಕೋಶ ಅಥವಾ ವಿದ್ಯುತ್ ಕೋಶಗಳ ಸಂಯೋಜನೆ	
3	ಪ್ಲಗ್ ಕೀ ಅಥವಾ ಸ್ವಿಚ್ (ತೆರೆದ)	
4	ಪ್ಲಗ್ ಕೀ ಅಥವಾ ಸ್ವಿಚ್ (ಮುಚ್ಚಿದ)	
5	ತಂತಿಗಳು ಸೇರುವ ಸ್ಥಳ	
6	ಸೇರ್ಪಡೆಯಿಲ್ಲದೆ ದಾಟಿದ ತಂತಿ	
7	ವಿದ್ಯುತ್ ಬಲ್ಬ್	or
8	ರೋಧಕದ ರೋಧ 'R'	
9	ಬದಲಾಯಿಸಬಹುದಾದ ರೋಧ ಅಥವಾ ರಿಯೋಸ್ಟಾಟ್	or
10	ಅಮ್ಮೀಟರ್	A
11	ವೋಲ್ಟ್‌ಮೀಟರ್	V

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC BIOLOGY

MOLECULAR BASIS OF INHERITANCE

47. Why doesn't both the strands of DNA act as template for RNA synthesis? (.....Contd)

Ans:- (c)If two strands of RNA are formed from one DNA molecule simultaneously, being complementary, RNA will become double stranded. It will stop the translation step and protein formation will not be there. Thus, transcription step will not be of any use for protein synthesis.

48. Which are the important features of the mRNA?

Ans:- The important features of the mRNA are –

(a) It is a single stranded polynucleotide chain with a small pseudohelix.
(b) The length of the mRNA is more than the length of the protein that is to be synthesised.
(c) Eukaryotic mRNA has a cap structure but the prokaryotic mRNA does not have the cap structure.
(e) There is a leader sequence that is a noncoding region next to the cap which is made up of about 200 or more number of nucleotides.
(f) The leader sequence is followed by the initiator codon, which is generally the AUG.
(g) The coding region follows the initiator codon.
(h) The terminator codon follows the coding region.
(i) ploy A tail is present in the mRNA of eukaryotic cells but not present prokaryotic cells.

49. What are the characteristics of Genetic Code?

Ans:- The characteristics of Genetic Code are –

a) Triplet nature – Genetic code is triplet code where three adjacent nitrogen bases specify one amino acid, e.g., UGG for tryptophan, AUG for methionine.
b) Non-overlapping – Three successive nucleotides or nitrogen bases code for only one amino acid. None of these nitrogen bases become part of any other codon.
c) Commaless – Genetic code does not possess punctuations. Reading of the genetic code, when once started, is continuous till the end.
d) Specificity or Unambiguity – genetic code is specific as well as unambiguous.
e) Universality – Same codon specifies the same amino acid from bacteria to human beings. Exceptions, however, occur in some mitochondrial and viral genes.
f) Number – The total codons are 64 in number. Most of them specify amino acids with some functioning as start and stop signals.
g) Initiation Codons – They function as start signals for the synthesis of polypeptides. Their number is two, AUG or methionine codon an d GUG or valine codon.
h) Termination Codons – They are stop signals which when encountered cause termination of polypeptide synthesis. These codons are also called nonsense codons because they do not specify any amino acid. The various termination codons are UAA (ochre), UAG (amber) and UGA (opal).
i) Polarity – The code is read in 5` → 3` direction. Usually the code present on mRNA is recognised as genetic code. Its complementary code present on template DNA is not considered. If DNA code is to be mentioned, the same is the one which is present on the sense strand because of it the sense strand is also called coding strand. Here the code is similar to that of mRNA with replacement of U with T.
j) Degeneracy – Out of 64 codons only 3 signify stop signals. Only two codons specify a single amino acids. They are AUG for methionine and UGG for tryptophan. Three amino acids have 6 codons each, 5 amino acids 4 codons, one amino acid with 3 codons and 9 amino acids are specified by two codons each.
k) Collinearity – Both DNA (mRNA) and polypeptide have linear arrangements of components. The sequence of amino acids present in polypeptide corresponds to sequence of nitrogen bases of DNA with three successive nitrogen bases forming a single codon. A change in any codon due to addition, deletion or replacement of nucleotides results in change in the reading of genetic code as well as incorporation of amino acids in polypeptide.

50. What is a sensor gene?

Ans:- A sensor gene is meant for picking up information of the intracellular environment. The information is contained in various metabolites, vitamins, hormones, ions, pathogens etc. Any of them can function as a transcription factor.

As soon as it attaches to the sensor gene, the nearby integrater gene is activated to produce activator RNA for controlling and coordinating functioning of one to several structural genes of metabolic pathway.

51. What are Enhancer – Silencer Genes?

Ans:- Enhancer – Silencer Genes are genes which change the rate of transcription of structural genes.

(Contd……..)

ಎನ್‌ಜಿಟಿ ದಂಡ ಹಾಗೂ ನಿರ್ದೇಶನ ಬಳಿಕವೂ ಸುಧಾರಣೆಯಾಗದ ಸ್ಥಿತಿ

ನಿತ್ಯ 4,423 ಟನ್ ಕಸ ಸಂಸ್ಕರಣೆ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ₹2,900 ಕೋಟಿ ದಂಡ ವಿಧಿಸಿ ಹಲವು ಸಲ ಎಚ್ಚರಿಕೆ ನೀಡಿದ ಬಳಿಕವೂ ಕರ್ನಾಟಕದಲ್ಲಿ ಪ್ರತಿದಿನ 4,423 ಟನ್ ಕಸ ಸಂಸ್ಕರಣೆ ಆಗುತ್ತಿಲ್ಲ.

ಪರಿಸರಕ್ಕೆ ಹಾನಿ ಉಂಟು ಮಾಡುವ ಘನಹಾಗೂದ್ರವ್ಯತ್ಯಾಜ್ಯವನ್ನುಸಮರ್ಪಕವಾಗಿ ನಿರ್ವಹಿಸದ ಕಾರಣಕ್ಕೆ ಕರ್ನಾಟಕ ಸರ್ಕಾರಕ್ಕೆ ಪರಿಸರ ಪರಿಹಾರದಲ್ಲಿ ₹2,900 ಕೋಟಿ ದಂಡ ವಿಧಿಸಿ ಎನ್‌ಜಿಟಿ ಪ್ರಧಾನ ಪೀಠವು 2022ರ ಅಕ್ಟೋಬರ್‌ನಲ್ಲಿ ಆದೇಶಿಸಿತ್ತು. ಪ್ರತ್ಯೇಕ ಖಾತೆ ತೆರೆದು ಈ ಹಣವನ್ನು ಕಸದ ವೈಜ್ಞಾನಿಕ ವಿಲೇವಾರಿಗೆ ಬಳಸಬೇಕು ಎಂದು ತಾಕೀತು ಮಾಡಿತ್ತು. ಕಸ ವಿಲೇವಾರಿಗೆ ಕೈಗೊಂಡ ಉಪಕ್ರಮಗಳ ಬಗ್ಗೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಎನ್‌ಜಿಟಿಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ.

316 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿದಿನ 12,140 ಟನ್ ಕಸ ಸಂಗ್ರಹವಾಗುತ್ತಿದೆ. 2022ರಲ್ಲಿ 5,741 ಟನ್ ಮಾತ್ರ ಸಂಸ್ಕರಣೆ ಆಗುತ್ತಿತ್ತು. 6,339 ಟನ್ ಸಂಸ್ಕರಣೆ ಆಗುತ್ತಿರಲಿಲ್ಲ. ಇದೀಗ 7,717 ಟನ್ ಸಂಸ್ಕರಣೆ ಆಗುತ್ತಿದೆ ಎಂದು ಅವರು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಈ ಕಾಮಗಾರಿಗಳ ಮೇಲ್ವಿಚಾರಣೆಗೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಉನ್ನತಾಧಿಕಾರಿಗಳ ಸಮಿತಿಯನ್ನು ರಾಜ್ಯ ರಚಿಸಿದೆ. ಈ ಸಮಿತಿಯು ಹಲವು ಸಭೆಗಳನ್ನು ನಡೆಸಿ ಕಸ ವೈಜ್ಞಾನಿಕ ವಿಲೇವಾರಿಗೆ ರೂಪುರೇಷೆ ಸಿದ್ಧಪಡಿಸಿದೆ. ರಾಜ್ಯ ಸರ್ಕಾರವು 2022–23ನೇ ಸಾಲಿನಲ್ಲಿ ₹1,947 ಕೋಟಿಯನ್ನು ಪ್ರತ್ಯೇಕ ಖಾತೆಗೆ ವರ್ಗಾವಣೆ ಮಾಡಿದೆ ಎಂದು ಅವರು ಹೇಳಿದ್ದಾರೆ.

ರಾಜ್ಯದ ಮಹಾನಗರ ಪಾಲಿಕೆ ವ್ಯಾಪ್ತಿಗಳ ಭೂಭರ್ತಿ ಘಟಕಗಳಲ್ಲಿ ವರ್ಷಗಳಿಂದ ಕೊಳೆಯುತ್ತಿರುವ 180 ಲಕ್ಷ ಟನ್ ಹಳೆಯ ಕಸ ಇದೆ. ಇದರ ವೈಜ್ಞಾನಿಕ ವಿಲೇವಾರಿಗಾಗಿ ಸ್ವಚ್ಛ ಭಾರತ್ ಮಿಷನ್ 2.0 ಅಡಿ ₹ 954 ಕೋಟಿ ಮೀಸಲಿಡಲಾಗಿದೆ. ನೀರಿನ ನಿರ್ವಹಣೆಗಾಗಿ ₹ 2,252 ಕೋಟಿ ಬಳಸಲಾಗುತ್ತಿದೆ ಎಂದು ಮುಖ್ಯ ಕಾರ್ಯದರ್ಶಿ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಪ್ರಮಾಣಪತ್ರದಲ್ಲಿ ಏನಿದೆ?: 315 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿತ್ಯ 6,278 ಟನ್ ಕಸ ಉತ್ಪತ್ತಿಯಾಗುತ್ತಿದೆ. ಒಣ ಕಸ, ಹಸಿ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿದ್ದು, 4,827 ಟನ್ ಸಂಸ್ಕರಣೆ ಆಗುತ್ತಿದೆ. ಉಳಿದ 1,436 ಟನ್ ಸಂಸ್ಕರಣೆಗೆ ಹಲವು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಸ ಸಂಸ್ಕರಣೆಗಾಗಿ ₹ 2,006 ಕೋಟಿ ವೆಚ್ಚ ಮಾಡಲಾಗುತ್ತಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 3,025 ಟನ್ ಹಸಿ ತ್ಯಾಜ್ಯ ಸಂಗ್ರಹವಾಗುತ್ತಿದೆ. ಸಂಸ್ಕರಣೆ ಆಗುತ್ತಿರುವುದು 2,150 ಟನ್ ಮಾತ್ರ. 1,925 ಟನ್ ಒಣ ತ್ಯಾಜ್ಯದ ಪೈಕಿ ಸಂಸ್ಕರಣೆ ಆಗುತ್ತಿರುವುದು 650 ಟನ್. ಒಣ ಕಸ ಸಂಸ್ಕರಣೆ, ಕಸದಿಂದ ವಿದ್ಯುತ್ ಉತ್ಪಾದಿಸಲು ಯೋಜನೆಗಳನ್ನು ರೂಪಿಸಲಾಗಿದ್ದು, ಸಚಿವ ಸಂಪುಟದ ಅನುಮೋದನೆ ಬಾಕಿ ಇದೆ.

ನಗರ ವ್ಯಾಪ್ತಿಯಲ್ಲಿ ನಿತ್ಯ 4,750 ಟನ್ ಕಟ್ಟಡ ಅವಶೇಷಗಳ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ವೈಜ್ಞಾನಿಕವಾಗಿ ವಿಲೇವಾರಿ ಆಗುತ್ತಿರುವುದು 1,750 ಟನ್. ಉಳಿದ 3 ಸಾವಿರ ಟನ್ ತ್ಯಾಜ್ಯದ ಸಂಸ್ಕರಣೆಗಾಗಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗಿದೆ. ರಾಜ್ಯದಲ್ಲಿ ಕಸ ಸಂಸ್ಕರಣಾ ಘಟಕಗಳ ನಿರ್ಮಾಣಕ್ಕಾಗಿ 281 ಜಾಗಗಳನ್ನು ಗುರುತಿಸಲಾಗಿದೆ. ಎನ್‌ಜಿಟಿ ನಿರ್ದೇಶನ ನೀಡಿದ ಬಳಿಕ ಕಸ ಸಂಸ್ಕರಣೆಯಲ್ಲಿ ಗಣನೀಯ ಸುಧಾರಣೆ ಆಗಿದೆ. 2,373 ಟನ್ ಹಸಿ ತ್ಯಾಜ್ಯ ವಿಲೇವಾರಿಗಾಗಿ ಸ್ವಚ್ಛ ಭಾರತ್ ಮಿಷನ್‌ನಲ್ಲಿ ₹ 814 ಕೋಟಿಯ ಯೋಜನೆ ರೂಪಿಸಿ ಅನುಮೋದನೆ ನೀಡಲಾಗಿದೆ ಎಂದು ಅವರು ಹೇಳಿಕೊಂಡಿದ್ದಾರೆ.

ಜಲಮೂಲ ಸೇರುತ್ತಿದೆ ಸಂಸ್ಕರಣೆ ಇಲ್ಲದೆ 130 ಕೋಟಿ ಲೀಟರ್ ಕೊಳಚೆ ನೀರು

2026ರ ವೇಳೆಗೆ ರಾಜ್ಯದ ನಗರ ಪ್ರದೇಶಗಳ ಜನಸಂಖ್ಯೆ 3.36 ಕೋಟಿ ಆಗಲಿದೆ ಎಂದು ಅಂದಾಜಿಸಲಾಗಿದೆ. ಪ್ರತಿದಿನ 335 ಕೋಟಿ ಲೀಟರ್ ಕೊಳಚೆ ನೀರು ಉತ್ಪತ್ತಿಯಾಗುತ್ತಿದೆ. 316 ನಗರ ಸ್ಥಳೀಯ ಸಂಸ್ಥೆಗಳ 178 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿಂದ 204 ಕೋಟಿ ಲೀಟರ್ ನೀರು ಸಂಸ್ಕರಣೆ ಆಗುತ್ತಿದೆ. ಉಳಿದ 130 ಕೋಟಿ ಲೀಟರ್ ಸಂಸ್ಕರಣೆ ಆಗದೆ ಜಲಮೂಲಗಳಿಗೆ ಸೇರುತ್ತಿದೆ.

ಜಲಾಶಯ ಭರ್ತಿಯಾದ ಬಳಿಕ ನೀರು: ತಮಿಳುನಾಡು ಆಕ್ಷೇಪ

ಪ್ರಜಾವಾಣಿ ವಾರ್ತೆ



ನವದೆಹಲಿ: ಕಾವೇರಿ ಕಣಿವೆಯ ನಾಲ್ಕು ಜಲಾಶಯಗಳು ಭರ್ತಿಯಾದ ಬಳಿಕವಷ್ಟೇ ಕರ್ನಾಟಕ ಸರ್ಕಾರವು ತಮಿಳುನಾಡಿಗೆ ಕಾವೇರಿ ನೀರು ಹರಿಸಿದೆ ಎಂದು ತಮಿಳುನಾಡು ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ.

ನವದೆಹಲಿಯಲ್ಲಿ ಮಂಗಳವಾರ ನಡೆದ ಕಾವೇರಿ ನೀರು ನಿಯಂತ್ರಣ ಸಮಿತಿ ಸಭೆಯಲ್ಲಿ ವಾದ ಮಂಡಿಸಿದ ತಮಿಳುನಾಡು ಸರ್ಕಾರದ ಪ್ರತಿನಿಧಿಗಳು, ಕಾವೇರಿ ನ್ಯಾಯಮಂಡಳಿ 1992ರಲ್ಲಿ ನೀಡಿರುವ ಆದೇಶದ ಪ್ರಕಾರ, ಒಂದು ವಾರದಲ್ಲಿ ಹರಿಸಬೇಕಾದ ನೀರಿನ ಪ್ರಮಾಣದಲ್ಲಿ ಕೊರತೆ ಉಂಟಾದಲ್ಲಿ, ಅದನ್ನು ಮುಂಬರುವ ವಾರಗಳಲ್ಲಿ ಹರಿಸತಕ್ಕದ್ದು. ಹಾಗಾಗಿ, ಕರ್ನಾಟಕ ರಾಜ್ಯವು ತನ್ನ ಜಲಾಶಯಗಳು ಭರ್ತಿ ಆಗುವ ತನಕ ಹೆಚ್ಚುವರಿ ನೀರನ್ನು ಹರಿಸಲು ಕಾಯುವ ಹಾಗಿಲ್ಲ' ಎಂದರು.

ಕರ್ನಾಟಕ ಸರ್ಕಾರದ ಪ್ರತಿನಿಧಿಗಳು, 'ಕಾವೇರಿ ನ್ಯಾಯಮಂಡಳಿ ಆದೇಶದ ಪ್ರಕಾರ ಈ ವರ್ಷ ಇಲ್ಲಿಯವರೆಗೆ ತಮಿಳುನಾಡಿಗೆ 56.76 ಟಿಎಂಸಿ ಅಡಿ ನೀರು ಹರಿಸಬೇಕಿತ್ತು. ಆದರೆ, ಆಗಸ್ಟ್ 11ರ ವರೆಗೆ 153 ಟಿಎಂಸಿ ಅಡಿ ನೀರು ಬಿಡಲಾಗಿದೆ. ಬಿಳಿಗುಂಡ್ಲುವಿನಲ್ಲಿ ಹರಿದ ಹೆಚ್ಚುವರಿ ನೀರಿನ ಪ್ರಮಾಣವನ್ನು ಮುಂಬರುವ ತಿಂಗಳುಗಳಲ್ಲಿ ಕರ್ನಾಟಕವು ಹರಿಸಬೇಕಾದ ನೀರಿನ ಮೊತ್ತಕ್ಕೆ ಜಮೆ ಮಾಡಿಕೊಳ್ಳತಕ್ಕದ್ದು' ಎಂದು ಸ್ಪಷ್ಟಪಡಿಸಿದರು.

ಮುಂಗಾರಿನ ಉಳಿದ ತಿಂಗಳುಗಳಲ್ಲಿ ಸಹ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ. ಇದರಿಂದಾಗಿ, ಎರಡೂ ರಾಜ್ಯಗಳ ರೈತರಿಗೆ ಅನುಕೂಲವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಹೆಚ್ಚುವರಿ ನೀರನ್ನು ರಾಜ್ಯ ಹರಿಸಿರುವುದರಿಂದ ಸಮಿತಿಯು ರಾಜ್ಯಕ್ಕೆ ಯಾವುದೇ ನಿರ್ದೇಶನ ನೀಡಲಿಲ್ಲ.

ಪ್ರತಿಕ್ರಿಯೆ: ಅವಧಿ ವಿಸ್ತರಣೆ

ಪ್ರಸಾರ ಸೇವೆಗಳ ನಿಯಂತ್ರಣ ಕರಡು ಮಸೂದೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವ್ಯಾಪಕ ಸಮಾಲೋಚನೆಗಳ ನಂತರವೇ ಪ್ರಸಾರ ಸೇವೆಗಳ ನಿಯಂತ್ರಣ ಮಸೂದೆಗೆ ಸಂಬಂಧಿಸಿದ ಹೊಸ ಕರಡುವನ್ನು ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ.

ಈ ನಡುವೆ, ಕರಡು ಮಸೂದೆ ಕುರಿತಂತೆ ಪ್ರತಿಕ್ರಿಯೆಗಳು/ಸಲಹೆಗಳನ್ನು ಸಲ್ಲಿಸಲು ನೀಡಿದ್ದ ಅವಧಿಯನ್ನು ಅಕ್ಟೋಬರ್ 15ರ ವರೆಗೆ ವಿಸ್ತರಿಸಲಾಗಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹೇಳಿದೆ.

ಸಚಿವಾಲಯವು ಕಳೆದ ವರ್ಷ ನವೆಂಬರ್ 10ರಂದು ಕರಡು ಮಸೂದೆಯನ್ನು ಸಾರ್ವಜನಿಕ ವಲಯದಲ್ಲಿ ಪ್ರಕಟಿಸಿತ್ತು. ಭಾಗೀದಾರರು ಮತ್ತು ಸಾರ್ವಜನಿಕರ ಪ್ರತಿಕ್ರಿಯೆಗಳಿಗೆ ವಿವರಣೆ ಒಳಗೊಂಡ ಟಿಪ್ಪಣಿಗಳನ್ನು ಸಹ ಪ್ರಕಟಿಸಿತ್ತು.

ಆದರೆ, ಸುಧಾರಿತ ಕರಡು ಮಸೂದೆ ಕುರಿತು ವ್ಯಾಪಕ ಟೀಕೆಗಳೂ ವ್ಯಕ್ತವಾಗಿದ್ದವು. ಪ್ರಚಲಿತ ವಿದ್ಯಮಾನಗಳ ಕುರಿತ ವಿಷಯವಸ್ತುಗಳನ್ನು ಸಿದ್ಧಪಡಿಸುವವರನ್ನು ಒಟಿಟಿ ಅಥವಾ 'ಡಿಜಿಟಲ್ ಬ್ರಾಡ್‌ಕಾಸ್ಟರ್'ಗಳು ಎಂಬುದಾಗಿ ಪರಿಗಣಿಸುವ ಅಂಶವನ್ನು ಸಾರ್ವಜನಿಕ ವಲಯದಲ್ಲಿ ಪ್ರಕಟಿಸಿರಲಿಲ್ಲ ಎಂಬುದು ಸೇರಿದಂತೆ ಹಲವು ಟೀಕೆಗಳು ಕೇಳಿಬಂದಿದ್ದವು.

ಟೀಕೆಗಳ ಹಿನ್ನೆಲೆಯಲ್ಲಿ, ಪ್ರತಿಕ್ರಿಯೆ ಸಲ್ಲಿಸುವ ಅವಧಿಯನ್ನು ಅಕ್ಟೋಬರ್ 15ರ ವರೆಗೆ ವಿಸ್ತರಿಸಲಾಗಿದೆ ಎಂದು ತಿಳಿಸಿರುವ ಸಚಿವಾಲಯ, ವ್ಯಾಪಕ ಸಮಾಲೋಚನೆ ನಂತರ ಹೊಸ ಕರಡು ಮಸೂದೆಯನ್ನು ಪ್ರಕಟಿಸಲಾಗುವುದು ಎಂದು 'ಎಕ್ಸ್'ನಲ್ಲಿ ಹೇಳಿದೆ.

ಪ್ರಮುಖ ಅಂಶಗಳು

- ಆನ್‌ಲೈನ್ ವೇದಿಕೆಗಳಿಗೆ ವಿಷಯವಸ್ತು ಸಿದ್ಧಪಡಿಸುವವರನ್ನು ಒಟಿಟಿ ಬ್ರಾಡ್‌ಕಾಸ್ಟರ್ಸ್ ಅಥವಾ ಡಿಜಿಟಲ್ ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಎಂದು ಪರಿಗಣಿಸುವ ಅವಕಾಶವನ್ನು ಒಳಗೊಂಡಿದೆ. ಯುಟ್ಯೂಬ್, ಇನ್‌ಸ್ಟಾಗ್ರಾಮ್ ಮೂಲಕ ಕಾರ್ಯನಿರ್ವಹಿಸುವ ಸ್ವತಂತ್ರ ಪತ್ರಕರ್ತರು ಈ ವ್ಯಾಪ್ತಿಯಲ್ಲಿ ಬರುತ್ತಾರೆ
- ಆನ್‌ಲೈನ್ ವಿಷಯವಸ್ತು ಸಿದ್ಧಪಡಿಸುವವರು ದೂರುಗಳ ಪರಿಹಾರ ಅಧಿಕಾರಿ ನೇಮಕ ಮಾಡುವುದನ್ನು ಕಡ್ಡಾಯಗೊಳಿಸುವ ಅವಕಾಶವನ್ನು ಒಳಗೊಂಡಿದೆ.
- ಚಂದಾದಾರರ ಸಂಖ್ಯೆ ನಿರ್ದಿಷ್ಟ ಮಿತಿಯನ್ನು ದಾಟಿದ ನಂತರ, ವಿಷಯವಸ್ತು ಮೌಲ್ಯಮಾಪನ ನಡೆಸಬೇಕು. ಇದಕ್ಕಾಗಿ ಸಮಿತಿ ರಚನೆ ಮಾಡಬೇಕು

ಆರೋಪ: 'ಸಚಿವಾಲಯವು ಆಯ್ದ ಭಾಗೀದಾರರೊಂದಿಗೆ ರಹಸ್ಯವಾಗಿ ಸಭೆ ನಡೆಸಿದೆ. ಡಿಜಿಟಲ್ ಮಾಧ್ಯಮ ಕ್ಷೇತ್ರದ ಸಂಘಟನೆಗಳು, ಸಮಾಜದ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ವಿಸ್ತೃತ ಚರ್ಚೆಗಳು ನಡೆದಿಲ್ಲ' ಎಂದು ಡಿಜಿಪಬ್ ನ್ಯೂಸ್ ಇಂಡಿಯಾ ಫೌಂಡೇಷನ್, ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ ಕಳೆದ ವಾರ ಆರೋಪಿಸಿದ್ದವು.

ಡಿಜಿಪಬ್ ನ್ಯೂಸ್ ಇಂಡಿಯಾ ಫೌಂಡೇಷನ್, 90ಕ್ಕೂ ಹೆಚ್ಚು ಸುದ್ದಿಸಂಸ್ಥೆಗಳನ್ನು ಪ್ರತಿನಿಧಿಸುತ್ತಿದೆ.

ಕೆಐಎಡಿಬಿ ಕಚೇರಿಯಲ್ಲಿ ಶೋಧ: ₹1.5 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧೆಡೆ ಕೈಗಾರಿಕಾ ಪ್ರದೇಶಗಳ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ರೈತರ ಹೆಸರಿನಲ್ಲಿ ಅನ್ಯರಿಗೆ ಪರಿಹಾರ ವಿತರಿಸಿ, ವಂಚಿಸಿರುವ ಪ್ರಕರಣದ ಸಂಬಂಧ ತನಿಖೆ ನಡೆಸಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಡಿಜಿಟಲ್ ಸಾಧನ, ₹1.5 ಕೋಟಿ ನಗದು ಹಾಗೂ ದಾಖಲೆಗಳನ್ನು ವಶಪಡಿಸಿಕೊಂಡಿದೆ.

ಇ.ಡಿ.ಅಧಿಕಾರಿಗಳ ತಂಡವು ಕೆಐಎಡಿಬಿ ಪ್ರಧಾನ ಕಚೇರಿ, ಧಾರವಾಡ ವಲಯ ಕಚೇರಿ ಮೇಲೆ ಶುಕ್ರವಾರ ದಾಳಿ ಮಾಡಿ, ಶೋಧ ನಡೆಸಿತ್ತು.

ಧಾರವಾಡದ ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ 2012ರಲ್ಲಿ ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಒಮ್ಮೆ ಪರಿಹಾರ ನೀಡಲಾಗಿತ್ತು. 2021ರಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ 14 ಮಂದಿಗೆ ₹ 19.9 ಕೋಟಿ ಪರಿಹಾರ ವಿತರಿಸಲಾಗಿತ್ತು. ಈ ಕುರಿತು ಧಾರವಾಡದ ವಿದ್ಯಾಗಿರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಲಾಗಿತ್ತು. ಎಫ್‌ಐಆರ್‌ಗಳ ಆಧಾರದಲ್ಲಿ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿರುವ ಇ.ಡಿ. ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ಕೆಐಎಡಿಬಿಯ ಧಾರವಾಡ ವಲಯದ ಮಾಜಿ ವಿಶೇಷ ಭೂಸ್ವಾಧೀನ ಅಧಿಕಾರಿ ವಿ.ಡಿ.ಸಜ್ಜನ್ ಹಾಗೂ ಇತರರ ವಿರುದ್ಧ ಪೊಲೀಸರು ಈ ಹಿಂದೆಯೇ ಎಫ್‌ಐಆರ್ ದಾಖಲಿಸಿದ್ದಾರೆ. ಸಜ್ಜನ್ ಹಾಗೂ ಇತರ ಅಧಿಕಾರಿಗಳು ದಲ್ಲಾಳಿಗಳೊಂದಿಗೆ ಕೈಜೋಡಿಸಿ ₹19.9 ಕೋಟಿ ಪರಿಹಾರ ವಿತರಿಸಿದ್ದಾರೆ. ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿದೆ ಎಂದು ಇ.ಡಿ ಹೇಳಿದೆ. ಇದೇ ವಿಧಾನ ಬಳಸಿ ಅಧಿಕಾರಿಗಳು ಈ ಹಿಂದೆ ₹72.55 ಕೋಟಿ ಪರಿಹಾರ ನೀಡಿರುವ ಬಗ್ಗೆಯೂ ಇ.ಡಿ ಮಾಹಿತಿ ಕಲೆ ಹಾಕಿದೆ. ಸಜ್ಜನ್ ಹೆಸರಿನಲ್ಲಿರುವ ₹55 ಲಕ್ಷಗಳ ಬ್ಯಾಂಕ್ ಠೇವಣಿಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ತನಿಖಾ ತಂಡ ತಿಳಿಸಿದೆ.

ಸುಧಾ ಓದಿರಿ

ಅಕ್ಕಿ ಬದಲು ಬೇಳೆ ರಾಜ್ಯ ಸರ್ಕಾರ ಚಿಂತನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅನ್ನ ಭಾಗ್ಯ ಯೋಜನೆಯಡಿ 5 ಕೆ.ಜಿ ಅಕ್ಕಿಯ ದುಡ್ಡಿನ ಬದಲು ಬೇಳೆ, ಸಕ್ಕರೆ ಹಾಗೂ ಎಣ್ಣೆ ನೀಡುವಂತೆ ಶೇ 93ರಷ್ಟು ಫಲಾನುಭವಿಗಳು ಮನವಿ ಮಾಡಿದ್ದಾರೆ. ಈ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಮಂಗಳವಾರ ಭೇಟಿ ಮಾಡಿದ ಬಳಿಕ ಅವರು ಸುದ್ದಿಗಾರರ ಜತೆಗೆ ಮಾತನಾಡಿ, 'ರಾಜ್ಯಕ್ಕೆ ಬರಬೇಕಾದ ಅಕ್ಕಿ ಸರಬರಾಜು ಮಾಡುವಂತೆ ಸಚಿವರಿಗೆ ಮನವಿ ಸಲ್ಲಿಸಲಾಗಿದೆ' ಎಂದರು.

'ಗರೀಬ್ ಕಲ್ಯಾಣ ಯೋಜನೆಯಡಿ ಕೇಂದ್ರ ಸರ್ಕಾರವು 5 ಕೆ.ಜಿ. ಅಕ್ಕಿ ಕೊಡುತ್ತಿದೆ. ಅನ್ನ ಭಾಗ್ಯ ಯೋಜನೆಗೆ ಬೇಕಿರುವ ಅಕ್ಕಿ ನೀಡುವಂತೆ ಕಳೆದ ವರ್ಷ ಮನವಿ ಮಾಡಲಾಗಿತ್ತು. ಆದರೆ, ಕೇಂದ್ರ ಸ್ಪಂದಿಸಿರಲಿಲ್ಲ. ಹೀಗಾಗಿ, ಫಲಾನುಭವಿಗಳಿಗೆ 5 ಕೆ.ಜಿ. ಅಕ್ಕಿ ಬದಲು ಹಣ ನೀಡಲಾಗುತ್ತಿದೆ. ಈ ಯೋಜನೆಯ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿದೆ. ಬೇಳೆ ಹಾಗೂ ಇತರ ಆಹಾರ ಧಾನ್ಯಗಳನ್ನು ಕೊಡುವಂತೆ ಫಲಾನುಭವಿಗಳು ವಿನಂತಿಸಿದ್ದಾರೆ' ಎಂದರು.

ರಾಜ್ಯದ 13 ಲಕ್ಷ ಬಿಪಿಎಲ್ ಕಾರ್ಡುದಾರರಿಗೆ (40 ಲಕ್ಷ ಫಲಾನುಭವಿಗಳಿಗೆ) ರಾಜ್ಯ ಸರ್ಕಾರ ಅಕ್ಕಿ ಕೊಡುತ್ತಿದೆ. ಇದಕ್ಕೆ 20 ಸಾವಿರ ಟನ್ ಅಕ್ಕಿ ಬೇಕಿದೆ. ಈ ಅಕ್ಕಿಯನ್ನು ನೀಡುವಂತೆ ಕೇಂದ್ರ ಸಚಿವರಿಗೆ ಮನವಿ ಮಾಡಲಾಗಿದೆ ಎಂದರು.

ರಾಜ್ಯದ ಎಲ್ಲ ಬೇಡಿಕೆಗಳನ್ನು ಕೇಂದ್ರ ಸರ್ಕಾರ ಈಡೇರಿಸಲಿದೆ ಎಂದು ಸಚಿವ ಜೋಶಿ ಭರವಸೆ ನೀಡಿದರು.

awign A Mynavi company

ಸಾರ್ವಜನಿಕ ಪ್ರಕಟಣೆ
ಉದ್ಯೋಗ ವಂಚನೆ ಕುರಿತು ಎಚ್ಚರಿಕೆ

ಅವಿಜ್ಞಾ ಎಂಟರ್‌ಪ್ರೈಸಸ್ ಪ್ರೈ. ಲಿ., ಎಂಬ ಹೆಸರಿನಲ್ಲಿ ಉದ್ಯೋಗ ಆಮಿಷ ತೋರಿಸಿ ಸಾರ್ವಜನಿಕರಿಂದ ಅಕ್ರಮವಾಗಿ ಹಣ ಪಡೆದು ವಂಚನೆ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ದಯವಿಟ್ಟು ಜಾಗ್ರತರಾಗಿರಿ, **ಅವಿಜ್ಞಾ ಕಂಪನಿಯು ಯಾವುದೇ ಕೆಲಸದ ಅವಕಾಶ ನೀಡಲು ಯಾವುದೇ ಶುಲ್ಕವನ್ನು ಪಡೆಯುತ್ತಿಲ್ಲ** – ನಮ್ಮ ಉದ್ಯೋಗ ಅವಕಾಶಗಳೆಲ್ಲ, ಸಂಪೂರ್ಣ ಉಚಿತವಾಗಿರುತ್ತವೆ.
ಈ ಒಂದು ಅಕ್ರಮ ಕುರಿತಂತೆ ನಾವು ಎಫ್‌ಐಆರ್ ದಾಖಲಿಸಿರುತ್ತೇವೆ ಮತ್ತು ಸಂಬಂಧಿತ ಪ್ರಾಧಿಕಾರಗಳು ಈ ಕುರಿತಂತೆ ವಿಚಾರಣೆ ನಡೆಸುತ್ತಲಿವೆ.
ಆದ್ದರಿಂದ, ದಯವಿಟ್ಟು ತಾವೆಲ್ಲರೂ ಇಂತಹ ವಂಚನೆಯ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಕೇಳಿಕೊಳ್ಳುತ್ತೇವೆ. ಒಂದು ವೇಳೆ ನಿಮಗೆ ಯಾವುದೇ ಸಂಶಯಾಸ್ಪದ ಸಂದೇಶವಾಗಲಿ ಅಥವಾ ಹಣ ಪಾವತಿಸುವಂತೆ ಮನವಿಗಳು ಬಂದಲ್ಲಿ, ದಯವಿಟ್ಟು ಅಂತಹುದರ ಕುರಿತ ನಮ್ಮ **support@awign.com** ವೆಬ್‌ಸೈಟ್‌ನಲ್ಲಿ ದೂರು ದಾಖಲಿಸಬೇಕೆಂದು ಕೋರಲಾಗಿದೆ.

ಉದ್ಯೋಗ ವಾಣಿ



ಭಾರತ್ ಇಲೆಕ್ಟ್ರಾನಿಕ್ಸ್ BHARAT ELECTRONICS
QUALITY, TECHNOLOGY, INNOVATION
BHARAT ELECTRONICS LIMITED
(A Govt. of India Enterprise under the Ministry of Defence)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಅಮಿಟೆಡ್, ಒಂದು ನವರತ್ನ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ಬೆಂಗಳೂರು ಸಂಕೀರ್ಣದ ತನ್ನ ಕಾರ್ಖಾನೆ ಮತ್ತು ಕಾರ್ಪೊರೇಟ್ ಕಚೇರಿಗೆ ಈ ಕೆಳಕಂಡಸಂರಕ್ಷಣಾ ಸಿಬ್ಬಂದಿಗಳ ಅವಶ್ಯಕತೆ ಇದೆ.

ಹುದ್ದೆ	ಹುದ್ದೆಗಳ ಸಂಖ್ಯೆ	ಮೀಸಲಾತಿ ವಿಧ	ವಿದ್ಯಾರ್ಹತೆ ಮತ್ತು ಅನುಭವ
ಹವಿಲ್ದಾರ್ (ಸಂರಕ್ಷಣೆ)	15	ಸಾಮಾನ್ಯ-05 ಇ.ಡಬ್ಲ್ಯು ಎಸ್-03 ಇ.ಹಿ.ವ.-04 ಪ.ಜಾ.-02 ಪ.ಪಂ.-01	ಎಸ್.ಎಸ್.ಎಲ್.ಸಿ + ಭಾರತೀಯ ಸಶಸ್ತ್ರ ಸೇನೆಯಲ್ಲಿ 15 ವರ್ಷಗಳ ಸೇವೆ

ವಿವರಣಾತ್ಮಕ ಜಾಹೀರಾತಿಗೆ ನಮ್ಮ ಅಧಿಕೃತ ವೆಬ್ ಸೈಟ್ www.bel-india.in "careers page"ಅನ್ನು ವೀಕ್ಷಿಸಿ
'Har Ek Kaam Desh Ke Naam'

ಹಿಎಲಿ HAL
HINDUSTAN AERONAUTICS LIMITED
LCA TEJAS DIVISION
POST BAG NO. 3791,
MARATHAHALLI POST, BANGALORE – 560037

Advt. No. LCA/HR/TM/TBT-2024/1273/2024 **Date: 14/08/2024**

Hindustan Aeronautics Ltd (HAL), a Navratna Central Public Sector Undertaking and a premier Aeronautical Industry of South East Asia, invites Applications for the following Posts for its various Divisions / Air Bases under Bangalore Complex on tenure basis :

Sl. No.	Name of Post / Discipline / Scale	UR	OBC	SC	ST	EWS	Total
a	Technician (Electrical / Fitter / Sheet Metal / Foundryman / Welder / Machinist / Electroplater) (C5)	55	31	21	06	10	123
b	Diploma Technician (Mechanical / Electrical or Electrical & Electronics / Civil / Metallurgy) (D6)	17	12	06	02	06	43

2. The Detailed Advertisement regarding Age, Qualification, Experience, Trade wise number of posts, post wise reservations, relaxations, concessions, suitability of disability, mode of applying, selection process is available at HAL website **www.hal-india.co.in,** *careers page.* The Last date of receipt of application online/applying is **28.08.2024.** Corrigendum / Addendum, if any, will be hosted on HAL Website only.

DGM (HR)
LCA Tejas Division



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಕಾರ್ಮಿಕ ಇಲಾಖೆ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

78ನೇ ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿ ಕಾರ್ಮಿಕರ ಅಭ್ಯುದಯಕ್ಕಾಗಿ ಸರ್ಕಾರ ಅನುಷ್ಠಾನಗೊಳಿಸಿದ ವಿವಿಧ ಕಾರ್ಯಕ್ರಮಗಳು

ಕಾರ್ಮಿಕ ಆಯುಕ್ತಾಲಯ

- ಕರ್ನಾಟಕ ಕಡ್ಡಾಯ ಉಪಧನ ವಿಮಾನಿಯಮಗಳು 2024ರ (The Karnataka Compulsory Gratuity Insurance Policy Rules 2024) ಅನ್ನು ಅಧಿಸೂಚನೆ ಮೂಲಕ ಜಾರಿಗೆ ತರಲಾಗಿದೆ.
- ಕೈಗಾರಿಕಾ ವಿವಾದಗಳಿಗೆ ಸಂಬಂಧಿಸಿದಂತೆ ವಿವಿಧ ಕಾರ್ಮಿಕ ನ್ಯಾಯಾಲಯ / ಔದ್ಯೋಗಿಕ ನ್ಯಾಯಾಧಿಕರಣಗಳು ನೀಡಿದ 2069 ಐತೀರ್ಪುಗಳನ್ನು ಪ್ರಕಟಿಸಲಾಗಿದೆ.
- ವಿವಿಧ ಕಾರ್ಮಿಕ ಕಾಯ್ದೆಗಳಡಿ ಒಟ್ಟು 98,066 ತಪಾಸಣೆಗಳನ್ನು ಕೈಗೊಂಡು ಕಾಯ್ದೆ ಉಲ್ಲಂಘಿಸಿದ ಮಾಲೀಕರ ವಿರುದ್ಧ ಮೊಕದ್ದಮೆಗಳನ್ನು ಹೂಡಲಾಗಿದೆ. ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಒಟ್ಟು 1998 ಪ್ರಕರಣಗಳಲ್ಲಿ ರೂ. 1,06,53,831/– ದಂಡ ವಿಧಿಸಲಾಗಿದೆ.
- ಕೈಗಾರಿಕಾ ವಿವಾದಗಳ ಕಾಯ್ದೆ, 1947ರಡಿಯಲ್ಲಿ ದಾಖಲಾದ 2026 ಪ್ರಕರಣಗಳಲ್ಲಿ 1613 ಪ್ರಕರಣಗಳ ವಿಲೇವಾರಿ ಮಾಡಲಾಗಿದೆ.
- ಖಾಸಗಿ ವಲಯಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಋತುಚಕ್ರದ ಮೊದಲ ದಿನ ಒಂದು ದಿನದ ವೇತನ ಸಹಿತ ರಜೆಯನ್ನು ಮಂಜೂರು ಮಾಡಲು Menstrual Leave Policy ಅನ್ನು ಅನುಷ್ಠಾನಗೊಳಿಸುವ ಕ್ರಮ ಅಂತಿಮ ಹಂತದಲ್ಲಿರುತ್ತದೆ.



ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಕಾರ್ಮಿಕ ಸಚಿವರು ಮತ್ತು ಮಂಡಳಿಯ ಅಧ್ಯಕ್ಷರಾದ ಶ್ರೀ ಸಂತೋಷ್ ಎಸ್. ಲಾಡ್ ರವರು ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಸಂದರ್ಭದಲ್ಲಿ ಮಕ್ಕಳೊಂದಿಗಿರುವ ಸಾಂದರ್ಭಿಕ ಚಿತ್ರ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

- ಮಂಡಳಿಯ ವತಿಯಿಂದ ನಿರ್ಮಾಣ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಪಿಂಚಣಿ ಸೌಲಭ್ಯಗಳು, ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಸಹಾಯಧನ, ವೈದ್ಯಕೀಯ ಸೌಲಭ್ಯಗಳು ಮುಂತಾದ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
- 2023–24 ನೇ ಸಾಲಿನಲ್ಲಿ 24.26 ಲಕ್ಷ ಫಲಾನುಭವಿಗಳಿಗೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಕಾರ್ಮಿಕ ಇಲಾಖೆಯ 37 ಉಪವಿಭಾಗಗಳಲ್ಲಿ ಮುನ್ನೆಚ್ಚರಿಕಾ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿದ್ದು, 10.05 ಲಕ್ಷ ಕಾರ್ಮಿಕರು ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.
- ಮಂಡಳಿಯ ವತಿಯಿಂದ ನೋಂದಾಯಿತ ನಿರ್ಮಾಣ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ಸಂಚಾರಿ ಆರೋಗ್ಯ ಕ್ಲಿನಿಕ್ ಯೋಜನೆಯನ್ನು ರಾಜ್ಯಾದ್ಯಂತ ಜಾರಿಗೆ ತರಲಾಗಿದ್ದು, 2.97 ಲಕ್ಷ ಕಾರ್ಮಿಕರು ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.

ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

- ಕಾರ್ಖಾನೆಗಳ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ, ಮಹಿಳಾ ಕಾರ್ಮಿಕರಿಗೆ 3 ಪಾಳಿಗಳಲ್ಲಿ 24/7 ಕೆಲಸ ನಿರ್ವಹಿಸಲು ಮತ್ತು ಹೆಚ್ಚುವರಿ ಕೆಲಸ ನಿರ್ವಹಿಸಲು ಅನುವು ಮಾಡಲಾಗಿದೆ.
- ಹೆಚ್ಚುವರಿ ಕೆಲಸದ ಮಿತಿಯನ್ನು 144 ಗಂಟೆಗಳವರೆಗೆ ವಿಸ್ತರಿಸಲಾಗಿದೆ, ವಾರದ 48 ಗಂಟೆಗಳ ಕೆಲಸದ ಅವಧಿಯನ್ನು ಬದಲಾಯಿಸದೆ, ದೈನಂದಿನ ಕೆಲಸದ ಅವಧಿಯನ್ನು ಸಡಿಲಗೊಳಿಸಲು ಅನುವು ಮಾಡಲಾಗಿದೆ.
- ಕಾರ್ಮಿಕರಿಗಾಗಿ 147 ತರಬೇತಿ ಕಾರ್ಯಕ್ರಮಗಳನ್ನು ಹಾಗೂ ಆಡಳಿತ ವರ್ಗದವರಿಗೆ 16 ವಿಚಾರಸಂಕಿರಣಗಳನ್ನು ಆಯೋಜಿಸಿ, ಸುರಕ್ಷತೆ, ಆರೋಗ್ಯ ಹಾಗೂ ವಿಪತ್ತು ನಿರ್ವಹಣೆ ಬಗ್ಗೆ ಅರಿವು ಮೂಡಿಸಲಾಗಿದೆ.

ಕಾರ್ಮಿಕ ಕಲ್ಯಾಣ ಮಂಡಳಿ

- 27212 ಫಲಾನುಭವಿಗಳಿಗೆ ರೂ. 2459.12 ಲಕ್ಷಗಳ ಶೈಕ್ಷಣಿಕ ಪ್ರೋತ್ಸಾಹಧನ ವಿತರಣೆ.
- ಸಂಘಟಿತ ಕಾರ್ಮಿಕರಿಗೆ ವೈದ್ಯಕೀಯ ನೆರವು ಯೋಜನೆಯಡಿ 6 ಫಲಾನುಭವಿಗಳಿಗೆ ಧನ ಸಹಾಯವಾಗಿ ನೀಡಲಾಗಿದೆ.
- ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಒಟ್ಟು 394 ಫಲಾನುಭವಿಗಳಿಗೆ ರೂ.39.40 ಲಕ್ಷಗಳನ್ನು ಧನ ಸಹಾಯವಾಗಿ ನೀಡಲಾಗಿದೆ.
- ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಧನ ಸಹಾಯವಾಗಿ 663 ಫಲಾನುಭವಿಗಳಿಗೆ ರೂ.66.30 ಲಕ್ಷಗಳನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ

- ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ, 1986ರಡಿಯಲ್ಲಿ ಮೇ–2023 ರಿಂದ ಮೇ–2024ರವರೆಗೆ 44981 ತಪಾಸಣೆಗಳನ್ನು ನಡೆಸಲಾಗಿರುತ್ತದೆ.
- 715 ಬಾಲಕಾರ್ಮಿಕರನ್ನು ಪತ್ತೆಹಚ್ಚಿ ಪುನರ್ವಸತಿಗೊಳಿಸಲಾಗಿರುತ್ತದೆ. 302 ಪ್ರಕರಣಗಳನ್ನು ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲಾಗಿದ್ದು, 19 ಪ್ರಕರಣಗಳಲ್ಲಿ ಶಿಕ್ಷೆಯಾಗಿರುತ್ತದೆ. ರೂ. 11,37,000/–ಗಳ ದಂಡ ವಸೂಲಾತಿಯಾಗಿರುತ್ತದೆ.
- ಬೆಂಗಳೂರು ನಗರ ಹಾಗೂ ಮೈಸೂರು ಜಿಲ್ಲೆಯಲ್ಲಿ ರಸ್ತೆಬದಿಗಳಲ್ಲಿ ಭಿಕ್ಷೆ ಬೇಡುವ ಹಾಗೂ ಪೆನ್ನು ಪೆನ್ಸಿಲ್‌ಗಳು ಹಾಗೂ ಇತರೆ ವಸ್ತುಗಳನ್ನು ಮಾರಾಟ ಮಾಡುವ ಕುರಿತು ಕಾರ್ಯಪಡೆಯ ತಂಡಗಳು 375 ಸ್ಥಳಗಳಲ್ಲಿ ತಪಾಸಣೆ ನಡೆಸಿ 13 ಮಕ್ಕಳನ್ನು ರಕ್ಷಣೆ ಮಾಡಲಾಗಿರುತ್ತದೆ.

ಕಾರ್ಮಿಕ ಸಹಾಯವಾಣಿ 155214

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

- ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ, 222 ಅಪಘಾತ ಪ್ರಕರಣಗಳಲ್ಲಿ ಒಟ್ಟು ರೂ. 1074.37 ಲಕ್ಷಗಳ ಅಪಘಾತ ಪರಿಹಾರವನ್ನು ವಿತರಿಸಲಾಗಿದೆ.
- ಅಪಘಾತದಿಂದ ಮರಣ ಹೊಂದಿದ/ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ 242 ಫಲಾನುಭವಿ ಮಕ್ಕಳಿಗೆ ತಲಾ ರೂ.10,000/–ಗಳಂತೆ ಒಟ್ಟು ರೂ.24.20 ಲಕ್ಷಗಳ ಶೈಕ್ಷಣಿಕ ಸಹಾಯಧನ ಸೌಲಭ್ಯ ನೀಡಲಾಗಿದೆ.
- 2023–24 ಆಯವ್ಯಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದಂತೆ, "ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ"ಯನ್ನು ಹೊಸದಾಗಿ ರೂಪಿಸಿ ಒಟ್ಟು 4543 ಕಾರ್ಮಿಕರನ್ನು ನೋಂದಾಯಿಸಲಾಗಿದೆ.
- ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆಯನ್ನು ಹೊಸದಾಗಿ ರೂಪಿಸಿ ಒಟ್ಟು 6339 ಕಾರ್ಮಿಕರನ್ನು ನೋಂದಾಯಿಸಲಾಗಿದೆ.

ಆಶಾದೀಪ ಯೋಜನೆ

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಟ್ಟು 1121 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಮಾಲೀಕರು ಪಾವತಿಸಿದ ಇ.ಎಸ್.ಐ. ಹಾಗೂ ಭವಿಷ್ಯನಿಧಿ ವಂತಿಕೆರೂ. 182.55 ಲಕ್ಷಗಳನ್ನು ಮಾಲೀಕರಿಗೆ ಮರುಪಾವತಿಸಲಾಗಿದೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಟ್ಟು 729 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಮಾಲೀಕರು ಪಾವತಿಸಿದ ಶಿಷ್ಯವೇತನ ರೂ. 332.12 ಲಕ್ಷಗಳನ್ನು ಮಾಲೀಕರಿಗೆ ಮರುಪಾವತಿಸಲಾಗಿದೆ.

78ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ನುಡಿದಂತೆ ನಡೆದಿದ್ದೇವೆ... ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಗೃಹಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ | ಅನ್ನಭಾಗ್ಯ ಬಡವರಿಗೆ ಪ್ರತಿ ತಿಂಗಳು 10 kg | ಗೃಹಲಕ್ಷ್ಮಿ ₹2000 | ಯುವನಿಧಿ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ₹1500

ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ "ಪ್ರಯತ್ನಿಸಿ ಶ್ರಮಿಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಶ್ರೀಮತಿ ಭಾರತಿ ಡಿ., ಭಾ.ಆ.ಸೇ
ಸಿಇಓ ಮತ್ತು ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಡಾ|| ಹೆಚ್.ಎನ್. ಗೋಪಾಲಕೃಷ್ಣ, ಭಾ.ಆ.ಸೇ
ಆಯುಕ್ತರು,
ಕಾರ್ಮಿಕ ಇಲಾಖೆ

ಶ್ರೀ ಮೊಹಮ್ಮದ್ ಮೊಹಸಿನ್, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಾರ್ಮಿಕ ಇಲಾಖೆ

ಬ್ರೇಕ್ ಬದಲು ಆ್ಯಕ್ಸಲರೇಟರ್ ಒತ್ತಿದ್ದ ಆರೋಪ – ಬಸ್ ಚಾಲಕ ಅಮಾನತು

ಬಿಎಂಟಿಸಿ ಬಸ್ ಡಿಕ್ಕಿ: 8 ವಾಹನಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ



ಬಿಎಂಟಿಸಿ ವೋಲ್ವೊ ಬಸ್ಸು ಕಾರಿಗೆ ಡಿಕ್ಕಿ ಹೊಡೆದಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಬೆಂಗಳೂರು: ಹೆಬ್ಬಾಳದ ಎಸ್ಟೀಮ್ ಮಾಲ್ ಬಳಿ ಸೋಮವಾರ ಬಿಎಂಟಿಸಿ ವೋಲ್ವೊ ಬಸ್‌ವೊಂದು ಎಂಟು ವಾಹನಗಳಿಗೆ ಡಿಕ್ಕಿ ಹೊಡೆದಿದ್ದು, ದ್ವಿಚಕ್ರ ವಾಹನ ಸವಾರರೊಬ್ಬರು ಗಾಯಗೊಂಡಿದ್ದಾರೆ.

ಬೆಳಿಗ್ಗೆ 9.30ರ ಸುಮಾರಿಗೆ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಎಚ್‌ಎಸ್‌ಆರ್ ಲೇಔಟ್‌ಗೆ ಬಸ್ ತೆರಳುತ್ತಿತ್ತು. ಚಾಲಕನ ನಿಯಂತ್ರಣ ತಪ್ಪಿ ಎದುರು ಚಲಿಸುತ್ತಿದ್ದ ನಾಲ್ಕು ಬೈಕ್ ಹಾಗೂ ಕಾರುಗಳಿಗೆ ಬಸ್ ಡಿಕ್ಕಿ ಹೊಡೆದಿದ್ದು, ಒಟ್ಟು ಎಂಟು ವಾಹನಗಳಿಗೆ ಹಾನಿಯಾಗಿದೆ.

ಗಾಯಗೊಂಡ ದ್ವಿಚಕ್ರ ವಾಹನ ಸವಾರ ಆಕಾಶ್ ಪಾಟೀಲ್ ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಅವರು ಅಪಾಯದಿಂದ ಪಾರಾಗಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಕಾರು ಹಾಗೂ ಬೈಕ್‌ಗೆ ಬಸ್ ಡಿಕ್ಕಿ ಹೊಡೆಯುತ್ತಿರುವ ದೃಶ್ಯ ಬಸ್‌ನಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಆ್ಯಕ್ಸಲರೇಟರ್ ಒತ್ತಿದ ಚಾಲಕ?: ಬೈಕ್‌ಗೆ ಡಿಕ್ಕಿ ಹೊಡೆಯುತ್ತಿದ್ದಂತೆ ಒಂದು ಕ್ಷಣ ಗಾಬರಿಗೊಂಡ ಚಾಲಕ ರಾಜಕುಮಾರ್, ಬ್ರೇಕ್ ಬದಲು ಆ್ಯಕ್ಸಲರೇಟರ್ ಒತ್ತಿದ್ದರು ಎನ್ನಲಾಗಿದೆ.

ಘಟನೆಯ ಸಂಪೂರ್ಣ ದೃಶ್ಯಗಳು ಬಸ್‌ನಲ್ಲಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಅಪಘಾತ ಸಂಭವಿಸುತ್ತಿದ್ದಂತೆ ನಿರ್ವಾಹಕ 'ಬ್ರೇಕ್ ಒತ್ತಿ ಒತ್ತಿ...' ಎಂದು ಚಾಲಕ ರಾಜಕುಮಾರ್ ಅವರಿಗೆ ಹೇಳುತ್ತಿರುವ ಧ್ವನಿ ಕೂಡ ಕೇಳಿಸುತ್ತದೆ.

ಆದರೆ, ಗಾಬರಿಗೊಂಡಿದ್ದ ಚಾಲಕ ಎಷ್ಟೇ ಪ್ರಯತ್ನಿಸಿದರೂ ಬಸ್ ನಿಯಂತ್ರಿಸಲು ಸಾಧ್ಯವಾಗದೇ ಅಪಘಾತ ಸಂಭವಿಸಿದೆ ಎನ್ನಲಾಗಿದೆ.

ಚಾಲಕನ ವಿರುದ್ಧ ಪ್ರಕರಣ: ಘಟನೆ ಸಂಬಂಧ ಚಾಲಕ ರಾಜಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಹೇಳಿಕೆ ಪಡೆಯಲಾಗಿದೆ. ಬಸ್ ಅನ್ನೂ ಜಪ್ತಿ ಮಾಡಲಾಗಿದೆ. ಮದ್ಯ ಸೇವಿಸಿದ್ದಾರೆಯೇ ಎಂದು ಖಚಿತ ಪಡಿಸಿಕೊಳ್ಳಲು ಘಟನೆ ನಡೆದ ತಕ್ಷಣವೇ ಪರೀಕ್ಷೆ ನಡೆಸಲಾಗಿತ್ತು. ಅದು ದೃಢವಾಗಿಲ್ಲ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ರಾಜಕುಮಾರ್ ಅವರ ಚಾಲನಾ ಪರವಾನಗಿ ಅಮಾನತು ಗೊಳಿಸುವಂತೆ ಜಮಖಂಡಿ ಆರ್‌ಟಿಒ ಕಚೇರಿಗೆ ಮನವಿ ಸಲ್ಲಿಸಲಾಗಿದೆ. ಜತೆಗೆ, ಬಿಎಂಟಿಸಿ ಕೇಂದ್ರ ಕಚೇರಿಗೂ ಮಾಹಿತಿ ನೀಡಿ ಚಾಲಕನ ಅಮಾನತು ಮಾಡುವಂತೆ ಶಿಫಾರಸು ಮಾಡಲಾಗಿತ್ತು. ಈ ಸಂಬಂಧ ಆಂತರಿಕ ತನಿಖೆ ನಡೆಸಿದ ಬಿಎಂಟಿಸಿ ಅಧಿಕಾರಿಗಳು ರಾಜಕುಮಾರ್ ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ. ಅಲ್ಲದೇ ಅಪಘಾತಕ್ಕೆ ನಿಖರ ಕಾರಣ ಪತ್ತೆಹಚ್ಚಲು ಬಿಎಂಟಿಸಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪೊಲೀಸ್ ಜೀಪ್‌ಗೆ ಡಿಕ್ಕಿ ಹೊಡೆದ ಕೆಎಸ್‌ಆರ್‌ಟಿಸಿ ಬಸ್

ಮತ್ತೊಂದು ಅಪಘಾತದಲ್ಲಿ ಪೊಲೀಸ್ ಜೀಪ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಮಂಗಳವಾರ ಬೆಳಿಗ್ಗೆ 9.30ರ ಸುಮಾರಿಗೆ ಹೆಬ್ಬಾಳದ ಮಣಿಪಾಲ್ ಆಸ್ಪತ್ರೆ ಎದುರಿನ ಸರ್ವಿಸ್ ರಸ್ತೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ವೊಂದು ನಿಂತಿದ್ದ ಪೊಲೀಸ್ ಜೀಪ್‌ಗೆ ಡಿಕ್ಕಿ ಹೊಡೆದಿದೆ.

ಚಿಕ್ಕಬಳ್ಳಾಪುರದಿಂದ ಬೆಂಗಳೂರು ಕಡೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಚಾಲಕ ನಿಯಂತ್ರಣ ತಪ್ಪಿ ಕಾರಿಗೆ ಡಿಕ್ಕಿ ಹೊಡೆದಿತ್ತು. ಈ ವಿಚಾರ ತಿಳಿದು ಸ್ಥಳಕ್ಕೆ ತೆರಳಿದ ಪೊಲೀಸರು ಪರಿಶೀಲನೆ ನಡೆಸುತ್ತಿದ್ದರು. ಈ ವೇಳೆ ಕಾರನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಬಸ್ ಚಾಲಕನಿಗೆ ಪಕ್ಕಕ್ಕೆ ನಿಲುಗಡೆ ಮಾಡುವಂತೆ ಸೂಚಿಸಿದ್ದರು. ಆಗ ಬಸ್ ಮತ್ತೆ ಪಕ್ಕದಲ್ಲೇ ನಿಂತಿದ್ದ ಎಸಿಪಿ ಅವರ ಜೀಪ್‌ಗೆ ಡಿಕ್ಕಿ ಹೊಡೆದಿದ್ದು, ಜೀಪ್ ಜಖಂಗೊಂಡಿದೆ. ಈ ಸಂಬಂಧ ಹೆಬ್ಬಾಳ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭೋವಿ ನಿಗಮದ ಕಚೇರಿ ಮೇಲೆ ಸಿಐಡಿ ದಾಳಿ

ಕಂಪ್ಯೂಟರ್ ಸೇರಿದಂತೆ ಹಲವು ಮಹತ್ವದ ದಾಖಲೆ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ತಂಡವು ನಿಗಮದ ಕಚೇರಿ ಸೇರಿದಂತೆ ಹಲವು ಸ್ಥಳಗಳ ಮೇಲೆ ಮಂಗಳವಾರ ಸಂಜೆ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ಜಪ್ತಿ ಮಾಡಿಕೊಂಡಿದೆ.

ವಿ.ವಿ. ಟವರ್ ಬಳಿಯಿರುವ ಕಚೇರಿಯಲ್ಲಿ ತಡರಾತ್ರಿವರೆಗೆ ಪರಿಶೀಲನೆ ನಡೆಸಿದ ಸಿಐಡಿ ತಂಡವು ಕಂಪ್ಯೂಟರ್ ಹಾಗೂ ಕೆಲವು ಕಡತಗಳನ್ನು ಜಪ್ತಿ ಮಾಡಿಕೊಂಡಿದೆ. ಅಲ್ಲದೇ, ಸಿಬ್ಬಂದಿ ಹಾಗೂ ಅಧಿಕಾರಿಗಳ ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಂಡಿದೆ ಎಂದು ಮೂಲಗಳು ಹೇಳಿವೆ

ಉದ್ಯಮಶೀಲತಾ ಯೋಜನೆ ಮತ್ತು ನೇರ ಸಾಲ ಯೋಜನೆಗಳ ಅಡಿ ಲಕ್ಷಾಂತರ ರೂಪಾಯಿ ಮೊತ್ತದ ಸಾಲ ಕೊಡಿಸುವುದಾಗಿ ಮಧ್ಯವರ್ತಿಗಳ ಮೂಲಕ ಆಮಿಷವೊಡ್ಡಿ ಸಾರ್ವಜನಿಕರ ಗುರುತಿನ ದಾಖಲೆಗಳು, ಬ್ಯಾಂಕ್ ಚೆಕ್ ಪಡೆದು ದುರ್ಬಳಕೆ ಮಾಡಿಕೊಂಡಿರುವುದು ಸಿಐಡಿ ತನಿಖೆಯಲ್ಲಿ ಪತ್ತೆಯಾಗಿತ್ತು. ಆ ಮಾಹಿತಿ ಆಧರಿಸಿ ಹಲವು ಕಡೆ ಪರಿಶೀಲನೆ ನಡೆಸಲಾಗುತ್ತಿದೆ.

₹60 ಕೋಟಿಗೂ ಹೆಚ್ಚು ಅಕ್ರಮ: ಪ್ರಾಥಮಿಕ ತನಿಖೆಯಲ್ಲಿ ₹60 ಕೋಟಿಗೂ ಹೆಚ್ಚು ಅಕ್ರಮ ನಡೆದಿರುವ ಮಾಹಿತಿ ಸಿಐಡಿಗೆ ಸಿಕ್ಕಿದ್ದು, ತನಿಖೆ ಮುಂದುವರೆದಿದೆ ಎಂದು ಮೂಲಗಳು ಹೇಳಿವೆ.

ಪ್ರಕರಣದ ಪ್ರಮುಖ ಆರೋಪಿ, ಮಹಾಲಕ್ಷ್ಮಿಪುರದ ಭೋವಿಪಾಳ್ಯದ ನಿಗಮದ ಕಚೇರಿಯಲ್ಲಿ 2021ರ ಏಪ್ರಿಲ್ 5ರಿಂದ 2022ರ ಜುಲೈ 8ರವರೆಗೆ ಕಚೇರಿ ಅಧೀಕ್ಷಕರಾಗಿದ್ದ ಪಿ.ಡಿ. ಸುಬ್ಬಪ್ಪ ಅವರನ್ನು ಕಳೆದ ತಿಂಗಳ ಸಿಐಡಿ ಬಂಧಿಸಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿತ್ತು.

ಅಲ್ಲದೇ, ತಲೆಮರೆಸಿಕೊಂಡಿರುವ ಪ್ರಧಾನ ವ್ಯವಸ್ಥಾಪಕರಾಗಿದ್ದ ಡಾ.ಬಿ.ಕೆ. ನಾಗರಾಜಪ್ಪ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಲೀಲಾವತಿ ಅವರ ಪತ್ತೆಗೆ ಶೋಧ ಮುಂದುವರಿದಿದೆ ಎಂದು ಸಿಐಡಿ ಮೂಲಗಳು ಮಾಹಿತಿ ನೀಡಿವೆ.

ಲೋಕಾಯುಕ್ತ ಮತ್ತು ಸಿಐಡಿ ತನಿಖೆ ನಡೆಸುತ್ತಿರುವ ಮಧ್ಯೆಯೇ, ನಿಗಮವು ಸ್ವತಂತ್ರ ಲೆಕ್ಕ ಪರಿಶೋಧನಾ ಕಂಪನಿಯಿಂದ ಲೆಕ್ಕ ಪರಿಶೋಧನೆ ನಡೆಸಿದೆ. ಅಕ್ರಮ ನಡೆದಿದೆ ಎನ್ನುವುದು ಆ ತನಿಖೆಯಲ್ಲೂ ಪತ್ತೆಯಾಗಿತ್ತು ಎಂಬ ಸಂಗತಿಯನ್ನು ತನಿಖಾಧಿಕಾರಿ ಒಬ್ಬರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಸಿಬ್ಬಂದಿ ಹಾಗೂ ಅಧಿಕಾರಿಗಳ ಹೇಳಿಕೆ ದಾಖಲು
- ₹60 ಕೋಟಿಗೂ ಹೆಚ್ಚು ಅಕ್ರಮ ನಡೆದಿರುವ ಮಾಹಿತಿ
- ಸ್ವತಂತ್ರ ಲೆಕ್ಕ ಪರಿಶೋಧನಾ ಕಂಪನಿಯಿಂದ ಲೆಕ್ಕ ಪರಿಶೋಧನೆ

ಸಾಮಾನ್ಯ ಪದವಿ: ಕೌಶಲ ಕೋರ್ಸ್ ಆರಂಭ

ಪ್ರಜಾವಾಣಿ ವಾರ್ತೆ

45 ಮೊದಲ ವರ್ಷ ಆಯ್ಕೆಯಾದ ಕಾಲೇಜುಗಳು

489 ವಿದ್ಯಾರ್ಥಿಗಳು | 884 ವಿದ್ಯಾರ್ಥಿನಿಯರು

ಬೆಂಗಳೂರು: ಸಾಮಾನ್ಯ ಪದವಿ ಪಡೆಯುವ ವಿದ್ಯಾರ್ಥಿಗಳಲ್ಲಿ ಉದ್ಯೋಗ ಆಧಾರಿತ ಕೌಶಲ ಹೆಚ್ಚಿಸಲು ವಿನೂತನವಾಗಿ ರೂಪಿಸಿದ ಶಿಷ್ಯವೇತನ ಒಳಗೊಂಡ ಕೋರ್ಸ್‌ಗಳನ್ನು 2024–25ನೇ ಶೈಕ್ಷಣಿಕ ಸಾಲಿನಿಂದ 45 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಹತ್ತು ಮಂದಿ ನಿವೃತ್ತ ಐಎಎಸ್ ಅಧಿಕಾರಿಗಳು ಸ್ಥಾಪಿಸಿರುವ 'ಕ್ರಿಸ್ಪ್' (ಸೆಂಟರ್ ಫಾರ್ ರೀಸರ್ಚ್ ಇನ್ ಸ್ಕೀಮ್ಸ್ ಆ್ಯಂಡ್ ಪಾಲಿಸೀಸ್) ಜೊತೆ ಉನ್ನತ ಶಿಕ್ಷಣದಲ್ಲಿ ಕೌಶಲಾಧಾರಿತ ಕೋರ್ಸ್‌ಗಳನ್ನು ಪರಿಚಯಿಸುವ ಒಪ್ಪಂದಕ್ಕೆ ಮಂಗಳವಾರ ಆಯಾ ಕಾಲೇಜುಗಳ ಮುಖ್ಯಸ್ಥರು ಸಹಿ ಹಾಕಿದ ನಂತರ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಮೊದಲ ಹಂತದಲ್ಲಿ 45 ಕಾಲೇಜುಗಳಲ್ಲಿ ಕೋರ್ಸ್ ಪರಿಚಯಿಸಲಾಗಿದೆ ಎಂದರು.

ವಿದ್ಯಾರ್ಥಿಗಳು ಕೊನೆಯ ಒಂದು ವರ್ಷ ಸಂಬಂಧಿಸಿದ ಕಂಪನಿಗಳಿಗೆ ತೆರಳಿ ಪ್ರಾಯೋಗಿಕ ಅನುಭವ ಪಡೆಯುತ್ತಾರೆ. ಪ್ರತಿ ತಿಂಗಳು ಅವರಿಗೆ ₹10 ಸಾವಿರದಿಂದ ₹17 ಸಾವಿರ ಶಿಷ್ಯವೇತನ ಸಿಗಲಿದೆ. ಈಗಾಗಲೇ 1,373 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಮೂರು ವರ್ಷಗಳಲ್ಲಿ 239 ಕಾಲೇಜುಗಳಿಗೆ ಯೋಜನೆ ವಿಸ್ತರಿಸಲಾಗುತ್ತಿದ್ದು, 2026–27ರ ವೇಳೆಗೆ 14,340 ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಗುರಿ ಹೊಂದಲಾಗಿದೆ ಎಂದು ಮಾಹಿತಿ ನೀಡಿದರು.

ಮೊದಲ ಹಂತದಲ್ಲಿ ಬಿ.ಎಸ್‌ಸಿ, ಬಿ.ಕಾಂ, ಬಿ.ಬಿ.ಎಂ, ಬಿ.ಸಿ.ಎ ವಿದ್ಯಾರ್ಥಿಗಳಿಗೆ ಇ-ಕಾಮರ್ಸ್, ಆಹಾರ ಸರಪಳಿ ನಿರ್ವಹಣೆ, ಸರಕು ಸಾಗಣೆ ಉದ್ಯಮ, ರೀಟೇಲ್, ಹೆಲ್ತ್‌ಕೇರ್, ಪ್ರವಾಸೋದ್ಯಮ ಮತ್ತು ಆತಿಥ್ಯ ನಿರ್ವಹಣೆ, ಜೀವನ ವಿಜ್ಞಾನ, ಔಷಧ ಮಾರುಕಟ್ಟೆ ಮತ್ತು ಮಾರಾಟ, ಔಷಧ ಉತ್ಪಾದನೆ ಮತ್ತು ಗುಣಮಟ್ಟ, ಡಿಜಿಟಲ್ ಮಾರುಕಟ್ಟೆ, ಸಿನಿಮಾ ನಿರ್ಮಾಣ, ಜಾಹೀರಾತು, ಮಾಧ್ಯಮ ಮತ್ತು ಮನರಂಜನೆ, ಫ್ಯಾಷನ್ ಡಿಸೈನ್, ಬ್ಯಾಂಕಿಂಗ್, ಹಣಕಾಸು ಸೇವೆ ಮತ್ತು ಜೀವವಿಮೆ, ಎಲೆಕ್ಟ್ರಾನಿಕ್ಸ್, ದತ್ತಾಂಶ ವಿಶ್ಲೇಷಣೆ, ಮಾಹಿತಿ ತಂತ್ರಜ್ಞಾನ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ ಎಂದು ತಿಳಿಸಿದರು.

ಮುಂದಿನ ಹಂತದಲ್ಲಿ ಕಲಾ ವಿಭಾಗದ ವಿದ್ಯಾರ್ಥಿಗಳಿಗೂ ಕೌಶಲ ದೊರಕಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದರು.

ಅಪರಾಧ ಸುದ್ದಿ

ಕಂಪನಿಗೆ ಬಾಂಬ್ ಬೆದರಿಕೆ

ಬೆಂಗಳೂರು: ಜೆ.ಪಿ. ನಗರದ 4ನೇ ಹಂತದಲ್ಲಿರುವ 'ಬ್ರಾಡ್‌ಕಾಂ' ಕಂಪನಿ ಕಚೇರಿಯಲ್ಲಿ ಬಾಂಬ್ ಇರಿಸಿರುವುದಾಗಿ ಮಂಗಳವಾರ ಇ-ಮೇಲ್ ಬಂದಿತ್ತು. ಪೊಲೀಸರ ಪರಿಶೀಲನೆ ನಂತರ, ಇದು ಹುಸಿ ಬೆದರಿಕೆ ಎಂಬುದು ಅರಿವಾಯಿತು.

ಬೆಳಿಗ್ಗೆ 11.50ಕ್ಕೆ ಬಂದ ಇ-ಮೇಲ್ ಬಗ್ಗೆ ಕಂಪನಿ ಸಿಬ್ಬಂದಿ, ಪೊಲೀಸರಿಗೆ ವಿಷಯ ತಿಳಿಸಿದರು. ಬಾಂಬ್ ನಿಷ್ಕ್ರಿಯ ದಳ ಹಾಗೂ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ.

ಮೇ ತಿಂಗಳಲ್ಲಿ ಬೆಂಗಳೂರಿನ ಪ್ರಮುಖ ಪ್ರದೇಶಗಳಲ್ಲಿರುವ ಮೂರು ಫೈವ್ ಸ್ಟಾರ್ ಹೋಟೆಲ್‌ಗಳಿಗೆ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿತ್ತು.

ರೈಲಿಗೆ ತಲೆಕೊಟ್ಟು ಯುವತಿ ಆತ್ಮಹತ್ಯೆ

ಬೆಂಗಳೂರು: ಬೆಂಗಳೂರು ಉತ್ತರ ತಾಲ್ಲೂಕಿನ ಸೋಲದೇವನಹಳ್ಳಿ ರೈಲ್ವೆ ನಿಲ್ದಾಣದ ಬಳಿ ಯುವತಿಯೊಬ್ಬರು ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಡಾರ್ಜಿಲಿಂಗ್ ನಿವಾಸಿ ಲಿಖಿತಾ ಜಾಸ್ಮೀನ್ (24) ಆತ್ಮಹತ್ಯೆ ಮಾಡಿಕೊಂಡವರು. ಸೋಲದೇವನ ಹಳ್ಳಿಯಲ್ಲಿ ನೆಲಸಿದ್ದ ಅಕ್ಕ ಕೃತಿಕಾ ಅವರ ಮನೆಗೆ ಲಿಖಿತಾ ಜಾಸ್ಮೀನ್ ಆಗಸ್ಟ್ 3ರಂದು ಬಂದಿದ್ದರು.

ಲಿಖಿತಾ ಅವರು ಬಿಹಾರ ಮೂಲದ ಯುವಕನನ್ನು ಎರಡು ವರ್ಷಗಳಿಂದ ಪ್ರೀತಿಸುತ್ತಿದ್ದರು. ಇತ್ತೀಚೆಗೆ ಇಬ್ಬರೂ ಪರಸ್ಪರ ದೂರವಾಗಿದ್ದರು. ಇದರಿಂದ ನೊಂದಿದ್ದರು. ಅದೇ ನೋವಿನಲ್ಲಿ ತಂಗಿ ಏನಾದರೂ ಅನಾಹುತ ಮಾಡಿಕೊಳ್ಳುವ ಸಾಧ್ಯತೆಯಿದೆ ಎಂದು ಅರಿತು ಬೆಂಗಳೂರಿಗೆ ಕರೆಸಿಕೊಂಡಿದ್ದರು. ಮಂಗಳವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಮನೆಯಿಂದ ಆಚೆ ಬಂದಿದ್ದ ಲಿಖಿತಾ ಅವರು ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ರೈಲ್ವೆ ಪೊಲೀಸರು ಸ್ಥಳ ಮಹಜರು ಕಾರ್ಯ ನಡೆಸಿದ್ದು, ಯಶವಂತಪುರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಕ್ಕರ್ ಸ್ಫೋಟ: ಇಬ್ಬರಿಗೆ ಗಾಯ

ಬೆಂಗಳೂರು: ಪುಟ್ಟೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ಮಂಗಳವಾರ ಬೆಳಿಗ್ಗೆ ಕುಕ್ಕರ್ ಸ್ಫೋಟಗೊಂಡು, ಶಾರ್ಟ್ ಸರ್ಕಿಟ್ ಆದದ್ದರಿಂದ ಇಬ್ಬರು ಗಾಯಗೊಂಡಿದ್ದಾರೆ.

ದೆಹಲಿಯ ಮೋಸಿನ್ (23) ಹಾಗೂ ಖಾದರ್ ಖಾನ್(27) ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರೂ ಅಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಜೆ.ಪಿ.ನಗರದ ಹೇರ್ ಸಲೂನ್‌ನಲ್ಲಿ ಮೋಸಿನ್ ಹಾಗೂ ಖಾದರ್ ಖಾನ್ ಕೆಲಸ ಮಾಡುತ್ತಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Mrs. V.P. Shirley, W/o Mr. Peter, No. 10, 2nd Phase, 3rd Main, Amrutha Nagar, Halanayakanahalli, Bengaluru - 35.

Mrs. Lucy Lokesh @ Lakshmi Lokesh, W/o Mr. N. Lokesh, No. 305, 80 feet Road, 7th Main, Kalyan Nagar, Bengaluru - 43.

Mrs. Anne Margret Joseph, W/o late Col. Joseph, No. 12/1, Cassurina Street, Bharathi Nagar, Bengaluru - 01.

Our clients aforesaid are the absolute owners in respect of land measuring 7227 sq. ft. being portion of Sy. Nos. 82/1, 82/2, 82/3 and 82/4, situated at Byappanahalli/Vimanapura Village, also known as Katalipalya, K.R.Puram Hobli, Bengaluru South Taluk (old), presently Bengaluru East Taluk, which is morefully described in the schedule hereunder. It has come to the knowledge of our clients that one Mr. Benjamin Vinod, S/o. Mr. J. Patrick, No. 1/1 Budha Vihar Road, Frazer Town, Bengaluru - 560 005, has been clandestinely attempting to sell the schedule property on the basis of a fraudulent agreement of sale. The said Mr. Benjamin Vinod has trespassed into the schedule property and taken illegal possession and put up unlawful and illegal construction thereon. In this regard our clients have filed a suit O.S. 5876/2022 and the matter is pending adjudication on the file of the Hon'ble City Civil Court, (CCH-19), Bengaluru.

The general public are hereby warned that the said Mr. Benjamin Vinod has no manner of any right, title and interest over the schedule property and does not have any authority. Anyone entering into any transaction/s with the said Mr. Benjamin Vinod in respect of schedule property will be doing so at their own risk and costs and such fraudulent transaction/s will not be binding on our clients.

SCHEDULE PROPERTY

All that piece and parcel of the portion of the land measuring 7227 sq. ft. of land being part of Sy. Nos. 82/1, 82/2, 82/3 and 82/4, situated at Byappanahalli/Vimanapura Village, also known as Katalipalya, K.R. Puram Hobli, Bengaluru South Taluk (old), presently Bengaluru East Taluk, Bengaluru.

Boundaries: East: Rajakaluve and defence land, **West:** Petra Apartments, **North:** Kalapalli Road/Railway track, **South:** Property of Chikkabbaiah.

M. Arun Ponappa, Advocate
IInd Floor, Kasturi Complex,
No.76, Mission Road,
Bengaluru -560 027.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

Basava Samithi
No. 1, Sri Basaveshwara Circle, Bangalore - 560 001.
080-2226 5505, 85535 74828
E-mail: basavasamithi.india@gmail.com

TENDER NOTICE

Sealed tenders are invited from qualified & reputed Contractors, who have executed compound works with foundation & 6" Solid Concreate block work near Rajarajeshwari Medical College Kengeri. The detailed document, may be collected on or before **24-08-2024 at 4.00 p.m.** by paying **Rs.2000/-** Other Terms & Conditions apply. Tenderer Should be regular income tax filers and must submit previous 2 years IT Returns.

JOB OPPORTUNITIES

General

REQUIRED
OFFICE CLERKS (YOUNG MALES)
to Work in Furniture Godown. Meet in person with Aadhar Copy at:
pan Office Systems Pvt. Ltd.
PAN OFFICE SYSTEMS PVT LTD,
No 5, 1st A Cross, Bismilla Nagar, Bannerghatta Road Cross, Bangalore – 560029

SHARANYA TELTRONICS requires Sales, Service, Accounts, Office Executives. Call 9845010634 email rajendiran@sharanyateltronics.com

OFFICE ASSISTANT (Male) SSLC/PUC/Degree, Salary Rs.15000 to 18000 Per month. For Immediate appointment contact: 9980322157 Email: accounts@newindiaelectricals.com, Walk-In:- New India Electricals Ltd, J.C.Road Bangalore-02

Teachers/ Professors

LITTLE LILLYS Education Society Requires Graduate/ Post Graduate Teachers for Coordinator & Computer for Higher Primary, High School, Salary: 2.5 Lakhs to 3.5 Lakhs Contact: 9731558585/ 9535498177

KNS INSTITUTE OF TECHNOLOGY
Approved by AICTE & Govt. of Karnataka Affiliated to VTU
FACULTY/STAFF REQUIREMENT
PROFESSORS, ASSOCIATE PROFESSORS & ASST. PROFESSORS IN THE FOLLOWING DEPARTMENTS
CSE, ISE, ECE, AI&ML, DATA SCIENCE & MATHEMATICS, PHYSICS
ADMINSTRATIVE STAFF:
Adminstrative Officer, First Division Clerk, Librarian
INSTRUCTORS / ASSISTANT INSTRUCTORS:
Diploma in CSE, ISE, AI&ML, ECE
Qualification & Salary as per AICTE Norms & State Govt.
Higher Salary may be considered for deserving candidates
Apply within 7 days with detailed CV and copies of Testimonials to:
Principal, KNS INSTITUTE OF TECHNOLOGY
Hegde Nagar, Kogilu Road, Thirumenahalli, Bangalore-560064.
career@knsit.com, knsit.hr@gmail.com, www.knsit.com.
Ph: 080-28567958 Sd/- Chairman

BHS HIGHER EDUCATION SOCIETY
No. 35/1, 11th Main, Jayanagar 4th Block, Bangalore - 11.
bhshes_mc@rediffmail.com/Mail ID: 1993.bils@gmail.com
Phone No:080-26933227 Mobile No:8277117926
REQUIRES
ASSISTANT PROFESSORS OF LAW (Full Time) at Bangalore Institute of Legal Studies, R.V.Road, Bangalore - 04.
:: QUALIFICATION ::
Masters degree in LAW with minimum 55% marks. Candidates with teaching experience and NET/SLET/Ph.D have an added advantage.
Interested candidates may send their detailed Cvs along with photocopies of Marks cards / Certificates of work experience etc., to the above address by post or by email to 1993.bils@gmail.com/ bhshes_mc@rediffmail.com within 7 days from the date of this notification.
Sd/- Secretary

Engg/ Production Technical

CONVERGENT TECHNOLOGIES INDIA PVT LTD
Is looking to hire **SALES ENGINEERS** having 1-3 yrs experience with diploma/ B.E degree in Electrical & Electronics only. Interested applicants can reach out with their CVs to-
gopal@convergenttech.in
Mobile: 9844441782
www.convergenttech.in

WANTED FRESHER Civil Engineers or Supervisor for Construction Company Contact WhatsApp only Sarjapura Marathahalli 9916434972

Factory

REQUIRED: MACHINE OPERATOR Turning/ Milling Machine Operator. Vendor: Milling/ Turning Job Work. Byatarayanapura, Mysore Road, Bangalore- 560026 Contact: 26744597/551, Mobile: 76248-34251 Email: tisaenterprises@gmail.com

Hospital & Medical Jobs

WANTED PEDIATRICIAN and Female GYNAECOLOGIST, Attractive Salary. @ DECCAN HOSPITAL, Opp. KSRTC Depot, Ashwini Extension, Chintamani-563125. Contact: 9845610288, 9845659988. email: deccanhospital@gmail.com

Multiple Vacancy

LTG INFRASTRUCTURE LIMITED
Immediately hiring the below positions for Bangalore Location
Head - Tenders & Contracts (Getting in New Govt., Private Civil Projects)
Qualification: B.E/B.Tech/Dip-Civil
Experience: 5 to 10 yrs
Retired Bank Employee (Nationalized Banks only)
Qualification: Any Graduate / PG, Exp – 26+ yrs/ Retired
Experience: In all Bank works, Loan sections, BG's LC's, etc.
Manager Accounts (From Construction & Realestate)
Qualification: B. Com / M. Com / other professional courses
Experience: 10 to 15 yrs
Business Developement / Liasioning Officer (Relevant Exp in Realestate & Construction)
Qualification: Any Graduate/PG
Experience: 3 to 10 yrs
Sr Engineer/Jr Engineer- Civil
Qualification: B.E/B.Tech/Dip-Civil
Experience: 3 to 10 yrs (Buildings, Plotted Developments, Others)
Interested candidates may please send their resume to hrm@ltgindia.com or Call 99860 41188

RAGHAVA BIO-MEDICALS Rajajinagar.Required BE1.No's,Accountant 1.No's female,Office Assistant female 2.No's (PUC or Degree fail) and Delivery boys 2.No's.Contact: 9980016397, 9972867439

Wanted

LOOKING FOR HR with strong knowledge of Excel and PF, ESI Labour compliance. CONTACT: 9916902503

WANTED OFFICE Boy at Malleswaram Knowing Tamil and Read English with two wheeler license Contact: 080- 23467589/ 88/ 9845159940 Contact: 10-00 am to 5-00 pm Weekdays.

Accounts & Finance

WANTED 1). Accountant with More than 5yrs Experience 2). Assistant Accountant with More than 2yrs Experience Contact: 9341211718, 10:30am to 5:30pm

Walk-in

ARUNODAYA INSTITUTE OF LEGAL STUDIES, No.57, 80 Feet Ring Road, Mariyappanapalya Bangalore-560056. Invites Application for Full Time Faculty for 3 years LL.B and 5 years BA.LL.B: 06 Posts. Qualification: LL.M & Ph.D. and Physical Education Director: 01 post, Qualification: M.PEd. WALK-IN on 17/08/2024, Method of selection: Demo & Interview. Contact: 9972500899.

Marketing & Sales

WANTED SALES EXECUTIVES/ OFFICERS experienced industrialproducts selling with two wheeler, Contact AMIT INDUSTRIES. 9739826852

RENTAL PROPERTIES

Accommodation Available

Commercial

RESTAURANT & PARTY HALL BUSINESS PROPOSAL



Prime rental space, well-furnished, available for vegetarian fine dining restaurant and banquet halls, to accommodate all range of functions, events, conferences, etc., having capacity of about 500 persons in about 14,000 sq.ft, in three floors of a modern, posh building, located on a corner plot in the heart of B'lore, Very close to the City Central Railway station and Bus stand, in Chamarajpet, with Ample parking space, lift and generator facilities.
Mobile : 91080 12898
lvsmurthy2009@gmail.com

REAL ESTATE SELLING

Commerical

Out-Station

HIRIYUR 6000 sqft commercial property in prime location Hiriyur Main Road immediate sale. Genuine buyers only. 9591945892

CONNECT ಕ್ಲಾಸಿಫೈಡ್ಸ್



PHOENIX BY transteel
OFFICE CHAIRS
2 YEARS WARRANTY
At ₹2,999*
Avail further dicounts for bulk orders
8095346346
WFH.TRANSTEEL.COM

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Announcements

ANNOUNCEMENT
I, **Altaf Hussain Barbhuiya**, aged 49years, S/o **Irshad Ali Barbhuiya**, R/at No33, Lakshminagar-1, Nischintapur pt-1, Hailakandi, Assam-788164, presently R/at Hegde Nagar Public School, R.K.Hegde Nagar, Bangalore-560045.In my EPF No BGBG15611900000010031,UAN 101076449578 my name, my Father's name & Mobile No is wrongly mentioned as Altaf Ahmed, Asad Ali & 9008033698 respectively. **I hereby declare that in my Aadhar card No715784557889 my correct name is Altaf Hussain Barbhuiya, my Father's name is Irshad Ali Barbhuiya & Mobile No is 8088299683, which is correct & has to be corrected in EPF Register.** vide affidavit dated 07.08.24 before notary R.Chandrashekhar, Bangalore.

Change of Name

I, SUGUNA KARUPPANNAN W/o.Karuppannan Periannagoundar, residing at #4-C-151, 4th Cross, East NGEF Layout, KasturiNagar, Bangalore-560043 hereby'declare that SUGUNA KUPPUSAMY, K.SUGUNA and SUGUNA KARUPPANNAN all the names are one and the same person. Henceforth I will'be called as SUGUNA KARUPPANNAN only vide affidavit dated 13-08-2024 before Notary Uday Kumar.K, Bangalore.

CHANGE OF NAME
I, **Prakasha H.M S/o Muddaiah H.T,** residing at No.70, Anjanappa Street, Madanaghattamma Layout, Kodigehalli, Bangalore-560091, have changed my name to **PRAKASH H.M** vide affidavit dated 27/08/2016 before Notary M.K. Devaki, Bangalore.

CHANGE OF NAME
I, **Devidas Rohithaksha Attavar S/o Rohithaksha Attavar,** Residing at A-401, Aditi Eloquent, 5th Main, Ramamurthy Nagar, Bangalore North, Dooravaninagar Bangalore 560016, have changed my name as **ROSHAN PEREIRA** for all purposes. vide affidavit dated 12/08/2024 before Notary S. Subashini, Bangalore.


CHANGE OF NAME
I, **BAREEN MAHAMMED ASHFAQ SHAIKH**, Resident at # 16, 1st 'A' Main, Opp. Sharada Royale, G.M. Palya, New Thippasandra, Bangalore-560075, I have changed my name to **BAREEN MOHAMMED ASHFAQ SHAIKH** vide affidavit dated 13-08-2024, before notary L. Gopalakrishna, Bangalore. Henceforth I shall be called **BAREEN MOHAMMED ASHFAQ SHAIKH** only

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752
+91 9886213331
+91 9731810277 | +91 9900428036
080-45557163/164
*Conditions apply

‘ಜನೌಷಧ ಕೇಂದ್ರಕ್ಕೆ ಅನುಮತಿ ನಿಲ್ಲಿಸಿದರೆ ಹೋರಾಟ’

‘ಲಾಬಿಗೆ ಮಣಿದ ಸಚಿವ’

ಪ್ರಜಾವಾಣಿ ವಾರ್ತೆ




ಬೆಂಗಳೂರು: ‘ಖಾಸಗಿ ಲಾಬಿಗಳ ಒತ್ತಡಕ್ಕೆ ಮಣಿದಿರುವ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಅವರು ಹೊಸ ಜನೌಷಧ ಕೇಂದ್ರಗಳಿಗೆ ಅನುಮತಿ ನೀಡುವುದಿಲ್ಲ ಎಂದು ಹೇಳಿದ್ದಾರೆ. ಇದು ಬಡವರ ವಿರೋಧಿ ಧೋರಣೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಕಿಡಿ ಕಾರಿದ್ದಾರೆ.

ಈ ಕುರಿತು ‘ಎಕ್ಸ್’ ಮೂಲಕ ಅಭಿಪ್ರಾಯ ವ್ಯಕ್ತಪಡಿಸಿರುವ ವಿಜಯೇಂದ್ರ, ಸರ್ಕಾರದ ನಡೆ ಮಾನವೀಯ ಮೌಲ್ಯವಿಲ್ಲದ ಜನ ವಿರೋಧಿಯಲ್ಲದೇ ಬೇರೇನೂ ಅಲ್ಲ ಎಂದು ಹೇಳಿದ್ದಾರೆ.



‘ದುಬಾರಿ ಔಷಧಗಳು ಬಡ ಜನರ ಆರೋಗ್ಯದ ಹಕ್ಕು ಕಸಿಯಬಾರದು. ಜನಸಾಮಾನ್ಯರಿಗೂ ಗುಣಮಟ್ಟದ ಔಷಧಗಳು ಕಡಿಮೆ ದರದಲ್ಲಿ ದೊರಕಬೇಕು ಎಂಬ ಮಹತ್ವದ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರು, ಜನೌಷಧ ಕೇಂದ್ರ ಸ್ಥಾಪಿಸಿದರು. ಸದ್ಯ ರಾಜ್ಯದಲ್ಲಿ 8,900ಕ್ಕೂ ಹೆಚ್ಚು ಜನೌಷಧ ಕೇಂದ್ರಗಳಿಂದ ಪ್ರತಿ ದಿನ 20 ಲಕ್ಷಕ್ಕೂ ಹೆಚ್ಚು ಬಡ ಕುಟುಂಬಗಳು ಪ್ರಯೋಜನ ಪಡೆದುಕೊಳ್ಳುತ್ತಿವೆ’ ಎಂದಿದ್ದಾರೆ.

‘ಸರ್ಕಾರಿ ಆಸ್ಪತ್ರೆ ಬಳಿ ಜನೌಷಧ ಕೇಂದ್ರಕ್ಕೆ ಅವಕಾಶವಿಲ್ಲ’



ಡಾ.ಶರಣ ಪ್ರಕಾಶ

ಕಲಬುರಗಿ: ‘ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಬಳಿ ಜನೌಷಧ ಮಳಿಗೆಗಳನ್ನು ತೆರೆಯುವುದರಿಂದ ವೈದ್ಯರು ಹೊರಗಡೆ ಲಭ್ಯವಿರುವ ಔಷಧ ಬರೆದುಕೊಡುವ ಸಾಧ್ಯತೆಗಳಿವೆ. ಹೀಗಾಗಿ ಆಸ್ಪತ್ರೆ ಆವರಣದಲ್ಲಿ ಜನೌಷಧ ಮಳಿಗೆ ಆರಂಭಕ್ಕೆ ಅವಕಾಶ ನೀಡುವುದಿಲ್ಲ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಸ್ಪಷ್ಟಪಡಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವೈದ್ಯರು ಯಾವುದೇ ಕಾರಣಕ್ಕೂ ಹೊರಗಡೆ ಔಷಧ ಖರೀದಿಸುವಂತೆ ರೋಗಿಗಳಿಗೆ ಸೂಚಿಸಬಾರದು. ನಿರ್ದಿಷ್ಟ ಔಷಧಗಳು ಇಲ್ಲದಿದ್ದರೆ ಆ ಬಗ್ಗೆ ತಿಳಿಸಿದರೆ ಸರ್ಕಾರ ಒದಗಿಸಿಕೊಡುತ್ತದೆ. ಹೊರಗಡೆಯ ಔಷಧ ಬರೆದುಕೊಡುವ ರೂಢಿ ಒಳ್ಳೆಯದಲ್ಲ. ಇದರಿಂದಾಗಿಯೇ ಜನೌಷಧ ಕೇಂದ್ರಗಳಿಗೆ ಅವಕಾಶ ನೀಡಬಾರದು ಎಂದು ತೀರ್ಮಾನಿಸಿದ್ದೇವೆ. ಜನೌಷಧ ಕೇಂದ್ರಗಳು ಮಾರುಕಟ್ಟೆ ಪ್ರದೇಶದಲ್ಲಿ ಇರಬೇಕು’ ಎಂದು ಪ್ರತಿಪಾದಿಸಿದರು.

‘ಸರ್ಕಾರಿ ಆಸ್ಪತ್ರೆಗಳಲ್ಲಿ ಹೊಸ ಜನೌಷಧ ಕೇಂದ್ರಗಳಿಗೆ ಅನುಮತಿ ನೀಡುವುದಿಲ್ಲ ಎಂಬ ಸಚಿವರ ಹೇಳಿಕೆಯನ್ನು ನೋಡಿದರೆ ಬಡವರ ಆರೋಗ್ಯದ ವಿಷಯದಲ್ಲೂ ರಾಜಕಾರಣ ಮಾಡಲು ಮುಂದಾಗಿರುವುದು ಸ್ಪಷ್ಟವಾಗುತ್ತದೆ. ಅನ್ನ, ಅಕ್ಷರ, ಆರೋಗ್ಯ ವಿಷಯದಲ್ಲೂ ಕೇಂದ್ರ ಸರ್ಕಾರದೊಂದಿಗೆ ಸಂಘರ್ಷಕ್ಕೆ ಇಳಿಯುವ ಕಾಂಗ್ರೆಸ್ ಸರ್ಕಾರದ ನಡೆ ಜನವಿರೋಧಿ. ಖಾಸಗಿಯವರ ಪ್ರಭಾವಕ್ಕೆ ಮಣಿದು ಬಡವರಿಗೆ ದ್ರೋಹ ಬಗೆಯಲು ಹೊರಟರೆ ಕೈಕಟ್ಟಿ ಕೂರುವುದಿಲ್ಲ. ಸಚಿವರು ಕೂಡಲೇ ತಮ್ಮ ಹೇಳಿಕೆ ಹಿಂದಕ್ಕೆ ಪಡೆಯಬೇಕು ಎಂದು ವಿಜಯೇಂದ್ರ ಆಗ್ರಹಿಸಿದ್ದಾರೆ.

ಮುಖ್ಯಾಂಶಗಳು

- ಶರಣಪ್ರಕಾಶ ಪಾಟೀಲ ಹೇಳಿಕೆ: ಬಡವರ ವಿರೋಧಿ ಧೋರಣೆ: ವಿಜಯೇಂದ್ರ
- ‘ದುಬಾರಿ ಔಷಧಗಳು ಬಡ ಜನರ ಆರೋಗ್ಯದ ಹಕ್ಕು ಕಸಿಯಬಾರದು’
- ‘ಎಕ್ಸ್’ನಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ವಾಲ್ಮೀಕಿ ನಿಗಮ ಹಗರಣ: ಇ.ಡಿ ವಶಕ್ಕೆ ವರ್ಮಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಗರಣದ ಎರಡನೇ ಆರೋಪಿ ಹೈದರಾಬಾದ್‌ನ ಸತ್ಯನಾರಾಯಣ ವರ್ಮಾ ಅವರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 8 ದಿನ ಜಾರಿ ನಿರ್ದೇಶನಾಲಯದ (ಇ.ಡಿ) ಕಸ್ಟಡಿಗೆ ನೀಡಿ ಆದೇಶಿದೆ.

ಆರೋಪಿ ಸತ್ಯನಾರಾಯಣ ವರ್ಮಾ ಅವರನ್ನು ಮಂಗಳವಾರ, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ’ದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧಿಕಾರಿಗಳು ಹಾಜರು ಪಡಿಸಿದರು.

ವಿಚಾರಣೆ ವೇಳೆ ಆರೋಪಿ ಸತ್ಯನಾರಾಯಣ ವರ್ಮಾ ಪರ ಹಾಜರಿದ್ದ ವಕೀಲ ಸತ್ಯನಾರಾಯಣ ಚಾಲ್ಕೆ, ‘ಈಗಾಗಲೇ ಪೊಲೀಸ್ ಕಸ್ಟಡಿಯಲ್ಲಿ ಅರ್ಜಿದಾರರ ವಿಚಾರಣೆ ನಡೆಸಲಾಗಿದೆ. ಈಗ ಇ.ಡಿ ತನ್ನ ಕಸ್ಟಡಿಯಲ್ಲಿ ಇರಿಸಿಕೊಂಡು ವಿಚಾರಣೆ ನಡೆಸುವ ಅಗತ್ಯವಿಲ್ಲ. ಹಾಗಾಗಿ, ಕಸ್ಟಡಿಗೆ ನೀಡಬಾರದು’ ಎಂದು ಮನವಿ ಮಾಡಿದರು.

ಆದರೆ, ಇದನ್ನು ಅಲ್ಲಗಳೆದ ಇ.ಡಿ ಪರ ಹಾಜರಿದ್ದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, ‘ಆರೋಪಿಯು 18 ನಕಲಿ ಬ್ಯಾಂಕ್ ಖಾತೆಗಳನ್ನು ತೆರೆದು ಹಣ ಡ್ರಾ ಮಾಡಿಕೊಂಡಿದ್ದಾರೆ. ಈ ಪ್ರಕರಣದ ಹಿಂದೆ ಬಹುದೊಡ್ಡ ಪಿತೂರಿ ಇದ್ದು, ಅದನ್ನು ಪತ್ತೆ ಮಾಡುವ ಸಲುವಾಗಿ ಇ.ಡಿ ಕಸ್ಟಡಿ ವಿಚಾರಣೆ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು. ಅಂತೆಯೇ, ಸತ್ಯನಾರಾಯಣ ವರ್ಮಾ ಅವರನ್ನು ಇ.ಡಿ ಕಸ್ಟಡಿಗೆ ನೀಡುವಂತೆ ಹೈಕೋರ್ಟ್ ನೀಡಿರುವ ಆದೇಶವನ್ನು ನ್ಯಾಯಾಧೀಶರ ಗಮನಕ್ಕೆ ತಂದರು.

ಪ್ರಾಸಿಕ್ಯೂಷನ್ ವಾದವನ್ನು ಮಾನ್ಯಮಾಡಿದ ನ್ಯಾಯಾಧೀಶರು ವರ್ಮಾ ಅವರನ್ನು 8 ದಿನಗಳ ಇ.ಡಿ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದರು.

ಹೈಕೋರ್ಟ್ ಆದೇಶ: ಹೈಕೋರ್ಟ್‌ನಲ್ಲಿ ಇ.ಡಿ. ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮಾನ್ಯ ಮಾಡಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು, ಸತ್ಯನಾರಾಯಣ ವರ್ಮಾ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಕಸ್ಟಡಿಗೆ ನೀಡುವಂತೆ ಇತ್ತೀಚೆಗಷ್ಟೇ ಎಸ್‌ಐಟಿಗೆ ಆದೇಶಿಸಿತ್ತು. ಸತ್ಯನಾರಾಯಣ ವರ್ಮಾ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಇಸಿಐಆರ್ (ಎನ್‌ಫೋರ್ಸ್‌ಮೆಂಟ್ ಕೇಸ್ ಇನ್‌ಫರ್ಮೇಷನ್ ರಿಪೋರ್ಟ್) ದಾಖಲಿಸಿದೆ.

‘ಹೊಂದಾಣಿಕೆ; ಭ್ರಷ್ಟಾಚಾರಕ್ಕೆ ಪರವಾನಗಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಪಕ್ಷಗಳ ನಡುವೆ ನಡೆಯುವ ಹೊಂದಾಣಿಕೆ ರಾಜಕೀಯ ಭ್ರಷ್ಟಾಚಾರಕ್ಕೆ ಪರವಾನಗಿ ಇದ್ದಂತೆ ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ. ರವಿ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಹೊಂದಾಣಿಕೆ ರಾಜಕೀಯ ಕೆಲ ಸಂದರ್ಭಗಳಲ್ಲಿ ಲಾಭ ತಂದುಕೊಡಬಹುದು. ಆದರೆ, ಅಂತಹ ನಡೆ ಎಲ್ಲ ಪಕ್ಷದವರಿಗೂ ತೊಂದರೆ ಮಾಡುತ್ತದೆ. ರಾಜ್ಯದ ಹಿತಕ್ಕೂ ಮಾರಕ. ಸಿದ್ಧಾಂತ ರಾಜಕಾರಣ ಮಾಡುವವರು ಸುಲಭವಾಗಿ ಬಲಿಯಾಗುತ್ತಾರೆ. ನಾನೂ ಅಂತಹ ಪಿತೂರಿ ರಾಜಕಾರಣಕ್ಕೆ ಬಲಿಯಾದೆ. 2023ರ ಚುನಾವಣೆಯಲ್ಲಿ ಸೋಲಿಸಿದರು. ಇಂತಹ ರಾಜಕಾರಣಕ್ಕೆ ಮುಕ್ತಿ ಹಾಡಬೇಕು’ ಎಂದರು.

‘ಬಿಜೆಪಿ ಭಿನ್ನಮತದ ವಿಚಾರ ಪಕ್ಷದ ವೇದಿಕೆಯಲ್ಲಿ ಚರ್ಚಿಸುತ್ತೇವೆ. ಪಾದಯಾತ್ರೆ ಯಶಸ್ವಿಯಾಗಿದೆ. ಕಾಂಗ್ರೆಸ್ ಹೈಕಮಾಂಡ್ ರಾಜ್ಯಕ್ಕೆ ಬಂದದ್ದು ಅದಕ್ಕೆ ಸಾಕ್ಷಿ. ಬಿಜೆಪಿ ಅವಧಿಯಲ್ಲೂ ಭ್ರಷ್ಟಾಚಾರ ನಡೆದಿತ್ತು ಎನ್ನುವ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಒಂದೂವರೆ ವರ್ಷ ಕಳೆದರೂ ಏಕೆ ಕೈಕಟ್ಟಿಕೊಂಡು ಕುಳಿತಿದೆ. ಇದೂ ಒಂದು ರೀತಿ ಹೊಂದಾಣಿಕೆ ರಾಜಕೀಯವೇ’ ಎಂದು ಪ್ರಶ್ನಿಸಿದರು.

ವಾರ್ಷಿಕೋತ್ಸವ: ಚಿನ್ನದ ನಾಣ್ಯ ಉಡುಗೊರೆ



ಬೆಂಗಳೂರು: ದೇಶದ ಪ್ರಸಿದ್ಧ ಆಭರಣಗಳ ಬ್ರ್ಯಾಂಡ್ ಆಗಿರುವ ಜೋಯಾಲುಕ್ಕಾಸ್ ತನ್ನ 68ನೇ ವಾರ್ಷಿಕೋತ್ಸವ ಮತ್ತು 78ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಗ್ರಾಹಕರಿಗೆ ವಿಶೇಷ ಉಡುಗೊರೆ ಪ್ರಕಟಿಸಿದೆ.

₹75 ಸಾವಿರ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಚಿನ್ನಾಭರಣ ಖರೀದಿಸಿದರೆ 200 ಮಿಲಿ ಗ್ರಾಂ ತೂಕದ ಚಿನ್ನದ ನಾಣ್ಯವನ್ನು ಉಚಿತವಾಗಿ ನೀಡಲಾಗುತ್ತದೆ. ₹1 ಲಕ್ಷ ಇಲ್ಲವೇ ಹೆಚ್ಚಿನ ಮೊತ್ತದ ವಜ್ರಾಭರಣ ಖರೀದಿಸಿದರೆ 1 ಗ್ರಾಂ ಚಿನ್ನದ ನಾಣ್ಯವನ್ನು ಉಚಿತವಾಗಿ ನೀಡಲಾಗುವುದು. ಆಗಸ್ಟ್ 25ರ ವರೆಗೆ ಈ ಉಚಿತ ಉಡುಗೊರೆ ದೊರೆಯಲಿದೆ ಎಂದು ಜೋಯಾಲುಕ್ಕಾಸ್ ಪ್ರಕಟಣೆಯಲ್ಲಿ ತಿಳಿಸಿದೆ.

‘ಗ್ರಾಹಕರು ಜೋಯಾಲುಕ್ಕಾಸ್‌ನ ಯಾವುದೇ ಮಳಿಗೆಗೆ ಭೇಟಿ ನೀಡಿ ಈ ಪ್ರಯೋಜನ ಪಡೆಯಬಹುದಾಗಿದೆ’ ಎಂದು ಜೋಯಾಲುಕ್ಕಾಸ್ ಸಿಎಂಡಿ ಜೋಯ್ ಆಲುಕ್ಕಾಸ್ ತಿಳಿಸಿದ್ದಾರೆ.

ಉನ್ನತ ಶಿಕ್ಷಣ: ನೀತಿ ರೂಪಿಸಲು ಆಗ್ರಹ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆಯಲ್ಲಿ ಬೋಧಕರು, ಸಿಬ್ಬಂದಿ ಆಯ್ಕೆ, ಬಡ್ತಿ, ವರ್ಗಾವಣೆ, ವಿದ್ಯಾರ್ಥಿ ಕೇಂದ್ರಿತ ಸಂಗತಿಗಳ ಕುರಿತು ನೀತಿ ರೂಪಿಸುವಾಗ ಆಯಾ ಭಾಗೀದಾರರನ್ನು ಒಳಗೊಂಡ ಸಮಿತಿಗಳಲ್ಲೇ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಉನ್ನತ ಶಿಕ್ಷಣ ಚಿಂತನಾ ವೇದಿಕೆ ಹೇಳಿದೆ.

ಈ ಕುರಿತು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಜಿ. ಜಗದೀಶ್ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದ ವೇದಿಕೆ ಸಂಚಾಲಕರಾದ ರಾಮಲಿಂಗಪ್ಪ ಟಿ. ಬೇಗೂರು, ಎಂ.ಡಿ. ಒಕ್ಕುಂದ ಅವರು, ವೇದಿಕೆಯ ಸಭೆಯಲ್ಲಿ ಭಾಗವಹಿಸಿದ ಎಲ್ಲ ಜಿಲ್ಲಾ ಪ್ರತಿನಿಧಿಗಳು, ಇಲಾಖೆಯ ಅಧ್ಯಾಪಕರ ಅನುಭವ, ಜ್ಞಾನವನ್ನು ಶಿಕ್ಷಣದ ಸುಧಾರಣೆಯ ವಿಚಾರಗಳಲ್ಲಿ ಬಳಕೆ ಮಾಡಿಕೊಳ್ಳಬೇಕು ಎಂದರು.

ನೈಋತ್ಯ ರೈಲ್ವೆ

ಅರ್ಜಿ ಪ್ರಕಟಣೆ ಸಂ. 565/ಎಸ್‌ಟಿಬಿಎ/08/2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಕೆಳಕಂಡ ರೈಲ್ವೆ ನಿಲ್ದಾಣಗಳಲ್ಲಿ ಕಾಯ್ದಿರಿಸಿಲ್ಲದ ಟಿಕೆಟ್ ವ್ಯವಸ್ಥೆಯ (ಯುಟಿಎಸ್) ಮೂಲಕ ಕಾಯ್ದಿರಿಸಿಲ್ಲದ / ಸಾಮಾನ್ಯ ಟಿಕೆಟ್‌ಗಳನ್ನು ನೀಡಲು ಕಮಿಷನ್ ಆಧಾರದ ಮೇಲೆ ಮೂರು (03) ವರ್ಷಗಳ ಅವಧಿಗಾಗಿ ನಿಲ್ದಾಣ ಟಿಕೆಟ್ ಬುಕಿಂಗ್ ಏಜೆಂಟ್‌ಗಳ ನೇಮಕಾತಿಗಾಗಿ ಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ನಿಲ್ದಾಣದ ಹೆಸರು	ನಿಲ್ದಾಣದ ಕೋಡ್	ನಿಲ್ದಾಣ ದರ್ಜೆ
1	ಟೇಕಲ್	ಟಿಸಿಎಲ್	ಎನ್‌ಎಸ್‌ಜಿ–5
2	ಹನಕೆರೆ	ಹೆಚ್‌ಎನ್‌ಕೆ	ಎನ್‌ಎಸ್‌ಜಿ–6
3	ಸೆಟ್ಟಿಹಳ್ಳಿ	ಎಸ್‌ಇಟಿ	
4	ಎಲಿಯೂರು	ವೈ	
5	ಚನ್ನರಾಯಪಟ್ಟಣ	ಸಿಎನ್‌ಪಿಎ	

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 13–09–2024 ರಂದು 10.00 ಗಂಟೆಯಿಂದ 15:00 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ www.swr.indianrailways.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/343/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25 ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | southwesternrailway_swr | SWRRLY | southwesternrailway | SWRRLY

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕೆಂಗೇರಿ ವಿಭಾಗ, ರಾಜರಾಜೇಶ್ವರಿನಗರ ವಲಯ, ಬೃ.ಬೆಂ.ಮ.ಪಾಲಿಕೆ ಕಟ್ಟಡ, ಸಿಎ ಸಂ–3, 1ನೇ ಮುಖ್ಯರಸ್ತೆ, ಹೊರವರ್ತುಲ ರಸ್ತೆ, ಕೊಮ್ಮಘಟ್ಟ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು –560 060

ಸಂಖ್ಯೆ: ಕಾಪಾಅ/ಕೆಂಗೇರಿ/ಟೆಂಡರ್/06/2024–25 ದಿನಾಂಕ: 13.08.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಬಿ)

(ಏಕಲಕೋಟೆ ಪದ್ಧತಿ) (1ನೇ ಕರೆ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು / ವರ್ಗೀಕರಣ	ಕಾಮಗಾರಿಯ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ (₹ ಗಳಲ್ಲಿ)
ಈ ಕೆಳಕಂಡ ಪ್ರದೇಶಗಳಲ್ಲಿ 2024–25ನೇ ಸಾಲಿಗೆ ವಾರ್ಷಿಕ ನಿರ್ವಹಣೆ ಕಾಮಗಾರಿಗಾಗಿ ಕಾರ್ಮಿಕರನ್ನು ನಿಯೋಜಿಸುವುದು, ಟಿಪ್ಪರ್‌ಗಳನ್ನು ಮತ್ತು ಇತರೆ ಅಗತ್ಯ ಯಂತ್ರೋಪಕರಣಗಳನ್ನು ಒದಗಿಸುವುದು.			
1.	ವಾರ್ಡ್ ಸಂಖ್ಯೆ–26 ದೊಡ್ಡಬಿದರಕಲ್ಲು (ಸಾಮಾನ್ಯರಿಗೆ)	30.00	60,000/-
2.	ವಾರ್ಡ್ ಸಂಖ್ಯೆ–27 ಲಿಂಗಧೀರನಹಳ್ಳಿ (ಸಾಮಾನ್ಯರಿಗೆ)	30.00	60,000/-
3.	ವಾರ್ಡ್ ಸಂಖ್ಯೆ–28 ಹೇರೋಹಳ್ಳಿ (ಪ.ಪಂಗಡ)	30.00	30,000/-
4.	ವಾರ್ಡ್ ಸಂಖ್ಯೆ–29 ಉಲ್ಲಾಳು (ಪ.ಜಾತಿ)	30.00	30,000/-
5.	ವಾರ್ಡ್ ಸಂಖ್ಯೆ–30 ನಾಗದೇವನಹಳ್ಳಿ (ಸಾಮಾನ್ಯರಿಗೆ)	30.00	60,000/-
6.	ವಾರ್ಡ್ ಸಂಖ್ಯೆ–31 ಬಂಡೆಮಠ (ಪ.ಜಾತಿ)	30.00	30,000/-
7.	ವಾರ್ಡ್ ಸಂಖ್ಯೆ–32 ಕೆಂಗೇರಿ (ಸಾಮಾನ್ಯರಿಗೆ)	30.00	60,000/-
8.	ವಾರ್ಡ್ ಸಂಖ್ಯೆ–33 ಹೆಮ್ಮಿಗೆಪುರ (ಸಾಮಾನ್ಯರಿಗೆ)	30.00	60,000/-
ಈ ಕೆಳಕಂಡ ಪ್ರದೇಶಗಳಲ್ಲಿ 2024–25ನೇ ಸಾಲಿಗೆ ಪಾದಚಾರಿಮಾರ್ಗಗಳ ಸುಧಾರಣೆ ಮತ್ತು ನಿರ್ವಹಣೆ ಮಾಡುವುದು.			
9.	ವಾರ್ಡ್ ಸಂಖ್ಯೆ–26 ದೊಡ್ಡಬಿದರಕಲ್ಲು (ಪ.ಪಂಗಡ)	25.00	25,000/-
10.	ವಾರ್ಡ್ ಸಂಖ್ಯೆ–27 ಲಿಂಗಧೀರನಹಳ್ಳಿ (ಸಾಮಾನ್ಯರಿಗೆ)	25.00	50,000/-
11.	ವಾರ್ಡ್ ಸಂಖ್ಯೆ–28 ಹೇರೋಹಳ್ಳಿ (ಸಾಮಾನ್ಯರಿಗೆ)	25.00	50,000/-
12.	ವಾರ್ಡ್ ಸಂಖ್ಯೆ–29 ಉಲ್ಲಾಳು (ಸಾಮಾನ್ಯರಿಗೆ)	25.00	50,000/-
13.	ವಾರ್ಡ್ ಸಂಖ್ಯೆ–30 ನಾಗದೇವನಹಳ್ಳಿ (ಸಾಮಾನ್ಯರಿಗೆ)	25.00	50,000/-
14.	ವಾರ್ಡ್ ಸಂಖ್ಯೆ–31 ಬಂಡೆಮಠ (ಪ.ಜಾತಿ)	25.00	25,000/-
15.	ವಾರ್ಡ್ ಸಂಖ್ಯೆ–32 ಕೆಂಗೇರಿ (ಸಾಮಾನ್ಯರಿಗೆ)	25.00	50,000/-
16.	ವಾರ್ಡ್ ಸಂಖ್ಯೆ–33 ಹೆಮ್ಮಿಗೆಪುರ (ಸಾಮಾನ್ಯರಿಗೆ)	25.00	50,000/-
ಈ ಕೆಳಕಂಡ ಪ್ರದೇಶಗಳಲ್ಲಿ 2024–25ನೇ ಸಾಲಿಗೆ ರಸ್ತೆಗುಂಡಿಗಳನ್ನು ಮುಚ್ಚುವ ಕಾಮಗಾರಿಗಳನ್ನು ಒದಗಿಸುವುದು			
17.	ವಾರ್ಡ್ ಸಂಖ್ಯೆ–26 ದೊಡ್ಡಬಿದರಕಲ್ಲು (ಪ.ಪಂಗಡ)	15.00	37,500/-
18.	ವಾರ್ಡ್ ಸಂಖ್ಯೆ–27 ಲಿಂಗಧೀರನಹಳ್ಳಿ (ಪ.ಜಾತಿ)	15.00	18,750/-
19.	ವಾರ್ಡ್ ಸಂಖ್ಯೆ–28 ಹೇರೋಹಳ್ಳಿ (ಸಾಮಾನ್ಯರಿಗೆ)	15.00	37,500/-
20.	ವಾರ್ಡ್ ಸಂಖ್ಯೆ–29 ಉಲ್ಲಾಳು (ಸಾಮಾನ್ಯರಿಗೆ)	15.00	37,500/-
21.	ವಾರ್ಡ್ ಸಂಖ್ಯೆ–30 ನಾಗದೇವನಹಳ್ಳಿ (ಸಾಮಾನ್ಯರಿಗೆ)	15.00	37,500/-
22.	ವಾರ್ಡ್ ಸಂಖ್ಯೆ–31 ಬಂಡೆಮಠ (ಸಾಮಾನ್ಯರಿಗೆ)	15.00	37,500/-
23.	ವಾರ್ಡ್ ಸಂಖ್ಯೆ–32 ಕೆಂಗೇರಿ (ಪ.ಜಾತಿ)	15.00	18,750/-
24.	ವಾರ್ಡ್ ಸಂಖ್ಯೆ–33 ಹೆಮ್ಮಿಗೆಪುರ (ಸಾಮಾನ್ಯರಿಗೆ)	15.00	37,500/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 19.08.2024ರ ಸಂಜೆ 4:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ 26.08.2024ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 22.08.2024ರ ಮಧ್ಯಾಹ್ನ 3:00 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿ ನಗರ ವಲಯ, ಬೆಂಗಳೂರು–98 ರಲ್ಲಿ ನಡೆಸಲಾಗುವುದು. (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 26.08.2024ರ ಸಂಜೆ 4:00 ಗಂಟೆಯವರೆಗೆ. (5) ಬಿಡ್‌ಗಳನ್ನು ದಿನಾಂಕ 27.08.2024ರ ಸಂಜೆ 4:00 ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಚೇರಿ: ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029. ಫೋನ್: 25536625, 25536789

IFT No: ಕಹಾಮ/ಅಭಿ/Mother dairy- 10 KL HMST/1879/2024-25 Date: 13-08-2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಂಡಳಿಯು ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ವಿನ್ಯಾಸ, ತಯಾರಿಕೆ, ಸರಬರಾಜು, ಅನುಸ್ಥಾಪನ ಹಾಗೂ ಚಾಲನೆಗೊಳಿಸುವ ಕೆಲಸಗಳಿಗಾಗಿ KPP portal ಮುಖೇನ ಟೆಂಡರ್ ಆಹ್ವಾನಿಸಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ ರೂ. ಗಳಲ್ಲಿ	ಮುಕ್ತಾಯದ ಅವಧಿ
1	ಯಲಹಂಕದ ಮದರ್ ಡೇರಿ ಘಟಕದಲ್ಲಿ ಐಸ್ ಕ್ರೀಂ ಉತ್ಪನ್ನ ವಿಭಾಗಕ್ಕೆ 10KL ಸಾಮರ್ಥ್ಯದ HMST ವಿನ್ಯಾಸ, ತಯಾರಿಕೆ, ಸರಬರಾಜು, ಚಾಲನೆಗೊಳಿಸುವ ಹಾಗೂ ಸಂಬಂಧಿಸಿದ ಕೆಲಸಗಳು.	1 ಜಾಬ್	50,000/–	3 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 14–08–2024 ರಿಂದ 21–08–2024 ರ ಸಾಯಂಕಾಲ 4:00 ಗಂಟೆಯವರೆಗೆ. 2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21–08–2024 ಸಾಯಂಕಾಲ 4:00 ಗಂಟೆಯವರೆಗೆ. 3. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 22–08–2024ರಂದು ಸಾಯಂಕಾಲ 4:30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–2)

ಆರೋಪಿತ ವ್ಯಕ್ತಿಯ ಹಾಜರಾತಿಯ ಅವಶ್ಯಕತೆ ಕುರಿತಾದ ಘೋಷಣೆ

ಸೆಕ್ಷನ್ 82 ಸಿಆರ್‌ಪಿಸಿ ನೋಡಿರಿ

ಆದಾಗ್ಯೂ, ನನ್ನ ಎದುರು ಒಂದು ದೂರು ದಾಖಲಾಗಿದ್ದು, ಅದರಲ್ಲಿನ ಆರೋಪಿತ ವ್ಯಕ್ತಿ ಮೆ. ಭರತ್ ಫುಟ್‌ವೇರ್'ನ ಮಾಲೀಕರಾದ ಸಿರಾಜ್ ಮೊಹಮ್ಮದ್ ಹನೀಫ್ ಚೂಡಿಗಾರ್, ಕಚೇರಿ ವಿಳಾಸ: ಎಂ.ಜಿ.ರೋಡ್, ಗಾಂಧಿ ಸರ್ಕಲ್, ಹಾವೇರಿ, ಅಂಚೆ ಹಾವೇರಿ, ಕರ್ನಾಟಕ–581110 ಇವರು ಎನ್‌ಐಎ ಅಧಿನಿಯಮದ (ಅಧಿನಿಯಮ ಎನ್‌ಐಎ ಅಪರಾಧದ ಗುಮಾನಿಯಲ್ಲಿ) ಮೇಲೆ 138 ಎನ್‌ಐ ಆಕ್ಟ್, ಪಿ.ಎಸ್.ನಾರ್ಥ್ ರೋಹಿಣಿ, ದೆಹಲಿ ಠಾಣೆಯಲ್ಲಿ ಎಫ್‌ಐಆರ್ ಸಂ. 2486/19 ದಾಖಲಾಗಿರುವುದರಿಂದ ಮತ್ತು ಈ ಪ್ರಕರಣವು ಬಂಧನದ ವಾರೆಂಟ್ ಹೊರಡಿಸಿದ್ದರೂ ತಂತಕ್ಕೆ ತಲುಪಿದ್ದು, ಸದರಿ ಆರೋಪಿತ ಮೆ. ಭರತ್ ಫುಟ್‌ವೇರ್'ನ ಮಾಲೀಕರಾದ ಸಿರಾಜ್ ಮೊಹಮ್ಮದ್ ಹನೀಫ್ ಚೂಡಿಗಾರ್ ಇವರು ಸಂಪರ್ಕಕ್ಕೆ ಸಿಗುತ್ತಿಲ್ಲವಾದ್ದರಿಂದ ಮತ್ತು ನನ್ನ ತೃಪ್ತಿಗನುಸಾರ ಸದರಿ ಆರೋಪಿತ ಮೆ. ಭರತ್ ಫುಟ್‌ವೇರ್'ನ ಮಾಲೀಕರಾದ ಸಿರಾಜ್ ಮೊಹಮ್ಮದ್ ಹನೀಫ್ ಚೂಡಿಗಾರ್ ಎಂಬ ಆಸಾಮಿ ತಲೆಮರೆಸಿಕೊಂಡಿರುವುದರಿಂದ (ಅಥವಾ ಸದರಿ ವಾರಂಟ್ ಸ್ವೀಕರಿಸುವಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ತನ್ನನ್ನು ತಾನು ತಲೆಮರೆಸಿಕೊಂಡಿರುವ ಕಾರಣದಿಂದ) ಈ ಸಾರ್ವಜನಿಕ ಘೋಷಣೆ ಹೊರಡಿಸಲಾಗಿದೆ.

ಈ ಘೋಷಣೆಯ ಮೂಲಕ ತಿಳಿಸುವುದು ಏನೆಂದರೆ, 138 ಎನ್‌ಐ ಆಕ್ಟ್, ಪಿ.ಎಸ್.ನಾರ್ಥ್ ರೋಹಿಣಿ, ದೆಹಲಿ ಠಾಣೆಯಲ್ಲಿ ಎಫ್‌ಐಆರ್ ಸಂ. 2486/19 ರಲ್ಲಿ ಆರೋಪಿಯಾಗಿರುವ ಮೆ. ಭರತ್ ಫುಟ್‌ವೇರ್'ನ ಮಾಲೀಕರಾದ ಸಿರಾಜ್ ಮೊಹಮ್ಮದ್ ಹನೀಫ್ ಚೂಡಿಗಾರ್ ಇವರು 27.11.2024 ರೊಳಗೆ ಸದರಿ ನ್ಯಾಯಾಲಯದ ಎದುರು ಹಾಜರಾಗುವುದು ಅತ್ಯಗತ್ಯವೆಂದು ತಿಳಿಸಲಾಗುತ್ತಿದೆ.

ಆದೇಶದ ಮೇರೆಗೆ
ಶ್ರೀ. ವಿಪ್ಲಾ ಅಗ್ರವಾಲ್
DP/10519/RD/2024 (Court Matter) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಎನ್‌ಐಎ್ಸ್ಟ್), ಕೊಠಡಿ ಸಂ. 107, 1ನೇ ಮಹಡಿ, ರೋಹಿಣಿ ಕೋರ್ಟ್, ದೆಹಲಿ, ನವದೆಹಲಿ.

ಕಾಂಡಕೋಶ ವಿಜ್ಞಾನ ಮತ್ತು ಪುನರುತ್ಪಾದಕ ಔಷಧಿ (ಐಬಿಆರ್‌ಐಸಿ–ಇನ್‌ಸ್ಟೆಮ್)

(ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ, ಜೈವಿಕ ತಂತ್ರಜ್ಞಾನ ಇಲಾಖೆಯ ಜೈವಿಕ ತಂತ್ರಜ್ಞಾನ ಮತ್ತು ಆವಿಷ್ಕಾರ ಪರಿಷತ್ ಅಡಿಯಲ್ಲಿನ ಒಂದು ಎಐ)
ಜಿಕೆವಿಕೆ ಅಂಚೆ, ಬಳ್ಳಾರಿ ರಸ್ತೆ, ಬೆಂಗಳೂರು–560065.
ಫೋನ್: 080–61948217 (www.instem.res.in)

ಜಾಹೀರಾತು ಸಂ. ಇನ್‌ಸ್ಟೆಮ್/02/2024

ಕಾಂಡಕೋಶ ವಿಜ್ಞಾನ ಮತ್ತು ಪುನರುತ್ಪಾದಕ ಔಷಧಿ (ಐಬಿಆರ್‌ಐಸಿ–ಇನ್‌ಸ್ಟೆಮ್) ಇವರಿಂದ, ಕೆಳಕಂಡ ಆಡಳಿತಾತ್ಮಕ ವಿಭಾಗದ ಹುದ್ದೆಗಳಿಗೆ ಡೆಪ್ಯುಟೇಶನ್/ ನೇರ ನೇಮಕಾತಿ ಆಧಾರದಲ್ಲಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಸದರಿ ಹುದ್ದೆಗಳಿಗೆ ಕೇಂದ್ರಿಯ ಸ್ವಾಯುತ್ತ ಸಂಸ್ಥೆಯಲ್ಲಿ ಬೆಂಗಳೂರಿನಲ್ಲಿ ನಿಯೋಜಿತ ಉದ್ಯೋಗಿಗಳಿಗೆ ಅನ್ವಯಿಕ ಎಲ್ಲಾ ಅರ್ಹ ಭತ್ಯೆಗಳು ಲಭ್ಯವಿರುತ್ತವೆ.

ಕ್ರ. ಸಂ.	ಹುದ್ದೆ ಸಂಕೇತ	ಹುದ್ದೆಯ ಹೆಸರು	ನೇಮಕಾತಿ ವಿಧಾನ	ಪೇ ಮ್ಯಾಟ್ರಿಕ್ಸ್ ಲೆವೆಲ್ (7ನೇ ಸಿಪಿಸಿ ಪ್ರಕಾರ)	ಪ್ರವರ್ಗ: ಯುಆರ್	ಒಬಿಸಿ	ಎಸ್‌ಸಿ	ಎಸ್‌ಟಿ	ಒಟ್ಟು
1	04/24	ಅಡ್ಮಿನಿಸ್ಟ್ರೇಟಿವ್ ಆಫೀಸರ್	ಡೆಪ್ಯುಟೇಶನ್/ ಅಬ್ಸಾರ್ಪ್ಷನ್	ಎಲ್–10	1	–	–	–	1
2	05/24	ಕ್ಲರ್ಕ್	ನೇರ	ಎಲ್–3	1	1	1	–	3
								ಒಟ್ಟು	4

ಸಂಪೂರ್ಣ ಜಾಹೀರಾತಿಗಾಗಿ, ಅರ್ಜಿ ಸಲ್ಲಿಸುವ ವಿಧಾನ, ಇತರೆ ಷರತ್ತು ಮತ್ತು ಯಾವುದೇ ಅನುಕ್ರಮ ಪರಿಷ್ಕರಣೆ / ತಿದ್ದುಪಡಿ ವಿವರಗಳಿಗಾಗಿ ದಯವಿಟ್ಟು ಭೇಟಿ ಕೊಡಿ https://www.instem.res.in/jobportal/ ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 10.09.2024

CBC 36304/11/0003/2425 ನಿರ್ದೇಶಕರು, ಐಬಿಆರ್‌ಐಸಿ–ಇನ್‌ಸ್ಟೆಮ್

ADVERTISEMENT

1. **Applications are invited from war widows/ widows of defence personnel killed while on duty, disabled soldiers/ ex servicemen and spouses/ widows of ex- servicemen for running the following SI Side shops at Air Force Station, Jalahalli (East and West) for period of 01 year initially.**
2. **Applications are invited from civilians also (yearly contract). However, category mentioned in Para 1 above will be given priority over Para 2 category.**
3. Applications are invited from SI Shops as listed:

Sl. No.	Name of the Shop	Location	Sl. No.	Name of the Shop	Location
EAST AREA					
1	General Store	ETI	12	Book stall	Akshaya complex
2	Barber Shop	ETI	13	Meat shop	Akshaya complex
3	Fruit shop	ETI	14	Cloth shop	Akshaya complex
4	Fruit shop	E & ITI	15	Electrical & Electronic repair shop	Akshaya complex
5	General Store	E&ITI	16	Dhobi shop	Akshaya complex
6	Supper bar	E&ITI	17	Refreshment shop	Akshaya complex
7	Sweet shop	E&ITI	18	Provision shop	7th Camp
8	Dry cleaning shop	E&ITI	19	Bakery	Krishna Audt
9	Barber shop	E&ITI	20	Vegetable shop	AFFWA (L)
10	Supper bar	16TS	21	Nursery	Akshaya complex II
11	Mobile & watch shop	Akshaya complex			
WEST AREA					
1	Fruit shop	CTI	5	Newspaper / Magazine	Tripti Complex
2	Barber shop	CTI	6	Meat shop	Tripti Complex
3	Ladies boutique & tailor shop	Tripti Complex	7	Mochi shop	Tripti Complex
4	Tailor shop	Tripti Complex			

4. Further, considering the prime locality and scope for progression, interested parties are promoted to set up franchise like shops including safal vegetable shop, Hallimane vegetable shop, Karnataka state fisheries co-operative shop, Nandu's. 99 store, organics etc.
5. Application forms can be procured on payment of Rs 500/- (non refundable) from **14 Aug 2024 to 28 Aug 2024,** between 0900hrs to 1300hrs on all working days (except Saturdays & Sundays). Earnest money @ Rs 5,000/- per application must be deposited by applicant from **14 Aug 2024 to 28 Aug 2024** between 0900hrs to 1300hrs on all working days (except Saturdays & Sundays) Same can be collected from Service Institute office, Air force Station Jalahalli (East) Bangalore.
6. **Contracts will be awarded through Tender Process. Minimum bench marking rebates will be set by AFS jalahalli** Box will be placed at **main gate Air Force Station, Jalahalli (East), Bangalore-13** from **14 Aug 2024 to 28 Aug 2024 (1000hrs).** Application forms should be in sealed envelopes separate for each shop with the name of shop written on it. If applied for more than one shop, application form for each shop should have copies of required documents. A vendor will be allotted not more than two shops. All applicants are to drop the sealed application envelopes in the said box which will be sealed at 1000hrs on **29 Aug 2024,** and applications will be opened at 1100hrs on **29 Aug 2024,** by BOO in the presence of applicants. In case selected applicants do not take over the allotment shop within the stipulated time, the earnest money will be forfeited and contract will not be awarded.
7. Interested persons are to attach a photo copy of the below mentioned documents along with the application form and produce the' original ID card and original documents at the time of opening of applications for verification. Non adherence will result in disqualification of the applicant Applicants not present during the Tendering will be disqualified. The shops will be allotted based on the highest bidders for the rebates to be paid, in the Tender process, in presence of the applicants.

(I) Discharge book (ii) PPO No. (iii) Adhaar card
(iv) Education certificate (v)Bank pass book (vi) TIN/ GST /PAN No.
(vii) FSSAI certificate (Supper bar, Sweet shop an restaurants)

PERSON TO CONTACT:
Service Institute office
Air Force Station Jalahalli (East)
Bangalore 13
Tele : 28399009/41187235

SOBHA
PASSION AT WORK

SOBHA LIMITED

CIN : L45201KA1995PLC018475
Regd. Office: 'SOBHA' Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103
Ph: +91-80-49320000, Email: investors@sobha.com
www.sobha.com

POSTAL BALLOT NOTICE AND REMOTE E-VOTING INFORMATION

Shareholders of the Company are hereby informed that pursuant to the Sections 108, 110 and other applicable provisions, if any, of the Companies Act, 2013 read with Rule 20 and 22 of the Companies (Management and Administration) Rules, 2014 (including any statutory modification(s) and / or re-enactment(s) thereof for the time being in force), guidelines prescribed by the Ministry of Corporate Affairs (**"MCA"**) vide various Circulars and notifications issued by the MCA (**'the MCA Circulars'**), the secretarial standards issued by the institute of company secretaries of India on General Meetings and Regulation 44 of the Securities and Exchange Board of India (Listing Obligations and Disclosure Requirements) Regulations, 2015 and any other applicable laws, the Company has dispatched the Postal Ballot Notice on Tuesday, August 13, 2024 through electronic mode only, to those shareholders whose names are recorded in the Register of Members and / or Register of Beneficial Owners maintained by the Depositories as on Friday, August 09, 2024, for seeking approval of the shareholders of the Company through Postal Ballot by way of remote e-Voting, for the following matters:

S.No.	ITEMS	TYPE OF RESOLUTION(S)
1.	Appointment of **Mr. Subba Rao Amarthaluru,** (DIN 00082313) as an Independent Director of the Company.	Special Resolution
2.	Appointment of **Mr. Gopal B Hosur** (DIN: 08884883) as an Independent Director of the Company.	Special Resolution

The postal ballot notice is available on the website of the Company, www.sobha.com and the stock exchanges where the equity shares of the Company are listed i.e. BSE Limited ("BSE"), www.bseindia.com and National Stock Exchange of India Limited ("NSE") www.nseindia.com

The Company has engaged the services of Link Intime India Private Limited (**"Link Intime"**), to provide remote e-Voting facility for Postal Ballot in order to enable the members to cast their vote electronically. The detailed procedure for e-Voting is enumerated along with the Postal Ballot Notice. The remote e-Voting period will commence **from 9.00 a.m. (IST) on Wednesday, 14 August, 2024 and ends at 5.00 p.m. (IST) on Thursday, 12 September, 2024.** The e-Voting module shall be disabled by Link Intime, thereafter.

The communication of assent and dissent of the members would take place only through the remote e-Voting system. The shareholders would have the option to vote only through remote e-Voting and voting through physical ballot papers will not be provided. Only those members whose names are recorded in the Registers of Members of the Company or in the Registers of Beneficial Owners maintained by the Depositories as on the cut-off date i.e., Friday, August 09, 2024 will be entitled to cast their votes as assent or dissent by remote e-Voting. Once the vote on the resolution is cast by the Member, he/she shall not be allowed to change it subsequently.

In case of any queries, you may refer the Frequently Asked Questions ('FAQs') and InstaVote e-Voting manual available at https://instavote.linkintime.co.in, under Help section or send an email to enotices@linkintime.co.in or contact on: Tel: 022 –4918 6000 or write an email to Shri Bijan Kumar Dash, Secretary and Compliance officer at investors@sobha.com

The Board of Directors of the Company appointed Mr. Nagendra D Rao (Membership No. 5553, COP No. 7731) Practising Company Secretary as Scrutinizer (the "Scrutinizer") for conducting the Postal Ballot through remote e-Voting process in a fair and transparent manner.

The result of the postal ballot will be announced on or before September 14, 2024. The said results along with the Scrutinizer's Report would be intimated to BSE and NSE and will be uploaded on the Company's website, www.sobha.com

For Sobha Limited

Sd/-
Bijan Kumar Dash
Company Secretary & Compliance Officer

Bengaluru, India
Aug 13, 2024

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಯಾರು ಗೌರವದಿಂದ ನಡೆದುಕೊಳ್ಳುತ್ತಾರೋ ಅವರಿಗೆ ಗೌರವ ಸಿಗುತ್ತದೆ.

-ರೂಮಿ

ವೈದ್ಯ ಸಿಬ್ಬಂದಿಯ ಸುರಕ್ಷತೆಗೆ ತುರ್ತು ಕ್ರಮ ಅನಿವಾರ್ಯ

ಕೋಲ್ಕತ್ತದ ಆರ್.ಜಿ.ಕರ್ ಆಸ್ಪತ್ರೆಯ ಟ್ರೈನಿ ವೈದ್ಯೆಯ ಮೇಲಿನ ಅತ್ಯಾಚಾರ ಮತ್ತು ಅವರ ಹತ್ಯೆಯು ಈ ವೃತ್ತಿಯಲ್ಲಿ ಇರುವವರು ಕೆಲಸದ ಸ್ಥಳದಲ್ಲಿ ಎದುರಿಸುತ್ತಿರುವ ಗಂಭೀರ ಅಪಾಯಗಳ ಕುರಿತು ಗಮನ ಹರಿಸುವಂತೆ ಮಾಡಿದೆ. ದೇಶದಾದ್ಯಂತ ಹಲವು ಆಸ್ಪತ್ರೆಗಳ ವೈದ್ಯರು ಘಟನೆಯನ್ನು ಖಂಡಿಸಿ ಮುಷ್ಕರ ನಡೆಸಿದ್ದಾರೆ. ಆಸ್ಪತ್ರೆಯಲ್ಲಿ ಕೆಲಸ ಮಾಡುವ ಹೊತ್ತಿನಲ್ಲಿ ವೈದ್ಯರು ಮತ್ತು ಇತರ ವೈದ್ಯಕೀಯ ಸಿಬ್ಬಂದಿಗೆ ಹೆಚ್ಚಿನ ಭದ್ರತೆ ಬೇಕು ಎಂಬ ಬೇಡಿಕೆಯನ್ನು ಹಲವು ನಗರಗಳ ವೈದ್ಯರು ಮುಂದಿಟ್ಟಿದ್ದಾರೆ. ತಮಗೆ ಕೆಲಸ ಮಾಡಲು ಸುರಕ್ಷಿತ ವಾತಾವರಣ ಇರಬೇಕು ಎಂದು ವೈದ್ಯರು ಮಾಡುತ್ತಿರುವ ಆಗ್ರಹ ಸಮರ್ಪಕವಾಗಿದೆ. ವೈದ್ಯರು ಕೆಲಸದ ಸ್ಥಳದಲ್ಲಿ ಹೆಚ್ಚಿನ ಅಪಾಯ ಎದುರಿಸುತ್ತಿದ್ದಾರೆ. ರೋಗಿಗಳು ಮತ್ತು ಅವರ ಸಂಬಂಧಿಕರು ವೈದ್ಯರ ಮೇಲೆ ಹಲ್ಲೆ ನಡೆಸಿದ ಹಲವು ಪ್ರಕರಣಗಳು ಈ ಹಿಂದೆ ನಡೆದಿವೆ. ಇಂತಹವು ಆಗಾಗ ನಡೆಯುತ್ತಲೇ ಇರುತ್ತವೆ. ಈಗ, ಅದರ ಜೊತೆ ಅತ್ಯಾಚಾರದಂತಹ ಅಪಾಯವೂ ಇದೆ ಎಂಬಂತಾಗಿದೆ. ಸ್ನಾತಕೋತ್ತರ ಟ್ರೈನಿಯಾಗಿದ್ದ ವೈದ್ಯೆಯ ಹತ್ಯೆ ಆರೋಪಿಯೊಬ್ಬನನ್ನು ಬಂಧಿಸಲಾಗಿದೆ. ಪ್ರಕರಣದ ತನಿಖೆಯನ್ನು ಸಿಬಿಐಗೆ ತಕ್ಷಣವೇ ವರ್ಗಾಯಿಸಬೇಕು ಎಂದು ಕಲ್ಕತ್ತಾ ಹೈಕೋರ್ಟ್ ಆದೇಶ ನೀಡಿದೆ. ಜೊತೆಗೆ, ಆಸ್ಪತ್ರೆಯ ಆಡಳಿತ ಮಂಡಳಿಯು ಘಟನೆಗೆ ಸ್ಪಂದಿಸಿದ ರೀತಿಯನ್ನು ತರಾಟೆಗೆ ತೆಗೆದುಕೊಂಡಿದೆ. ವೈದ್ಯ ಕಾಲೇಜಿನ ಪ್ರಾಂಶುಪಾಲರ ನಡವಳಿಕೆಯು ಸಮರ್ಪಕವಾಗಿರಲಿಲ್ಲ ಎಂದು ಹೈಕೋರ್ಟ್ ಹೇಳಿದೆ.



ವೈದ್ಯರ ಮೇಲಿನ ಹಲ್ಲೆ ಪ್ರಕರಣಗಳು ಮತ್ತು ವೈದ್ಯರಲ್ಲಿ ಅಭದ್ರತೆಯ ಭಾವನೆ ಹೆಚ್ಚಾಗುವುದಕ್ಕೆ ಇರುವ ಕಾರಣಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕಿದೆ

ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ಖಂಡಿಸಿ ವೈದ್ಯರು ಈ ಹಿಂದೆಯೂ ಪ್ರತಿಭಟನೆ ಮಾಡಿದ್ದರು. ಹಿಂಸೆ ಕೊನೆಯಾಗಬೇಕು ಮತ್ತು ಅದನ್ನು ತಪ್ಪಿಸಲು ಇರುವ ಕ್ರಮಗಳು ಇನ್ನಷ್ಟು ಕಟ್ಟುನಿಟ್ಟಾಗಬೇಕು ಎಂದು ಆಗ್ರಹಿಸಿ ದೆಹಲಿಯಲ್ಲಿ ನವೆಂಬರ್‌ನಲ್ಲಿ ‘ರಾಜಘಾಟ್ ಚಲೋ’ವನ್ನು ವೈದ್ಯರು ನಡೆಸಿದ್ದರು. ದೌರ್ಜನ್ಯಕ್ಕೆ ಸಂಬಂಧಿಸಿ ಪ್ರತಿ ತಿಂಗಳು ಕನಿಷ್ಠ ಒಂದಾದರೂ ಪ್ರತಿಭಟನೆಯನ್ನು ವೈದ್ಯರು ನಡೆಸುತ್ತಲೇ ಇದ್ದಾರೆ. ವೈದ್ಯರ ಮೇಲೆ ಹಿಂಸಾಚಾರ ಸಾಮಾನ್ಯವಾಗಿದೆ ಎಂಬುದನ್ನು ಈ ಪ್ರತಿಭಟನೆಗಳು ಸೂಚಿಸುತ್ತವೆ. ಜೊತೆಗೆ, ಹಿಂಸೆ ತಡೆಯಲು ಈಗ ಇರುವ ವಿಧಾನಗಳು ಸಾಲುವುದಿಲ್ಲ ಎಂಬುದನ್ನೂ ಈ ಪ್ರತಿಭಟನೆಗಳು ತೋರಿಸುತ್ತವೆ. ಹಲವು ರಾಜ್ಯಗಳಲ್ಲಿ ಕಾಯ್ದೆ ತಂದು, ಆರೋಗ್ಯ ರಕ್ಷಣೆ ಸಿಬ್ಬಂದಿ ಮೇಲೆ ನಡೆಸುವ ದೌರ್ಜನ್ಯವನ್ನು ಜಾಮೀನುರಹಿತ ಅಪರಾಧ ಎಂದು ಪರಿಗಣಿಸಲಾಗಿದೆ. ದಂಡ ಮತ್ತು ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಹಾಗಿದ್ದರೂ ಈ ಕಾಯ್ದೆಗಳ ಅಡಿಯಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದ್ದು ಬಹಳ ಕಡಿಮೆ. ಆರೋಗ್ಯ ಕ್ಷೇತ್ರದ ಸಿಬ್ಬಂದಿ ಮೇಲೆ ಹಲ್ಲೆ ನಡೆಯುವುದನ್ನು ತಡೆಯುವುದಕ್ಕಾಗಿ ಕೇಂದ್ರ ಸರ್ಕಾರವೇ ಕಾಯ್ದೆ ರೂಪಿಸಬೇಕು ಎಂದು ಆಗ್ರಹಿಸಿ ಭಾರತೀಯ ವೈದ್ಯಕೀಯ ಸಂಘವು (ಐಎಂಎ) ವೈದ್ಯರ ಸುರಕ್ಷತೆಯ ಅಭಿಯಾನವನ್ನು ಕಳೆದ ತಿಂಗಳು ನಡೆಸಿತ್ತು. ‘ನಮ್ಮ ಆಸ್ಪತ್ರೆಗಳಲ್ಲಿ ಇರುವ ವಾತಾವರಣವು ಭೀತಿ ಮತ್ತು ಅಪನಂಬಿಕೆಯಿಂದ ತುಂಬಿದೆ’ ಎಂದು ಐಎಂಎ ಹೇಳಿತ್ತು. ಕೆಲಸಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ವೈದ್ಯರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸುವುದನ್ನು ಐಎಂಎ ವಿರೋಧಿಸಿದೆ.

ವೈದ್ಯರ ಮೇಲಿನ ಹಲ್ಲೆ ಪ್ರಕರಣಗಳು ಹೆಚ್ಚಾಗಲು ಮತ್ತು ವೈದ್ಯರಲ್ಲಿ ಅಭದ್ರತೆಯ ಭಾವನೆ ಹೆಚ್ಚಲು ಹಲವು ಕಾರಣಗಳು ಇವೆ. ಆರೋಗ್ಯ ರಕ್ಷಣೆ ಕ್ಷೇತ್ರದಲ್ಲಿ ಸಿಬ್ಬಂದಿಯ ಕೊರತೆ ಸದಾ ಇರುತ್ತದೆ; ಬೇಕಾದಷ್ಟು ಸೌಲಭ್ಯಗಳು ಇರುವುದಿಲ್ಲ; ರೋಗಿಗಳ ಸಂಖ್ಯೆಯು ನಿರಂತರವಾಗಿ ಏರುತ್ತಲೇ ಇದೆ. ವೈದ್ಯರು ಕೆಲವೊಮ್ಮೆ ರಿಸ್ಕ್ ತೆಗೆದುಕೊಳ್ಳಲು ಹಿಂಜರಿಯುವುದುಂಟು; ಬೆದರಿಕೆ ಮತ್ತು ಕಿರುಕುಳದ ಭೀತಿಯಿಂದಾಗಿ ಅವರು ಹೀಗೆ ಮಾಡಬೇಕಾಗುತ್ತದೆ ಎಂದು ಐಎಂಎ ಹೇಳಿದೆ. ಚಿಕಿತ್ಸೆಯಲ್ಲಿ ಲೋಪಗಳು ಆಗಿರಬಹುದು ಎಂಬ ಭಾವನೆಯು ರೋಗಿಗಳು ಮತ್ತು ಅವರ ಸಂಬಂಧಿಕರು ಕೆರಳುವಂತೆ ಮಾಡುತ್ತದೆ. ಕಾಯ್ದೆಗಳ ಜಾರಿಯನ್ನು ಇನ್ನಷ್ಟು ಬಲಪಡಿಸಬೇಕಿದೆ. ಆದರೆ, ಆಸ್ಪತ್ರೆಗಳಲ್ಲಿನ ಹಿಂಸೆಯನ್ನು ತಡೆಯಲು ಅದಷ್ಟೇ ಸಾಕಾಗುವುದಿಲ್ಲ. ಕೋಲ್ಕತ್ತದಲ್ಲಿ ನಡೆದಿರುವ ಘಟನೆಯು ಚಿಕಿತ್ಸೆ ಅಥವಾ ನಡವಳಿಕೆಗೆ ಸಂಬಂಧಿಸಿದ್ದಲ್ಲ. ವೈದ್ಯರು ಮತ್ತು ಇತರ ವೈದ್ಯಕೀಯ ಸಿಬ್ಬಂದಿ ಅದರಲ್ಲೂ ಮುಖ್ಯವಾಗಿ ಮಹಿಳೆಯರ ಸುರಕ್ಷತೆಗೆ ಉಪಕ್ರಮಗಳನ್ನು ಹೆಚ್ಚಿಸಬೇಕಿದೆ ಎಂಬುದನ್ನು ಈ ಘಟನೆಯು ಸೂಚಿಸುತ್ತದೆ. ವೈದ್ಯಕೀಯ ಸಿಬ್ಬಂದಿಯು ಸುರಕ್ಷಿತ ವಾತಾವರಣದಲ್ಲಿ ಕೆಲಸ ಮಾಡುವುದಕ್ಕೆ ಸರ್ಕಾರ, ಆಸ್ಪತ್ರೆಯ ಆಡಳಿತ ಮಂಡಳಿ ಮತ್ತು ಸಮಾಜ ಒಟ್ಟಾಗಿ ಕೆಲಸ ಮಾಡಲೇಬೇಕಾದ ಅನಿವಾರ್ಯ ಇದೆ.


ದಿನದ ಟ್ವೀಟ್

ಅನುವಾದ ಲಭ್ಯವಾಗಲಿ

...ತಮ್ಮ ಮಕ್ಕಳ ಭವಿಷ್ಯವನ್ನು ಬೆಳಗುವುದು ಇಂಗ್ಲಿಷ್ ಭಾಷೆ ಮಾತ್ರ ಎಂದು ಜನ ಭಾವಿಸಿದ್ದಾರೆ. ಭಾರತಕ್ಕೆ ಎಲ್ಲ ಸ್ಥಳೀಯ ಭಾಷೆಗಳ ಎಐ (ಕೃತಕ ಬುದ್ಧಿಮತ್ತೆ) ಮಾದರಿಯ ಅಗತ್ಯವಿದೆ. ಈ ಎಲ್ಲ ಭಾಷೆಗಳ ಅನುವಾದವು ದೇಶದ ಪ್ರತಿಯೊಬ್ಬರಿಗೂ ಬೆರಳ ತುದಿಯಲ್ಲಿ ಸಿಗುವಂತೆ ಆಗಬೇಕು.

ಚಂದನ್ ಎಸ್.

ಕಿಡಿನುಡಿ



30 ಗಂಟೆಗಳಿಂದ ನಾನು ನಿದ್ದೆ ಮಾಡಿಲ್ಲ ಮತ್ತು ವೃತ್ತಿ ಹಾಗೂ ವೈಯಕ್ತಿಕ ಬದುಕನ್ನು ಹೇಗೆ ಸರಿದೂಗಿಸುವುದು ಎಂಬುದೇ ನನಗೆ ತಿಳಿಯುತ್ತಿಲ್ಲ. ಕಾಲಮಿತಿಯಲ್ಲಿ ಮುಗಿಸಬೇಕಾದ ಎಷ್ಟೊಂದು ಕೆಲಸಗಳು ಇನ್ನೂ ಬಾಕಿ ಉಳಿದಿವೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ಬಳಲಿದ್ದೇನೆ. ವಿರಾಮವನ್ನೇ ತೆಗೆದುಕೊಳ್ಳದೆ ವಾರಕ್ಕೆ 100 ಗಂಟೆಗಳ ಕಾಲ ಕೆಲಸ ಮಾಡುವ ಬಗ್ಗೆ ಮಾತನಾಡುವವರ ಮುಖಕ್ಕೆ ಗುದ್ದಬೇಕು ಅನ್ನಿಸುತ್ತಿದೆ.

ಅಂತರಾ ಚಕ್ರವರ್ತಿ

25 ವರ್ಷಗಳ ಹಿಂದೆ

ಶನಿವಾರ, 14-8-1999

● **ವಿದೇಶಿ ಮೂಲದ ಪ್ರಶ್ನೆಗೆ ಜನರಿಂದ ಉತ್ತರ: ಸೋನಿಯಾ ಗಾಂಧಿ**

ನವದೆಹಲಿ, ಆ. 13– ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಬಹುಮತ ಪಡೆದಾಗ ಪ್ರಧಾನ ಮಂತ್ರಿ ಅಭ್ಯರ್ಥಿಯನ್ನು ವಿಜಯಿಯಾದ ಲೋಕಸಭೆ ಸದಸ್ಯರು ಆಯ್ಕೆ ಮಾಡುವರು ಎನ್ನುವ ಮೂಲಕ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ನೇರ ಉತ್ತರ ನೀಡದೆ ನುಣುಚಿಕೊಂಡರು.

ತಾವು ವಿದೇಶಿ ಮೂಲದವರು ಎಂಬ ಕಾರಣಕ್ಕಾಗಿ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಪಕ್ಷವು ತಮ್ಮನ್ನು ಬಿಂಬಿಸುತ್ತಿಲ್ಲವೇ ಎಂಬ ಪ್ರಶ್ನೆಗೆ ಸೋನಿಯಾ ಗಾಂಧಿ, ಅದಕ್ಕೆ ತಮ್ಮ ಬಳಿ ಉತ್ತರವಿಲ್ಲ, ಈ ಪ್ರಶ್ನೆಗೆ ಭಾರತದ ಜನತೆ ಉತ್ತರ ನೀಡುತ್ತದೆ ಎಂದರು.

ವ್ಯಕ್ತಿಯ ಆಯ್ಕೆ ಪ್ರಶ್ನೆ ಈಗ ಮುಖ್ಯವಲ್ಲ. ಪಕ್ಷವು ಜನತೆಗೆ ನೀಡುವ ಆಶ್ವಾಸನೆಯ ಈಡೇರಿಕೆ ಮತ್ತು ಕಾರ್ಯಕ್ರಮಗಳ ಜಾರಿ ಮುಖ್ಯ ಎಂದು ಉತ್ತರಿಸಿದರು.

● **ಮುಂದುವರಿದ ಎನ್‌ಡಿಎ ಬಿಕ್ಕಟ್ಟು**

ನವದೆಹಲಿ, ಆ. 13– ಜನತಾದಳ (ಯು) ಜತೆ ಸ್ಥಾನ ಹೊಂದಾಣಿಕೆ ಕುರಿತಂತೆ ಬಿಜೆಪಿಯು ಒಪ್ಪಿದೆ ಎಂಬುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಹೇಳಿದ್ದರೆ, ಅದನ್ನು ಬಿಜೆಪಿಯು ಸ್ಪಷ್ಟವಾಗಿ ಅಲ್ಲಗಳೆಯುವ ಮೂಲಕ ಈ ವಿವಾದ ಮತ್ತೆ ಕಗ್ಗಂಟಾಗಿಯೇ ಮುಂದುವರಿದಿದೆ.

ಎರಡು ಪಕ್ಷಗಳ ಈ ವಿಭಿನ್ನ ನಿಲುವುಗಳಿಂದ ಮತ್ತಷ್ಟು ಗೊಂದಲ ಮುಂದುವರಿದಿದೆ. ಈ ಮಧ್ಯೆ ಅಭ್ಯರ್ಥಿಗಳ ಆಯ್ಕೆಗಾಗಿ, ನಾಳೆ ಕೊನೆಯ ಸುತ್ತಿನ ಚರ್ಚೆಗಾಗಿ ಸೇರುತ್ತಿರುವ ಬಿಜೆಪಿ ಕೇಂದ್ರ ಚುನಾವಣಾ ಸಮಿತಿಯ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬರುವುದು ಖಚಿತವಾಗಿದೆ. ಈ ಸಭೆಯಲ್ಲಿ ತಮ್ಮ ರಾಜ್ಯ ಘಟಕದ ನಿಲುವನ್ನು ಪುನರುಚ್ಚರಿಸುವುದಾಗಿ ಸಚಿವ ಅನಂತ ಕುಮಾರ್ ತಿಳಿಸಿದ್ದಾರೆ.

ಆದರೆ ಈ ಹಿನ್ನೆಲೆಯಲ್ಲಿ, ಕಳೆದ ಮೂರು ವಾರಗಳಿಂದ ನನೆಗುದಿಗೆ ಬಿದ್ದಿರುವ ಹೊಂದಾಣಿಕೆ ವಿವಾದದ ಕುರಿತಂತೆ ಬಿಜೆಪಿ ನಾಯಕರು ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಸಂಭವ ಇದೆ.

50 ವರ್ಷಗಳ ಹಿಂದೆ

ಬುಧವಾರ, 14-8-1974

● **ಅಸ್ಸಾಂನಲ್ಲಿ ಹಸಿವಿಗೆ ನೂರು ಮಂದಿ ಬಲಿ**

ಗೌಹಾಟಿ, ಆ. 13– ಈ ವರ್ಷ ಗೋಲ್ಪಾರ ಜಿಲ್ಲೆಯ ಧುಬ್ರಿ ಸಬ್ ಡಿವಿಜನ್ನಿನಲ್ಲಿ ಕನಿಷ್ಠಪಕ್ಷ ನೂರು ಮಂದಿ ಹೊಟ್ಟೆಗೆ ಅನ್ನವಿಲ್ಲದೆ ಉಪವಾಸದಿಂದ ಸತ್ತಿದ್ದಾರೆಂದು ಅಸ್ಸಾಂ ವಿಧಾನಸಭೆಯ ಪಕ್ಷೇತರ ಸದಸ್ಯ ಗೌಸುದ್ದೀನ್ ಅಹ್ಮದ್ ತಿಳಿಸಿದ್ದಾರೆ.

ಈ ಪ್ರದೇಶವನ್ನು ತತ್‌ಕ್ಷಣ ಕ್ಷಾಮಪೀಡಿತ ಪ್ರದೇಶವೆಂದು ಘೋಷಿಸಿ ಯುದ್ಧ ಸಿದ್ಧತೆಯೋಪಾದಿಯಲ್ಲಿ ಪರಿಹಾರ ಕಾರ್ಯ ಕೈಗೊಳ್ಳುವಂತೆ ಅವರು ಮುಖ್ಯಮಂತ್ರಿ ಎಸ್.ಸಿ. ಸಿನ್ಹಾ ಅವರಿಗೆ ಇಂದು ಸಲ್ಲಿಸಿದ ಮನವಿ ಪತ್ರದಲ್ಲಿ ಆಗ್ರಹಪಡಿಸಿದ್ದಾರೆ.

● **ಮದುವೆ, ಚುನಾವಣೆ ಪ್ರಚಾರದಲ್ಲಿ ಡೀಸೆಲ್ ಬಳಕೆಗೆ ನಿರ್ಬಂಧ?**

ನವದೆಹಲಿ, ಆ. 13– ಮದುವೆ ಸಮಾರಂಭ, ಚುನಾವಣೆ ಪ್ರಚಾರ ಮುಂತಾದ ಅನವಶ್ಯ ಸಂದರ್ಭಗಳಲ್ಲಿ ವಿದ್ಯುತ್ ಉತ್ಪಾದನೆಗಾಗಿ ಡೀಸೆಲ್ ಎಣ್ಣೆ ಬಳಸುವುದನ್ನು ನಿರ್ಬಂಧಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಆಲೋಚಿಸುತ್ತಿರುವುದಾಗಿ ಲೋಕಸಭೆಯಲ್ಲಿ ಇಂದು ಪ್ರಶ್ನೋತ್ತರ ಕಾಲದಲ್ಲಿ ಪೆಟ್ರೋಲಿಯಂ ಮತ್ತು ರಾಸಾಯನಿಕ ವಸ್ತುಗಳ ಖಾತೆ ಸಚಿವ ಡಿ.ಕೆ. ಬರೂವಾ ಅವರು ತಿಳಿಸಿದರು.

ಸ್ವಾತಂತ್ರ್ಯವು ಪ್ರತಿಯೊಬ್ಬರ ವೈಯಕ್ತಿಕ ಅನುಭವ ಆಗಬೇಕಾದ ಅಗತ್ಯ ಇದೆ

ಸ್ವಾತಂತ್ರ್ಯ: ಯಾವುದು? ಹೇಗೆ?



ವಿಶ್ಲೇಷಣೆ

ಜ್ಯೋತಿ

ಸ್ವಾತಂತ್ರ್ಯ ದಿನಾಚರಣೆಯ ಈ ಸಂದರ್ಭದಲ್ಲಿ, ‘ಸ್ವಾತಂತ್ರ್ಯ’ದ ಕುರಿತಂತೆ ಜನರಿಗೆ, ವಿಶೇಷವಾಗಿ ಯುವಜನರಿಗೆ ಎಂತಹ ಕಲ್ಪನೆಯಿದೆ ಎನ್ನುವುದರ ಬಗ್ಗೆ ಚರ್ಚಿಸಬೇಕಾದ ಅಗತ್ಯವಿದೆ ಎನಿಸುತ್ತದೆ. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಬ್ರಿಟಿಷರಿಂದ ರಾಜಕೀಯ ಸ್ವಾತಂತ್ರ್ಯ ಪಡೆಯುವುದು ದೇಶಭಕ್ತರ ಮುಖ್ಯ ಧ್ಯೇಯವಾಗಿದ್ದುದು ಸಹಜವಾಗಿತ್ತು. ಇಂದು ಸ್ವಾತಂತ್ರ್ಯ ದಿನಾಚರಣೆಯನ್ನು, ಗತಿಸಿದ ಆ ದೇಶಭಕ್ತರ ಸ್ಮರಣೆ ಮಾಡುತ್ತಾ ಸಾಂಕೇತಿಕವಾಗಿ ಆಚರಿಸಿದರಷ್ಟೇ ಸಾಕೆ ಅಥವಾ ವರ್ತಮಾನದ ಜಗತ್ತಿಗೆ ಅನ್ವಯವಾಗುವಂತೆ ಸ್ವಾತಂತ್ರ್ಯದ ಬಗ್ಗೆ ಹೊಸ ವ್ಯಾಖ್ಯಾನಗಳನ್ನು ಕಂಡುಕೊಳ್ಳಬೇಕೆ?

ಸ್ವಾತಂತ್ರ್ಯವನ್ನು ತಮ್ಮ ತಮ್ಮ ವೈಯಕ್ತಿಕ ನೆಲೆಯಲ್ಲಿಯೇ ಅರ್ಥ ಮಾಡಿಕೊಳ್ಳುವುದು ಈಗ ಸಾಮಾನ್ಯವಾಗುತ್ತಿದೆ. ಅಂದರೆ, ಸ್ವಾತಂತ್ರ್ಯವು ವೈಯಕ್ತಿಕ ಪ್ರಶ್ನೆಯಾದಾಗ, ಅದೊಂದು ಹಕ್ಕು ಎನ್ನುವುದು ಹೆಚ್ಚು ಪ್ರಸ್ತುತವಾಗಿ, ಜವಾಬ್ದಾರಿ ಎನ್ನುವ ಅಂಶ ಅರ್ಥ ಕಳೆದುಕೊಳ್ಳುತ್ತದೆ. ಯಾರಿಗೂ ಕ್ಯಾರೇ ಎನ್ನದೆ ಬೇಜವಾಬ್ದಾರಿಯಿಂದ ಬದುಕುವುದು, ಮೋಜು ಮಸ್ತಿಯಲ್ಲಿ ಕಾಲಹರಣ ಮಾಡುವುದು, ಹೆಚ್ಚು ಶ್ರಮವಿಲ್ಲದೆ ಸುಲಭ ಮಾರ್ಗಗಳ ಮೂಲಕ ಹಣ, ಪ್ರಸಿದ್ಧಿ ಗಳಿಸುವುದೇ ಈಗ ವ್ಯಕ್ತಿ ಸ್ವಾತಂತ್ರ್ಯ ಎನಿಸಿಕೊಂಡಿದೆ. ಹಾಗಾದರೆ, ನಿಜವಾದ ಸ್ವಾತಂತ್ರ್ಯ ಏನೆಂದು ಮಕ್ಕಳಿಗೆ ತಿಳಿಹೇಳುವುದು ಹೇಗೆ?

ಪಾಶ್ಚಿಮಾತ್ಯ ಸಂಸ್ಕೃತಿಗಳಲ್ಲಿ, ಮಕ್ಕಳು ತಪ್ಪು ಮಾಡಿದಾಗ ಹೆತ್ತವರಿಗೆ ದಂಡಿಸುವ ಅಧಿಕಾರವಿಲ್ಲ. ನಮ್ಮ ಸಂಸ್ಕೃತಿಯಲ್ಲಿ ಹೆತ್ತವರ ಎದುರು ನಿಂತು ವಾದಿಸಿದರೆ ಅದು ಅಗೌರವ ಎನಿಸುತ್ತದೆ. ಇವುಗಳ ನಡುವೆ, ಮಕ್ಕಳ ಸ್ವಾತಂತ್ರ್ಯವನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಇಂದು, ಕೆಲವು ದೇಶಗಳಲ್ಲಿ ಎಳೆಯ ವಯಸ್ಸಿನ ಮಕ್ಕಳು ಡ್ರಗ್ಸ್ ಜಾಲದಲ್ಲಿ, ಗನ್ ಮಾಫಿಯಾದಲ್ಲಿ, ಸುಲಭವಾಗಿ ಹಣ ಗಳಿಸುವ ದಂಧೆಗಳಲ್ಲಿ ಒತ್ತಾಯಪೂರ್ವಕವಾಗಿ ಅಥವಾ ಸ್ವಪ್ರೇರಣೆಯಿಂದ ತೊಡಗಿರುವುದನ್ನು ನಾವು ಕಾಣುತ್ತೇವೆ. ನಮ್ಮ ದೇಶದಲ್ಲಿಯೂ ಮಕ್ಕಳು ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು ಸ್ವೇಚ್ಛಾಚಾರದಿಂದ ವರ್ತಿಸುವ ಪ್ರವೃತ್ತಿ ಹೆಚ್ಚುತ್ತಿದೆ.

ಅತಿಯಾದ ಕಟ್ಟುಪಾಡುಗಳಿಂದ ಬೆಳೆಸುತ್ತಾ ಮಕ್ಕಳ ಮೇಲೆ ನಮ್ಮ ಆಸೆ ಆಕಾಂಕ್ಷೆಗಳನ್ನು ಹೇರುವುದು ಒಂದು ರೀತಿಯ ಸ್ವಾತಂತ್ರ್ಯಹರಣ ಎನಿಸಿದರೆ, ಮಕ್ಕಳನ್ನು ಸಂಪೂರ್ಣವಾಗಿ ಅವರಿಚ್ಛೆಯಂತೆ ಜವಾಬ್ದಾರಿಯಿಲ್ಲದೆ ಬದುಕಲು ಬಿಡುವುದು ಕೂಡ ಅಷ್ಟೇ ಅಪಾಯಕಾರಿ ಎನ್ನಬಹುದು. ಆದ್ದರಿಂದ, ನಾವು ನಮ್ಮ ಮಕ್ಕಳಿಗೆ ಸ್ವಾತಂತ್ರ್ಯದ ಉನ್ನತ ಮಾದರಿಯಾಗಿ ಬಾಳುವುದು ಹೆಚ್ಚು ಉಪಯುಕ್ತ. ತೇಜಸ್ವಿ ಅವರಿಗೆ ಕುವೆಂಪು ಇದ್ದಂತೆ.

ಇಂದಿನ ಹೆತ್ತವರು ತಮ್ಮ ಮಕ್ಕಳಿಗೆ ವೈಯಕ್ತಿಕ ಸ್ವಾತಂತ್ರ್ಯದ ಕುರಿತು ಸ್ಪಷ್ಟತೆ ಕೊಡುವಲ್ಲಿ ಸೋತಿದ್ದಾರೆ ಎಂಬುದಕ್ಕೆ ನಿದರ್ಶನಗಳು ಹೇರಳವಾಗಿ ಸಿಗುತ್ತವೆ. ಯಾಕೆಂದರೆ, ನಾವು ಈ ಪ್ರಪಂಚಕ್ಕೆ ಕಣ್ಣು ತೆರೆಯುತ್ತಿದ್ದಂತೆಯೇ ಪರಿಸರ, ಮನೆ, ಜಾತಿ, ಧರ್ಮ, ಭಾಷೆ, ಪ್ರದೇಶ, ದೇಶ, ಸಂಸ್ಕೃತಿ, ಆರ್ಥಿಕ ಸ್ಥಿತಿ, ಹೆತ್ತವರ ಸಿದ್ಧಾಂತ, ಜೀವನದೃಷ್ಟಿಯಂತಹ ಅಂಶಗಳಿಂದ ರೂಪಿಸಲಾದ ವ್ಯವಸ್ಥೆಯೊಂದನ್ನು ಕಿಂಚಿತ್ತೂ ಪ್ರಶ್ನಿಸದೆ ಸಂಪೂರ್ಣವಾಗಿ ಒಪ್ಪಿಕೊಂಡು, ಬದುಕನ್ನು ಕಟ್ಟಿಕೊಳ್ಳುವಂತೆ ಪ್ರೇರೇಪಿಸಲಾಗುತ್ತದೆ. ಇವುಗಳಿಗೆ ನಿಷ್ಠರಾಗಿ ಬದುಕುವವರಿಗೆ ಪ್ರೋತ್ಸಾಹ, ಸವಲತ್ತುಗಳು ಸಿಗುತ್ತವೆ. ವಿಸ್ಮಯವೆಂದರೆ, ಈ ರೀತಿ ವ್ಯವಸ್ಥೆಗೆ ಒಗ್ಗಿ ನಡೆಯುವವರಿಗೂ ಒಂದು ಹಂತದಲ್ಲಿ ಬದುಕು ಸರಿಯಾಗಿಲ್ಲ ಎಂದು ಅನ್ನಿಸುವುದು ಯಾಕೆ? ಇದನ್ನು ನಾವು ‘ಮಧ್ಯ ವಯಸ್ಸಿನ ಬಿಕ್ಕಟ್ಟು’ ಎಂದು ಹೆಸರಿಸಿದ್ದೇವೆ. ಇರುವುದೆಲ್ಲವ ಬಿಟ್ಟು ಇರದುದನ್ನು ನೆನೆದು ಪರಿತಪಿಸುವ, ನಿಟ್ಟುಸಿರುಬಿಡುವ, ಬದುಕಿಗೊಮ್ಮೆ ಹಿನ್ನೋಟ ಬೀರುವ ಈ ಅವಸ್ಥೆ ಬಹುತೇಕರ ಸ್ವಅನುಭವ. ಈ ವಿದ್ಯಮಾನದ ಕುರಿತಂತೆ ಅನೇಕ ಸಾಹಿತಿಗಳು, ದಾರ್ಶನಿಕರು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಇಂಗ್ಲಿಷ್ ಕವಿ ರಾಬರ್ಟ್ ಫ್ರಾಸ್ಟ್‌ನ ಪ್ರಸಿದ್ಧ ಕವನ, ‘ದಿ ರೋಡ್ ನಾಟ್ ಟೇಕನ್’, ಮಾಡದ ಆಯ್ಕೆ ಮತ್ತು ಕಳೆದುಹೋದ ದಿನಗಳನ್ನು ಮರುವಿಮರ್ಶೆಗೆ ಒಡ್ಡುತ್ತದೆ.

ಜೀವನದ ಸಂಧಿಕಾಲದಲ್ಲಿ, ಬದುಕನ್ನು ಇನ್ನಷ್ಟು ಹಸನಾಗಿಸಬಹುದಾದ ಆಯ್ಕೆಗಳ ಸ್ವಾತಂತ್ರ್ಯಕ್ಕಿರುವ ನಿರ್ಬಂಧಗಳ ಕುರಿತು ಹಪಹಪಿಸುವಾಗ, ನಮ್ಮ ಮುಂದೆ ಎರಡು ಸಾಧ್ಯತೆಗಳು ಎದುರಾಗುತ್ತವೆ- ಒಂದು, ಬದುಕಿನ ಉಳಿದ ದಿನಗಳನ್ನು ಮುಕ್ತವಾಗಿ ಜೀವಿಸುವ ದೃಢ ನಿರ್ಧಾರ ಕೈಗೊಳ್ಳುವುದು. ಬಹುಶಃ, ಬುದ್ಧ ಕೂಡ ಈ ಪರ್ವಕಾಲದಲ್ಲಿಯೇ ತನ್ನ ಅರಮನೆಯ ಅತಿಯಾದ ವೈಭೋಗ, ಸಂಸಾರ ಜೀವನ ಎಲ್ಲದರಲ್ಲೂ ಅತೃಪ್ತಿ ಅನುಭವಿಸಿ, ನಿಜವಾದ ಸ್ವಾತಂತ್ರ್ಯದ ಹುಡುಕಾಟದಲ್ಲಿ ಪ್ರಾಪಂಚಿಕ ಪರ್ಯಟನೆಗಿಳಿದ ಮತ್ತು ಬದುಕಿನ ಸತ್ಯದರ್ಶನವನ್ನು ತನ್ನೊಳಗೆ, ಪ್ರಕೃತಿಯ ಮಡಿಲಲ್ಲಿ ಕಂಡುಕೊಂಡ ಎನ್ನಬಹುದು.

ಎರಡನೆಯದು, ಇನ್ನುಳಿದಿರುವ ದಿನಗಳಲ್ಲಿ ತಾನೇನೂ ಮಾಡಲು ಸಾಧ್ಯವಿಲ್ಲ ಎಂದುಕೊಂಡು ಸಂಪೂರ್ಣ ಹತಾಶೆಯಲ್ಲಿ ಮುಳುಗಿ, ನಿಶ್ಶಕ್ತಿಯಿಂದ ಜೀವನದ ಸಂಧ್ಯಾಕಾಲದತ್ತ ಮೌನವಾಗಿ ಹೆಜ್ಜೆಯಿಡುವುದು. ಸಾಮಾನ್ಯವಾಗಿ, ಹೆಚ್ಚಿನವರು ಎರಡನೆಯ ಮಾರ್ಗದಲ್ಲಿಯೇ ಮುಂದುವರಿಯುತ್ತಾರೆ ಮತ್ತು ಅದನ್ನೇ ಉಳಿದವರಿಗೂ ಬೋಧಿಸುವುದರಿಂದಲೇ ನಿಜವಾದ ಸ್ವಾತಂತ್ರ್ಯದ ಅರಿವಿನ ದರ್ಶನ ಹೊಸ ತಲೆಮಾರುಗಳಿಗೆ ಬೇಗ ಆಗದೇ ಇರುವುದು.




ಈ ಕಾರಣದಿಂದ, ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರ ಮಾತುಗಳು ಬಹಳ ಅರ್ಥಪೂರ್ಣ ಎನಿಸುತ್ತವೆ. ‘ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಯಾವತ್ತೂ ಭಯಾನಕ ಹೋರಾಟದ ಫಲವೇ ವಿನಾ ಸುಲಭಕ್ಕೆ ಸಿಗುವುದಿಲ್ಲ’. ಸಾಮಾನ್ಯವಾಗಿ ನಾವು ಪ್ರಾಪಂಚಿಕ ವ್ಯವಸ್ಥೆಗಳಿಂದ ಶಹಬಾಸ್‌ಗಿರಿ ಪಡೆಯುವುದಕ್ಕಾಗಿ, ಜೀವನದ ಸುಂದರ ಕ್ಷಣಗಳನ್ನು ಅನುಭವಿಸುವುದನ್ನು ಮರೆತುಬಿಡುತ್ತೇವೆ. ಇಂತಹ ಸ್ವಾತಂತ್ರ್ಯ ಪಡೆಯುವುದು ಮುಖ್ಯ ಎನ್ನುವ ಅರಿವು, ಎಲ್ಲರಿಗೂ ನಿಲುಕದ ಜೀವನದರ್ಶನ. ಇದು ಸಾಮಾಜಿಕ ಕಾಳಜಿ ಮತ್ತು ಜವಾಬ್ದಾರಿಯಿಂದ ಪಕ್ವವಾದ ವೈಯಕ್ತಿಕ ಸ್ವಾತಂತ್ರ್ಯ.

ಜವಾಬ್ದಾರಿಯಿಂದ ಕೂಡಿದ ಸ್ವಾತಂತ್ರ್ಯವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾದರೆ, ನಿಷ್ಠುರದ ಪ್ರಶ್ನೆಯೊಂದನ್ನು ನಾವು ಹಾಕಿಕೊಳ್ಳಬೇಕಾಗುತ್ತದೆ- ವ್ಯವಸ್ಥೆ ಕೆಟ್ಟು ಹೋಗಿದೆಯೆಂದು, ಅದನ್ನು ದುರುಪಯೋಗ ಮಾಡಿಕೊಂಡು ಇನ್ನಷ್ಟು ಆರ್ಥಿಕ ಸ್ವಅಭಿವೃದ್ಧಿಗೆ ಮುಂದಾಗುವುದು, ಉಳಿದ ಜೀವಿಗಳ ಬದುಕುವ ಹಕ್ಕನ್ನು ಕಿತ್ತುಕೊಳ್ಳುವುದನ್ನು ಸ್ವಾತಂತ್ರ್ಯ ಎನ್ನಬಹುದೇ?

ಈ ದಿಸೆಯಲ್ಲಿ, ಪ್ರಸಕ್ತ ನಮಗೆ ಅಗತ್ಯವಾಗಿರುವ ಸ್ವಾತಂತ್ರ್ಯವೆಂದರೆ- ತನ್ನ ಇಷ್ಟದಂತೆ ಬದುಕುವ ಮತ್ತು ವೈಯಕ್ತಿಕ ಗುರಿಗಳನ್ನು ನಿರ್ವಿಘ್ನವಾಗಿ ಮುಟ್ಟುವ ಸ್ವಾತಂತ್ರ್ಯ. ತನ್ನ ಹವ್ಯಾಸವನ್ನೇ ವೃತ್ತಿಯಾಗಿಸುವ ಆರ್ಥಿಕ ಸ್ವಾತಂತ್ರ್ಯ. ಆಮಿಷಕ್ಕೆ ಒಳಗಾಗದೆ ಜವಾಬ್ದಾರಿಯಿಂದ ಮತ ಚಲಾಯಿಸಿ, ಸರ್ಕಾರ ಜೀವಪರವಾಗಿ ಕೆಲಸ ಮಾಡುವಂತೆ ಒತ್ತಾಯಿಸುವ ಸಂಘಟಿತ ಸ್ವಾತಂತ್ರ್ಯ. ಅನ್ಯಾಯ, ದೌರ್ಜನ್ಯದ ವಿರುದ್ಧ ಧ್ವನಿಯೆತ್ತುವ ಸ್ವಾತಂತ್ರ್ಯ. ವ್ಯವಸ್ಥೆಯಲ್ಲಿ ಪಳಗಿದ ಲೂಟಿಕೋರರು ಸ್ವಹಿತಾಸಕ್ತಿಗಾಗಿ ಪರಿಸರವನ್ನು ಲೂಟಿ ಮಾಡಿ, ಜನಸಾಮಾನ್ಯರ ಬದುಕು ಮತ್ತು ಜೀವವೈವಿಧ್ಯವನ್ನು ನಿರ್ನಾಮಗೊಳಿಸದಂತೆ ಜನಜಾಗೃತಿ ಮೂಡಿಸುವ ಸ್ವಾತಂತ್ರ್ಯ. ಜಾತಿ, ಧರ್ಮ ಮತ್ತು ಲಿಂಗ ತಾರತಮ್ಯಗಳನ್ನು ಮೀರಿ ಬದುಕುವ ಸ್ವಾತಂತ್ರ್ಯ. ಪ್ರಾಪಂಚಿಕ ವೈಭೋಗಗಳಿಗೆ ಸಡ್ಡು ಹೊಡೆದು ಸರಳವಾಗಿ ಬದುಕುವ ಸ್ವಾತಂತ್ರ್ಯ...

ಹೀಗೆ, ಸ್ವಾತಂತ್ರ್ಯವು ಪ್ರತಿಯೊಬ್ಬರ ವೈಯಕ್ತಿಕ ಅನುಭವ ಆಗಬೇಕಾದುದು ಇಂದಿನ ಅಗತ್ಯ. ಅದು ಸಾಧ್ಯವೇ ಎನ್ನುವುದನ್ನು ಅವರವರೇ ಕಂಡುಕೊಳ್ಳಬೇಕಾಗಿದೆ. ಇಂದು, ನಮ್ಮನ್ನಾಳುವ ನಾಯಕರು ಸ್ವಹಿತ ಸಾಧನೆಗಾಗಿ ಇಂತಹ ಸ್ವಾತಂತ್ರ್ಯಕ್ಕೆ ನಾವು ತೆರೆದುಕೊಳ್ಳುವುದನ್ನು ಇಚ್ಛಿಸದೇ ಇರಬಹುದು. ಆದರೆ, ನಮ್ಮನ್ನು ಪ್ರೀತಿಸುವ ಹೆತ್ತವರು ನಮಗೇಕೆ ನಿಜಾರ್ಥದ ಸ್ವಾತಂತ್ರ್ಯವನ್ನು ಪರಿಚಯಿಸದೆ, ವ್ಯವಸ್ಥೆಯ ಮಿತಿಯೊಳಗೆ ಬದುಕು ಕಟ್ಟಿಕೊಳ್ಳುವುದೇ ಮುಖ್ಯ ಎನ್ನುತ್ತಾರೆ? ಇದು ಪ್ರೀತಿಪಾತ್ರರಿಗೆ ಮಾಡುವ ಆತ್ಮವಂಚನೆ ಎನಿಸಿಕೊಳ್ಳುವುದಿಲ್ಲವೇ? ಒಂದರ್ಥದಲ್ಲಿ, ನಮ್ಮ ಪೋಷಕರು ವ್ಯವಸ್ಥೆಯ ಪೋಷಕರು ಕೂಡ. ಹಾಗಾಗಿಯೇ, ವ್ಯವಸ್ಥೆಗಳು ಉಸಿರುಗಟ್ಟಿದರೂ ಸುಭದ್ರವಾಗಿ ಉಳಿದು ಸ್ವಾತಂತ್ರ್ಯ ಹರಣ ಮಾಡುವುದನ್ನು ಮುಂದುವರಿಸಿವೆ. ಕೆಲವೇ ಮಂದಿ ಮಾತ್ರ ಬದುಕಿಡೀ ವ್ಯವಸ್ಥೆಯೊಂದಿಗೆ ಗುದ್ದಾಡುತ್ತಾ ನಿಜ ಸ್ವಾತಂತ್ರ್ಯದ ಆತ್ಮತೃಪ್ತಿ ಅನುಭವಿಸುತ್ತಾರೆ. ಇವರೇ ಸ್ವಾತಂತ್ರ್ಯದ ಹರಿಕಾರರು.

ಚುರುಮುರಿ



ರೆಸಾರ್ಟ್ ರೆಬೆಲ್ಸ್

● ಮಣ್ಣೆ ರಾಜು

ರೆಸಾರ್ಟ್‌ನಲ್ಲಿ ರೆಬೆಲ್ ನಾಯಕರು ಸಭೆ ಸೇರಿದ್ದರು. ನ್ಯೂಸ್ ಚಾನೆಲ್ ಕ್ಯಾಮೆರಾ, ವರದಿಗಾರರ ಕಣ್ಣು ರೆಸಾರ್ಟ್ ಸುತ್ತುವರಿದಿದ್ದವು.

ಸಭೆ ಮುಗಿಸಿ ನಾಯಕರು ಹೊರಬಂದರು. ‘ಸೊಸೆ ಮುನಿಸಿಕೊಂಡು ತವರಿಗೆ ಹೋಗುವಂತೆ ಭಿನ್ನಮತೀಯರು ರೆಸಾರ್ಟ್‌ನಲ್ಲಿ ಕೂಡುವುದು ಸಾಮಾಜಿಕ ಸಮಸ್ಯೆನಾ ಸಾರ್?’ ವರದಿಗಾರರ ಪ್ರಶ್ನೆ. ‘ನಾವು ಪಕ್ಷನಿಷ್ಠರು, ಭಿನ್ನಮತೀಯರಲ್ಲ...’ ನಾಯಕರೊಬ್ಬರು ರೇಗಿದರು.

‘ಹೌದು ಭಿನ್ನಮತೀಯರಲ್ಲ, ತಿನ್ನೊಮತೀಯರು, ಊಟ ಮಾಡಲು ಸೇರಿದ್ದೆವು... ಹಹ್ಹಹ್ಹಾ’ ಮತ್ತೊಬ್ಬರು ತೇಗಿದರು.

‘ಊಟಗೋಷ್ಠಿಗೆ ರೆಸಾರ್ಟೇ ಯಾಕೆ?’

‘ಹೊಂಗೆ ಮರದ ಕೆಳಗೆ ಸಭೆ ಮಾಡಲಾಗುತ್ತೇನ್ರಿ?’ ಸಿಟ್ಟಾದ ಇನ್ನೊಬ್ಬರು, ‘ಸಭೆ ನಡೆಸಲು ಊಟ, ಕುರ್ಚಿ ವ್ಯವಸ್ಥೆ ಇರಬೇಕಲ್ವಾ?’ ಅಂದರು.

‘ಸಭೆಯ ಮೆನು ಏನೇನಿತ್ತು ಸಾರ್?’

‘ರುಚಿಕರ ಊಟ, ಹಿತಕರ ಚರ್ಚೆ ಇತ್ತು’.

‘ದಕ್ಷಿಣ ಪಾದಯಾತ್ರೆಗೆ ಪರ್ಯಾಯವಾದ ನಿಮ್ಮ ಉತ್ತರ ಪಾದಯಾತ್ರೆ ಎಲ್ಲಿಗೆ ಬಂತು?’

‘ರಿಹರ್ಸಲ್ ಮಾಡ್ತಿದ್ದೀವಿ. ನಮ್ಮಲ್ಲಿ ಕೆಲವರು ದಿನಕ್ಕೆ ಏಳೆಂಟು ಕಿ.ಮೀ. ನಡೆಯುತ್ತಾ ಪಾದಯಾತ್ರೆಗೆ ಪ್ರಾಕ್ಟೀಸ್ ಮಾಡ್ತಿದ್ದಾರೆ’.

‘ಅವರು ದಕ್ಷಿಣ ದಿಕ್ಕಿನಲ್ಲಿ, ನೀವು ಉತ್ತರ ದಿಕ್ಕಿನಲ್ಲಿ ನಡೆದರೆ ಪಕ್ಷದ ಶಿಸ್ತು ದಿಕ್ಕು ತಪ್ಪುವುದಿಲ್ಲವೇ?’

‘ಇಲ್ಲ, ದಿಕ್ಕು ತಪ್ಪಿರುವ ಪಕ್ಷವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಲು ನಮ್ಮ ಪಾದಯಾತ್ರೆ. ಸರ್ಕಾರದ ಹಗರಣಗಳನ್ನು ಖಂಡಿಸಿ, ಪ್ರವಾಹ, ಡ್ಯಾಂ ಡ್ಯಾಮೇಜ್ ಸಂತ್ರಸ್ತರಿಗೆ ಪರಿಹಾರ ನೀಡಲು ಆಗ್ರಹಿಸಿ ನಡಿಗೆ ಹೋರಾಟ ಮಾಡ್ತೀವಿ’.

‘ನಿಮ್ಮ ಡ್ಯಾಮೇಜ್ ರಿಪೇರಿ ಮಾಡಿಕೊಳ್ಳಲು ಪಾದಯಾತ್ರೆಯ ದಾರಿ ಹಿಡಿದಿದ್ದೀರಿ ಅಂತ ನಿಮ್ಮವರೇ ಹೇಳ್ತಿದ್ದಾರೆ’.

‘ಅವರಿಗೆ ಕೇರ್ ಮಾಡಲ್ಲ, ಪಾದಯಾತ್ರೆ ಮಾಡ್ತೇವೆ. ಹೈಕಮಾಂಡ್ ತೋರಿಸುವ ದಾರಿಯಲ್ಲಿ ಸಾಗುತ್ತೇವೆ’.

‘ಅದು ಪಾದಯಾತ್ರೆಗೆ ದಾರಿ ತೋರಿಸುತ್ತಾ?’

‘ತೋರಿಸುವುದು ಬೇಡ, ಪಾದಯಾತ್ರೆಗೆ ರಹದಾರಿ ನೀಡಿಬಿಟ್ಟರೆ ಸಾಕು...’ ಎಂದು ಹೇಳಿ ನಾಯಕರು ಕಾರು ಹತ್ತಿ ಹೊರಟರು.

ಸಂಗತ

ಕೈಗಾರಿಕೆಗಳಲ್ಲಿ ‘ಬಹುತ್ವ ಭಾರತ’!

ಗುಣಮಟ್ಟದ ಉತ್ಪಾದನೆಗೆ ಪೂರಕವಾಗಿ ‘ಶ್ರಮಶಕ್ತಿ’ಯನ್ನು ಬಳಸಿಕೊಳ್ಳುವ ವಿಚಾರದಲ್ಲಿ ನಾವು ವಿಶಾಲವಾದ ಮನೋಭಾವ ಹೊಂದುವುದು ಅಗತ್ಯ

● ಮಲ್ಲಿಕಾರ್ಜುನ ಹೆಗ್ಗಳಗಿ

ಕಬ್ಬಿನ ಫಸಲು ಕಟಾವು ಮಾಡಲು ರಾಜ್ಯದ ಸಕ್ಕರೆ ಕಾರ್ಖಾನೆಗಳವರು ಮಹಾರಾಷ್ಟ್ರದ ಬೀಡ್, ನಾಂದೇಡ್, ಲಾತೂರ್, ಪರಬಣಿ ಭಾಗದಿಂದ ಪ್ರತಿ ವರ್ಷ ಸುಮಾರು ನಾಲ್ಕು ಲಕ್ಷ ಕಾರ್ಮಿಕರನ್ನು ಕರೆತರುತ್ತಾರೆ. ಮಹಾರಾಷ್ಟ್ರ ಕಾರ್ಮಿಕರು ಕುಟುಂಬದೊಂದಿಗೆ ಬಂದು ಹೊಲಗಳಲ್ಲಿಯೇ ವಾಸಿಸುತ್ತಾ ಹಗಲೂ ರಾತ್ರಿ ಕಬ್ಬು ಕಟಾವು ಮಾಡುತ್ತಾರೆ. ಗಂಡ- ಹೆಂಡತಿ ಕೂಡಿ 6ರಿಂದ 7 ತಿಂಗಳು ದುಡಿಮೆ ಮಾಡುತ್ತಾರೆ. ಇವರಿಗೆ ಮುಂಗಡ ಹಣ ಕೊಟ್ಟು, ಕರಾರುಪತ್ರ ಬರೆಸಿ ಕರೆದುಕೊಂಡು ಬರಲಾಗುತ್ತದೆ. ಇವರು ಬಾರದಿದ್ದರೆ ಸಕ್ಕರೆ ಕಾರ್ಖಾನೆಗಳು ನಡೆಯುವುದೇ ಇಲ್ಲ ಎನ್ನುವ ಸ್ಥಿತಿ ಇದೆ. ಸ್ಥಳೀಯ ಕಾರ್ಮಿಕರು ಕಬ್ಬು ಕಟಾವು ಮಾಡುವ ಕೆಲಸಕ್ಕೆ ಬರುವುದಿಲ್ಲ. ಅವರಿಗೆ ತರಬೇತಿ ನೀಡಿದರೂ ಪ್ರಯೋಜನವಾಗಿಲ್ಲ. ಬೇರೆ ಬೇರೆ ಪ್ರದೇಶಗಳ ಜನರ ದುಡಿಮೆಯ ಮನೋಭಾವ ಭಿನ್ನವಾಗಿರುವುದು ಇದಕ್ಕೆ ಮುಖ್ಯ ಕಾರಣ.

ಉತ್ತರ ಕರ್ನಾಟಕ ಭಾಗದ ಬಹಳಷ್ಟು ಕಾರ್ಮಿಕರು ಗೋವಾಕ್ಕೆ ಹೋಗಿ ದುಡಿಯುತ್ತಾರೆ. ಅಲ್ಲಿ ಕರ್ನಾಟಕದ ಕಾರ್ಮಿಕರಿಗೆ ಬಹುದೊಡ್ಡ ಮಟ್ಟದಲ್ಲಿ ಬೇಡಿಕೆ ಇದೆ. ಹುಟ್ಟೂರನ್ನು ತೊರೆದು ಬೇರೆಡೆ ಹೋಗಿ ನೆಲಸುವ ಕಾರ್ಮಿಕರಲ್ಲಿ ದುಡಿಯುವ ಮನೋಭಾವ ಸಹಜವಾಗಿಯೇ ಬೆಳೆಯುತ್ತದೆ. ಅವರು ದುಡಿಮೆ ಮತ್ತು ಸಂಪಾದನೆ ಮಾಡುವ ತುಡಿತ ಹೊಂದಿರುತ್ತಾರೆ. ಇದರಿಂದ ಕೈಗಾರಿಕೆಗಳ ಉತ್ಪಾದಕತೆಗೆ ನೆರವಾಗುತ್ತದೆ. ಹೀಗಾಗಿ, ಉದ್ಯಮಿಗಳು ವಲಸೆ ಕಾರ್ಮಿಕರಿಗೆ ಆದ್ಯತೆ ನೀಡುತ್ತಾರೆ. ಹೀಗೆ ಕೈಗಾರಿಕೆಗಳಲ್ಲಿ ‘ಬಹುತ್ವ ಭಾರತ’ದ ದರ್ಶನವಾಗುತ್ತದೆ.

ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ ಅವಕಾಶ ದೊರೆಯಲಿ ಎಂಬ ಆಶಯದಿಂದ ಖಾಸಗಿ ಕಂಪನಿಗಳು ಮತ್ತು ಸಂಸ್ಥೆಗಳ ಆಡಳಿತಾತ್ಮಕ ಹುದ್ದೆಗಳು, ಸಿ ಮತ್ತು ಡಿ ದರ್ಜೆ ಹುದ್ದೆಗಳಿಗೆ ಮೀಸಲಾತಿ ನಿಗದಿ ಮಾಡಬೇಕು ಎನ್ನುವ ಸರ್ಕಾರದ ಆಶಯ ಒಳ್ಳೆಯದು. ಆದರೆ ಶ್ರಮಿಕರ ಕಾರ್ಯಕ್ಷಮತೆಯ ವಾಸ್ತವ ಸಂಗತಿಗಳು ಭಿನ್ನವಾಗಿರುವುದರಿಂದ ಉದಾರ ನಿಲುವು ಅವಶ್ಯ.

ಕೈಗಾರಿಕಾ ಕಾರ್ಮಿಕರಿಗೆ ತಮ್ಮದೇ ಆದ ದುಡಿಮೆಯ ಸಂಸ್ಕೃತಿ ಇದೆ. ಕಾರ್ಮಿಕರ ಕೌಶಲ ಮತ್ತು ಪರಿಣತಿ ಮಾತ್ರವಲ್ಲ, ಕಠಿಣ ಪರಿಶ್ರಮದಿಂದ ದೀರ್ಘಾವಧಿಯಲ್ಲಿ ನಿಂತುಕೊಂಡು ಕೆಲಸ ಮಾಡುವ ಶಕ್ತಿ, ತಾಳ್ಮೆಯನ್ನು ಉದ್ದಿಮೆಗಳು ಬಯಸುತ್ತವೆ. ಯಂತ್ರಗಳ ಚಕ್ರ ಉರುಳುತ್ತಲೇ ಇರುತ್ತದೆ. ಕೆಲಸಗಾರರು ಪಾಳಿಗಳಲ್ಲಿ ಬಂದು ದುಡಿಯಬೇಕಾಗುತ್ತದೆ. ಮುಂದಿನ ಪಾಳಿಗೆ ಬರಬೇಕಾಗಿದ್ದ ಕೆಲಸಗಾರ ಬಾರದೇ ಹೋದರೆ ಸ್ಥಳದಲ್ಲಿರುವ ಕಾರ್ಮಿಕ ಮತ್ತೆ ಎಂಟು ತಾಸು ದುಡಿಯಬೇಕು. ಅನಿವಾರ್ಯ ಸಂದರ್ಭಗಳಲ್ಲಿ 24 ತಾಸೂ ಕೆಲಸ ಮಾಡಬೇಕಾಗುತ್ತದೆ. ಕಾರ್ಮಿಕರು ಕೂಡ ಯೋಧರಂತೆ ಕಾರ್ಯನಿರ್ವಹಿಸುತ್ತಾರೆ.

ಕರ್ನಾಟಕದಿಂದ ಹೊರ ರಾಜ್ಯಗಳಿಗೆ ವಲಸೆ ಹೋದ ಕಾರ್ಮಿಕರ ಸಂಖ್ಯೆ ತುಂಬಾ ದೊಡ್ಡದಿದೆ. ಬೇರೆ ರಾಜ್ಯಗಳ ಕಾರ್ಮಿಕರನ್ನು ತಡೆಯುವ ಪ್ರಯತ್ನ ಮಾಡಿದರೆ, ಆ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರಿಗೂ ಇದೇ ಸಮಸ್ಯೆ ಎದುರಾಗಬಹುದು. ಈ ಸೂಕ್ಷ್ಮ ವಿಷಯವನ್ನು ಎಚ್ಚರಿಕೆಯಿಂದ ನೋಡುವುದು ಅವಶ್ಯ. ಕಾರ್ಖಾನೆ ಕಟ್ಟಡಗಳ ನಿರ್ಮಾಣ ಮತ್ತು ಎತ್ತರದ ಸ್ಥಳದಲ್ಲಿ ಯಂತ್ರಗಳನ್ನು ಜೋಡಿಸುವ ಕೆಲಸವನ್ನು ಬಿಹಾರದ ಕಾರ್ಮಿಕರು ಬಹಳ ಜಾಣ್ಮೆಯಿಂದ ಮಾಡುತ್ತಾರೆ. ದೇಶದ ಬಹಳಷ್ಟು ಕೈಗಾರಿಕೆಗಳು ಯಂತ್ರ ಜೋಡಣೆಯ ಜವಾಬ್ದಾರಿಯನ್ನು ಈ ಕಾರ್ಮಿಕರಿಗೆ ವಹಿಸುತ್ತವೆ.

ಚಿನ್ನದ ಗಣಿಗಳಲ್ಲಿ ತೀರಾ ಆಳಕ್ಕೆ ಇಳಿದು ಕೆಲಸ ಮಾಡುವ ಕಾರ್ಮಿಕರ ಕಷ್ಟವನ್ನು ನೋಡಿದರೆ, ಚಿನ್ನ ಧರಿಸಲೇಬಾರದು ಎನಿಸುತ್ತದೆ. ಉತ್ತಮ ದೈಹಿಕ ಬಲ ಹೊಂದಿದ ಕುಶಲ ಕೆಲಸಗಾರರನ್ನು ಪರೀಕ್ಷಿಸಿ ಆಯ್ಕೆ ಮಾಡಿ ಚಿನ್ನದ ಗಣಿಗಳಿಗೆ ಇಳಿಸಲಾಗುತ್ತದೆ. ಇಲ್ಲಿ ಸಾಮರ್ಥ್ಯವೇ ಮಾನದಂಡವಾಗಿರುತ್ತದೆ. ಕೋವಿಡ್-19ರ ಸಂಕಷ್ಟದ ಕಾಲದಲ್ಲಿ ಹೊರಟುಹೋದ ವಲಸೆ ಕಾರ್ಮಿಕರಲ್ಲಿ ಬಹಳಷ್ಟು ಜನ ಮರಳಿಬಂದಿಲ್ಲ. ಇವರೆಲ್ಲ ಕಠಿಣ ಪರಿಶ್ರಮದ ಕುಶಲ ಕಾರ್ಮಿಕರಾಗಿದ್ದಾರೆ. ಇವರು ಇಲ್ಲದ್ದರಿಂದ ಗುಣಮಟ್ಟದ ಉತ್ಪಾದನೆಗೆ ಹಿನ್ನಡೆಯಾಗಿದೆ ಎಂದು ಕೈಗಾರಿಕೋದ್ಯಮಿಗಳು ಆತಂಕ ವ್ಯಕ್ತಪಡಿಸುತ್ತಿರುವುದು ಗಮನಿಸಬೇಕಾದ ಸಂಗತಿಯಾಗಿದೆ.



ಆಂಧ್ರಪ್ರದೇಶದ ಖಾಸಗಿ ಉದ್ಯಮ ರಂಗದಲ್ಲಿ ಸ್ಥಳೀಯರಿಗೆ ಉದ್ಯೋಗ ಕಲ್ಪಿಸುವ ಮೀಸಲಾತಿಯನ್ನು 2019ರಲ್ಲಿ ಜಾರಿಗೆ ತರಲಾಗಿತ್ತು. ಇದು ಅಸಾಂವಿಧಾನಿಕ ಎಂದು ಅಲ್ಲಿನ ಹೈಕೋರ್ಟ್ ಆದೇಶ ನೀಡಿದೆ. ಹರಿಯಾಣದಲ್ಲಿ ಇದೇ ಮಾದರಿಯ ಕಾಯ್ದೆಗೆ ಅಲ್ಲಿನ ಹೈಕೋರ್ಟ್ ತಡೆಯೊಡ್ಡಿದೆ. ಜಾರ್ಖಂಡ್ ರಾಜ್ಯದಲ್ಲಿಯೂ ಇಂಥ ಮಸೂದೆಯನ್ನು ಅಂಗೀಕರಿಸಲಾಗಿತ್ತು. ಅಲ್ಲಿಯ ರಾಜ್ಯಪಾಲರು ‘ಇದು ನಾಗರಿಕ ಹಕ್ಕ’ನ್ನು ಉಲ್ಲಂಘಿಸುತ್ತದೆ ಎಂದು ಹೇಳಿ ವಾಪಸ್ ಕಳಿಸಿದ್ದಾರೆ. ವಿಶೇಷ ಎಂದರೆ, ರಾಜಸ್ಥಾನ ಸರ್ಕಾರ ಉದ್ಯೋಗ ಮತ್ತು ವ್ಯಾಪಾರಕ್ಕೆ ಹೊರ ರಾಜ್ಯಗಳಿಗೆ ಹೋಗುವ ಯುವಕರಿಗೆ ಬಡ್ಡಿರಹಿತ ಸಾಲ ನೀಡಿ ಪ್ರೋತ್ಸಾಹಿಸುವ ಯೋಜನೆ ಜಾರಿಗೊಳಿಸಿದೆ.

‘ಒಂದು ರಾಜ್ಯ, ಹಲವು ಜಗತ್ತು!’ ಎಂಬುದು ಕರ್ನಾಟಕದ ಸಂಸ್ಕೃತಿ ಮತ್ತು ಪರಂಪರೆಯನ್ನು ಬಿಂಬಿಸುವ ಘೋಷವಾಕ್ಯ. ವಿಶ್ವದ ಉದ್ಯಮಿಗಳನ್ನು ರಾಜ್ಯಕ್ಕೆ ಕರೆತರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಸಂಘಟಿಸುವ ಸಿದ್ಧತೆಯನ್ನು ಸರ್ಕಾರ ನಡೆಸಿದೆ. ಇದಕ್ಕೆ ಪೂರಕವಾಗಿ ‘ವಿಶ್ವ ಶ್ರಮಶಕ್ತಿ’ಯನ್ನು ಸ್ವಾಗತಿಸುವುದು ಅವಶ್ಯ.

ವಾಚಕರ ವಾಣಿ

ಸೌಹಾರ್ದ ಸಂಸ್ಕೃತಿ: ವಿವಿಧ ನೆಲೆಯಲ್ಲಿರಲಿ

ರಾಜ್ಯದ ಶಾಲಾ ಕಾಲೇಜು ವಿದ್ಯಾರ್ಥಿಗಳ ನಡುವೆ ಸೌಹಾರ್ದ ಮೂಡಿಸಲು ಪುಸ್ತಕ ಪ್ರಕಟಣೆ ಜೊತೆಗೆ ಸೌಹಾರ್ದ ಸಮಾವೇಶಗಳನ್ನು ಆಯೋಜಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮುಂದಾಗಿರುವುದು (ಪ್ರ.ವಾ., ಆ. 13) ಉತ್ತಮ ನಡೆ ಮತ್ತು ಪುಸ್ತಕಗಳು ಪ್ರಕಟವಾಗಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಪ್ರಸ್ತುತ ಪೀಳಿಗೆಯು 50 ಪುಟಗಳಿಗಿಂತ ಹೆಚ್ಚಾಗಿರುವ ಕನ್ನಡ ಭಾಷೆಯ ಪುಸ್ತಕಗಳನ್ನು ಓದಲು ಆಸಕ್ತಿ ತೋರುತ್ತಿಲ್ಲ ಎಂಬ ಮಾತಿದೆ. ಬರೀ ಪುಸ್ತಕ ಪ್ರಕಟಣೆಗಿಂತ ಸೌಹಾರ್ದ ಸಂಸ್ಕೃತಿಯನ್ನು ಬಿಂಬಿಸುವಂತಹ ವಿಚಾರಗೋಷ್ಠಿಗಳು, ಸಮ್ಮೇಳನಗಳು, ಗುಂಪು ಚರ್ಚೆಗಳು, ಸಂವಾದ ಕಾರ್ಯಕ್ರಮಗಳನ್ನು ನಡೆಸುವುದು ಬಹಳ ಅವಶ್ಯ. ನಮ್ಮ ಪ್ರಮುಖ ಬರಹಗಾರರ ಚಿಂತನೆಗಳ ಅವಲೋಕನ ಮತ್ತು ಅಂತರ್ ಶಾಲಾ-ಕಾಲೇಜು ಕಾರ್ಯಾಗಾರಗಳನ್ನು ನಡೆಸುವುದು ಖಂಡಿತವಾಗಿಯೂ ಸೌಹಾರ್ದ ಸಂಸ್ಕೃತಿಯನ್ನು ಹೆಚ್ಚಿಸುತ್ತದೆ.

ಕಡೂರು ಫಣಿಶಂಕರ್, ಬೆಂಗಳೂರು

ಎಚ್ಚರಿಕೆ!

ಇಲ್ಲಿಯವರೆಗೆ ನಿದ್ದೆಮಾಡುತ್ತಿದ್ದ
ಅಣೆಕಟ್ಟಿನ ಪರಿಣತರು
ಎಚ್ಚರವಾಗಿದ್ದು ಗ್ರೇಟು,
ಇದರ ಶ್ರೇಯ ಪಡೆಯಬೇಕು
ಎಚ್ಚರಿಸಿರುವ
ಮುರಿದು ಬಿದ್ದ ಗೇಟು!

ಮಹಾಂತೇಶ ಮಾಗನೂರ
ಬೆಂಗಳೂರು

ಸೌಲಭ್ಯವಂಚಿತರಿಗೆ ಮೀಸಲಾಗಲಿ

ಒಳಮೀಸಲಾತಿಗೆ ಸಂಬಂಧಿಸಿದ ಸುಪ್ರೀಂ ಕೋರ್ಟ್ ತೀರ್ಪನ್ನು ಜಾರಿಗೊಳಿಸಬೇಕಾದ ಅಗತ್ಯವನ್ನು ವಾದಿರಾಜ್ ತಮ್ಮ ಲೇಖನದಲ್ಲಿ (ಸಂಗತ, ಆ. 13) ಪ್ರತಿಪಾದಿಸಿದ್ದಾರೆ. ಮೀಸಲಾತಿಯ ಅವಕಾಶವನ್ನು ಈಗಾಗಲೇ ಪಡೆದುಕೊಂಡು ಕೋಟ್ಯಧೀಶರಾಗಿರುವ ರಾಜಕಾರಣಿಗಳು ಎಲ್ಲ ಪಕ್ಷಗಳಲ್ಲೂ ಇದ್ದಾರೆ. ಅಂತೆಯೇ ಉನ್ನತ ಅಧಿಕಾರಿಗಳಿದ್ದಾರೆ. ಅವರೆಲ್ಲರಿಗೂ ಮತ್ತೆ ಮೀಸಲಾತಿ ಕೊಟ್ಟರೆ ಅವಕಾಶವಂಚಿತ ಬಡವರ ಗತಿ ಏನು? ಹಾಗಾಗಿಯೇ ಕೆನೆಪದರದ ಕುರಿತು ಸುಪ್ರೀಂ ಕೋರ್ಟ್ ಸೂಚ್ಯವಾಗಿ ತೀರ್ಪಿನಲ್ಲಿ ಪ್ರಸ್ತಾಪಿಸಿರುವುದು. ಇದನ್ನು ಲೇಖನವು ಪ್ರಸ್ತಾಪಿಸದಿರುವುದು ಗಮನ ಸೆಳೆಯಿತು. ತೀರ್ಪಿನ ಮೂಲ ಉದ್ದೇಶವೇ ಪರಿಶಿಷ್ಟರ ಒಳಪಂಗಡಗಳಲ್ಲಿರುವ ಕಡುಬಡವರಿಗೆ ಮೀಸಲು ಸೌಲಭ್ಯ ಸಿಗಬೇಕು ಎನ್ನುವುದಾಗಿದೆ.

ಮೀಸಲಾತಿಯು ನ್ಯಾಯಸಮ್ಮತ ರೀತಿಯಲ್ಲಿ ಅದರಲ್ಲೂ ಪರಿಶಿಷ್ಟರಲ್ಲಿರುವ ಸೌಲಭ್ಯವಂಚಿತರಿಗೆ ಸಿಗುವಂತಾದರೆ ಅಂತಹವರು ಮೇಲೆ ಬರಲು ಅನುವಾಗುತ್ತದೆ. ಇಲ್ಲದೇಹೋದರೆ ದೊಡ್ಡ ಮೀನು ಸಣ್ಣ ಮೀನನ್ನು ನುಂಗಿದಂತಾಗಿ, ಮುಂದೊಂದು ದಿನ ಒಳಮೀಸಲಾತಿಯಲ್ಲೇ ಶ್ರೀಮಂತರು ಮತ್ತು ಬಡವರು ಎಂಬ ಬಣಗಳು ಹುಟ್ಟಿಕೊಳ್ಳಲು ಕಾರಣವಾಗಬಹುದು. ಈ ಬಗ್ಗೆ ಸರ್ಕಾರ ಅಧ್ಯಯನ ನಡೆಸಿ, ಅವಶ್ಯಕತೆ ಇರುವವರಿಗೆ ಮಾತ್ರ ಸೌಲಭ್ಯ ನೀಡಿದಲ್ಲಿ ಈ ಕುರಿತ ಮೂರು ದಶಕಗಳ ಹೋರಾಟಕ್ಕೆ ಅರ್ಥ ಬರುತ್ತದೆ.

ಡಿ.ಪ್ರಸನ್ನಕುಮಾರ್, ಬೆಂಗಳೂರು

ಊರ ಹೊರಗೆ ಏರ್ಪಡಿಸಲೂ ಲಾಯಕ್ಕಲ್ಲ

ರಾಜಕೀಯ ಪಕ್ಷಗಳು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇತ್ತೀಚೆಗೆ ನಡೆಸಿದ ಸಮಾವೇಶಗಳಿಂದ ಸ್ಥಳೀಯರು ತೊಂದರೆ ಅನುಭವಿಸಿದ್ದನ್ನು ವಿವರಿಸಿರುವ ಬೂಕನಕೆರೆ ವಿಜೇಂದ್ರ (ಪ್ರ.ವಾ., ಆ. 13), ‘ರಾಜಕೀಯ ಸಮಾವೇಶ ಊರ ಹೊರಗಿರಲಿ’ ಎಂದಿದ್ದಾರೆ. ರಾಜಕೀಯ ಪಕ್ಷಗಳು ಪಾತಾಳಕ್ಕಿಳಿದಿರುವ ವಾಸ್ತವ ಚಿತ್ರಣವು ಮೈಸೂರಿನಲ್ಲಿ ನಡೆದ ಸಮಾವೇಶಗಳಲ್ಲಿ ಕಾಣಸಿಗುತ್ತದೆ. ಈ ಚಿತ್ರಪ್ರದರ್ಶನದಲ್ಲಿ ಎದ್ದು ಕಾಣಿಸಿದ್ದು ಆಯಾ ಪಕ್ಷದ ನಾಯಕಮಣಿಗಳೇ. ಆದರೆ ದುರಂತ ಸಂಗತಿ ಬೇರೆ ಇದೆ. ಇಂತಹ ರಾಜಕೀಯ ಪ್ರದರ್ಶನವನ್ನು ಯಾವುದೇ ವಿದ್ಯಾಸಂಸ್ಥೆಯ ಪರಿಸರದಲ್ಲಿ ಏರ್ಪಡಿಸುವುದು ಬೇಡವೆಂಬ ತಿಳಿವಳಿಕೆಯೂ ಇಲ್ಲದೇ ಹೋಯಿತು. ಮಹಾರಾಜ ಕಾಲೇಜು ಈ ಸಮಾವೇಶಗಳಿಗೆ ಅವಕಾಶ ಮಾಡಿಕೊಟ್ಟಿದ್ದಾದರೂ ಯಾಕೆ? ಇಂಥ ಸಮಾವೇಶಗಳು ಊರ ಹೊರಗೆ ಏರ್ಪಡಿಸಲೂ ಲಾಯಕ್ಕಲ್ಲ. ಏಕೆಂದರೆ ಪಕ್ಷಕ್ಕೆ ಅಪಕೀರ್ತಿ, ಸಾಮಾನ್ಯ ಜನರಿಗೆ ವಿನಾಕಾರಣ ತೊಂದರೆ.

ಸಾಮಗ ದತ್ತಾತ್ರಿ, ಬೆಂಗಳೂರು

ಮಾತೃಭಾಷಾ ಮಾಧ್ಯಮ: ವಿಷಯಗ್ರಹಿಕೆ ತೊಡಕಾಗದು

‘ಭಾರತದಲ್ಲಿ ಹಿಂದಿಯೂ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿಯೇ ಶಿಕ್ಷಣ ನೀಡಬೇಕು ಎಂಬ ಆಗ್ರಹವಿದೆ. ಆದರೆ ಎಂಜಿನಿಯರ್, ಡಾಕ್ಟರ್ ಆಗಬೇಕು ಎಂದುಕೊಳ್ಳುವವರು ಮಾತೃಭಾಷೆಯಲ್ಲೇ ಓದಿದರೆ ಆಗುವುದಿಲ್ಲ’ ಎಂದು ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರು ಹೇಳಿರುವುದು (ಪ್ರ.ವಾ., ಆ. 12) ಆಶ್ಚರ್ಯವನ್ನು ಉಂಟುಮಾಡುತ್ತದೆ. ಏಕೆಂದರೆ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದ ಅನೇಕರು ಎಂಜಿನಿಯರುಗಳು, ಡಾಕ್ಟರುಗಳು ಆಗಿದ್ದಾರೆ. 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳಿಗೆ, ಅದರಲ್ಲೂ ವೈದ್ಯಕೀಯ ಅಥವಾ ತಾಂತ್ರಿಕ ಶಿಕ್ಷಣವನ್ನು ಆರಿಸಿಕೊಳ್ಳಬೇಕೆಂಬ ಗುರಿಯುಳ್ಳ ವಿದ್ಯಾರ್ಥಿಗಳಿಗೆ ವಿಷಯ ಜ್ಞಾನವು ಚೆನ್ನಾಗಿ ಕರಗತವಾಗಿರುತ್ತದೆ. ಹೀಗಾಗಿ, ನಂತರ ಅವರು ಎಂಜಿನಿಯರಿಂಗ್ ಅಥವಾ ವೈದ್ಯಕೀಯ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಓದಬೇಕಾದ ಸಂದರ್ಭ ಬಂದರೂ ವಿಷಯಗ್ರಹಿಕೆ ಅಷ್ಟು ತೊಡಕಾಗದು. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾತೃಭಾಷಾ ಮಾಧ್ಯಮದಲ್ಲಿಯೇ ನೀಡಬೇಕು ಎಂಬುದು ಜಗತ್ತಿನ ಶಿಕ್ಷಣ ತಜ್ಞರ ಒಮ್ಮತಾಭಿಪ್ರಾಯ ಎಂಬುದನ್ನು ಗಂಭೀರವಾಗಿ ಪರಿಗಣಿಸದಿರುವುದು ನಮ್ಮ ದೇಶದ ದುರಂತ. ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡುತ್ತಿರುವವರು ಮತ್ತು ಮಾಡಬೇಕೆಂದಿರುವವರು ಯಾವುದೇ ಕಾರಣಕ್ಕೂ ಅಧೀರರಾಗಬೇಕಿಲ್ಲ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಇದುವೇ ಮೈತ್ರಿ

ಬೆಂಗಳೂರಿಂದ ನಡೆಯಿತು
ಮೈಸೂರಿಗೆ ಪಾದಯಾತ್ರೆ
ಅಲ್ಲಿತ್ತು ಎರಡು ಪಕ್ಷಗಳ ಮೈತ್ರಿ,
ನಡೆಯುತ್ತಿದೆಯಂತೆ
ರೆಸಾರ್ಟ್‌ನತ್ತ ಕೆಲವು
ಅತೃಪ್ತರ ಯಾತ್ರೆ
ಇದುವೇ ಟೂ ಬೈ...ತ್ರೀ!

ಮ.ಗು.ಬಸವಣ್ಣ ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐಎಸ್‌ಎಸ್‌ನಲ್ಲಿ ಸಿಲುಕಿರುವ ಸುನಿತಾ, ವಿಲ್ಮೋರ್

ಬಾಹ್ಯಾಕಾಶದಲ್ಲಿ ತ್ರಿಶಂಕು ಸ್ಥಿತಿ

ಬೋಯಿಂಗ್ ಸ್ಟಾರ್‌ಲೈನರ್ ಬಾಹ್ಯಾಕಾಶ ಕೋಶ/ನೌಕೆಯ ಪರೀಕ್ಷಾರ್ಥ ಪ್ರಯಾಣದ ಭಾಗವಾಗಿ ವಾರದ ಅವಧಿಗೆ ಐಎಸ್‌ಎಸ್‌ಗೆ ತೆರಳಿದ್ದ ಭಾರತ ಮೂಲದ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರು ಎರಡು ತಿಂಗಳಿಂದ ಅಲ್ಲಿ ಸಿಲುಕಿಕೊಂಡಿದ್ದಾರೆ. ಅವರು ಭೂಮಿಗೆ ಮರಳುವ ದಿನದ ಬಗ್ಗೆ ಅನಿಶ್ಚಿತತೆ ಉಂಟಾಗಿದೆ

• ಸೂರ್ಯನಾರಾಯಣ ವಿ.

ಎಂಟು ದಿನಗಳಲ್ಲಿ ಭೂಮಿಗೆ ಮರಳುವ ಯೋಜನೆಯೊಂದಿಗೆ ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿದ್ದ ನಾಸಾ ಗಗನಯಾತ್ರಿಗಳಾದ ಬುಚ್ ವಿಲ್ಮೋರ್ ಮತ್ತು ಭಾರತ ಮೂಲದ ಸುನಿತಾ ವಿಲಿಯಮ್ಸ್ ಅವರು ಎರಡು ತಿಂಗಳಿಂದ ನಿಲ್ದಾಣದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ.

ಅವರು ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದ ಬೋಯಿಂಗ್ ಸ್ಟಾರ್‌ಲೈನರ್ ಬಾಹ್ಯಾಕಾಶ ಕೋಶ/ನೌಕೆಯಲ್ಲಿ (ಸ್ಪೇಸ್ ಕ್ಯಾಪ್ಸೂಲ್- ಇದರ ಒಳಗಡೆ ಗಗನಯಾತ್ರಿಗಳಿರುತ್ತಾರೆ. ಹಿಂದೆ ಬಳಸುತ್ತಿದ್ದ ಗಗನನೌಕೆಗೆ ಪರ್ಯಾಯವಾಗಿ ಇದನ್ನು ಈಗ ಬಳಸಲಾಗುತ್ತಿದೆ) ತಾಂತ್ರಿಕ ದೋಷ ಕಂಡುಬಂದ ಕಾರಣದಿಂದ ಪೂರ್ವನಿಗದಿಯಂತೆ ಅವರಿಗೆ ವಾಪಸ್ ಬರುವುದಕ್ಕೆ ಆಗಿಲ್ಲ. ದೋಷ ಇನ್ನೂ ಸರಿಹೋಗಿಲ್ಲ. ಸ್ಟಾರ್‌ಲೈನರ್‌ನಲ್ಲೇ ಅವರು ವಾಪಸ್ ಬರುತ್ತಾರೆಯೇ ಅಥವಾ ಇಬ್ಬರನ್ನು ಭೂಮಿಗೆ ಕರೆತರಲು ಪರ್ಯಾಯ ವ್ಯವಸ್ಥೆ ಮಾಡಲಾಗುತ್ತದೆಯೇ ಎಂಬುದನ್ನು ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ಸ್ಪಷ್ಟವಾಗಿ ಹೇಳಿಲ್ಲ. ಗಗನಯಾತ್ರಿಗಳು ವಾಪಸ್ ಬರುವ ದಿನಾಂಕದ ಬಗ್ಗೆ ಅನಿಶ್ಚಿತತೆ ಮುಂದುವರಿದಿರುವುದರಿಂದ ಅವರ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ಆತಂಕ ಸೃಷ್ಟಿಯಾಗಿದೆ.

ಇಬ್ಬರು ಐಎಸ್‌ಎಸ್‌ಗೆ ಹೋಗಿದ್ದೇಕೆ?

ನಾಸಾದ ಸಹಭಾಗಿತ್ವದಲ್ಲಿ ಬೋಯಿಂಗ್ ರೂಪಿಸಿದ್ದ ಸ್ಟಾರ್‌ಲೈನರ್ ಬಾಹ್ಯಾಕಾಶ ಕೋಶ/ನೌಕೆಯ ಮೊದಲ ಮಾನವ ಸಹಿತ ಪರೀಕ್ಷಾರ್ಥ ಪ್ರಯಾಣದ ಭಾಗವಾಗಿ ಇಬ್ಬರೂ ಗಗನಯಾತ್ರಿಗಳು ಜೂನ್ 5ರಂದು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿದ್ದರು. ಒಂದು ವಾರ ಅಲ್ಲಿದ್ದು ಜೂನ್ 14ರಂದು ಸ್ಟಾರ್‌ಲೈನರ್ ಮೂಲಕವೇ ಭೂಮಿಗೆ ಮರಳಬೇಕಾಗಿತ್ತು. ಆದರೆ, ಯೋಜಿಸಿದಂತೆ ಯಾವುದೂ ನಡೆಯಲಿಲ್ಲ. ಅನಿಶ್ಚಿತ ಸ್ಥಿತಿ ಹೀಗೆಯೇ ಮುಂದುವರಿದರೆ 2025ರ ಫೆಬ್ರುವರಿಯವರೆಗೂ ಅವರು ಅಲ್ಲೇ ಉಳಿಯಬೇಕಾಗಬಹುದು ಎಂದು ಹೇಳಲಾಗುತ್ತಿದೆ.

ಬೋಯಿಂಗ್ ಸ್ಟಾರ್‌ಲೈನರ್ ಏಕೆ?

ನಾಸಾವು ಈ ಹಿಂದೆ ಬಾಹ್ಯಾಕಾಶ ನಿಲ್ದಾಣಕ್ಕೆ ಗಗನಯಾತ್ರಿಗಳು/ ಸರಕುಗಳನ್ನು ಒಯ್ಯಲು, ಅಲ್ಲಿಂದ ಭೂಮಿಗೆ ಕರೆತರಲು ಬಾಹ್ಯಾಕಾಶ ನೌಕೆಗಳನ್ನು (ಸ್ಪೇಸ್ ಷಟಲ್) ಬಳಸುತ್ತಿತ್ತು. ಈಗ ಇವುಗಳನ್ನು ಬಳಸುತ್ತಿಲ್ಲ. ಬದಲಿಗೆ, ವಾಣಿಜ್ಯ ಉದ್ದೇಶದ ಗಗನಯಾನಿಗಳ ಕಾರ್ಯಕ್ರಮ ರೂಪಿಸಿದ್ದು, ಅದರ ಭಾಗವಾಗಿ ಎಲಾನ್ ಮಸ್ಕ್ ಒಡೆತನದ ಸ್ಪೇಸ್‌ಎಕ್ಸ್ ಮತ್ತು ಬೋಯಿಂಗ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಈ ಕಂಪನಿಗಳು ತಯಾರಿಸುವ ಆಧುನಿಕ ಬಾಹ್ಯಾಕಾಶ ಕೋಶ/ನೌಕೆಗಳನ್ನು (ಸ್ಪೇಸ್ ಕ್ಯಾಪ್ಸ್ಯೂಲ್) ಗಗನಯಾತ್ರಿಗಳ ಪ್ರಯಾಣಕ್ಕೆ ಬಳಸುವುದು ಈ ಕಾರ್ಯಕ್ರಮದ ಉದ್ದೇಶ.

ಸ್ಪೇಸ್‌ಎಕ್ಸ್ ಕಂಪನಿಯು ಈ ಯೋಜನೆಯನ್ನು ಈಗಾಗಲೇ ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದಿದ್ದು, ಅದು ತಯಾರಿಸಿರುವ, 'ಡ್ರ್ಯಾಗನ್' (DRAGON) ಎಂದು ಕರೆಯಲಾಗುತ್ತಿರುವ ಬಾಹ್ಯಾಕಾಶ ಕೋಶಗಳಲ್ಲೇ ಈಗ ಗಗನಯಾತ್ರಿಗಳು ಪ್ರಯಾಣಿಸುತ್ತಿದ್ದಾರೆ.

ವಿಮಾನ ತಯಾರಿಕಾ ಕ್ಷೇತ್ರದ ಬೃಹತ್ ಕಂಪನಿ ಬೋಯಿಂಗ್ ಕೂಡ ಈ ಕೋಶಗಳನ್ನು ತಯಾರಿಸುತ್ತಿದ್ದು, ಅದಕ್ಕೆ ಸ್ಟಾರ್‌ಲೈನರ್ ಎಂದು ಹೆಸರಿಟ್ಟಿದೆ. ಸ್ಪೇಸ್‌ಎಕ್ಸ್‌ಗೆ ಹೋಲಿಸಿದರೆ, ಬೋಯಿಂಗ್ ಕಂಪನಿಯ ಯೋಜನೆ ಅನುಷ್ಠಾನ ನಿಧಾನವಾಗಿದೆ.

ಏಳು ಗಗನಯಾತ್ರಿಗಳನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯದ ಸ್ಟಾರ್‌ಲೈನರ್‌ನ ಮೊದಲ ಪರೀಕ್ಷಾರ್ಥ ಪ್ರಯಾಣ 2019ರಲ್ಲಿ ಮಾನವರಹಿತವಾಗಿ ನಡೆದಿತ್ತು. ಆಗ ಕಕ್ಷೆಗೆ ಸೇರಲು ಯಶಸ್ವಿಯಾಗಿದ್ದ ಅದಕ್ಕೆ ಬಾಹ್ಯಾಕಾಶ ನಿಲ್ದಾಣಕ್ಕೆ ತಲುಪಲು ಸಾಧ್ಯವಾಗಿರಲಿಲ್ಲ. 2022ರಲ್ಲಿ ಮತ್ತೊಮ್ಮೆ ನಡೆಸಿದ ಪರೀಕ್ಷೆ ಯಶಸ್ವಿಯಾಗಿತ್ತು. ಭೂಮಿಗೆ ಹಿಂದಿರುಗಿದ ಕೋಶದಲ್ಲಿ ಹಲವು ದೋಷಗಳು ಇದ್ದುದನ್ನು ನಂತರ ಪತ್ತೆ ಮಾಡಲಾಗಿತ್ತು.

ಮೂರನೇ ಹಂತದಲ್ಲಿ ಮಾನವ ಸಹಿತ ಪರೀಕ್ಷಾರ್ಥ ಪ್ರಯಾಣ ಹಮ್ಮಿಕೊಳ್ಳಲು ನಡೆಸಲು ನಾಸಾ ಮತ್ತು ಬೋಯಿಂಗ್ ಸಿದ್ಧತೆ ನಡೆಸಿದ್ದವು. ಸ್ಟಾರ್‌ಲೈನರ್‌ನ ಅಭಿವೃದ್ಧಿಯಲ್ಲಿ ಹಲವು ವರ್ಷಗಳಿಂದ ತೊಡಗಿಸಿಕೊಂಡಿದ್ದ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರು ಮೊದಲ ಮಾನವ ಸಹಿತ ಪರೀಕ್ಷಾರ್ಥ ಬಾಹ್ಯಾಕಾಶ ಪ್ರಯಾಣಕ್ಕೆ ಆಯ್ಕೆಯಾಗಿದ್ದರು.

ಜೂನ್ 1ರಂದೇ ನೌಕೆ ನಭಕ್ಕೆ ಚಿಮ್ಮಬೇಕಿತ್ತು. ಆದರೆ, ಇದನ್ನು ಹೊತ್ತೊಯ್ಯಬೇಕಿದ್ದ ಅಟ್ಲಾಸ್–5 ರಾಕೆಟ್‌ನಲ್ಲಿ ದೋಷ ಕಂಡು ಬಂದ ಕಾರಣಕ್ಕೆ ಕೊನೆ ಕ್ಷಣದಲ್ಲಿ ಉಡಾವಣೆ ಮುಂದೂಡಲಾಗಿತ್ತು.

ಐಎಸ್‌ಎಸ್ ತಲುಪಿದ ನಂತರ ಏನಾಯಿತು?

ಜೂನ್ 5ರಂದು ಸ್ಟಾರ್‌ಲೈನರ್ ಹೊತ್ತೊಯ್ದಿದ್ದ ರಾಕೆಟ್ ಫ್ಲಾರಿಡಾದಿಂದ ಬಾಹ್ಯಾಕಾಶದತ್ತ ಚಿಮ್ಮಿತು. 6ರಂದು ಬಾಹ್ಯಾಕಾಶ ನಿಲ್ದಾಣದ ಬಳಿ ತಲುಪಿದ ಸ್ಟಾರ್‌ಲೈನರ್ ನೌಕೆಯ ನೋದಕ ವ್ಯವಸ್ಥೆ ಮತ್ತು ಎಂಜಿನ್‌ಗಳಲ್ಲಿ (ಥ್ರಸ್ಟರ್‌ಗಳು) ದೋಷ ಕಂಡಿದ್ದರಿಂದ ನೌಕೆಯನ್ನು ಬಾಹ್ಯಾಕಾಶ ನಿಲ್ದಾಣಕ್ಕೆ ಜೋಡಿಸಲು (DOCKING) ಇಬ್ಬರೂ ಗಗನಯಾತ್ರಿಗಳು ಪ್ರಯಾಸ ಪಡಬೇಕಾಯಿತು. ಸ್ವಯಂಚಾಲಿತವಾಗಿ ನಡೆಯಬೇಕಾಗಿದ್ದ ಈ ಪ್ರಕ್ರಿಯೆಯನ್ನು ಗಗನಯಾತ್ರಿಗಳು ಮಧ್ಯಪ್ರವೇಶಿಸಿ (ಮ್ಯಾನ್ಯುವಲ್) ಮಾಡಬೇಕಾಯಿತು. ಜೂನ್ 14ರಂದು ಸ್ಟಾರ್‌ಲೈನರ್, ನಿಲ್ದಾಣದಿಂದ ಬೇರ್ಪಟ್ಟು ಭೂಮಿಗೆ ಬರಬೇಕಾಗಿತ್ತು. ತಾಂತ್ರಿಕ ಸಮಸ್ಯೆ ಬಗೆಹರಿಯದೇ ಇರುವುದರಿಂದ ಮರುಪ್ರಯಾಣ ಸಾಧ್ಯವಾಗಿಲ್ಲ. ಹೀಗಾಗಿ ಸುನಿತಾ ಮತ್ತು ವಿಲ್ಮೋರ್ ಬಾಹ್ಯಾಕಾಶದಲ್ಲೇ ದಿನದೂಡುವಂತಾಗಿದೆ. ನಿಲ್ದಾಣದಲ್ಲಿ ವಿವಿಧ ಪ್ರಯೋಗಗಳಲ್ಲಿ ತೊಡಗಿರುವ ಇತರ ಏಳು ಗಗನಯಾತ್ರಿಗಳ ಕೆಲಸಗಳಿಗೆ ಇವರಿಬ್ಬರು ಸದ್ಯ ನೆರವಾಗುತ್ತಿದ್ದಾರೆ.

ಆಧಾರ: ಎಎಫ್‌ಪಿ, ನ್ಯೂಯಾರ್ಕ್ ಟೈಮ್ಸ್, ಎಪಿ, ನಾಸಾ, ಬೋಯಿಂಗ್ ವೆಬ್‌ಸೈಟ್‌ಗಳು. ಚಿತ್ರಗಳು: ನಾಸಾ, ಬೋಯಿಂಗ್ ವೆಬ್‌ಸೈಟ್, ಬೋಯಿಂಗ್ ಸ್ಪೇಸ್, ಸುನಿತಾ ಎಕ್ಸ್ ಖಾತೆ

3
ಇಬ್ಬರೂ ಗಗನಯಾತ್ರಿಗಳು ಬಾಹ್ಯಾಕಾಶ ನಿಲ್ದಾಣಕ್ಕೆ ನೀಡಿರುವ ಭೇಟಿ

322
ಈ ಹಿಂದಿನ ಎರಡು ಭೇಟಿಯ ವೇಳೆ ಸುನಿತಾ ಬಾಹ್ಯಾಕಾಶ ನಿಲ್ದಾಣದಲ್ಲಿ ಕಳೆದ ದಿನಗಳು

178
ಈ ಹಿಂದೆ ನಿಲ್ದಾಣದಲ್ಲಿ ವಿಲ್ಮೋರ್ ವಾಸವಿದ್ದ ದಿನಗಳು


ಬೋಯಿಂಗ್ ಸ್ಟಾರ್‌ಲೈನರ್

ಜೂನ್ 5
ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರು ಬೋಯಿಂಗ್ ಸ್ಟಾರ್‌ಲೈನರ್ ಬಾಹ್ಯಾಕಾಶ ಕೋಶದಲ್ಲಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪಯಣಿಸಿದರು

8 ದಿನ
ಇಬ್ಬರೂ ಗಗನಯಾತ್ರಿಗಳು ಬಾಹ್ಯಾಕಾಶ ನಿಲ್ದಾಣದಲ್ಲಿ ಇರಬೇಕಾಗಿದ್ದ ಅವಧಿ

ಜೂನ್ 14
ಭೂಮಿಗೆ ಮರಳಬೇಕಾಗಿದ್ದ ದಿನ

ಪ್ರಯಾಣ ಸುಲಭವಲ್ಲ

400 ಕಿ.ಮೀ ದೂರದಲ್ಲಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿ ಬರುವುದು ಸುಲಭವಲ್ಲ. ಗಗನಯಾತ್ರಿಗಳು ಒಮ್ಮೆ ಹೋದರೆ ಕನಿಷ್ಠ ಆರು ತಿಂಗಳು ನಿಲ್ದಾಣದಲ್ಲಿ ಇರಬೇಕಾಗುತ್ತದೆ. ವರ್ಷದವರೆಗೂ ಉಳಿಯಬೇಕಾದ ಪರಿಸ್ಥಿತಿ ಬರಬಹುದು. ಗಗನಯಾನಿಗಳು ಇದೆಲ್ಲದಕ್ಕೂ ಸಜ್ಜಾಗಿರುತ್ತಾರೆ. ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡಿರುತ್ತಾರೆ.

ಸುನಿತಾ ಮತ್ತು ವಿಲ್ಮೋರ್ ಅವರು ವಾರದ ಮಟ್ಟಿಗೆ ಹೋದವರು. 2025ರ ಫೆಬ್ರುವರಿಯವರೆಗೂ ಅಲ್ಲೇ ಉಳಿಯಬೇಕಾಗಿ ಬಂದರೆ ಅದು ಅತ್ಯಂತ ಸವಾಲಿನ ಕಾರ್ಯವಾಗುತ್ತದೆ. ಆರೋಗ್ಯ ಸಮಸ್ಯೆಗಳು ಕಾಡಬಹುದು.

ವಿಕಿರಣಗಳಿಗೆ ಸುಲಭವಾಗಿ ತೆರೆದುಕೊಳ್ಳುವುದರಿಂದ ವಿವಿಧ ಕಾಯಿಲೆಗಳಿಗೆ ಬಹುಬೇಗ ಒಳಗಾಗುವ ಅಪಾಯ ಇರುತ್ತದೆ. ಬಾಹ್ಯಾಕಾಶ ನಿಲ್ದಾಣದಲ್ಲಿ ಶೂನ್ಯ ಗುರುತ್ವ ಇರುವುದರಿಂದ ಮೂಳೆ ಸಾಂದ್ರತೆ ಕಡಿಮೆಯಾಗುವ, ಮಾಂಸ ಖಂಡಗಳು ಕ್ಷೀಣಿಸುವ ಅಪಾಯ ಎದುರಾಗಬಹುದು. ಮಾನಸಿಕವಾಗಿ ಕುಗ್ಗಬಹುದು.

ಆದರೆ, ಇಬ್ಬರೂ ಅನುಭವಿ ಗಗನಯಾತ್ರಿಗಳಾಗಿದ್ದು, ಬಾಹ್ಯಾಕಾಶದಲ್ಲಿ ಎದುರಾಗುವ ಎಂತಹದೇ ಪರಿಸ್ಥಿತಿಯನ್ನು ನಿಭಾಯಿಸಬಲ್ಲರು ಎಂಬ ವಿಶ್ವಾಸವನ್ನು ನಾಸಾ ವಿಜ್ಞಾನಿಗಳು, ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.



ಅನುಭವಿ ಗಗನಯಾನಿ ಸುನಿತಾ



ಸುನಿತಾ ವಿಲಿಯಮ್ಸ್ ಅತ್ಯಂತ ಅನುಭವಿ ಮಹಿಳಾ ಗಗನಯಾನಿ. ಬಾಹ್ಯಾಕಾಶಕ್ಕೆ ತೆರಳಿದ ಭಾರತ ಮೂಲದ ಎರಡನೇ ಮಹಿಳಾ ಗಗನಯಾತ್ರಿ. ಅವರಿಗಿಂತಲೂ ಮೊದಲು ಕಲ್ಪನಾ ಚಾವ್ಲಾ ಅವರು ಐಎಸ್‌ಎಸ್‌ಗೆ ಹೋಗಿದ್ದರು.

ಸುನಿತಾ ತಂದೆ ಡಾ.ದೀಪಕ್ ಅವರು ಗುಜರಾತ್‌ನ ಮೆಹಸನಾ ಜಿಲ್ಲೆಯವರು. 1965ರ ಸೆ.19ರಂದು ಅಮೆರಿಕದ ಒಹಿಯೊದಲ್ಲಿ ಜನಿಸಿದ್ದ ಸುನಿತಾ, ಅಮೆರಿಕ ನೌಕಾ ಪಡೆಯಲ್ಲಿ ಕ್ಯಾಪ್ಟನ್ ಆಗಿದ್ದವರು. 1998ರಲ್ಲಿ ನಾಸಾವು ಅವರನ್ನು ಗಗನಯಾತ್ರಿಯನ್ನಾಗಿ ಆಯ್ಕೆ ಮಾಡಿತು.

58 ವರ್ಷ ವಯಸ್ಸಿನ ಅವರು ಇದಕ್ಕೂ ಮೊದಲು ಎರಡು ಬಾರಿ (2007, 2012) ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದರು. ಮೊದಲ ಬಾರಿ ಹೋಗಿದ್ದಾಗ ನಾಲ್ಕು ಬಾರಿ ಬಾಹ್ಯಾಕಾಶ ನಡಿಗೆ ಮಾಡಿ ಅತಿ ಹೆಚ್ಚು ಬಾಹ್ಯಾಕಾಶ ನಡಿಗೆ ಕೈಗೊಂಡ ಮಹಿಳಾ ಗಗನಯಾನಿ ಎಂದು ದಾಖಲೆ ಬರೆದಿದ್ದರು. ಎರಡನೇ ಬಾರಿ ಭೇಟಿ ನೀಡಿದ್ದ ಸಂದರ್ಭದಲ್ಲಿ, ನಿಲ್ದಾಣದ ಹೊರಭಾಗದ ದುರಸ್ತಿಗಾಗಿ ಮೂರು ಬಾರಿ ಬಾಹ್ಯಾಕಾಶ ನಡಿಗೆ ಕೈಗೊಂಡಿದ್ದರು. ಎರಡು ಅವಧಿಯಲ್ಲಿ ಅವರು ಒಟ್ಟು 322 ದಿನಗಳನ್ನು ಬಾಹ್ಯಾಕಾಶ ನಿಲ್ದಾಣದಲ್ಲಿ ಕಳೆದಿದ್ದಾರೆ.

ಇದು ಬಾಹ್ಯಾಕಾಶ ನಿಲ್ದಾಣಕ್ಕೆ ಅವರ ಮೂರನೇ ಭೇಟಿ. ಅವರಿಗೆ ಪತಿ ಮೈಕೆಲ್ ಇದ್ದಾರೆ.

ಕಾಡುವ ಕಲ್ಪನಾ ಸಾವು



ಸುನಿತಾ ಮತ್ತು ವಿಲ್ಮೋರ್ ಸ್ಟಾರ್‌ಲೈನರ್ ನೌಕೆಯಲ್ಲೇ ವಾಪಸ್ ಬರಬಹುದು ಎಂದು ಹೇಳಲಾಗುತ್ತಿದ್ದರೂ ಭೂಮಿಗೆ ಮರಳುವಾಗ ಏನಾದರೂ ಅನಾಹುತವಾದರೆ ಎಂಬ ಆತಂಕ ಕಾಡುತ್ತಿದೆ.

ಭಾರತ ಮೂಲದ ಗಗನಯಾತ್ರಿ ಕಲ್ಪನಾ ಚಾವ್ಲಾ ಅವರು, 2003ರ ಫೆ.1ರಂದು ಕೊಲಂಬಿಯಾ ಬಾಹ್ಯಾಕಾಶ ನೌಕೆಯಲ್ಲಿ ಭೂಮಿಗೆ ಮರಳುತ್ತಿದ್ದ ಸಂದರ್ಭದಲ್ಲಿ ಸಂಭವಿಸಿದ ದುರಂತದಲ್ಲಿ ಮೃತಪಟ್ಟಿದ್ದರು. ನೌಕೆಯು ಭೂ ವಾತಾವರಣ ಪ್ರವೇಶಿಸುವಾಗ ಹೊತ್ತಿ ಉರಿದಿತ್ತು. ಚಾವ್ಲಾ ಸೇರಿದಂತೆ ಏಳು ಗಗನಯಾತ್ರಿಗಳು ಅಸುನೀಗಿದ್ದರು.

ನೌಕೆಯ ಉಡಾವಣೆ ಸಂದರ್ಭದಲ್ಲಿ ನೌಕೆಯ ಉಷ್ಣ ನಿರೋಧಕ ವ್ಯವಸ್ಥೆಗೆ ಆದ ಹಾನಿಯಿಂದಾಗಿ ಈ ದುರಂತ ಸಂಭವಿಸಿತ್ತು ಎಂದು ಹೇಳಲಾಗಿತ್ತು.

ಬಾಹ್ಯಾಕಾಶದಲ್ಲಿ 178 ದಿನ



ಬುಚ್ ವಿಲ್ಮೋರ್ ಕೂಡ ಅಮೆರಿಕ ನೌಕಾ ಪಡೆಯ ನಿವೃತ್ತ ಕ್ಯಾಪ್ಟನ್. 61 ವರ್ಷ ವಯಸ್ಸಿನ ವಿಲ್ಮೋರ್, ಅಮೆರಿಕದ ಟೆನೆಸ್ಸಿಯವರು. 2000ದಲ್ಲಿ ಅವರು ಗಗನಯಾತ್ರಿಯಾಗಿ ಆಯ್ಕೆಯಾಗಿದ್ದರು. ಇವರು ಕೂಡ ಈ ಹಿಂದೆ ಎರಡು ಬಾರಿ (2009 ಮತ್ತು 2015) ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದರು. ನಾಲ್ಕು ಬಾರಿ ಬಾಹ್ಯಾಕಾಶ ನಡಿಗೆ ಕೈಗೊಂಡಿರುವ ಅವರು ಒಟ್ಟು 178 ದಿನಗಳನ್ನು ಐಎಸ್‌ಎಸ್‌ನಲ್ಲಿ ಕಳೆದಿದ್ದಾರೆ.

ಮುಂದೇನು?



ಈ ಪ್ರಶ್ನೆಗೆ ನಾಸಾ ಇನ್ನೂ ಸ್ಪಷ್ಟವಾಗಿ ಏನೂ ಹೇಳಿಲ್ಲ. ಸ್ಟಾರ್‌ಲೈನರ್‌ನಲ್ಲಿನ ದೋಷಗಳು ಪರಿಹಾರವಾಗಲಿವೆ ಎಂಬ ವಿಶ್ವಾಸದಲ್ಲಿ ನಾಸಾ, ಬೋಯಿಂಗ್ ಇವೆ. ಯೋಜನೆಯಂತೆ ಅದರಲ್ಲೇ ಇಬ್ಬರೂ ಭೂಮಿಗೆ ಮರಳಲು ಸಾಧ್ಯ ಎಂಬ ನಿರೀಕ್ಷೆಯಲ್ಲಿ ವಿಜ್ಞಾನಿಗಳಿದ್ದಾರೆ. ಇದೇ ವೇಳೆ, ಇಬ್ಬರನ್ನು ಭೂಮಿಗೆ ಕರೆತರಲು ಪರ್ಯಾಯ ಮಾರ್ಗದ ಬಗ್ಗೆಯೂ ನಾಸಾ ಯೋಚಿಸುತ್ತಿದೆ ಎಂದು ಹೇಳಲಾಗುತ್ತಿದೆ. ಪರ್ಯಾಯ ಮಾರ್ಗ ಎಂದರೆ ಸ್ಪೇಸ್‌ಎಕ್ಸ್‌ನ ಡ್ರ್ಯಾಗನ್ ಕೋಶ/ನೌಕೆಯಲ್ಲಿ ಅವರನ್ನು ಕರೆತರುವುದು. ಸ್ಪೇಸ್‌ಎಕ್ಸ್‌ನ ನೌಕೆಯ ಉಡಾವಣೆಗೆ ಇದೇ 18ರಂದು ದಿನಾಂಕ ನಿಗದಿಪಡಿಸಲಾಗಿದೆ. ಈ ನೌಕೆಯಲ್ಲಿ ಭೂಮಿಗೆ ಮರಳುವುದಾದರೂ ಅದಕ್ಕೆ ಇನ್ನೂ ಆರು ತಿಂಗಳ ಕಾಲ ಕಾಯಬೇಕು. ಆದರೆ, ಈ ಬಗ್ಗೆ ನಾಸಾ ಇನ್ನೂ ಸ್ಪೇಸ್‌ಎಕ್ಸ್ ಕಂಪನಿ ಜೊತೆ ಮಾತುಕತೆ ನಡೆಸಿಲ್ಲ ಎಂದು ವರದಿಯಾಗಿದೆ.

ಇಬ್ಬನಿ ತಬ್ಬಿದ ಇಳೆಯಲಿ 'ರಾಧೆ'


ಮಯೂರಿ ನಟರಾಜ್

ರಕ್ಷಿತ್ ಶೆಟ್ಟಿ ಸಾರಥ್ಯದ ಪರಂವಃ ಸ್ಟುಡಿಯೋಸ್ ನಿರ್ಮಾಣ ಮಾಡಿರುವ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ ತೆರೆಗೆ ಬರಲು ಸಜ್ಜಾಗುತ್ತಿದೆ. ಚಿತ್ರದ ಪ್ರಚಾರ ಕಾರ್ಯ ಆರಂಭಿಸಿರುವ ಚಿತ್ರತಂಡ ಈಗಾಗಲೇ ಮೂರು ಹಾಡುಗಳನ್ನು ಬಿಡುಗಡೆ ಮಾಡಿದೆ. ಇತ್ತೀಚೆಗಷ್ಟೇ ಚಿತ್ರದ ನಾಲ್ಕನೇ ಹಾಡು 'ರಾಧೆ' ರಿಲೀಸ್ ಆಗಿದೆ. ಈ ಹಾಡಿಗೆ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದ 'ಕಡಲನು ಕಾಣ ಹೊರಟಿರೋ..' ಹಾಡು ಹಾಡಿದ್ದ ಶ್ರೀಲಕ್ಷ್ಮಿ ಬೆಳ್ಮಣ್ ಧ್ವನಿಯಾಗಿದ್ದಾರೆ. 'ದಿ ವೆಡ್ಡಿಂಗ್ ಸಾಂಗ್' ಎಂದೇ ಈ ಹಾಡನ್ನು ಚಿತ್ರತಂಡ ಕರೆದಿದ್ದು, ಮದುವೆ ರೀಲ್ಸ್‌ಗಳಲ್ಲಿ ಇದರ ಬಳಕೆ ಹೆಚ್ಚಾಗಲಿದೆ. ಚಂದ್ರಜಿತ್ ಬೆಳ್ಳಿಯಪ್ಪ ಕಥೆ-ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ ಮ್ಯೂಸಿಕಲ್ ಲವ್ ಸ್ಟೋರಿ ಟ್ರ್ಯಾಕ್‌ನಲ್ಲಿದೆ.

ಸಿನಿಮಾದಲ್ಲಿ 'ಪಂಚತಂತ್ರ' ಖ್ಯಾತಿಯ ವಿಹಾನ್ ಹಾಗೂ 'ನಮ್ಮನೆ ಯುವರಾಣಿ' ಖ್ಯಾತಿಯ ಅಂಕಿತಾ ಅಮರ್ ಹಾಗೂ ಮಯೂರಿ ನಟರಾಜ್ ನಟಿಸಿದ್ದಾರೆ. 'ರಾಧೆ' ಹಾಡಿನಲ್ಲಿ ಮಯೂರಿ ನಟರಾಜ್ ಹೆಜ್ಜೆ ಹಾಕಿದ್ದಾರೆ. ಗಗನ್ ಬಡೇರಿಯಾ ಅವರು ಸಂಗೀತ ಸಂಯೋಜಿಸಿರುವ ಈ ಗೀತೆಯ ಸಾಹಿತ್ಯವನ್ನು ಚಂದ್ರಜಿತ್ ಅವರೇ ಬರೆದಿದ್ದಾರೆ. ಸೆಪ್ಟೆಂಬರ್‌ನಲ್ಲಿ ಮೊದಲ ವಾರದಲ್ಲಿ ಸಿನಿಮಾ ರಿಲೀಸ್‌ಗೆ ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ಕೆಆರ್‌ಜಿಯಿಂದ 'ಪೆಪೆ' ಸಿನಿಮಾ ವಿತರಣೆ


ವಿನಯ್ ರಾಜ್‌ಕುಮಾರ್

ನಟ ವಿನಯ್ ರಾಜ್‌ಕುಮಾರ್ ನಟನೆಯ 'ಪೆಪೆ' ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದ್ದು, ಚಿತ್ರವನ್ನು ಕೆಆರ್‌ಜಿ ಸ್ಟುಡಿಯೋಸ್ ಸಂಸ್ಥೆ ರಾಜ್ಯದಲ್ಲಿ ವಿತರಣೆ ಮಾಡಲಿದೆ.

ಇತ್ತೀಚೆಗಷ್ಟೇ ಪ್ರಚಾರದ ಅಂಗವಾಗಿ ಚಿತ್ರತಂಡ 'ಪೆಪೆ ಪ್ರಿಸೆಟ್' ಹೆಸರಿನ ಹಾಡೊಂದನ್ನು ಬಿಡುಗಡೆ ಮಾಡಿತ್ತು. ಚಿತ್ರಕ್ಕೆ ಸೆನ್ಸಾರ್ ಮಂಡಳಿಯು 'ಎ' ಪ್ರಮಾಣಪತ್ರ ನೀಡಿದ್ದು, ವಿನಯ್ ರಾಜ್‌ಕುಮಾರ್ 'ಪೆಪೆ' ಸಿನಿಮಾದಲ್ಲಿ ಮಾಸ್ ಅವತಾರ ತಾಳಿದ್ದಾರೆ.

ನಿರ್ದೇಶಕ ಶ್ರೀಲೇಶ್ ಎಸ್. ನಾಯರ್ ನಿರ್ದೇಶನದಲ್ಲಿ ವಿನಯ್ ರಗಡ್ ಲುಕ್‌ನಲ್ಲಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಹಳ್ಳಿ ಬ್ಯಾಕ್‌ಡ್ರಾಪ್‌ನಲ್ಲಿ ನಡೆಯುವ ಚಿತ್ರ ಇದಾಗಿದ್ದು, ಇದುವರೆಗೂ ಈ ರೀತಿಯ ಪಾತ್ರದಲ್ಲಿ ವಿನಯ್ ಕಾಣಿಸಿಕೊಂಡಿಲ್ಲ. ಸಿನಿಮಾದಲ್ಲಿ ನಾಯಕಿಯಾಗಿ ಕಾಜಲ್ ಕುಂದರ್ ನಟಿಸಿದ್ದು, ಮಯೂರ್ ಪಟೇಲ್, ಯಶ್ ಶೆಟ್ಟಿ, ಬಲ ರಾಜವಾಡಿ, ಮೇದಿನಿ ಕೆಳಮನೆ, ಅರುಣಾ ಬಾಲರಾಜ್, ನವೀನ್ ಡಿ. ಪಡೀಲ್ ಮುಂತಾದವರು ತಾರಾಗಣದಲ್ಲಿದ್ದಾರೆ. ಚಿತ್ರಕ್ಕೆ ಅಭಿಷೇಕ್ ಜಿ. ಕಾಸರಗೋಡು ಛಾಯಾಚಿತ್ರಗ್ರಹಣ, ಪೂರ್ಣಚಂದ್ರ ತೇಜಸ್ವಿ ಅವರ ಸಂಗೀತ ನಿರ್ದೇಶನವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಶಾಲೆಯ ಬೆಲ್ಲು ಮತ್ತೆ ಕೇಳಿಸುತ್ತಿದೆ...

ನುಡಿ ಬೆಳಗು





ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಒಂದು ದಿನ ನನ್ನ ಹೆಂಡತಿಯ ಕಳೆದುಹೋಗಿದ್ದ ಬಾಲ್ಯದ ಕ್ಲಾಸ್‌ಮೇಟ್ ಇಲೆನಾ, ಅದು ಹೇಗೋ ನಮ್ಮನೆ ಪತ್ತೆ ಹಚ್ಚಿ ಬಂದೇ ಬಿಟ್ಟರು. ಮಾತಿನಲ್ಲಿ, ಚೈತನ್ಯದಲ್ಲಿ, ಧೀಮಂತಿಕೆಯಲ್ಲಿ ಈ ಇಲೆನಾ ದಿಟ್ಟ ಹೆಣ್ಣುಮಗಳು. ತುಂಬಾ ವರ್ಷದ ನಂತರ ಸಿಕ್ಕ ಗೆಳತಿಯರಿಬ್ಬರೂ ಮಾತಿಗೆ ಕೂತರು. ನೆನಪುಗಳು ತಮ್ಮ ಪ್ರೈಮರಿ ಶಾಲೆಯ ದಿನಗಳ ಕಡೆಗೆ ಜಾರಿದವು.

ಇಲೆನಾಗೆ ಅದ್ಭುತ ನೆನಪಿನ ಶಕ್ತಿ ಇತ್ತು. ಬಾಲ್ಯದ ಅನೇಕ ಮಿತ್ರರ ಹೆಸರುಗಳನ್ನೂ ಹಾಜರಾತಿ ಹಾಕಿದಂತೆ ಹೇಳಿದರು. ನಲವತ್ತು ವರ್ಷಗಳ ನಂತರವೂ ಹೀಗೆ ತಮ್ಮ ಬಾಲ್ಯದ ಗೆಣೆಕಾರರನ್ನು ನೆನಪಿಟ್ಟುಕೊಳ್ಳುವುದು ನಿಜಕ್ಕೂ ಅಸಾಧ್ಯದ ಮಾತು. ಎಳವೆಯಲ್ಲಿ ಒಟ್ಟಿಗೆ ಓದಿದ ಸಹಪಾಟಿಗಳು ಕಾಲಚಕ್ರಕ್ಕೆ ಸಿಕ್ಕು ಎಲ್ಲೆಲ್ಲಿಯೋ ಹೊರಟು ಹೋಗಿರುತ್ತಾರೆ. ಇವರನ್ನೆಲ್ಲಾ ಒಟ್ಟುಗೂಡಿಸುವುದು ತೀರಾ ಕಷ್ಟದ ಕೆಲಸ. ಎಲ್ಲರನ್ನೂ ಒಟ್ಟಿಗೆ ಸೇರಿಸಿದರೆ ಎಷ್ಟು ಚೆನ್ನಾಗಿರುತ್ತೆ ಅಲ್ಲವೇನೇ ಎಂದು ಪರಸ್ಪರ ಚರ್ಚಿಸಿಕೊಂಡರು. ನನಗೆ ಯಾಕೋ ಇದು ಖಂಡಿತ ಸಾಧ್ಯವಿಲ್ಲದ ಮಾತು ಎಂದೆನಿಸಿತು. ಆಚ್ಚರಿ ಎಂದರೆ ಪ್ರತಿ ವರ್ಷವೂ ಒಂದಿಬ್ಬರನ್ನು ಹೆರಕುತ್ತಾ, ಅವರ ಮೂಲಕ ಮತ್ತೊಬ್ಬರ ವಿಳಾಸ ಪಡೆಯುತ್ತಾ, ಅಂತೂ ಇಂತೂ ಹತ್ತು ವರ್ಷದಲ್ಲಿ ಎಲ್ಲರನ್ನೂ ಗುಡ್ಡೆ ಹಾಕಿಯೇ ಬಿಟ್ಟರು. ಮೊದಲಿಗೆ ತಾವು ಓದಿದ ಪ್ರಾಥಮಿಕ ಶಾಲೆಯಲ್ಲಿ ಎಲ್ಲರೂ ಒಂದು ದಿನ ಕಲೆತರು.

ತಮ್ಮನ್ನು ಓದಿಸಿದ ಮೇಷ್ಟ್ರುಗಳಿಗೆ ವಂದಿಸಿದರು. ಶಾಲೆಗೆ ಕೈಲಾದ ಸಹಾಯ ಮಾಡಿದರು. ನಂತರ ಪರಸ್ಪರ ತಮ್ಮ ತಮ್ಮ ಕುಟುಂಬಗಳನ್ನು ಪರಿಚಯಿಸುವ ಹೊಸ ಕಾರ್ಯಕ್ರಮ ಹಾಕಿಕೊಂಡರು. ಪ್ರತಿಸಲವೂ ಒಬ್ಬೊಬ್ಬರ ಮನೆಯಲ್ಲಿ ಎಲ್ಲರೂ ಸೇರುವುದು. ಒಟ್ಟಿಗೆ ಊಟ, ಹಾಡು, ಮಾತಿನ ಸಂತೋಷಗಳ ಸೇರಿಸಿ ಹಳೆಯ ನೆನಪಿನ ದಿನಗಳಿಗೆ ಜೀವ ಕೊಟ್ಟರು. ಸದ್ಯದ ಜೀವನದಲ್ಲಿ ಒಬ್ಬೊಬ್ಬರದು ಒಂದೊಂದು ಕಥೆ. ಕೆಲವರ ಜೀವನ ಹಸಿರಾದರೆ, ಹಲವರದು ಮುರಿದು ಹೋದ, ಬಾಡಿ ನೊಂದ ಕಥೆಗಳು. ಸುಖ ಸಂಪತ್ತು ಗಳಿಸಿದವರು, ಕಳಕೊಂಡವರು, ಗೆದ್ದವರು, ಹೀಗೆ ಹಲವು ಪರಿಯ ಮುಖಗಳು. ಇರುವ ಸಂಕಷ್ಟಗಳ ಮರೆತು ಮತ್ತೆ ಮಕ್ಕಳಂತೆ ಹಾಡಿ ನಲಿಯುತ್ತಾ, ಕೂಡಿ ಕಷ್ಟ ಸುಖಗಳನ್ನು ಹಂಚಿಕೊಳ್ಳುವ ಸಂದರ್ಭ ಹುಟ್ಟಿತು. ಪರಸ್ಪರ ಧೈರ್ಯ ಸಾಂತ್ವನ, ಸಹಾಯ ಸಲ್ಲಿಸುವ ಮಧುರ ಕ್ಷಣಗಳು ಸಿಕ್ಕವು.

ಎಲ್ಲರ ಬದುಕಿನಲ್ಲೂ ಹೀಗೆ ಬಾಲ್ಯದ ನೆನಪುಗಳು, ಬಾಲ್ಯದ ಗೆಳೆಯರ ಜೊತೆ ಕಳೆದ ಅಪೂರ್ವ ನೆನಪಿನ ಕ್ಷಣಗಳ ರಾಶಿಯೇ ಇರುತ್ತದೆ. ಈ ಬಾಲ್ಯದ ಬುತ್ತಿ ಬಿಚ್ಚಲು ಇದಕ್ಕೊಂದು ಸಂತೋಷದ ಸ್ಪರ್ಶ ಸಿಗಲು ಪ್ರೈಮರಿಯ ಗೆಳೆಯ ಗೆಳತಿಯರೇ ಬೇಕು. ಒಂದೆಡೆ ಸೇರಿದಾಗ ಮತ್ತೆ ಶಾಲೆಯ ಬೆಲ್ಲು ಹೊಡೆಯುತ್ತದೆ. ಈ ನಡು ವಯಸ್ಸಿನ ಕಾಲದಿಂದ ಜಾರಿ ಬಾಲ್ಯಕ್ಕೆ ಮರಳುವ ಹಿಗ್ಗು ಸಾಗುತ್ತಲೇ ಇರುತ್ತದೆ.

ಇತ್ತೀಚೆಗೆ ಹಳೆಯ ಗೆಳೆಯರು ಸಮೂಹ ಮಾಧ್ಯಮ ಬಳಸಿಕೊಂಡು ಒಂದಾಗುತ್ತಿದ್ದಾರೆ. ಕಳೆದು ಹೋದ ಗೆಳೆತನದ ಕಂಪ ಹುಡುಕುತ್ತಿದ್ದಾರೆ. ಇಂತಹ ಆರೋಗ್ಯಕರ ಗುಂಪುಗಳು ಹೆಚ್ಚಾಗಬೇಕು. ಜಂಜಾಟದ ಬದುಕಿನ ನೂರೆಂಟು ಗದ್ದಲದಲ್ಲಿ ಇಲ್ಲೊಂದು ಬೆಳಕಿನ ಹೊಸದಾರಿ ಕಾಣುತ್ತಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಆಗಸ್ಟ್ 14, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ನವಮಿ ಗಂ. 10-24 ನಕ್ಷತ್ರ: ಅನುರಾಧ ಗಂ. 12-13 ಯೋಗ: ಐಂದ್ರ ಗಂ. 16-06 ಕರಣ: ಕೌಲವ ಗಂ. 10-24, ಕರ್ಕಾಟಕ ಮಾಸದ 28 ನೇ ದಿನ, ಮಳೆನಕ್ಷತ್ರ: ಆಶ್ಲೇಷ 4.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-21 ಸೂರ್ಯಾಸ್ತ : 06-49
ಮುಸ್ಲಿಂ ದಿನಾಂಕ : 09 ಸಫರ್
ದಿನ ವಿಶೇಷ : ಪಾರ್ಸಿ ಹೊಸ ವರ್ಷದ ಹಿಂದಿನ ದಿನ, ಅದೃಷ್ಟ ಸಂಖ್ಯೆ : 5, 4

ಮೇಷ: ವ್ಯವಹಾರವನ್ನು ವಿಸ್ತರಿಸುವ ಯೋಜನೆ ಹಾಕಿಕೊಂಡಿದ್ದರೆ ಅದನ್ನು ಅನುಷ್ಠಾನಕ್ಕೆ ತರಲು ಸಕಾಲ. ಟ್ರಾವೆಲ್ಸ್ ಏಜೆನ್ಸಿ ಉದ್ಯೋಗದವರಿಗೆ ಲಾಭದಾಯಕ ಬೆಳವಣಿಗೆ ಇರುತ್ತದೆ.

ವೃಷಭ: ಕೋರ್ಟಿನ ಕೆಲಸಗಳನ್ನು ತ್ವರಿತಗತಿಯಲ್ಲಿ ನಡೆಸಿಕೊಡುವಂತೆ ವಕೀಲರಲ್ಲಿ ಕೇಳಿಕೊಳ್ಳಿ. ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪರಿಶ್ರಮದ ಅಗತ್ಯವಿದೆ. ಬೇಕರಿ ಪದಾರ್ಥಗಳ ಮಾರಾಟದಿಂದ ಲಾಭ ಇರುವುದು.

ಮಿಥುನ: ದಾರಿಹೋಕರ ಟೀಕೆಗಳಿಗೆ ಹೆದರದೆ ಸಕಾರಾತ್ಮಕವಾಗಿ ಮುಂದುವರಿಯಿರಿ. ಶನೈಶ್ಚರನ ಆರಾಧನೆಯಿಂದ ಜಟಿಲ ಸಮಸ್ಯೆ ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು.

ಕರ್ಕಾಟಕ: ಮೇಲಧಿಕಾರಿಗಳಿಂದ ಹೊಸ ಅವಕಾಶಗಳು ಹಾಗೂ ಪ್ರಶಂಸೆಯ ಮಾತುಗಳನ್ನು ಕೇಳುವಿರಿ. ನಿರೀಕ್ಷಿತ ಧನಾಗಮನವಿದ್ದರೂ ಆರ್ಥಿಕ ವಿಷಯಗಳಲ್ಲಿ ಎಚ್ಚರವಹಿಸಿ.

ಸಿಂಹ: ಕುಟುಂಬದಲ್ಲಿ ಊಹೆಗೂ ನಿಲುಕದಂಥ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗುತ್ತದೆ. ವಿದ್ಯಾರ್ಥಿಗಳು ಸ್ವಲ್ಪ ಶ್ರಮವಹಿಸಿ ಓದಿದರೆ ನಿರೀಕ್ಷೆಗಿಂತ ಯಶಸ್ಸು ಲಭ್ಯವಾಗುವುದು. ಹೊಸ ಒಪ್ಪಂದಗಳಿಂದ ಲಾಭವಿರಲಿದೆ.

ಕನ್ಯಾ: ಆಹಾರ ಪದಾರ್ಥ, ಉಕ್ಕು (ಕಬ್ಬಿಣ) ಗೃಹ ಬಳಕೆ ಸಾಮಾನುಗಳ ವರ್ತಕರಿಗೆ ದಿನದ ಪೂರ್ವದಲ್ಲಿ ಅಧಿಕ ಲಾಭ. ಬಂಧುಗಳ ಸಹಾಯದಿಂದ ಪುತ್ರನಿಗೆ ಕಾರ್ಯಾನುಕೂಲವಾಗುವುದು.

ತುಲಾ: ಉದ್ಯೋಗದಲ್ಲಿನ ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಮಾನಸಿಕ ಸ್ಥೈರ್ಯ ದೃಢವಾಗಿರಲಿ.

ವೃಶ್ಚಿಕ: ಸಂಶೋಧಕರಿಗೆ ಅಧ್ಯಯನಕ್ಕೆ ಅನುಕೂಲಕರ ಪುಸ್ತಕ ದೊರೆಯಲಿದೆ. ಬದುಕಿನ ಕವಲುದಾರಿಯಲ್ಲಿರುವ ನಿಮಗೆ ಮಾರ್ಗದರ್ಶನ ದೊರೆಯಲಿದೆ. ಆರೋಗ್ಯದಲ್ಲಿ ಉದಾಸೀನತೆ ತೋರುವುದು ಸರಿಯಲ್ಲ.

ಧನು: ಕಾರ್ಯಕ್ಷೇತ್ರದಲ್ಲಿನ ಹೆಚ್ಚುವರಿ ಕೆಲಸದಿಂದ ಆದ ಒತ್ತಡಗಳಿಂದ ಹೊರಬರಲು ವಿಶ್ರಾಂತಿಯ ಅಗತ್ಯವಿದೆ. ಒತ್ತಾಯಕ್ಕೆ ಬೇಡದಿರುವ ತೀರ್ಮಾನ ತೆಗೆದುಕೊಳ್ಳಬೇಡಿ. ಜೀವನದ ಬಗ್ಗೆ ನಿರುತ್ಸಾಹವನ್ನು ತಾಳದಿರಿ.

ಮಕರ: ಕೆಲಸದಲ್ಲಿ ಬದಲಾವಣೆ ಕಾಣಲಿದ್ದೀರಿ. ಜೀವನಶೈಲಿಯೂ ವಿಭಿನ್ನವಾಗಿ ಬದಲಾಗಲಿದೆ. ಅವಕಾಶಗಳನ್ನು ಸೂಕ್ತ ಬಳಸಿಕೊಂಡಲ್ಲಿ ಮುನ್ನಡೆ ಸಾಧಿಸುವಿರಿ. ಹೂವಿನ ವ್ಯಾಪಾರಿಗಳಿಗೆ ಯಶಸ್ಸು.

ಕುಂಭ: ಪಾಲಿಗೆ ಬಂದದ್ದನ್ನು ಸಂತೋಷದಿಂದ ಸ್ವೀಕರಿಸಿದಲ್ಲಿ ಅಸ್ತಿತ್ವವು ಮತ್ತು ನೆಮ್ಮದಿಯು ಉಳಿದುಕೊಳ್ಳುವುದು. ಸ್ವಂತ ಕೆಲಸವನ್ನು ಜರೂರಾಗಿ ಮಾಡಬೇಕಾಗುತ್ತದೆ. ಸಕಾಲದಲ್ಲಿ ಮಿತ್ರರ ನೆರವು ಸಿಗುವುದು.


ಮೀನ: ನಾಳೆಯ ನಿಮ್ಮ ಯೋಜನೆಗಳ ಪೂರೈಕೆಗೆ ಸಾಕಷ್ಟು ಸಮಯ ದೊರಕುವಂತೆ ಯೋಜನೆಗಳನ್ನು ಹಾಕಿಕೊಳ್ಳುವುದು ಉತ್ತಮ. ಮಕ್ಕಳ ಕೆಲವೊಂದು ವಿಚಾರಗಳು ಮಾನಸಿಕ ಸ್ಥಿತಿಯನ್ನು ಕೆಡಿಸಲಿವೆ.

ಪದಬಂಧ 5772

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚಿನ್ನದ ಗಣಿಗಾರಿಕೆಗೆ ಪ್ರಸಿದ್ಧಿಯಾಗಿರುವ ಜಿಲ್ಲೆ (3)
3.ಕುಂಟೆಯಿಂದ ಹರತೆ ಹೊಡೆ! (3)
6.ಮರದ ಹತ್ತಿರ ನಡೆದ ಯುದ್ಧ (3)
7.ಜಾನಪದ ಹಾಡುಗಳ ಒಂದು ಪ್ರಕಾರ (3)
8.ಬಿಡುವು ಹೀಗೆ ದೊರೆತಿದೆ (3)
11 ಸ್ವಾತಂತ್ರ್ಯ ಅಮೃತಮಹೋತ್ಸವ ಆಚರಣೆ ರಾಜ್ಯದಲ್ಲಿ ಉದ್ಘಾಟನೆಗೊಂಡ ಸ್ಥಳ (5)
14.ಈ ಪರಿ ಕಾಣುತ್ತಿರುವ ಆವರಣ ರೇಖೆ (3)
17.ಭವ ಕೊನೆಗಿದ್ದಾಗಿನ ಸಾಧ್ಯತೆ! (3)
18.ಮಾತು ಕೇಳಿಸಿಕೊಂಡಿರುವ ಸೋದರಮಾವ (3)
19.ತುಸು ಬೆಳಕಿರುವ ಮುಂಜಾನೆ (3)
20.ನಮ್ಮ ರಾಷ್ಟ್ರೀಯ ಧ್ವಜಗಳನ್ನು ಕೈಯಲ್ಲಿ ನೇಯ್ದು ತಯಾರಿಸುವ ಧಾರವಾಡ ಜಿಲ್ಲೆಯ ಗ್ರಾಮ (3)

ಮೇಲಿಂದ ಕೆಳಕ್ಕೆ
1.ಸಿಟ್ಟಿನ ಅಬ್ಬರ (4)
2.ದ್ರವ ಒಸರುವ ಜಿಹ್ವೆ (3)
3.ಹರನ ಮುಂದಿರಿಸಿದ ಮಣ್ಣಿನ ಬಾನಿ (3)
4.ಗುಲಾಬಿ ಹೂ ಹಿಡಿದಿರುವ ಸೇವಕ (3)
5.ಗಣಿಯ ಹತ್ತಿರ ಕಲಿತಿರುವ ಲೆಕ್ಕ ಶಾಸ್ತ್ರ (3)
9.ದಕ್ಷಿಣಭಾರತದ ಜ್ಯೋತಿರ್ಲಿಂಗ ಎಂದು ಹೆಸರಾದ ತಮಿಳುನಾಡಿನ ರಾಮನಾಥಪುರಂ ಜಿಲ್ಲೆ ದೇಗುಲ (4)
10.ಜೇನು ಬೆಟ್ಟ ಎಂಬರ್ಥದ ತಾಲ್ಲೂಕು ಕೇಂದ್ರ (4)
12.ಚತುರನಾಡುವ ಒಳಾಂಗಣ ಆಟ (4)
13.ತತ್ಪರತೆಯಿಂದ ಮಾಡುವ ವಿದ್ಯಾಭ್ಯಾಸ (3)
14.ವನದ ಹತ್ತಿರ ಬೀಸಿದ ಗಾಳಿ (3)
15.ಸೊಕ್ಕು ಹೀಗೆ ಬಂದಿದೆ (3)
16.ರಾಜನ ಸಭೆಯಿದು (3)



5771ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಾನಿ 2.ಪಿಕ
6.ಕಲರವ 8.ರೋಷ
9.ಚರಣ 10.ಅಣ್ಣ
11.ಬಹುರೂಪಿಚೌಡಯ್ಯ
12.ಜಾಣ 13.ಸುಗಮ
14.ಕನ್ನ 15.ಹರಿವಾಣ
16.ತಲೆ 17.ಜಟೆ

ಮೇಲಿಂದ ಕೆಳಕ್ಕೆ:
2.ನಿಕಷ 4.ಕರಣ
5.ಹಣೆಗಣ್ಣ 7.ವಚನಪಿತಾಮಹ
10.ಅಯ್ಯ 11.ಬಣ
12.ಜಾಯಮಾನ 13.ಸುಕೃತ
14.ಕಣಜ

ಸುಡೊಕು 6157

				2		7		3
6		9	5		7			
	3			8		6		
	7			9			3	
	9	3	6					4
4				5		8		
7			8		9			
	5						8	
	8			4		9		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6156 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ವಕೀಲ ಕೊಲೆ: ಐವರ ಬಂಧನ

ವಿಜಯಪುರ: 'ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ವಕೀಲ ರವಿ ಮೇಲಿನ ಮನಿ ಎಂಬವರಿಗೆ ಆಗಸ್ಟ್ 8 ರಂದು ಕಾರಿನಿಂದ ಡಿಕ್ಕಿ ಹೊಡೆದು, ಬಳಿಕ ಎರಡು ಕಿ.ಮೀ. ದೂರ ಶವವನ್ನು ಎಳೆದೊಯ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ತಿಳಿಸಿದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ ತುಳಸಿರಾಮ ಹರಿಜನ, ಅಲೆಕ್ಸ್ ಗೊಲ್ಲರ, ಷಣ್ಮುಖ ನಡುವಿನಕೇರಿ, ಪ್ರಕಾಶ ಗೊಲ್ಲರ ಮತ್ತು ಮುರುಗೇಶ ಉಳ್ಳಾಗಡ್ಡಿ ಎಂಬ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಕೊಲೆಯಾದ ವಕೀಲ ರವಿ ಮೇಲಿನಮನಿ ಮತ್ತು ಆರೋಪಿ ತುಳಸಿರಾಮ ಹರಿಜನ ನಡುವೆ ಐದು ತಿಂಗಳ ಹಿಂದೆ ಹೊಡೆದಾಟ ನಡೆದಿತ್ತು. ತುಳಸಿರಾಮ ಮತ್ತು ಅಲೆಕ್ಸ್ ಗೊಲ್ಲರಗೆ ರವಿ ಮೇಲಿನಮನಿಯಿಂದ ಕೊಲೆ ಬೆದರಿಕೆಯಿತ್ತು. ಆ ಸಿಟ್ಟಿಗೆ ಎಲ್ಲರೂ ಸೇರಿ, ಕೃತ್ಯವಸೆಗಿದ್ದಾರೆ ' ಎಂದು ತಿಳಿಸಿದರು.

ಆಪತ್ತಿಗೆ ಸಿಲುಕುತ್ತಿರುವ ದೇಶದ ಉದ್ಯೋಗ ಆಕಾಂಕ್ಷಿಗಳು: ರಾಜ್ಯದ ಯುವಕರ ರಕ್ಷಣೆ

ಸೈಬರ್ ವಂಚನೆ: ವಿದೇಶದಲ್ಲಿ ದಿಗ್ಬಂಧನ

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ವಂಚನೆಗೆ ನಾನಾ ತಂತ್ರ ಹೆಣೆಯುತ್ತಿರುವ ವಂಚಕರು, ಇದೀಗ ಉದ್ಯೋಗದ ಹೆಸರಿನಲ್ಲಿ ವಂಚನೆ ಜಾಲ ಸೃಷ್ಟಿಸಿಕೊಂಡು ವಿದೇಶದಲ್ಲೇ ಕುಳಿತು ಸೈಬರ್ ಅಪರಾಧ ಕೃತ್ಯ ಎಸಗುತ್ತಿದ್ದಾರೆ. ಇದಕ್ಕೆ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ಬಿಹಾರ, ಉತ್ತರ ಪ್ರದೇಶ ಸೇರಿ ಹಲವು ರಾಜ್ಯಗಳ ಯುವಕರನ್ನು ವಂಚಕರು ಬಳಸಿಕೊಳ್ಳುತ್ತಿದ್ದಾರೆ. ಉದ್ಯೋಗದ ಆಸೆಯಿಂದ ಹೋದವರು ವಿದೇಶದಲ್ಲಿ ಆಪತ್ತಿಗೆ ಸಿಲುಕುತ್ತಿದ್ದಾರೆ.

ಇದುವರೆಗೂ ದೇಶದಲ್ಲೇ ಕುಳಿತು ಕೃತಕ ಬುದ್ಧಿಮತ್ತೆಯ (ಎ.ಐ) ಮಿಮಿಕ್ರಿ, ಒಎಲ್ಎಕ್ಸ್, ಬ್ಯಾಂಕ್ ವಹಿವಾಟಿನ ಒನ್ ಟೈಂ ಪಾಸ್‌ವರ್ಡ್(ಒಟಿಪಿ), ಸಾಮಾಜಿಕ ಮಾಧ್ಯಮ ಬಳಸಿಕೊಂಡು ವಂಚಿಸುತ್ತಿದ್ದ ಸೈಬರ್ ವಂಚಕರು, ಈಗ ದೇಶದ ಯುವಕರನ್ನು ವಿದೇಶಕ್ಕೆ ಕರೆದೊಯ್ದು ಅಲ್ಲಿ 'ದಿಗ್ಬಂಧನ'ಕ್ಕೆ ಒಳಪಡಿಸಿ ಸೈಬರ್ ಅಪರಾಧ ಎಸಗಲು ಒತ್ತಡ ಹೇರುತ್ತಿದ್ದಾರೆ.

4 ದೇಶಗಳಲ್ಲಿ 'ಸ್ಕ್ಯಾಮ್ ಕಾಂಪೌಂಡ್'

ನಾಲ್ಕು ದೇಶಗಳಲ್ಲಿ ಸ್ಕ್ಯಾಮ್ ಕಾಂಪೌಂಡ್‌ನ ಕಟ್ಟಡಗಳಿವೆ. ಅಲ್ಲಿಗೆ ಕರೆದೊಯ್ದ ನಂತರ ಯುವಕರಿಗೆ ದಿಗ್ಬಂಧನ ಹಾಕಲಾಗುತ್ತದೆ. ಆಧಾರ್, ಪಾನ್ ಕಾರ್ಡ್, ಪಾಸ್‌ಪೋರ್ಟ್, ವೀಸಾ, ಸಿಮ್ ಸೇರಿ ಎಲ್ಲ ದಾಖಲೆಗಳನ್ನೂ ಕಸಿದುಕೊಳ್ಳುತ್ತಾರೆ. ಯುವಕರು ಬಳಸುತ್ತಿದ್ದ ಸಿಮ್ ನಂಬರ್‌ನಿಂದಲೇ ಭಾರತದ ಪ್ರಜೆಗಳನ್ನು ಗುರಿಯಾಗಿಸಿ ಕರೆ ಮಾಡಿಸುತ್ತಾರೆ. ಕರೆ ಮಾಡಲು ನಿರಾಕರಿಸಿದರೆ ಚಿತ್ರಹಿಂಸೆ ನೀಡಿ, ಹಲ್ಲೆ ನಡೆಸುತ್ತಾರೆ. ಊಟ ಸಹ ನೀಡುತ್ತಿಲ್ಲ. ಹಲ್ಲೆಯಿಂದ ಕೆಲವರು ಮೃತಪಟ್ಟಿರುವ ಮಾಹಿತಿ ಇದೆ. ವಂಚಕರ ಕೃತ್ಯಕ್ಕೆ ಅಲ್ಲಿನ ಸ್ಥಳೀಯರ ಬೆಂಬಲವಿದ್ದು, ತೊಂದರೆಗೆ ಸಿಲುಕಿದವರನ್ನು ಸ್ವದೇಶಕ್ಕೆ ಕರೆತರುವುದು ಕಷ್ಟವಾಗುತ್ತಿದೆ. ವಂಚನೆಯಿಂದ ಬಂದ ಹಣವನ್ನು ವಂಚಕರು ನಾನಾ ರೂಪದಲ್ಲಿ ಪಡೆದುಕೊಳ್ಳುತ್ತಿದ್ದಾರೆ ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.

ಉದ್ಯೋಗದ ಸುಳ್ಳು ಆಮಿಷದಿಂದ ವಿದೇಶಕ್ಕೆ ತೆರಳಿರುವ ಸುಮಾರು 5 ಸಾವಿರ ಮಂದಿ ಸಮಸ್ಯೆಗೆ ಸಿಲುಕಿರುವ ಮಾಹಿತಿಯಿದೆ. ಇತ್ತೀಚೆಗೆ ಕಾಂಬೋಡಿಯಾದಿಂದ ವಿವಿಧ ರಾಜ್ಯಗಳ 250 ಮಂದಿಯನ್ನು ರಕ್ಷಿಸಲಾಗಿದೆ ಎಂದು ಹೇಳಿದರು.

ವಿದೇಶಗಳಲ್ಲಿ ತೊಂದರೆಗೆ ಸಿಲುಕಿದ ರಾಜ್ಯದ ಯುವಕರ ಕುಟುಂಬಸ್ಥರು, ತಮ್ಮ ಮಕ್ಕಳನ್ನು ರಕ್ಷಿಸಿ ಕೊಡುವಂತೆ ಸೈಬರ್ ಕ್ರೈಂ ಠಾಣೆಗಳ ಮೆಟ್ಟಿಲೇರುತ್ತಿದ್ದಾರೆ.



ಯುವಕರನ್ನು ವಿದೇಶಕ್ಕೆ ಕರೆಸಿಕೊಂಡು ಸೈಬರ್ ಅಪರಾಧ ಕೃತ್ಯಕ್ಕೆ ಬಳಕೆ ಮಾಡಿಕೊಳ್ಳುತ್ತಿರುವುದು ಹೆಚ್ಚಾಗಿದೆ. ಉದ್ಯೋಗ ಆಕಾಂಕ್ಷಿಗಳು ಅಧಿಕೃತ ವೆಬ್‌ಸೈಟ್‌ನಲ್ಲೇ ಅರ್ಜಿ ಸಲ್ಲಿಸಬೇಕು

ಅನೂಪ್ ಶೆಟ್ಟಿ
ಎಸ್‌ಪಿ, ಸೈಬರ್ ಕ್ರೈಂ ವಿಭಾಗ, ಸಿಐಡಿ

ವಿದೇಶದಲ್ಲಿ ತೊಂದರೆಗೆ ಸಿಲುಕಿದ್ದ ಮಂಗಳೂರಿನ ಕೊಣಾಜೆ ಹಾಗೂ ರಾಮನಗರದ ಇಬ್ಬರು ಯುವಕರನ್ನು ರಕ್ಷಿಸಿ ಸ್ವದೇಶಕ್ಕೆ ಕರೆ ತರಲಾಗಿದೆ. ಇನ್ನೂ ಹಲವರು ದೂರು ನೀಡಿದ್ದು, ಅವರು ಯಾವ ದೇಶದಲ್ಲಿದ್ದಾರೆ ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ಸಿಐಡಿ ಸೈಬರ್ ಕ್ರೈಂ ವಿಭಾಗದ ಪೊಲೀಸರು ತಿಳಿಸಿದರು.

ಕಾಂಬೋಡಿಯಾ, ಲಾವೋಸ್, ಮ್ಯಾನ್ಮಾರ್, ಥಾಯ್ಲೆಂಡ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಕೆಲಸವಿದೆ ಎಂಬುದಾಗಿ ಟೆಲಿಗ್ರಾಂ, ಇನ್‌ಸ್ಟಾಗ್ರಾಮ್‌ನಲ್ಲಿ ಸುಳ್ಳು ಜಾಹೀರಾತು ನೀಡಲಾಗುತ್ತದೆ. ಅಲ್ಲದೇ ಉದ್ಯೋಗ ಆಕಾಂಕ್ಷಿಗಳನ್ನು ಮಧ್ಯವರ್ತಿಗಳೇ ಪತ್ತೆಹಚ್ಚಿ ಕರೆ ಮಾಡಿ, ವಿದೇಶಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸುತ್ತಾರೆ. ವಂಚಕರೇ ತಮ್ಮ ಖರ್ಚಿನಲ್ಲಿ ಅಲ್ಲಿಗೆ ಕರೆದೊಯ್ಯುತ್ತಿದ್ದಾರೆ. ಅವರನ್ನು ನಂಬಿ ಅಲ್ಲಿಗೆ ಹೋದ ನಂತರ 'ಸೈಬರ್ ಗುಲಾಮರನ್ನಾಗಿ ಬಳಸಿಕೊಳ್ಳುತ್ತಿದ್ದಾರೆ' ಎಂದು ಸಿಐಡಿ ಸೈಬರ್ ವಿಭಾಗದ ಅಧಿಕಾರಿಯೊಬ್ಬರು ಹೇಳಿದರು.

ಸುದ್ದಿ 2 ನಿಮಿಷ

'ಹಿಂದೂಗಳ ಮೇಲಿನ ದೌರ್ಜನ್ಯ ಒಗ್ಗಟ್ಟಿನಿಂದ ಖಂಡಿಸಬೇಕು'

ಬೆಂಗಳೂರು: ಬಾಂಗ್ಲಾದೇಶದಲ್ಲಿ ಹಿಂದೂ ಕುಟುಂಬಗಳು, ದೇವಸ್ಥಾನಗಳು ಮತ್ತು ಅಂಗಡಿಗಳನ್ನು ಗುರಿ ಮಾಡಿ ದಾಳಿ ನಡೆಸಲಾಗುತ್ತಿದ್ದು, ಇದನ್ನು ಭಾರತದ ಎಲ್ಲ ರಾಜಕೀಯ ಪಕ್ಷಗಳೂ ಒಗ್ಗಟ್ಟಿನಿಂದ ಖಂಡಿಸಬೇಕು ಎಂದು ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಅಶ್ವತ್ಥ ನಾರಾಯಣ ಒತ್ತಾಯಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೂಗಳ ಮನೆಗೆ ನುಗ್ಗಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಸಿ, ಗಂಡಸರನ್ನು ಕೊಲ್ಲಲಾಗುತ್ತಿದೆ. ದೇವಸ್ಥಾನಗಳಿಗೆ ಬೆಂಕಿ ಹಾಕಲಾಗುತ್ತಿದೆ. ಆದರೆ ಕಾಂಗ್ರೆಸ್ ಮತ್ತು ಅದರ ಮಿತ್ರಗಳು ಈ ದೌರ್ಜನ್ಯವನ್ನು ಖಂಡಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



ಜಗತ್ತಿನ ಇತರ ಭಾಗಗಳಲ್ಲಿ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆದಾಗ ಸೋನಿಯಾಗಾಂಧಿ, ರಾಹುಲ್‌ಗಾಂಧಿ, ಮಮತಾ ಬ್ಯಾನರ್ಜಿ ಮುಂತಾದವರು ಘಟನೆಗಳನ್ನು ಖಂಡಿಸಿ, ಮಾನವಹಕ್ಕುಗಳ ಬಗ್ಗೆ ಮಾತನಾಡುತ್ತಾರೆ. ಆದರೆ ಈಗ ಯಾರೂ ಮಾತನಾಡುತ್ತಿಲ್ಲ ಎಂದು ಟೀಕಿಸಿದರು.

ಕೇಂದ್ರದ ಮಾಜಿ ಸಚಿವ ಹಾಗೂ ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಅವರು ಭಾರತದಲ್ಲೂ ಇಂತಹ ಘಟನೆ ಆಗಬಹುದೆಂದು ಬೇಜವಾಬ್ದಾರಿ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಜಮ್ಮು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮೆಹಬೂಬ ಮುಫ್ತಿಯ ಮಗಳು ರುಬಿಯಾ ಕೂಡ ಇದೇ ಮಾದರಿಯ ಎಕ್ಸ್ ಮಾಡಿದ್ದಾರೆ. ಇದು ಖಂಡನೀಯ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ ಮಂಜುಳಾ, ರಾಜ್ಯ ವಕ್ತಾರ ನರೇಂದ್ರ ರಂಗಪ್ಪ, ಎಸ್.ಹರೀಶ್ ಇದ್ದರು.

ಗೌರವಧನ ಬಿಡುಗಡೆಗೆ ಆಗ್ರಹ

ಬೆಂಗಳೂರು: 'ತರಗತಿಗಳು ಆರಂಭವಾಗಿ ಮೂರು ತಿಂಗಳು ಕಳೆದರೂ ಗೌರವಧನ ನೀಡಿಲ್ಲ. ಕೂಡಲೇ ಗೌರವಧನ ಬಿಡುಗಡೆ ಮಾಡಬೇಕು' ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ಆಗ್ರಹಿಸಿದೆ.

'ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದು, ತಿಂಗಳಿಗೆ ₹12 ಸಾವಿರ ಗೌರವ ಧನ ನೀಡಲಾಗುತ್ತಿದೆ. ಹೆಚ್ಚಿನ ಕಾರ್ಯಭಾರ, ಅಭದ್ರತೆ ನಡುವೆಯೂ ಅತಿಥಿ ಉಪನ್ಯಾಸಕರಿಗೆ ತಿಂಗಳಿಗೆ ಸರಿಯಾಗಿ ಗೌರವಧನ ನೀಡುತ್ತಿಲ್ಲ. ಪರಿಣಾಮ ಜೀವನ ನಡೆಸುವುದೇ ಕಷ್ಟವಾಗಿದೆ. ಸರ್ಕಾರ ಹಾಗೂ ಪದವಿ ಪೂರ್ವ ಇಲಾಖೆ ಬಾಕಿ ವೇತನ ಕೂಡಲೇ ಬಿಡುಗಡೆ ಮಾಡಬೇಕು' ಎಂದು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಪದ್ಮಪ್ರಭ ಇಂದ್ರ, ಕಾರ್ಯದರ್ಶಿ ರಾಜೇಶ್ ಭಟ್ ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.



ನಾಟಿ ಕೆಲಸ... ಕೊಪ್ಪಳದ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಮಹಿಳೆಯರು ಮಂಗಳವಾರ ಭತ್ತ ನಾಟಿ ಮಾಡಿದರು –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಮುಖ್ಯಮಂತ್ರಿ ವಿರುದ್ಧ ದೂರು 20ಕ್ಕೆ ನ್ಯಾಯಾಲಯದ ಆದೇಶ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) 14 ನಿವೇಶನಗಳನ್ನು ಅಕ್ರಮವಾಗಿ ಪಡೆದಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಸೇರಿ ಐವರು ಆರೋಪಿಗಳ ವಿರುದ್ಧ ಸಿಬಿಐ ಅಥವಾ ಬೇರಾವುದೇ ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಸಲು ಆದೇಶಿಸಬೇಕು' ಎಂದು ಕೋರಲಾದ ಖಾಸಗಿ ದೂರಿನ ಸ್ವೀಕಾರಾರ್ಹತೆ ಕುರಿತಾದ ಆದೇಶವನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಇದೇ 20ಕ್ಕೆ ಕಾಯ್ದಿರಿಸಿದೆ.

ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಈ ದೂರನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮಂಗಳವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಸ್ನೇಹಮಯಿ ಕೃಷ್ಣ ಪರ ಹೈಕೋರ್ಟ್‌ನ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್, 'ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ. ಅದಾಗ್ಯೂ, ಈ ದೂರಿನ ಬಗ್ಗೆ ರಾಜ್ಯಪಾಲರಿಗೆ ಪೂರ್ವಾನುಮತಿ ನೀಡಲು ಈಗಾಗಲೇ ಕೋರಲಾಗಿದೆ. ಒಂದೊಮ್ಮೆ ರಾಜ್ಯಪಾಲರು ಪೂರ್ವಾನುಮತಿ ನೀಡದೇ ಇದ್ದರೂ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ವಿವಿಧ ಕಲಂಗಳ ಅಡಿಯಲ್ಲಿ ಇದನ್ನು ಅಪರಾಧವಾಗಿ ಪರಿಗಣಿಸಬಹುದು' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, 'ಅರ್ಜಿ ಪರಿಗಣಿಸಿ, ದೂರುದಾರರ ಹೇಳಿಕೆ ದಾಖಲಿಸಲು ರಾಜ್ಯಪಾಲರ ಪೂರ್ವಾನುಮತಿ ಅಗತ್ಯವಿದೆ. ಪೊಲೀಸರಿಂದ ತನಿಖೆಗೆ ಆದೇಶಿಸಿದರೆ ಅವರಿಗೂ ರಾಜ್ಯಪಾಲರ ಪೂರ್ವಾನುಮತಿ ಬೇಕಾಗುತ್ತದೆ. ಅಂತೆಯೇ, ಅರ್ಜಿಯನ್ನು ತಿರಸ್ಕರಿಸುವ ಆಯ್ಕೆಯೂ ಈ ನ್ಯಾಯಾಲಯದ ಮುಂದಿದೆ' ಎಂದರು.

ಆಗ ಲಕ್ಷ್ಮಿ ಅಯ್ಯಂಗಾರ್, 'ಹಾಗಾದರೆ, ಈ ಪ್ರಕರಣವನ್ನು ಐಪಿಸಿಯ ವಿವಿಧ ಕಲಂಗಳಡಿಯಾದರೂ ಪರಿಗಣಿಸಬೇಕು' ಎಂದರು. ಇದನ್ನು ಆಲಿಸಿದ ನ್ಯಾಯಾಧೀಶರು ಈ ಕುರಿತಾಗಿ ಇದೇ 20ರಂದು ಆದೇಶ ನೀಡುವುದಾಗಿ ತಿಳಿಸಿದರು.

ಮತ್ತೊಂದು ದೂರು: ಬೆಂಗಳೂರಿನ ಟಿ.ಜೆ.ಅಬ್ರಹಾಂ ಸಲ್ಲಿಸಿರುವ ಖಾಸಗಿ ದೂರು ಹಾಗೂ ಮತ್ತೊಬ್ಬ ಸಾಮಾಜಿಕ ಕಾರ್ಯಕರ್ತ ಆಲಂ ಪಾಷ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಾಧೀಶ ಸಂತೋಷ ಗಜಾನನ ಭಟ್ ಇದೇ ವೇಳೆ ವಿಚಾರಣೆ ನಡೆಸಿದರು.

ಅಬ್ರಹಾಂ ಅವರ ಖುದ್ದು ವಾದವನ್ನು ಆಲಿಸಿದ ನ್ಯಾಯಾಧೀಶರು, ರಾಜ್ಯಪಾಲರ ಪೂರ್ವಾನುಮತಿಗೆ ಸಂಬಂಧಿಸಿದಂತೆ ವಾದ ಮಂಡಿಸಲು ಅಬ್ರಹಾಂ ಅವರಿಗೆ ಸೂಚಿಸಿ ಇದೇ 21ಕ್ಕೆ ವಿಚಾರಣೆ ಮುಂದೂಡಿದರು. ಅಂತೆಯೇ, 'ಆಲಂ ಪಾಷಾ ಅವರಿಗೆ ಮಧ್ಯಂತರ ಅರ್ಜಿ ಸಲ್ಲಿಸುವ ಹಕ್ಕು ಇಲ್ಲ' ಎಂಬ ಅಭಿಪ್ರಾಯದೊಂದಿಗೆ ಅದನ್ನು ವಜಾ ಮಾಡಿದರು.

ಶಿರೂರು:ಕೇರಳ ಲಾರಿಯ ಬಿಡಿಭಾಗ ಪತ್ತೆ

ಕಾರವಾರ: ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿತ ದುರಂತದ ವೇಳೆ ಕಾಣೆಯಾಗಿದ್ದ ಕೇರಳದ ಲಾರಿಯ ಬಿಡಿಭಾಗವೊಂದು ಮುಳುಗು ತಜ್ಞ ಈಶ್ವರ ಮಲ್ಪೆ ನಡೆಸಿದ ಕಾರ್ಯಾಚರಣೆಯಲ್ಲಿ ಮಂಗಳವಾರ ಪತ್ತೆಯಾಗಿದೆ.

ಜುಲೈ 16ರಂದು ಕಾಣೆಯಾದ ಲಾರಿಯು ಗಂಗಾವಳಿ ನದಿಯಲ್ಲಿ ಸಿಲುಕಿರುವ ಬಗ್ಗೆ ಡ್ರೋನ್ ತಂತ್ರಜ್ಞನ ಆಧಾರಿತ ಶೋಧನ ಯಂತ್ರದಿಂದ ಗೊತ್ತಾಗಿತ್ತು. ಲಾರಿ ಪತ್ತೆಗೆ ನದಿಯ ರಭಸ ಅಡ್ಡಿಯಾಗಿತ್ತು. ದುರ್ಘಟನೆ ನಡೆದು 28 ದಿನಗಳ ಬಳಿಕ ನದಿಯಲ್ಲಿ ನೀರಿನ ಮಟ್ಟ ಇಳಿಕೆಯಾದ ಕಾರಣ ಈಶ್ವರ ಅವರಿಗೆ ಕಾರ್ಯಾಚರಣೆ ಸಾಧ್ಯವಾಯಿತು.

ಕರ್ನಾಟಕ ಸರ್ಕಾರ
ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೀದರ.

ಸಂ: ಕಾನಿಅ/ಪಂರಾಇಂವಿ/ಬೀದರ/ತಾಶಾ–3/2024–25/ 743 ದಿನಾಂಕ: 12–08–2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯುರ್‌ಮೆಂಟ್)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ ವಿಭಾಗ, ಬೀದರ ಇವರಿಂದ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ ಮಂಜೂರಾದ 02 ಕಾಮಗಾರಿಗಳಿಗೆ (ಕನಿಷ್ಠ ರೂ. 23,72,133.69 (Rupees Twenty Three Lakhs Seventy Two Thousand One Hundred Thirty Three and paise sixty nine only) ಮತ್ತು ಗರಿಷ್ಠ 303,71,043.33 ಮೊತ್ತದ (Rupees Three Crore Three Lakhs Seventy One Thousand Forty Three and paise thirty three only) ಗುತ್ತಿಗೆದಾರರನ್ನು ನೇಮಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ಕೆ.ಡಬ್ಲ್ಯೂ–02 ಮತ್ತು 04ರ ನಿಬಂಧನೆಗೊಳಪಟ್ಟು ಕೆ.ಪಿ.ಪಿ.ಪಿ.ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಂತರಜಾಲ ತಾಣ https://kppp.karnataka.gov.inನ್ನು ಸಂಪರ್ಕಿಸಬಹುದು.
ಟೆಂಡರ್ ಪ್ರಕ್ರಿಯೆ ದಿನಾಂಕಗಳು: 1. ಇ–ಪ್ರಾಕ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 13.08.2024 ರಿಂದ 20.08.2024 16:00 ಗಂಟೆವರೆಗೆ, 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 21.08.2024 ರಂದು 16:00 ಗಂಟೆ ನಂತರ, 3. ಆರ್ಥಿಕ ಬಿಡ್ ತೆರೆಯುವ ದಿನಾಂಕ : 26.08.2024 ರಂದು 11:00 ಗಂಟೆ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/105/ಕೆಎಸ್‌ಎಂಸಿ&ಎ/2024–25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕಾಮಗಾರಿ ವಿಭಾಗ, ಮೈಸೂರು

ಸಂ: ಕರಾಸಾ/ಕಾನಿಅ/ಮೈ/ಕಿಅ/190/2024–25 ದಿನಾಂಕ: 07.08.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ. 02/ 2024–25

ಕರ್ನಾಟಕ ಲೋಕೋಪಯೋಗಿ ಇಲಾಖೆ/ಸಿ.ಪಿ.ಡಬ್ಲ್ಯೂ.ಡಿ ನಲ್ಲಿ ನೋಂದಾಯಿತರಾಗಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಗಿನ ಕಾಮಗಾರಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ http://kppp.karnataka.gov.in ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ ರೂ.ಗಳಲ್ಲಿ
1	ಮೈಸೂರು ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಗ್ರಾಮಾಂತರ ಪ್ಲಾಟ್‌ಫಾರಂಗೆ ಡಾಂಬರೀಕರಣ ಮಾಡುವುದು.	49.20	98,400/-

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **23.08.2024**. 2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ವಿವರಗಳನ್ನು ದಿನಾಂಕ : 08.08.2024 ರ ನಂತರ ಪಡೆಯಬಹುದು. 3) ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕ.ರಾ.ರ.ಸಾ.ನಿಗಮ, ಮೈಸೂರು, ನೆಲ್ಸನ್ ಮಂಡೇಲ ರಸ್ತೆ, ಬನ್ನಿ ಮಂಟಪ, ಮೈಸೂರು ಇಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ : 0821–2498828.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಮೈಸೂರು
ವಾಸಾಸಂಇ/ವಾಪ್ರ/ಜಿಎ/1449/2024–25

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ–1/2024–25/1012 ದಿನಾಂಕ: 09–08–2024

:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ: 1. ಸೇಡಂ ತಾಲೂಕಿನ 36 ಕಾಮಗಾರಿಗಳ ಇಂಡೆಂಡ್ ಸಂ : 13220, 13200, 12850, 13205(ಎಸ್.ಸಿ), 13208, 12852(ಎಸ್.ಟಿ), 13222, 12847, 13229(ಎಸ್.ಟಿ), 12854(ಎಸ್.ಸಿ), 12849, 13236(ಎಸ್.ಸಿ), 13240, 13246, 13245(ಎಸ್.ಸಿ), 13211(ಎಸ್.ಸಿ), 13213(ಎಸ್.ಟಿ), 13362, 13353, 12853, 13368, 13253, 13247, 13289, 12985, 12995, 12950, 12960, 12899, 12903, 12972(ಎಸ್.ಸಿ), 12952, 12856, 13374, 12977, 12976, 2. ಚಿಂಚೋಳಿ ತಾಲೂಕಿನ 06 ಕಾಮಗಾರಿಗಳ ಇಂಡೆಂಟ್ ಸಂ : 12361, 12317, 13901(ಎಸ್.ಸಿ), 13895, 13892, 13899, 3. ಚಿತ್ತಾಪೂರ ತಾಲೂಕಿನ 03 ಕಾಮಗಾರಿಗಳ ಇಂಡೆಂಟ್ ಸಂ : 12131(ಎಸ್.ಟಿ), 12136(ಎಸ್.ಸಿ), 12190, 2) ಲೆಕ್ಕ ಶೀರ್ಷಿಕೆ: 2024–25ನೇ 3054 ರಾಜ್ಯ ಹೆದ್ದಾರಿ/ಜಿಲ್ಲಾ ಮುಖ್ಯ ರಸ್ತೆ/ಸೇತುವೆ ನಿರ್ವಹಣೆ ಅಡಿಯಲ್ಲಿನ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ: ಕನಿಷ್ಠ **ರೂ. 0.75 ಲಕ್ಷಗಳು, ಗರಿಷ್ಠ ರೂ. 50.90 ಲಕ್ಷಗಳು**, 4) ಗುತ್ತಿಗೆದಾರರ ಅರ್ಹತೆ: 4ನೇ ದರ್ಜೆ & ಮೇಲ್ಪಟ್ಟು, 5) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ: **21–08–2024 ಸಾಯಂಕಾಲ 17:30 ಗಂಟೆಯವರೆಗೆ**, 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ. 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **22–08–2024 ರ ಸಾಯಂಕಾಲ 16:00 ಗಂಟೆಯವರೆಗೆ**. 8) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23–08–2024 ರ ಸಾಯಂಕಾಲ 16:30 ಗಂಟೆಯವರೆಗೆ**. 9) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **26–08–2024 ರ ಸಾಯಂಕಾಲ 16:30 ಗಂಟೆಯವರೆಗೆ**. 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್ ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 12) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ವಹಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.
ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ
ವಾ.ಸಾ.ಸಂ.ಇ/ಕಲಬುರಗಿ/330/ಕೆ.ಎಸ್.ಎಂ.ಸಿ.&ಎ/2024–25

ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಲು ನಫೀಸಾ ಆಯ್ಕೆ

ಪ್ರಜಾವಾಣಿ ವಾರ್ತೆ



ನಫೀಸಾ

ವಿಟ್ಲ (ದಕ್ಷಿಣ ಕನ್ನಡ): ದೆಹಲಿಯ ಕೆಂಪುಕೋಟೆಯಲ್ಲಿ ನಡೆಯಲಿರುವ ಸ್ವಾತಂತ್ರ್ಯೋತ್ಸವದಲ್ಲಿ ಪಾಲ್ಗೊಳ್ಳಲು ದಕ್ಷಿಣ ಕನ್ನಡ ಜಿಲ್ಲೆಯ ಪೆರುವಾಯಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಫೀಸಾ ಅವರನ್ನು ಆಹ್ವಾನಿಸಲಾಗಿದ್ದು, ವಿಶೇಷ ಅತಿಥಿಯಾಗಿ ಅವರು ಭಾಗವಹಿಸಲಿದ್ದಾರೆ.

ಈ ಬಾರಿ ರಾಜ್ಯದ 6 ಗ್ರಾಮ ಪಂಚಾಯಿತಿಗಳ ಅಧ್ಯಕ್ಷೆಯರನ್ನು ಆಹ್ವಾನಿಸಲಾಗಿದೆ. ಒಂದು ವರ್ಷದಿಂದ ಪೆರುವಾಯಿ ಗ್ರಾಮ ಪಂಚಾಯಿತಿಯ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸುತ್ತಿರುವ ನಫೀಸಾ ಅವರು ಹಿಂದಿನ ಅವಧಿಯಲ್ಲಿ ಎರಡೂವರೆ ವರ್ಷ ಉಪಾಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ತ್ಯಾಜ್ಯ ವಿಲೇವಾರಿ ವಾಹನವನ್ನು ಸ್ವತಃ ಚಲಾಯಿಸಿ ತ್ಯಾಜ್ಯ ಸಂಗ್ರಹಿಸಿ ಗಮನ ಸೆಳೆದಿದ್ದು, ಅವರನ್ನು ಹಲವರು ಗೌರವಿಸಿದ್ದರು. ಅವರ ಆ ಸೇವೆಯನ್ನು ಗುರುತಿಸಿ 'ವರ್ಲ್ಡ್ ಯೂತ್ ಸ್ಕಿಲ್ ಡೇ' ಅಂಗವಾಗಿ ಬೆಂಗಳೂರಿನಲ್ಲಿ ಜರುಗಿದ ಸಮಾರಂಭದಲ್ಲಿ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗೌರವಿಸಿದ್ದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ನಫೀಸಾ, 'ದೆಹಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುವುದು ನನಗೆ ಹೆಮ್ಮೆ' ಎಂದರು.

ರೈತ ದಂಪತಿ ಆಯ್ಕೆ



ಮಲ್ಲಿಕಾರ್ಜುನ, ಮೀನಾಕ್ಷಿ

ಕಂಪ್ಲಿ (ಬಳ್ಳಾರಿ ಜಿಲ್ಲೆ): ನವದೆಹಲಿಯ ಕೆಂಪುಕೋಟೆ ಬಳಿ ನಡೆಯುವ 78ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭ ವೀಕ್ಷಿಸಲು ವಿಶೇಷ ಅತಿಥಿಗಳಾಗಿ ಕಂಪ್ಲಿ ತಾಲ್ಲೂಕಿನ (ಎಬಿಪಿ) ದೇವಲಾಪುರ ಗ್ರಾಮದ ರೈತ ದಂಪತಿ ಗೌಡ್ರು ಮಲ್ಲಿಕಾರ್ಜುನ ಮತ್ತು ಮೀನಾಕ್ಷಿ ಆಯ್ಕೆಯಾಗಿದ್ದಾರೆ. 'ಮಣ್ಣಿನ ಆರೋಗ್ಯ, ಗುಣಮಟ್ಟ ಕಾಪಾಡಿಕೊಳ್ಳುವ ಜೊತೆಗೆ 'ಮಣ್ಣಿನ ಆರೋಗ್ಯ ಕಾರ್ಡ್' ಕುರಿತು ರೈತರಿಗೆ ಅರಿವು ಮೂಡಿಸುವಲ್ಲಿ ದಂಪತಿ ಮುಂಚೂಣಿಯಲ್ಲಿದ್ದಾರೆ' ಎಂದು ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಶ್ರೀಧರ ತಿಳಿಸಿದ್ದಾರೆ.

ಪಾದಯಾತ್ರೆ ಬಗ್ಗೆ ನಮ್ಮ ತಕರಾರು ಇಲ್ಲ: ವಿಜಯೇಂದ್ರ

'ವರಿಷ್ಠರ ಒಪ್ಪಿಗೆ ಪಡೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ಕೆಲವು ಶಾಸಕರು ಸೇರಿ ಉತ್ತರ ಕರ್ನಾಟಕ ಭಾಗದಲ್ಲಿ ಪಾದಯಾತ್ರೆ ನಡೆಸುವ ಬಗ್ಗೆ ನಮ್ಮ ತಕರಾರು ಇಲ್ಲ. ಆದರೆ, ಅವರು ವರಿಷ್ಠರ ಅನುಮತಿ ಪಡೆದುಕೊಂಡು ಮಾಡಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಸಂತನಗರದಲ್ಲಿ ಹರ್ ಘರ್ ತಿರಂಗಾ ಅಭಿಯಾನಕ್ಕೆ ಚಾಲನೆ ನೀಡಿದ ಬಳಿಕ ಅವರು ಸುದ್ದಿಗಾರರ ಪ್ರಶ್ನೆಗೆ ಈ ರೀತಿ ಪ್ರತಿಕ್ರಿಯಿಸಿದರು.


'ಪಕ್ಷದ ಅಧ್ಯಕ್ಷನಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ಕೆಲಸ ಮಾಡುತ್ತಿದ್ದೇನೆ. ಉತ್ತರ ಕರ್ನಾಟಕ ದಲ್ಲಿ ಪಾದಯಾತ್ರೆ ಮಾಡಲು ಕೆಲವು ಶಾಸಕರು ನಿರ್ಧಾರ ಮಾಡಿದ್ದಾರೆ. ಅವರ ಪಾದಯಾತ್ರೆ ಪಕ್ಷದ ಸಂಘಟನೆಗೆ ಪೂರಕವಾಗಿರಬೇಕು' ಎಂದು ಹೇಳಿದರು.

ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿ ಕುರಿತು ದೆಹಲಿಯಲ್ಲಿ ತೀರ್ಮಾನ: ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿ ಕುರಿತು ಎರಡೂ ಪಕ್ಷಗಳ ವರಿಷ್ಠರು ದೆಹಲಿ ಮಟ್ಟದಲ್ಲಿ ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದರು.

ಚನ್ನಪಟ್ಟಣದಲ್ಲಿ ಸ್ಪರ್ಧೆಗೆ ಯೋಗೇಶ್ವರ್ ಅವರು ಆಕಾಂಕ್ಷೆ ವ್ಯಕ್ತಪಡಿಸಿದ್ದು, ಅದರಲ್ಲಿ ತಪ್ಪೇನು ಇಲ್ಲ. ಚನ್ನಪಟ್ಟಣದಲ್ಲಿ ಅವರಿಗೆ ಅವರದೇ ಆದ ಹಿಡಿತ ಮತ್ತು ಬೆಂಬಲವಿದೆ. ಬಿಜೆಪಿ– ಜೆಡಿಎಸ್ ಒಗ್ಗಟ್ಟಿನಿಂದ ಮುನ್ನಡೆಯಬೇಕಾದ ಸಂದರ್ಭವಿದು. ಕುಮಾರಸ್ವಾಮಿ ಪ್ರತಿನಿಧಿಸಿದ್ದ ಕ್ಷೇತ್ರವದು. ಈ ಎಲ್ಲ ಕಾರಣಗಳಿಂದ ದೆಹಲಿ ಮಟ್ಟದಲ್ಲಿ ಎರಡೂ ಪಕ್ಷಗಳ ನಾಯಕರು ಕೂತು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ವಿಜಯೇಂದ್ರ ಹೇಳಿದರು.

'ಲೋಕಸಭಾ ಚುನಾವಣೆಯನ್ನು ಬಿಜೆಪಿ ಮತ್ತು ಜೆಡಿಎಸ್ ಒಟ್ಟಾಗಿ ಎದುರಿಸಿದ್ದೇವೆ. ವಿಧಾನಸಭಾ ಉಪಚುನಾವಣೆ ಅಭ್ಯರ್ಥಿ ಆಯ್ಕೆ ಸಂಬಂಧ ಸಮಿತಿ ರಚಿಸಿ ಅಭಿಪ್ರಾಯ ಪಡೆದಿದ್ದೇವೆ. ಅಶ್ವತ್ಥನಾರಾಯಣ ಅವರ ಸಮಿತಿ ವರದಿ ಬಗ್ಗೆ ಮಾಹಿತಿ ಇಲ್ಲ. ನಾನು ಕೂಡ ಅಶ್ವತ್ಥನಾರಾಯಣ ಅವರ ಜತೆ ಚರ್ಚೆ ಮಾಡುತ್ತೇನೆ ಮತ್ತು ವರಿಷ್ಠರ ಗಮನಕ್ಕೆ ತರುತ್ತೇನೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ರೈತರಿಗೆ ಪರಿಹಾರ: ವಿಜಯೇಂದ್ರ ಆಗ್ರಹ



ತುಂಗಭದ್ರಾ ಅಣೆಕಟ್ಟಿನ ಗೇಟ್ ಮುರಿದಿರುವುದರಿಂದ ಅಪಾರ ಪ್ರಮಾಣದಲ್ಲಿ ನೀರು ಹರಿದು ಹೋಗಿ ಭತ್ತದ ಬೆಳೆ ನಾಶವಾಗಿದೆ. ಇದರಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಕೂಡಲೇ ಪ್ರತಿ ಹೆಕ್ಟೇರ್‌ಗೆ ಕನಿಷ್ಠ ₹50 ಸಾವಿರ ಪರಿಹಾರ ನೀಡಬೇಕು ಎಂದು ವಿಜಯೇಂದ್ರ ಒತ್ತಾಯಿಸಿದರು.

ತುಂಗಭದ್ರಾ ಅಣೆಕಟ್ಟೆಗೆ ಮುಖ್ಯ ಎಂಜಿನಿಯರ್ ಅನ್ನು ನೇಮಿಸಿಲ್ಲ. ಜಲಾಶಯದ ಗೇಟ್ ಮುರಿಯಲು ರಾಜ್ಯ ಸರ್ಕಾರ ನಿರ್ಲಕ್ಷ್ಯವೇ ಕಾರಣ. ಈ ದುರ್ಘಟನೆಯಿಂದ ಪ್ರತಿ ದಿನ 98 ಸಾವಿರ ಕ್ಯುಸೆಕ್ ನೀರು ಹೊರಗೆ ಹರಿಯುತ್ತಿದೆ ಎಂದರು. ಜಲಸಂಪನ್ಮೂಲ ಸಚಿವರು 'ಸಂಪನ್ಮೂಲ'ದ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡ ಹಾಗಿದೆ. ನಾಡಿನ ಜಲ, ಜನ, ರೈತರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ ಎಂದು ಅವರು ಟೀಕಿಸಿದರು.

ರೋಣದ ಅಂಜುಮನ್ ಪ್ರೌಢಶಾಲೆಯ ಮುಖ್ಯಶಿಕ್ಷಕರ ಕಳಕಳಿ

ವಿದ್ಯಾರ್ಥಿಗಳಿಗೆ ₹10 ಸಾವಿರ ಮೀಸಲು

• ಉಮೇಶ ಬಸನಗೌಡರ್

ರೋಣ (ಗದಗ ಜಿಲ್ಲೆ): ಪಟ್ಟಣದ ಅನುದಾನಿತ ಅಂಜುಮನ್ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎ.ಐ.ಶೇಖ್ ಅವರು ಶಾಲಾ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳ ಏಳ್ಗೆಗೆ ಎರಡು ವರ್ಷಗಳಿಂದ ತಮ್ಮ ವೇತನದಲ್ಲಿನ ₹ 10 ಸಾವಿರ ಮೀಸಲಿಟ್ಟಿದ್ದಾರೆ.

ವರ್ಷದಿಂದ ವರ್ಷಕ್ಕೆ ಅಂಜುಮನ್ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಗುತ್ತಿತ್ತು. ಒಂದೆಡೆ ಶಿಕ್ಷಕರು ನಿವೃತ್ತರಾದರೆ, ಇನ್ನೊಂದೆಡೆ ಹೊಸ ಶಿಕ್ಷಕರ ನೇಮಕಾತಿ ಆಗುತ್ತಿರಲಿಲ್ಲ. ಜೊತೆಗೆ ಅನುದಾನ ಕೊರತೆಯೂ ಇತ್ತು. ಇದರ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ಪ್ರತಿ ತಿಂಗಳು ₹ 10 ಸಾವಿರ ಹಣವನ್ನು ಶಾಲೆಗಾಗಿ ಮತ್ತು ವಿದ್ಯಾರ್ಥಿಗಳಿಗಾಗಿ ಮೀಸಲಿಡಲು ನಿರ್ಧರಿಸಿದೆ' ಎಂದು ಎ.ಐ.ಶೇಖ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮಹಿಳಾ ಸಾಕ್ಷರತೆಗೆ ಸರ್ಕಾರ ಪ್ರಯತ್ನ ನಡೆಸಿದೆ. ಅಲ್ಪಸಂಖ್ಯಾತ ಸಮುದಾಯದ ಬಹುತೇಕ ವಿದ್ಯಾರ್ಥಿನಿಯರಿಗೆ ಬೇರೆ ಬೇರೆ ಕಾರಣಗಳಿಂದ ಶಿಕ್ಷಣ ಪೂರ್ಣಗೊಳಿಸಲು ಆಗುತ್ತಿಲ್ಲ. ಹೀಗಾಗಿ ಪೋಷಕರಲ್ಲಿ ಜಾಗೃತಿ ಮೂಡಿಸಿ, ವಿದ್ಯಾರ್ಥಿನಿಯರ ಶಿಕ್ಷಣ ಮುಂದುವರಿಸಲು ಕೋರುತ್ತಿರುವೆ. ಆರ್ಥಿಕ ನೆರವು ನೀಡುತ್ತಿರುವೆ' ಎಂದರು.



ಗದಗ ಜಿಲ್ಲೆಯ ರೋಣದ ಅಂಜುಮನ್ ಪ್ರೌಢಶಾಲೆಗೆ ಬಣ್ಣ ಬಳಿಸುತ್ತಿರುವ ಮುಖ್ಯ ಶಿಕ್ಷಕ ಎ.ಐ.ಶೇಖ್

'ಈ ಶಾಲೆಯಲ್ಲಿ ಓದಿದ ನನ್ನ ಮಗಳು ಸಾನಿಯಾ ಚೌಡಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 87 ಅಂಕ ಪಡೆದಳು. ಆಕೆಗೆ ಪಿಯು ವಿಜ್ಞಾನ ಕಲಿಯುವ ಆಸೆಯಿತ್ತು. ಆದರೆ, ಕೂಲಿಕಾರ್ಮಿಕರಾದ ನಮಗೆ ಆಕೆಯ ಶಿಕ್ಷಣ ವೆಚ್ಚವನ್ನು ನಿಭಾಯಿಸುವ ಶಕ್ತಿ ಇರಲಿಲ್ಲ. ಶಿಕ್ಷಣ ಮೊಟಕಗೊಳಿಸಿದ್ದೆವು. ಆಗ ಎ.ಐ. ಶೇಖ್ ಅವರು ₹30 ಸಾವಿರ ಕೊಟ್ಟು, ಆಕೆಯನ್ನು ಬೀದರ್‌ನ ವಿಜ್ಞಾನ ಕಾಲೇಜಿನಲ್ಲಿ ಓದುವಂತೆ ಮಾಡಿದರು' ಎಂದು ಪಟ್ಟಣದ ನಿವಾಸಿ ಹಸನಸಾಬ್ ಚೌಡಿ ಹೇಳಿದರು.

'ಈ ಶಾಲೆಗೆ ಬರುವ ಬಹುತೇಕ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಆರ್ಥಿಕವಾಗಿ ಹಿಂದುಳಿದ ಕುಟುಂಬದವರು. ಅನಾಥರೂ ಇದ್ದಾರೆ. ಬಹುತೇಕ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿವರೆಗೆ ಶಿಕ್ಷಣ ಪೂರ್ಣಗೊಳಿಸುವುದಿಲ್ಲ. ಅಂಥವರಿಗೆ ಎ.ಐ.ಶೇಖ್ ಅವರು ಆಸರೆಯಾಗಿದ್ದಾರೆ' ಎಂದು ಅವರು ತಿಳಿಸಿದರು.

ಎ.ಐ.ಶೇಖ್ ಅವರು ಶಾಲೆಯ ಅಭಿವೃದ್ಧಿಗೆ, ಅಲ್ಪಸಂಖ್ಯಾತ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ನೀಡುತ್ತಿರುವ ಕೊಡುಗೆ ಅನುಪಮವಾದದ್ದು

ರುದ್ರಪ್ಪ ಹುರಳಿ
ಕ್ಷೇತ್ರ ಶಿಕ್ಷಣಾಧಿಕಾರಿ, ರೋಣ

ವೇತನದಲ್ಲಿನ ಅಲ್ಪಮೊತ್ತದಿಂದ ವಿದ್ಯಾರ್ಥಿಗಳಿಗೆ ಓದಿಸಲು ಸಾಧ್ಯವಾಗಿದೆ. ಶಾಲೆಗೆ ಸುಣ್ಣಬಣ್ಣ ಬಳಿಸಲು ಅನುಕೂಲವಾಗಿದೆ

ಎ.ಐ. ಶೇಖ್, ಮುಖ್ಯಶಿಕ್ಷಕ, ಅಂಜುಮನ್ ಪ್ರೌಢಶಾಲೆ, ರೋಣ

ರಮಣಶ್ರೀ ಶರಣ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ರಮಣಶ್ರೀ ಪ್ರತಿಷ್ಠಾನದ ಸಹಯೋಗದಲ್ಲಿ ನೀಡುವ 'ರಮಣಶ್ರೀ ಪ್ರಶಸ್ತಿ'ಗೆ ಅರ್ಜಿ ಆಹ್ವಾನಿಸಲಾಗಿದೆ.

ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆ, ಆಧುನಿಕ ವಚನ ರಚನೆ, ವಚನ ಸಂಗೀತ, ಶರಣ ಸಾಂಸ್ಕೃತಿಕ ಪ್ರಸಾರ ಮತ್ತು ಸೇವಾ ಸಂಸ್ಥೆ ಎಂಬ ನಾಲ್ಕು ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತದೆ. ಹಿರಿಯ ಶ್ರೇಣಿ ಮತ್ತು ಉತ್ತೇಜನ ಶ್ರೇಣಿಯಲ್ಲಿ ತಲಾ ನಾಲ್ಕು ರಮಣಶ್ರೀ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಉತ್ತೇಜನ ಶ್ರೇಣಿ ಪ್ರಶಸ್ತಿಗೆ 45 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು. ಹಿರಿಯ ಶ್ರೇಣಿ ಪ್ರಶಸ್ತಿಯು ತಲಾ ₹40 ಸಾವಿರ ಹಾಗೂ ಉತ್ತೇಜನ ಶ್ರೇಣಿ ಪ್ರಶಸ್ತಿಯು ತಲಾ ₹20 ಸಾವಿರ ನಗದು ಒಳಗೊಂಡಿದೆ. ಆಸಕ್ತರು ಆಗಸ್ಟ್ 31ರೊಳಗೆ ಅರ್ಜಿ ಸಲ್ಲಿಸಬೇಕು.

ವಿಳಾಸ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಜಗದ್ಗುರು ಶ್ರೀ ಶಿವರಾತ್ರೀಶ್ವರ ವೃತ್ತ, 1ನೇ ಮುಖ್ಯರಸ್ತೆ, ಜಯನಗರ 8ನೇ ವಿಭಾಗ, ಬೆಂಗಳೂರು–560070, ಅಥವಾ ಎಸ್. ಷಡಕ್ಷರಿ, ಅಧ್ಯಕ್ಷರು, ರಮಣಶ್ರೀ ಪ್ರತಿಷ್ಠಾನ, ನಂ. 16, ರಾಜಾರಾಮ ಮೋಹನ್ ರಾಯ್ ರಸ್ತೆ, ಬೆಂಗಳೂರು–560025. ಮಾಹಿತಿಗೆ: 98450 32813

ರಾಜ್ಯ ಸರ್ಕಾರದಿಂದ ಹುನ್ನಾರ: ಎಚ್‌.ಡಿ. ಕುಮಾರಸ್ವಾಮಿ

ಎಚ್‌ಎಂಟಿ ಜಾಗ ಮುಟ್ಟಿದರೆ ಜೋಕೆ

ಪ್ರಜಾವಾಣಿ ವಾರ್ತೆ



ಭದ್ರಾವತಿಯ ವಿಐಎಸ್‌ಎಲ್ ಪುನಶ್ಚೇತನಕ್ಕೆ ಪ್ರಧಾನಿ ಜೊತೆ ಚರ್ಚಿಸಲಾಗುವುದು. ಆಧುನಿಕ ತಂತ್ರಜ್ಞಾನದೊಂದಿಗೆ ಅಭಿವೃದ್ಧಿಗೆ ₹10 ಸಾವಿರ ಕೋಟಿಯ ಅಗತ್ಯವಿದೆ
ಎಚ್‌.ಡಿ.ಕುಮಾರಸ್ವಾಮಿ, ಕೇಂದ್ರ ಕೈಗಾರಿಕಾ ಸಚಿವ

ಬೆಂಗಳೂರು: ಎಚ್‌ಎಂಟಿ ಕಾರ್ಖಾನೆಯ ಜಮೀನನ್ನು ರಾಜ್ಯ ಸರ್ಕಾರ ತನ್ನ ವಶಕ್ಕೆ ಪಡೆಯುವ ಹುನ್ನಾರ ನಡೆಸಿದೆ. ಇಂತಹ ದುಸ್ಸಾಹಸ ಮಾಡಬಾರದು ಎಂದು ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ವಿವಿಧೆಡೆ ಇರುವ 599 ಎಕರೆ ಜಮೀನನ್ನು ದಶಕಗಳ ಹಿಂದೆಯೇ ಹಣ ಪಾವತಿಸಿ ಪಡೆಯಲಾಗಿದೆ. ಮೈಸೂರು ಅರಸರು ಸ್ಥಾಪಿಸಿದ್ದ ದೇಶದ ಪ್ರಮುಖ ಕಾರ್ಖಾನೆಗಳಿಗೆ ಪುಕ್ಕಟೆಯಾಗಿ ಯಾರೂ ಜಮೀನು ನೀಡಿಲ್ಲ. 1963ರಲ್ಲಿ 185 ಎಕರೆಗೆ ₹4.40 ಲಕ್ಷ ಹಾಗೂ 1965ರಲ್ಲಿ 77 ಎಕರೆಗೆ ₹1.80 ಲಕ್ಷ ಪಾವತಿಸಲಾಗಿದೆ ಎಂದು ದಾಖಲೆ ಬಿಡುಗಡೆ ಮಾಡಿದರು.

'ಅರಣ್ಯ ಭೂಮಿ ಹಾಗೂ ಎಚ್‌ಎಂಟಿ ಕಾರ್ಖಾನೆ ಜಮೀನುಗಳ ಕುರಿತು ಮಾಹಿತಿ ಇಲ್ಲದೆ ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡುತ್ತಿದ್ದಾರೆ. ಎಚ್‌ಎಂಟಿಯು ವಿವಿಧ ಸರ್ಕಾರಿ ಸಂಸ್ಥೆ, ಇಲಾಖೆಗಳಿಗೆ ಮತ್ತು ವ್ಯಕ್ತಿಗಳಿಗೆ ತನ್ನ ಭೂಮಿ ಮಾರಾಟ ಮಾಡಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿಕೆ ಖಂಡನೀಯ. ಹಿಂದೆ ಎಚ್‌ಎಂಟಿಗೆ ಸೇರಿದ 200 ಎಕರೆ ಜಮೀನನ್ನು ಮಾರಾಟ ಮಾಡಲು ಅನುಮತಿ ಕೊಟ್ಟಿದ್ದೇ 1999ರಿಂದ 2004ರವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ. 2006ರಲ್ಲಿ ನಾನು ಮುಖ್ಯಮಂತ್ರಿಯಾದಾಗ ಜಮೀನು ಮಾರಾಟಕ್ಕೆ ಅವಕಾಶ ನೀಡದಂತೆ ಆದೇಶ ಮಾಡಿದ್ದರಿಂದ ಭೂಮಿ ಉಳಿದಿದೆ' ಎಂದರು.

ಲಾಭ ಇದ್ದದ್ದೇ ಕೆಲಸ: 'ಕಾಂಗ್ರೆಸ್ ಸರ್ಕಾರದಲ್ಲಿ ಇರುವ ಬಿಲ್ಡರ್‌ಗಳಿಗೆ ಎಚ್‌ಎಂಟಿ ಭೂಮಿ ಮೇಲೆ ಕಣ್ಣು ಬಿದ್ದಿದೆ. ಬ್ರ್ಯಾಂಡ್ ಬೆಂಗಳೂರು ಮಾಡಲು ಹೊರಟವರು ಹಣ ಕೊಟ್ಟವರಿಗೆ ಭೂಮಿ ಖರೀದಿ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡುತ್ತಿದ್ದಾರೆ. ಪ್ರೆಸ್ಟೀಜ್ ಕಂಪನಿ ಅಪಾರ್ಟ್‌ಮೆಂಟ್ ಕಟ್ಟಲು 27 ಎಕರೆ ಖರೀದಿಗೆ ಎನ್‌ಒಸಿ ಸಿಗುತ್ತದೆ. ಆದರೆ ಇಸ್ರೋಗೆ ಸಿಗುವುದಿಲ್ಲ. ಅವರು ದುಡ್ಡು ಕೊಡುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ. ರಾಜ್ಯ ಸರ್ಕಾರಕ್ಕೆ 'ಇಸ್ರೋಗಿಂತ ಪ್ರೆಸ್ಟೀಜ್ ಕಂಪನಿ ಮುಖ್ಯ' ಎಂದು ಟೀಕಿಸಿದರು.

'ರಾಜ್ಯಕ್ಕೆ ಕೇಂದ್ರದ ಸಹಕಾರ ಸಿಗುತ್ತಿಲ್ಲ ಎನ್ನುತ್ತಾ ಕೇಂದ್ರ ಸಚಿವರಿಗೆ ಅಸಹಕಾರ ತೋರುತ್ತಿದ್ದಾರೆ. ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ ಕಾಯ್ದಿಟ್ಟ ಅರಣ್ಯ ನೀಡಲು ದೇವದಾರಿ ಗಣಿಗಾರಿಕೆ ಯೋಜನೆಗೆ ಅರ್ಥಿಕ ನೆರವು ನೀಡುವ ಕಡತಕ್ಕೆ ಸಹಿ ಹಾಕಿದ್ದನ್ನು ವಿರೋಧಿಸುತ್ತಾರೆ. ಕಾಂಗ್ರೆಸ್ ಮುಖಂಡರ ಮೇಲಿನ ಹಗೆತನಕ್ಕೆ ರಾಜ್ಯ ಹಾಳು ಮಾಡುತ್ತಿದ್ದಾರೆ' ಎಂದು ದೂರಿದರು.

ಅರಣ್ಯ ಭೂಮಿ ಮರು ವಶ ಖಚಿತ: ಖಂಡ್ರೆ



ಬೆಂಗಳೂರು: 'ಅರಣ್ಯ ಭೂಮಿ ಮಾರಾಟ ಅಥವಾ ದಾನ ಮಾಡಲು ಯಾರಿಗೂ ಅಧಿಕಾರವಿಲ್ಲ' ಎಂದು ಪ್ರತಿಪಾದಿಸಿದ ಅರಣ್ಯ ಸಚಿವ ಈಶ್ವರ ಖಂಡ್ರೆ, 'ನಗರದ ಪೀಣ್ಯ ಜಾಲಹಳ್ಳಿಯಲ್ಲಿ ಎಚ್‌ಎಂಟಿ ವಶದಲ್ಲಿರುವ ಅರಣ್ಯ ಭೂಮಿಯನ್ನು ಮತ್ತೆ ವಶಪಡಿಸಿಕೊಂಡು ಅಲ್ಲಿ ವೃಕ್ಷೋದ್ಯಾನ ನಿರ್ಮಿಸಲಾಗುವುದು' ಎಂದರು.

ಕುಮಾರಸ್ವಾಮಿ ಅವರ ಆರೋಪಗಳಿಗೆ ತುರ್ತು ಸುದ್ದಿಗೋಷ್ಠಿ ನಡೆಸಿ ಪ್ರತಿಕ್ರಿಯಿಸಿದ ಖಂಡ್ರೆ, 'ಅರಣ್ಯ ಭೂಮಿ ಮಾರಾಟ ಮಾಡಿರುವುದು ನಿಮ್ಮ ಇಲಾಖೆಯ (ಬೃಹತ್ ಕೈಗಾರಿಕೆ) ವ್ಯಾಪ್ತಿಯಲ್ಲಿರುವ ಎಚ್‌ಎಂಟಿಯೇ ಹೊರತು ಅರಣ್ಯ ಇಲಾಖೆ ಅಲ್ಲ' ಎಂದು ತಿರುಗೇಟು ನೀಡಿದರು. 'ಕೇಂದ್ರ ಸರ್ಕಾರಿ ಸ್ವಾಮ್ಯದ ಎಚ್‌ಎಂಟಿ ಸಂಸ್ಥೆ ರಿಯಲ್ ಎಸ್ಟೇಟ್ ಸಂಸ್ಥೆಯಂತೆ ವರ್ತಿಸುತ್ತಿದೆ. ತನ್ನ ವಶದಲ್ಲಿದ್ದ ಅರಣ್ಯ ಭೂಮಿಯನ್ನು ಎಚ್‌ಎಂಟಿ ಸಂಸ್ಥೆ 1997ರಿಂದ 2011ರವರೆಗೆ ಅಕ್ರಮವಾಗಿ ಡಾಲರ್ಸ್ ಕನ್‌ಸ್ಟ್ರಕ್ಷನ್ ಆ್ಯಂಡ್ ಎಂಜಿನಿಯರ್ಸ್, ಯು.ಎಸ್. ಸ್ಟೀಲ್ ಕಂಪನಿ, ಸಿಲ್ವರ್ ಲೈನ್ ಎಸ್ಟೇಟ್, ಎ.ಎಂ.ಆರ್. ಕನ್‌ಸ್ಟ್ರಕ್ಷನ್, ಬ್ರಿಗೇಡ್ ಎಂಟರ್‌ಪ್ರೈಸಸ್, ಬಾಗಮನೆ ಡೆವಲಪರ್ಸ್ ಸೇರಿದಂತೆ ಹಲವು ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ ಮಾರಾಟ ಮಾಡಿದೆ. ಎಚ್‌ಎಂಟಿಯು 165 ಎಕರೆ ಭೂಮಿಯನ್ನು ₹313.65 ಕೋಟಿಗಳಿಗೆ ಮಾರಾಟ ಮಾಡಿದೆ. ಜುಲೈ 11ರಂದು ಪರಿಸರ ಹೋರಾಟಗಾರರೊಬ್ಬರು ತಮ್ಮ ಕಚೇರಿಗೆ ನೀಡಿದ ದೂರು ಆಧರಿಸಿ, ಅಧಿಕಾರಿಗಳ ಸಭೆ ನಡೆಸಿ ಚರ್ಚಿಸಿದಾಗ ಈ ವಿಷಯ ಗೊತ್ತಾಗಿದೆ' ಎಂದರು.

'ಎಚ್‌ಎಂಟಿ ಸಂಸ್ಥೆ ಭೂಮಿಯನ್ನು ಖರೀದಿಸಿದೆ ಎಂದು ಕುಮಾರಸ್ವಾಮಿ ಹೇಳುತ್ತಿದ್ದಾರೆ. ಅರಣ್ಯ ಭೂಮಿಯನ್ನು ಯಾರಿಗೂ ಮಾರಾಟ ಮಾಡಲು ಬರುವುದಿಲ್ಲ. 1980ರ ಅರಣ್ಯ ಸಂರಕ್ಷಣಾ ಕಾಯ್ದೆ ಸೆಕ್ಷನ್ 2ರ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆಯದೆ ಮಾರಾಟ ಮಾಡಲು ಅಥವಾ ದಾನ ಮಾಡಲು ಕಾನೂನಿನಲ್ಲಿ ಅವಕಾಶವೇ ಇಲ್ಲ. ಈ ಕುರಿತು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಹಲವು ಪ್ರಕರಣಗಳಲ್ಲಿ ತೀರ್ಪು ನೀಡಿದೆ' ಎಂದರು.

ಸಂಘರ್ಷ ಇಲ್ಲ: 'ಕುಮಾರಸ್ವಾಮಿ ಜೊತೆ ನನಗೆ ಸೌಹಾರ್ದ ಬಾಂಧವ್ಯವಿದೆ. ನಾನು ಹಿಂದೆಯೂ ದ್ವೇಷದ ರಾಜಕೀಯ ಮಾಡಿಲ್ಲ. ಮುಂದೆಯೂ ಮಾಡುವುದಿಲ್ಲ. ಯಾವುದೇ ಪೂರ್ವಾಗ್ರಹ ಪೀಡಿತನಾಗಿ ಎಚ್‌ಎಂಟಿ ಭೂಮಿ ವಿಚಾರ ಪ್ರಸ್ತಾಪಿಸಿಲ್ಲ' ಎಂದು ಸ್ಪಷ್ಟಪಡಿಸಿದರು.

ಕೆಪಿಸಿಸಿ ಮಹಿಳಾ ಘಟಕಕ್ಕೆ ಸೌಮ್ಯಾರೆಡ್ಡಿ ಅಧ್ಯಕ್ಷೆ



ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಮಹಿಳಾ ಘಟಕದ ಅಧ್ಯಕ್ಷರಾಗಿ ಮಾಜಿ ಶಾಸಕಿ ಸೌಮ್ಯಾ ರೆಡ್ಡಿ ಅವರನ್ನು ನೇಮಿಸಲಾಗಿದೆ.

ಸೌಮ್ಯಾ ರೆಡ್ಡಿ ಅವರ ನೇಮಕದ ಪ್ರಸ್ತಾವಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅನುಮೋದನೆ ನೀಡಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ. ಸೌಮ್ಯಾ ರೆಡ್ಡಿ ಅವರು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಪುತ್ರಿ. 2018ರ ವಿಧಾನಸಭೆ ಚುನಾವಣೆಯಲ್ಲಿ ಜಯನಗರ ಕ್ಷೇತ್ರದಿಂದ ಚುನಾಯಿತರಾಗಿದ್ದ ಸೌಮ್ಯಾ ರೆಡ್ಡಿ, 2023ರ ಚುನಾವಣೆಯಲ್ಲಿ ಸೋಲು ಕಂಡಿದ್ದರು. ಅಲ್ಲದೆ, ಇತ್ತೀಚೆಗೆ ನಡೆದ ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಅವರು ಪರಾಭವ ಹೊಂದಿದ್ದರು. ಅಧ್ಯಕ್ಷ ಸ್ಥಾನಕ್ಕೆ ಸೌಮ್ಯಾ ರೆಡ್ಡಿ, ಕಮಲಾಕ್ಷಿ ರಾಜಣ್ಣ, ವೀಣಾ ಕಾಶಪ್ಪನವರ, ಕೃಪಾ ಅಳ್ವ ಮತ್ತು ಐಶ್ವರ್ಯಾ ಮಹದೇವ್ ಅವರ ಹೆಸರು ಮುಂಚೂಣಿಯಲ್ಲಿದ್ದವು.

ಗ್ಯಾರಂಟಿ ಯೋಜನೆಗಳಿಗೆ ಕತ್ತರಿ: ಸಚಿವರ 'ಗುರಿ'

ಒಂದನೇ ಪುಟದಿಂದ...

'ಐದು ಗ್ಯಾರಂಟಿಗಳ ಲಾಭ ಬಡವರಿಗೆ ಮಾತ್ರ ಸಿಗಬೇಕು. ಈಗ ಉಳ್ಳವರು ಲಾಭ ಪಡೆಯುವ ಯೋಜನೆಗಳ ಕುರಿತು ಲೇವಡಿ ಮಾಡುತ್ತಿದ್ದಾರೆ. ಅಂತಹ ಅನರ್ಹ ಫಲಾನುಭವಿಗಳನ್ನು ಕೈಬಿಟ್ಟರೆ ₹20 ಸಾವಿರ ಕೋಟಿಯನ್ನು ಉಳಿಸಬಹುದು. ಈ ಮೊತ್ತವನ್ನು ಅಭಿವೃದ್ಧಿ ಕಾಮಗಾರಿ ಹಾಗೂ ಹೊಸ ಯೋಜನೆಗಳ ಜಾರಿಗೆ ಬಳಸಬಹುದು' ಎಂದು ಸಚಿವರೊಬ್ಬರು ತಿಳಿಸಿದರು.

'ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಕನಿಷ್ಠ 15 ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸದಲ್ಲಿತ್ತು. ಗ್ಯಾರಂಟಿ ಕೈಹಿಡಿದು ಮತ ತಂದುಕೊಡಬಹುದು ಎಂಬ ವಿಶ್ವಾಸ ಇತ್ತು. ಆದರೆ, ಪಕ್ಷ ಗೆದ್ದಿರುವುದು 9 ಕ್ಷೇತ್ರಗಳಲ್ಲಷ್ಟೆ. ಸಾಂಪ್ರದಾಯಿಕ ಮತದಾರರು ಪಕ್ಷದ ಕೈ ಹಿಡಿದಿದ್ದಾರೆ. ಹೀಗಾಗಿ, ಬಡವರಿಗೆ ಮಾತ್ರ ಯೋಜನೆಯ ಲಾಭ ಸಿಗುವ ರೀತಿಯಲ್ಲಿ ಮಾನದಂಡ ರೂಪಿಸಬೇಕು. ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಜತೆಗೆ ಸಮಾಲೋಚನೆ ನಡೆಸಿ ಶೀಘ್ರ ತೀರ್ಮಾನ ತೆಗೆದುಕೊಳ್ಳಬೇಕು ಎಂಬುದಾಗಿ ಹೈಕಮಾಂಡ್‌ಗೆ ಮನವಿ ಮಾಡಿರುವೆ' ಎಂದು ವಿವರಿಸಿದರು.

'ಆಂಧ್ರ ಪ್ರದೇಶದಲ್ಲಿ ಜಗನ್ ಮೋಹನ್ ರೆಡ್ಡಿ ನೇತೃತ್ವದ ಸರ್ಕಾರವು ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಿತ್ತು. ಈ ಸಲದ ವಿಧಾನಸಭಾ ಚುನಾವಣೆಯಲ್ಲಿ ಜಗನ್ ಪಕ್ಷ ಹೀನಾಯವಾಗಿ ಸೋತಿತ್ತು. ಇದನ್ನು ಸಹ ಗಮನದಲ್ಲಿಟ್ಟುಕೊಂಡು ನಿರ್ಧಾರ ತೆಗೆದುಕೊಳ್ಳಬೇಕು ಎಂದು ಅವರು ತಿಳಿಸಿದರು.

'ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರಿಗೆ ತಲಾ ₹2 ಸಾವಿರ ನೀಡಲಾಗುತ್ತಿದೆ. ಈ ಯೋಜನೆಗೆ ವೈಜ್ಞಾನಿಕವಾಗಿ ಮಾನದಂಡ ರೂಪಿಸಿಯೇ ಇಲ್ಲ. ಆದಾಯ ತೆರಿಗೆ ಪಾವತಿಸುವವರ ಕುಟುಂಬಕ್ಕೆ ಮಾತ್ರ ಗೃಹಲಕ್ಷ್ಮಿ ಸಿಗುತ್ತಿಲ್ಲ. ಇದು ಸರಿಯಲ್ಲ. ಈ ಮೊತ್ತ ಬಡವರಿಗೆ ಮಾತ್ರ ತಲುಪಿದರೆ ಯೋಜನೆಯ ನೈಜ ಆಶಯ ಈಡೇರುತ್ತದೆ' ಎಂದು ಅವರು ಅಭಿಪ್ರಾಯಪಟ್ಟರು.

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಕಾರ್ಯಾಲಯ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 100
ಫೋನ್: 080–22111177, E-Mail:ka.doddathoguru.tp@gmail.com

ಸಂ: ದೊಪಂಪ/ತಾ.ಶಾ/ಸಿ.ಆರ್/03/2024–25 ದಿನಾಂಕ:13.08.2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಸ್ವಂತ ನಿಧಿಯಡಿಯಲ್ಲಿ ವಿವಿಧ ರೀತಿಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಆಸಕ್ತಿಯುಳ್ಳ ಅರ್ಹ ನೋಂದಾಯಿತ ಗುತ್ತಿಗೆದಾರರು ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಈ ಕೆಳಕಂಡಂತಿದೆ. ಕಾಮಗಾರಿಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್: https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು. ಅಥವಾ ಪಟ್ಟಣ ಪಂಚಾಯಿತಿ ಕಾರ್ಯಾಲಯದ ತಾಂತ್ರಿಕ ವಿಭಾಗದ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
ಅ)	2023–24ನೇ ಸಾಲಿನ ಪಟ್ಟಣ ಪಂಚಾಯಿತಿ ನಿಧಿ ಎಸ್.ಸಿ.ಎಸ್.ಪಿ. ಯೋಜನೆ	
01	DMA/2024-25/RD/WORK_INDENT20043 (Others Call-2)	4.12
ಆ)	2024–25ನೇ ಸಾಲಿನ ಪಟ್ಟಣ ಪಂಚಾಯಿತಿ ನಿಧಿ	
02	DMA/2024-25/OW/WORK_INDENT24171	7.00
03	DMA/2024-25/OW/WORK_INDENT24155	4.95
04	DMA/2024-25/EL/WORK_INDENT25528	49.96

1) ಮೇಲೆ ತಿಳಿಸಿದ ಕಾಮಗಾರಿಗಳಿಗೆ ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **29.08.2024 ರ ಸಂಜೆ 17.00 ಗಂಟೆಯವರೆಗೆ.**
2) ಈ ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.


ಸಹಿ/– ಆಡಳಿತಾಧಿಕಾರಿಗಳು, ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಹಾಗೂ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು
ವಾಸಾಸಂಇ/ವಾಪ್ರ/ಜಿಎ/1444/2023–24
ಸಹಿ/– ಮುಖ್ಯಾಧಿಕಾರಿ, ದೊಡ್ಡತೋಗೂರು ಪಟ್ಟಣ ಪಂಚಾಯಿತಿ

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು


ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಶಾಂತಿನಿಲಯ, ಕಾನ್ವೆಂಟ್ ಜಂಕ್ಷನ್ ಮಡಿಕೇರಿ, ಕೊಡಗು ಜಿಲ್ಲೆ–571201
email: dcpokodagu@gmail.com ದೂರವಾಣಿ: 08272–228800

ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಡಿಕೇರಿಯ ಸರ್ಕಾರಿ ಬಾಲಮಂದಿರಗಳಲ್ಲಿ ಪ್ರಸ್ತುತ ಪೋಷಣೆ ಹಾಗೂ ರಕ್ಷಣೆ ಪಡೆಯುತ್ತಿರುವ ಕು॥ ಸಿದ್ದಪ್ಪ ಪಿ. ಬಿ. ಕು॥ ದೀಪು ಪಿ.ಬಿ. ಹಾಗೂ ಕುಮಾರಿ ಮಹೇಶ್ವರಿ ಕೆ.ಹೆಚ್ ಈ ಮಕ್ಕಳ ಪೋಷಕರು ಹಾಗೂ ಸಂಬಂಧಿಕರು ಇದುವರೆಗೂ ಮಕ್ಕಳನ್ನು ನೋಡಲು ಬಂದಿರುವುದಿಲ್ಲ. ಈ ಮಕ್ಕಳ ಪೋಷಕರು ಹಾಗೂ ಸಂಬಂಧಿಕರು ಯಾರಾದರೂ ಇದ್ದಲ್ಲಿ ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಾಂತಿ ನಿಲಯ, ಕಾನ್ವೆಂಟ್ ಜಂಕ್ಷನ್, ಮಡಿಕೇರಿ ಹಾಗೂ ದೂರವಾಣಿ: 08272–228800, ಯನ್ನು ಸಂಪರ್ಕಿಸಲು ತಿಳಿಯಪಡಿಸಲಾಗಿದೆ. ಮಕ್ಕಳ ಪೋಷಕರು ಹಾಗೂ ಸಂಬಂಧಿಕರು ಯಾರೂ ಬಾರದಿದ್ದಲ್ಲಿ ಈ ಮಗುವನ್ನು ಕಾನೂನು ಪ್ರಕಾರ ದತ್ತು ನೀಡಲು ಕ್ರಮಕೈಗೊಳ್ಳಲಾಗುವುದು.



ಕು॥ ಸಿದ್ದಪ್ಪ ಪಿ.ಬಿ. ವಯಸ್ಸು ಸಂಸ್ಥೆಗೆ ಬಂದಾಗ: 09 ವರ್ಷ ಪ್ರಸ್ತುತ ವಯಸ್ಸು: 13 ವರ್ಷ ತಂದೆಯ ಹೆಸರು ದಿ॥ ಬಾಬು, ತಾಯಿಯ ಹೆಸರು: ದಿ॥ ಚಿಣ್ಣಿ ಆಲಿಯಾಸ್ ಚಿಮ್ಮಿ ದಿನಾಂಕ 01–09–2020 ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಾಗಿರುತ್ತಾನೆ. ಮಾತನಾಡುವ ಭಾಷೆ: ಕನ್ನಡ, ಕೊಡವ ಮತ್ತು ಯರವ ಈ ಹಿಂದೆ ವಾಸವಿದ್ದ ವಿಳಾಸ: C/o ಅರಂಬೂರು ವಸಂತ ಇವರ ಲೈನ್ ಮನೆ ಹೆರವನಾಡು ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ. ಪ್ರಸ್ತುತ 13 ವರ್ಷದ ದುಂಡು ಮುಖ, ಬಿಳಿ ಮೈ ಬಣ್ಣದ ಗಂಡು ಮಗುವಾಗಿರುತ್ತದೆ.



ಕು॥ ದೀಪು ಪಿ.ಬಿ. ವಯಸ್ಸು ಸಂಸ್ಥೆಗೆ ಬಂದಾಗ: 6 ವರ್ಷ 07 ತಿಂಗಳು ಪ್ರಸ್ತುತ ವಯಸ್ಸು: 10 ವರ್ಷ 04 ತಿಂಗಳು ತಂದೆಯ ಹೆಸರು ದಿ॥ ಬಾಬು, ತಾಯಿಯ ಹೆಸರು: ದಿ॥ ಚಿಣ್ಣಿ ಅಲಿಯಾಸ್ ಚಿಮ್ಮಿ ದಿನಾಂಕ 01–09–2020 ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಾಗಿರುತ್ತಾನೆ, ಮಾತನಾಡುವ ಭಾಷೆ: ಕನ್ನಡ, ಮತ್ತು ಯರವ ಈ ಹಿಂದೆ ವಾಸವಿದ್ದ ವಿಳಾಸ: C/o ಆರಂಬೂರು ವಸಂತ ಇವರ ಲೈನ್ ಮನೆ ಹೆರವನಾಡು ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲ್ಲೂಕು. ಕೊಡಗು ಜಿಲ್ಲೆ. ಪ್ರಸ್ತುತ 10 ವರ್ಷ ಕೋಲು ಮುಖ, ಗೋಧಿ ಮೈ ಬಣ್ಣದ ಗಂಡು ಮಗುವಾಗಿರುತ್ತದೆ. ಎದೆಯ ಬಲಭಾಗದಲ್ಲಿ ಕಪ್ಪು ಮಚ್ಚೆ ಇರುತ್ತದೆ.



ಮಹೇಶ್ವರಿ ಕೆ.ಹೆಚ್. ವಯಸ್ಸು ಸಂಸ್ಥೆಗೆ ಬಂದಾಗ: 11 ವರ್ಷ 03 ತಿಂಗಳು ಪ್ರಸ್ತುತ ವಯಸ್ಸು: 13 ವರ್ಷ 04 ತಿಂಗಳು ತಂದೆಯ ಹೆಸರು ಹೊನ್ನಪ್ಪ, ತಾಯಿಯ ಹೆಸರು: ಮಣಿ ದಿನಾಂಕ 15–07–2014ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ. ಮಾತನಾಡುವ ಭಾಷೆ: ಕನ್ನಡ, ಈ ಹಿಂದೆ ವಾಸವಿದ್ದ ವಿಳಾಸ: C/o ಭೀಮಯ್ಯ ಬಲ್ಲಮಾವಟಿ ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ. ಪ್ರಸ್ತುತ 13 ವರ್ಷದ ಕೋಲು ಮುಖ, ಗೋಧಿ ಮೈ ಬಣ್ಣದ ಹೆಣ್ಣು ಮಗುವಾಗಿರುತ್ತದೆ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಡಿಕೇರಿ, ಕೊಡಗು ಜಿಲ್ಲೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ
ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು–560052. ದೂರವಾಣಿ : 080–22535901/918/ ಸಹಾಯವಾಣಿ: 8277799990

ಪ್ರಕಟಣೆ

ಸಂಖ್ಯೆ: ಅಸಂನಿ/ಅ/ವಿನಿದಾಖಲಾತಿ/ಸಿಆರ್–43/2024–25 ದಿನಾಂಕ: 13.08.2024

2024–25ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಆಹ್ವಾನಿಸುವ ಕುರಿತು.

ಆನ್‌ಲೈನ್ ಅರ್ಜಿ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನ **ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ (ಸಾಮಾನ್ಯ ಪದವಿ ಮಟ್ಟದ ಕೋರ್ಸುಗಳ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಅಲ್ಪಸಂಖ್ಯಾತರ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್ಖ್, ಭೌದ್ಧ ಮತ್ತು ಪಾರ್ಸಿ) ಹಾಗೂ ಇತರೆ ಸಮುದಾಯಗಳ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳು) ವಿದ್ಯಾರ್ಥಿಗಳಿಂದ 2024–25ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.**

- ವಿದ್ಯಾರ್ಥಿಗಳು https://shp.karnataka.gov.in ಅನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು.

ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ

ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಿಗೆ **(ಸಾಮಾನ್ಯ ಪದವಿ ಮಟ್ಟದ ಕೋರ್ಸುಗಳ ವಿದ್ಯಾರ್ಥಿಗಳಿಗೆ ಮಾತ್ರ)**	**12.09.2024**

ಅರ್ಹತೆ

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ:	ರೂ.2.50 ಲಕ್ಷಗಳು

- ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆಗಳ ವಿವರಕ್ಕಾಗಿ Website: https://dom.karnataka.gov.in ಅನ್ನು ನೋಡಬಹುದು.
- ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ Email: directorgokdom@gmail.com ಮುಖಾಂತರ ಅಥವಾ ಇಲಾಖೆಯ Website: https://dom.karnataka.gov.in ಅನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/1456/24–25

ನಮೂನೆ ಬಿ – ಸಾರ್ವಜನಿಕ ಪ್ರಕಟಣೆ

[IBBI–ಭಾರತೀಯ ದಿವಾಳಿ ಮತ್ತು ಪಾಪರುಗಿರಿ ಮಂಡಳಿಯ (ಸಮಾಪನ ಪ್ರಕ್ರಿಯೆ) ನಿಬಂಧನೆಗಳು, 2016 ರ ನಿಬಂಧನೆ 12]

ರಿಲಯಬಲ್ ಕ್ಯಾಷ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ಹಿತಾಸಕ್ತಿದಾರರ ಗಮನಕ್ಕೆ

ಸಂಬಂಧಿತ ವಿವರಗಳು		
1.	ಕಾರ್ಪೊರೇಟ್ ಸಾಲಗಾರ ಕಂಪನಿಯ ಹೆಸರು	ರಿಲಯಬಲ್ ಕ್ಯಾಷ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್
2.	ಕಾರ್ಪೊರೇಟ್ ಸಾಲಗಾರ ಕಂಪನಿ ರಚನೆಯಾದ ದಿನಾಂಕ	21ನೇ ನವಂಬರ್ 2005
3.	ಯಾವ ಪ್ರಾಧಿಕಾರದ ಅನುಮತಿಯೊಂದಿಗೆ ಕಾರ್ಪೊರೇಟ್ ಸಾಲಗಾರ ಕಂಪನಿಯ ರಚನೆ/ನೋಂದಾವಣಿ ಆಗಿದೆ	ಕಂಪನಿಗಳ ರಿಜಿಸ್ಟ್ರಾರ್, ಚೆನ್ನೈ, ತಮಿಳುನಾಡು
4.	ಕಾರ್ಪೊರೇಟ್ ಸಾಲಗಾರ ಕಂಪನಿಯ ಕಾರ್ಪೊರೇಟ್ ಗುರುತಿನ ಸಂಖ್ಯೆ (ಸಿಐಎನ್)	U51229TN2005PTC058063
5.	ಕಾರ್ಪೊರೇಟ್ ಸಾಲಗಾರ ಕಂಪನಿಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದರೆ) ವಿಳಾಸ	**ನೋಂದಾಯಿತ ಕಛೇರಿ:** ನಂ.44, ಸಿ ಪಿ ರಾಮಸಾಮಿ ರಸ್ತೆ, ಅಳ್ವಾರ್‌ಪೇಟ್, ಚೆನ್ನೈ, ತಮಿಳುನಾಡು– 600018 **ಕಾರ್ಪೊರೇಟ್ ಕಛೇರಿ:** ನಂ. 429, ರಸ್ತೆ ಸಂಖ್ಯೆ 10, ಬೈಕಂಪಾಡಿ ಕೈಗಾರಿಕಾ ಪ್ರದೇಶ, ಮಂಗಳೂರು 575011 ಕರ್ನಾಟಕ
6.	ಕಾರ್ಪೊರೇಟ್ ಸಾಲಗಾರ ಕಂಪನಿಯ ದಿವಾಳಿತನ ಪರಿಹಾರ ಪ್ರಕ್ರಿಯೆಯ ಮುಕ್ತಾಯಗೊಂಡ ದಿನಾಂಕ	09ನೇ ಆಗಸ್ಟ್ 2024
7.	ಕಾರ್ಪೊರೇಟ್ ಸಾಲಗಾರ ಕಂಪನಿಯ ದಿವಾಳಿತನ ಪ್ರಕ್ರಿಯೆಯ ಆರಂಭವಾದ ದಿನಾಂಕ	09ನೇ ಆಗಸ್ಟ್ 2024
8.	ಸಮಾಪಕರಾಗಿ ಕೆಲಸ ಮಾಡುತ್ತಿರುವ ದಿವಾಳಿತನ ವೃತ್ತಿಪರರ ಹೆಸರು ಮತ್ತು ನೋಂದಾವಣಿ ಸಂಖ್ಯೆ	ರವೀಂದ್ರ ಬೆಳೆಯೂರ್ IBBI/IPA-001/IP-P00189/2017-18/10368
9.	ಮಂಡಳಿಯಲ್ಲಿ ನೋಂದಾಯಿಸಿರುವಂತೆ ಸಮಾಪಕರ ವಿಳಾಸ ಮತ್ತು ಇಮೇಲ್	ರವೀಂದ್ರ ಬೆಳೆಯೂರ್ 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560 011 ದೂರವಾಣಿ: +91 80 2654 0193 ಇಮೇಲ್: ravi@beleyur.com
10.	ಪತ್ರವ್ಯವಹಾರಗಳಿಗಾಗಿ ಸಮಾಪಕರ ವಿಳಾಸ ಮತ್ತು ಇಮೇಲ್	ರವೀಂದ್ರ ಬೆಳೆಯೂರ್ 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011 ದೂರವಾಣಿ: +91 80 26540193 ಇಮೇಲ್: reliable_cashew_CIRP@beleyur.com
11.	ಕ್ಲೇಮ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	**08ನೇ ಸೆಪ್ಟೆಂಬರ್ 2024**

ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿಯ ಚೆನ್ನೈ ಪೀಠವು (NCLT) ರಿಲಯಬಲ್ ಕ್ಯಾಷ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ದಿವಾಳಿ ಪ್ರಕ್ರಿಯೆಯನ್ನು 09.08.2024 ರಿಂದ ಆರಂಭಿಸಬೇಕೆಂದು ಆದೇಶಿಸಿದೆ ಎಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ರಿಲಯಬಲ್ ಕ್ಯಾಷ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ಹಿತಾಸಕ್ತಿದಾರರು ಪುರಾವೆ ಸಹಿತವಾಗಿ ತಮ್ಮ ಕ್ಲೇಮುಗಳನ್ನು 08.09.2024 ರಂದು ಅಥವಾ ಅದರ ಒಳಗಾಗಿ ಸಮಾಪಕರಿಗೆ, ಮೇಲೆ ಕ್ರ. ಸಂ. 10 ರಲ್ಲಿ ತಿಳಿಸಿರುವ ಅವರ ವಿಳಾಸದಲ್ಲಿ ಸಲ್ಲಿಸಬೇಕು.

ಹಣಕಾಸು ಸಾಲಿಗರು ತಮ್ಮ ಕ್ಲೇಮುಗಳನ್ನು ಪುರಾವೆ ಸಹಿತವಾಗಿ ವಿದ್ಯುನ್ಮಾನ ವಿಧಾನದಲ್ಲಿ ಮಾತ್ರವೇ ಸಲ್ಲಿಸಬೇಕು. ಇನ್ನಿತರ ಎಲ್ಲ ಸಾಲಿಗರು ಖುದ್ದಾಗಿ, ಅಥವಾ ಅಂಚೆಯ ಮೂಲಕ ಅಥವಾ ವಿದ್ಯುನ್ಮಾನ ವಿಧಾನದಲ್ಲಿ ತಮ್ಮ ಕ್ಲೇಮುಗಳನ್ನು ಪುರಾವೆ ಸಹಿತವಾಗಿ ಸಲ್ಲಿಸಬೇಕು.

ಸುಳ್ಳು ಅಥವಾ ಹಾದಿತಪ್ಪಿಸುವಂತಹ ಪುರಾವೆಗಳನ್ನು ನೀಡುವುದು ದಂಡಾರ್ಹ ಅಪರಾಧವಾಗುತ್ತದೆ.

ಒಂದೊಮ್ಮೆ, ಯಾವುದೇ ಹಿತಾಸಕ್ತಿದಾರರು ದಿವಾಳಿತನ ಪ್ರಕ್ರಿಯೆಯ ಅವಧಿಯಲ್ಲಿ ತಮ್ಮ ಕ್ಲೇಮುಗಳನ್ನು ಸಲ್ಲಿಸದೇ ಇದ್ದಲ್ಲಿ, ದಿವಾಳಿ ಪರಿಹಾರ ಪ್ರಕ್ರಿಯೆಯ ಸಮಯದಲ್ಲಿ ಕ್ಲೇಮುಗಳನ್ನು IBBI (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ಪ್ರಕ್ರಿಯೆ) ನಿಬಂಧನೆಗಳು, 2016 ಅಡಿಯಲ್ಲಿ ಸಲ್ಲಿಸಿದ್ದರೆ ಅಂತಹ ಕ್ಲೇಮುಗಳನ್ನು ಕಾಲಂ 38ರ ಅಡಿಯಲ್ಲಿ ಸಲ್ಲಿಸಲಾಗಿದೆ ಎಂದು ಪರಿಗಣಿಸಲಾಗುವುದು.

ದಿನಾಂಕ: 13.08.2024
ಸ್ಥಳ: ಕ್ರೋಂಗ್ ಸೀಮ್ ರೀಪ್, ಕಾಂಬೋಡಿಯಾ

ಸಹಿ/– ರವೀಂದ್ರ ಬೆಳೆಯೂರ್, ಲಿಕ್ವಿಡೇಟರ್, ರಿಲಯಬಲ್ ಕ್ಯಾಷ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್
Reg. No. IBBI/IPA-001/IP-P00189/2017-18/10368

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ಫೋನ್: 8050770005
ಇ–ಮೇಲ್ : bcwdhelpline@gmail.com

ಸಂಖ್ಯೆ: E 1489286 BCWD-17/53/2024-BCWD_SCHLR-BCWD ದಿನಾಂಕ:12.08.2024

ಪ್ರಕಟಣೆ

ಮೆಟ್ರಿಕ್–ನಂತರದ ಕೋರ್ಸುಗಳಾದ ಪಿಯುಸಿ ಮತ್ತು ಸಮನಾಂತರ (PUC & Equivalent Courses), ಸಾಮಾನ್ಯ ಪದವಿ (General Degree Courses), ಸಂಯೋಜಿತ ಉಭಯ ಪದವಿ (Integrated Degree Courses) ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ / ಅರೆಅಲೆಮಾರಿ ವಿದ್ಯಾರ್ಥಿಗಳಿಂದ, 2024–25 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ **"ಮೆಟ್ರಿಕ್–ನಂತರದ ವಿದ್ಯಾರ್ಥಿವೇತನ", "ಶುಲ್ಕ ಮರುಪಾವತಿ",** ಮತ್ತು **"ವಿದ್ಯಾಸಿರಿ(ಊಟ ಮತ್ತು ವಸತಿ ಸಹಾಯ ಯೋಜನೆ")**, ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, **15.09.2024 ಕ್ಕೆ** ಅರ್ಜಿ ಸಲ್ಲಿಸುವ ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಸೂಚಿಸಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	15.09.2024
ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ:	https://ssp.postmatric.karnataka.gov.in
ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ಭೇಟಿ ನೀಡಬೇಕಾದ ವೆಬ್‌ಸೈಟ್ ವಿಳಾಸ: https://bcwd.karnataka.gov.in	
ಇಲಾಖಾ ಸಹಾಯವಾಣಿ ದೂರವಾಣಿ ಸಂಖ್ಯೆ :	8050770005
ಇಮೇಲ್ :	bcwdhelpline@gmail.com
ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇಮೇಲ್ :	postmatrichelp@karnataka.gov.in
ದೂರವಾಣಿ ಸಂಖ್ಯೆ :	1902

ಸಹಿ/– ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
ವಾಸಾಸಂಇ/ವಾಪ್ರ/ಜಿಎ/1445/2024–25

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ತಾಂತ್ರಿಕ ಸಹಾಯಕರು, ಮಂಗಳೂರು ಉಪವಿಭಾಗ, ಮಂಗಳೂರು, ಮಂಗಳೂರು ವಿಭಾಗ

ಲೋಕೋಪಯೋಗಿ ಕಟ್ಟಡ, ನೆಹರೂ ಮೈದಾನದ ಬಳಿ, ಮಂಗಳೂರು–575001
ಸಂಖ್ಯೆ:ಆಯವ್ಯಯ/ವಿವ–18/ಇ–ಟೆಂಡರ್/2024–25 ದಿನಾಂಕ: 08–08–2024

ಇ–ಟೆಂಡರ್ ಪ್ರಕಟಣೆ

2024–25ನೇ ಸಾಲಿನಲ್ಲಿ ಮಂಗಳೂರು ವಿಭಾಗದ ವ್ಯಾಪ್ತಿಗೊಳಪಡುವ ವಲಯಗಳಲ್ಲಿ ಸಸಿಗಳನ್ನು ಬೆಳೆಸುವ, ಸಸಿಗಳ ಪೋಷಣೆ, ಮಾನ್ಸೂನ್ ನೆಡುತೋಪು ಬೆಳೆಸುವ, Eco-Budget ಯೋಜನೆಯಡಿ ಮುಳ್ಳುತಂತಿ ಬೇಲಿ ನಿರ್ಮಾಣ ಮಾಡಲಾದ ಪ್ರದೇಶಗಳಲ್ಲಿ ನೆಡುತೋಪು ಮುಂಗಡ ಕಾಮಗಾರಿ ಕೈಗೊಳ್ಳಲು ಅರ್ಹ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ–ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದು ಇ–ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 26–08–2024 ಅಪರಾಹ್ನ 5.00 ಗಂಟೆಗೆ,** ತಾಂತ್ರಿಕ ಬಿಡ್‌ನ್ನು ತೆರೆಯುವ ಸಮಯ **ದಿನಾಂಕ: 28–08–2024 ರಂದು ಪೂರ್ವಾಹ್ನ 11.00 ಗಂಟೆಗೆ** ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ **ದಿನಾಂಕ: 30–08–2024 ರಂದು ಪೂರ್ವಾಹ್ನ 11.00 ಗಂಟೆಗೆ** ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಗುತ್ತಿಗೆದಾರರು ಟೆಂಡರ್ ಹಾಕದಿದ್ದಲ್ಲಿ ಇದೇ ಇ–ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಮರು ಇ–ಟೆಂಡರನ್ನು ಆಹ್ವಾನಿಸಲಾಗಿದ್ದು, ಮರು ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 04–09–2024 ರಂದು ಅಪರಾಹ್ನ 5.00 ಗಂಟೆಗೆ,** ತಾಂತ್ರಿಕ ಬಿಡ್‌ನ್ನು ತೆರೆಯುವ ಸಮಯ **ದಿನಾಂಕ: 06–09–2024 ರಂದು ಪೂರ್ವಾಹ್ನ 11.00 ಗಂಟೆಗೆ** ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ **ದಿನಾಂಕ: 09–09–2024 ರಂದು ಪೂರ್ವಾಹ್ನ 11.00 ಗಂಟೆಗೆ.** ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ತಾಂತ್ರಿಕ ಸಹಾಯಕರು, ಮಂಗಳೂರು ಉಪವಿಭಾಗ, ಮಂಗಳೂರು
DIPR/ADM/KSMCA/412/24-25 dt.13.08.2024

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಜೋಗ–ಕಾರ್ಗಲ್

Website:www.jogkargaltown.mrc.gov.in Ph: 08186 240307
Fax: 08186-240307 e-mail: ka.jogkargal.tp@gmail.com
ಕ್ರ.ಸಂ.ಪ.ಪಂ.ಜೋ.ಕಾ/ಕಿ.ಅ/29/2024–25 ದಿನಾಂಕ: 12.08.2024

ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮುಖಾಂತರ)

ಜೋಗ–ಕಾರ್ಗಲ್ ಪಟ್ಟಣ ಪಂಚಾಯಿತಿಗೆ ಸಂಬಂಧಿಸಿದಂತೆ ಅನುಮೋದನೆಯಾದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅನುಭವವುಳ್ಳ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಮತ್ತು ಅರ್ಹ ಸರಭರಾಜು ದಾರರು ಭಾಗವಹಿಸಬಹುದಾಗಿದ್ದು, ಇ–ಪೋರ್ಟಲ್ ಮುಖಾಂತರ ಟೆಂಡರ್ ನ್ನು ಆಹ್ವಾನಿಸಲಾಗಿದೆ. **ವಿವರ ಈ ಕೆಳಗಿನಂತಿದೆ.**

ಇತರೆ GENERAL ಗುತ್ತಿಗೆದಾರರಿಗೆ ಮೀಸಲಾತಿ (ಶೇ.75.90% ರಷ್ಟು)
2024–25ನೇ ಸಾಲಿನ 15ನೇ ಹಣಕಾಸು (Tied Grants) ಘನತ್ಯಾಜ್ಯ ವಸ್ತು ನಿರ್ವಹಣೆ

ಕ್ರ.ಸಂ. 1. ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಉಲ್ಲೇಖ: DMA/2024-25/OW/WORK_INDENT25856 **ಕಾಮಗಾರಿ ವಿವರ:** ಪಟ್ಟಣ ಪಂಚಾಯಿತಿ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಇಡುವಾಣಿಯಲ್ಲಿ ಮುಖ್ಯ ರಸ್ತೆಯಿಂದ ಸಂಪರ್ಕ ಕಲ್ಪಿಸುವ ರಸ್ತೆಯ ಪಕ್ಕ ತಡೆಗೋಡೆ ನಿರ್ಮಾಣ ಕಾಮಗಾರಿ. **ಅಂದಾಜು ಮೊತ್ತ ರೂ.(ಲಕ್ಷಗಳಲ್ಲಿ):** 48.10 **ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ:** 3 ತಿಂಗಳು **ಮೀಸಲಾತಿ:** ಇತರೆ GENERAL

ಈ ಕಛೇರಿಯಿಂದ ಮಾಹಿತಿಯನ್ನು ಪಡೆಯಲು ಅಂತಿಮ ದಿ:26–08–2024 ಸಮಯ ಸಂಜೆ:– 5:30 ಗಂಟೆವರೆಗೆ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 27–08– 2024 ಸಮಯ ಸಂಜೆ:– 5:30 ಗಂಟೆ ವರೆಗೆ ತಾಂತ್ರಿಕ ಬಿಡನ್ನು ತೆರೆಯುವ ದಿನಾಂಕ ಮತ್ತು ವೇಳೆ : 29–08–2024 ಸಮಯ ಬೆಳಿಗ್ಗೆ 11:00 ಗಂಟೆಗೆ. ಆರ್ಥಿಕ ಬಿಡನ್ನು ತೆರೆಯುವ ದಿನಾಂಕ ಮತ್ತು ವೇಳೆ : 31–08–2024 ಸಮಯ, ಬೆಳಿಗ್ಗೆ 11:00 ಗಂಟೆಗೆ. ಅರ್ಹ ಗುತ್ತಿಗೆದಾರರು ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್ ಗಾರಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಹಾಗೂ ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ:91–8046010000+91–8068948777 ರಿಂದ ಮಾಹಿತಿ Help Desk. ಪಡೆಯಬಹುದು

ಷರತ್ತುಗಳು:– 1. ಇ.ಎಂ.ಡಿ ಯನ್ನು ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಪಡೆದು Online ಮೂಲಕ ಸಲ್ಲಿಸತಕ್ಕದ್ದು. 2. ಗುತ್ತಿಗೆದಾರರು ಟೆಂಡರ್ ನಲ್ಲಿ ಅಂದಾಜು ಮೊತ್ತಕ್ಕಿಂತ ಕಡಿಮೆ ದರ ನಮೂದಿಸಲ್ಲಿ ವ್ಯತ್ಯಾಸದ ಮೊಬಲಗನ್ನು ಜೋಗ–ಕಾರ್ಗಲ್ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳ ಹೆಸರಿಗೆ ಲಗತ್ತಿಸತಕ್ಕದ್ದು. 3. ಗುತ್ತಿಗೆದಾರರು ಕಾಮಗಾರಿಗಳನ್ನು ಪಾರದರ್ಶಕ ನಿಯಮದಡಿ ಮಾಡತಕ್ಕದ್ದು ಹಾಗೂ ಕಾಮಗಾರಿ ಮುಗಿಸಿದ ನಂತರ ಗುತ್ತಿಗೆದಾರರೇ 2ನೇ ವರ್ಷದ ಅವಧಿಗೆ ಸದರಿ ಕೆಲಸದ ನಿರ್ವಹಣೆಗೆ ಮಾಡತಕ್ಕದ್ದು. 4. ಕಾಮಗಾರಿ ಪೂರ್ಣಗೊಂಡ ನಂತರ 3ನೇ ಪಾರ್ಟಿಯಿಂದ ಪರಿಶೀಲನೆ ನಡೆಸಿ ವರದಿ ಪಡೆದ ನಂತರವೇ ಬಿಲ್ ಪಾವತಿಸಲಾಗುವುದು. 5. ಪ್ರತಿ ಕಾಮಗಾರಿಗಳನ್ನು ಆರಂಭಿಸುವ ಮುನ್ನ ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಳ್ಳುವವರೆಗೆ ಪ್ರತಿ ಹಂತದಲ್ಲಿ ಕನಿಷ್ಠ3 ರಂತೆ ಸ್ಥಳದ ಛಾಯಾ ಚಿತ್ರಗಳನ್ನು ಸಲ್ಲಿಸತಕ್ಕದ್ದು. 6. ಗುತ್ತಿಗೆದಾರರ ತೆರಿಗೆ ಚುಕ್ತ ಮಾಡಿದ ಬಗ್ಗೆ ದೃಢೀಕರಣ ಪತ್ರವನ್ನು Online ಮೂಲಕ ಸಲ್ಲಿಸತಕ್ಕದ್ದು. 7. ಟೆಂಡರ್ ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಪಟ್ಟಣ ಪಂಚಾಯಿತಿ ಕಾಯ್ದಿರಿಸಿಕೊಂಡಿದೆ. 8. ಗುತ್ತಿಗೆದಾರರು ಬಿಲ್ ನಲ್ಲಿ ಹಾಲಿ ಕಟಾಯಿಸಿದ ತೆರಿಗೆಗಳನ್ನು ಜೊತೆಗೆ ಶೇ. 1 ರಷ್ಟು ಕಾರ್ಮಿಕಕರ ಕ್ಷೇಮಾಭಿವೃದ್ಧಿ ನಿಧಿಯನ್ನು ಕಟಾಯಿಸಿಸಲಾಗುವುದು. 9. ಕಾಮಗಾರಿ ಪೂರ್ಣಗೊಂಡ ನಂತರ ಸರ್ಕಾರದ ಅನುಧಾನ ಬಿಡುಗಡೆಯಾದ ಆಧಾರದ ಮೇಲೆ ಬಿಲ್ ಪಾವತಿಸಲಾಗುವುದು ಹಾಗೂ ಬಿಲ್ ಪಾವತಿಸಲು ವಿಳಂಬವಾದಲ್ಲಿ ಯಾವುದೇ ಬಡ್ಡಿ ವಗೈರೆ ಪಾವತಿಸಲಾಗುವುದಿಲ್ಲ. 10. ಹೆಚ್ಚಿನ ವಿವರಗಳನ್ನು ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಮುಖ್ಯಾಧಿಕಾರಿ, ಜೋಗ–ಕಾರ್ಗಲ್, ಪಟ್ಟಣ ಪಂಚಾಯಿತಿ
ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/24–25/67/08/467

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಐಎಫ್‌ಟಿ ಸಂಖ್ಯೆ/ಕಾನಿಇ/ಬವಿ/ಟಿಎಸ್–4/2024–25/1973 ದಿನಾಂಕ: 12–08–2024

ತಿದ್ದುಪಡಿ ಟೆಂಡರ್ ಪ್ರಕಟಣೆ

ವಿಷಯ: 3054–(ಯೋಜನೇತರ)–ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಲೆಕ್ಕಶೀರ್ಷಿಕೆಯ ಅಡಿಯಲ್ಲಿ ಆಹ್ವಾನಿಸಲಾಗಿದ್ದ ಕಾಮಗಾರಿಗಳ ಟೆಂಡರ್ ತಿದ್ದುಪಡಿ ಬಗ್ಗೆ..
ಉಲ್ಲೇಖ: ಈ ಕಛೇರಿ ಟೆಂಡರ್ ಸಂಖ್ಯೆ ಪತ್ರ ಸಂ. .ಲೋಇ/ಕಾನಿಇ/ಬವಿ/ಟಿಎಸ್–4/1835/2024–25 ದಿನಾಂಕ: 01–08–2024.

ಮೇಲಿನ ಉಲ್ಲೇಖದಲ್ಲಿನ ಈ ಕಛೇರಿ ಟೆಂಡರ್ ಪ್ರಕಟಣೆಯಲ್ಲಿ ಆಹ್ವಾನಿಸಿದ್ದ ಕಾಮಗಾರಿಗಳ ಪೈಕಿ ಈ ಕೆಳಕಾಣಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದಾಗಿ ಇಂಡೆಂಟ್ ಸಂಖ್ಯೆಯಲ್ಲಿ ಬದಲಾವಣೆಯಾಗಿದ್ದು, ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಇದನ್ನು ಗಮನಿಸಲು ಕೋರಿದೆ. ಇನ್ನುಳಿದ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಬದಲಾವಣೆಗಳಿದ್ದಲ್ಲಿ ಪ್ರತ್ಯೇಕವಾಗಿ ತಿಳಿಯಪಡಿಸಲಾಗುವುದು.
ಈ ಮೊದಲು ಪ್ರಕಟಿಸಲಾದ ಕಾಮಗಾರಿಯ ಇಂಡೆಂಟ್ ಸಂಖ್ಯೆ: PWD/2024-25/RD/WORK_INDENT12072
ಬದಲಾಯಿತ ಇಂಡೆಂಟ್: PWD/2024-25/RD/WORK_INDENT14134

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/344/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ:10/2024–25
ದಿನಾಂಕ:12.08.2024

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–2 & 3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪಿ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಅಂದಾಜು ಕನಿಷ್ಟ ಮೊತ್ತ ರೂ.40.00 ಲಕ್ಷಗಳು ಮತ್ತು ಗರಿಷ್ಟ ಮೊತ್ತ ರೂ.100.00 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 20–08–2024 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು. ಸೂಚನೆ:ಬಿಡ್ಡುದಾರರು ಜಿ.ಎಸ್.ಟಿ ಸೇರಿದಂತೆ ದರಗಳನ್ನು ನಮೂದಿಸತಕ್ಕದ್ದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/301/ಕೆಎಸ್‌ಎಂಸಿಎ/2024–25

समुद्री उत्पाद निर्यात विकास प्राधिकरण
THE MARINE PRODUCTS EXPORT DEVELOPMENT AUTHORITY

(वाणिज्य एवं उद्योग मंत्रालय, भारत सरकार)
(Ministry of Commerce and Industry, Government of India)
एमपीईडीए हाउस, पनम्पिल्ली एवेन्यू / MPEDA House, Panampilly Avenue
कोच्चि/Kochi - 682036, केरल / Kerala.
(दूरभाष / Tel: 0484- 2311901) ईमेल / Email : ho@mpeda.gov.in
वेबसाइट / Website: www.mpeda.gov.in

गुणवत्ता नियंत्रण प्रशिक्षु
QUALITY CONTROL TRAINEES

एम पी ई डी ए अपने क्षेत्रीय/उपक्षेत्रीय प्रभागों में **गुणवत्ता नियंत्रण प्रशिक्षुओं** के लिए ऑनलाइन आवेदन आमंत्रित करता है। विस्तृत अधिसूचना के लिए कृपया एमपीईडीए वेबसाइट (अधिसूचना – अवसर – प्रारंभिक सूची) देखें।
ऑनलाइन आवेदन प्राप्त करने की अंतिम तिथि : 31.08.2024।

MPEDA invites online applications for **Quality Control Trainees** at its Regional /Sub Regional Divisions. For detailed notification, please visit MPEDA website (Notification - Opportunities - Opening List).
Last date of receipt of application: 31.08.2024.

हस्ता/- / Sd/-
सचिव / SECRETARY

KARNATAKA NEERAVARI NIGAM LIMITED
(A Government of Karnataka Enterprises)

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332–225213.

ಸಂಖ್ಯೆ: ಕನೀನಿನಿ/ಜಿಆರ್‌ಬಿಸಿಸಿವಿ–3/ಡಿಬಿ/ಟೆಂಡರ/ಲೆ.ಶಿ.4701 ಎಂ& ಎಂ.ಆಯ್/ಟೆಂಡರ್/2024–25/01 ದಿನಾಂಕ:12–08–2024

ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘ.ಬ.ದಂ.ಕಾ.ನಿ. ವಿಭಾಗ ಸಂ.3, ಗೋಕಾಕ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ act 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ ಕೆ.ಡಬ್ಲ್ಯೂ– I,II, III & IV ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಶೇಕಡಾ ವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ ಟೆಂಡರ ಕರೆಯಲಾಗಿದ್ದು ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರನ್ನು ದ್ವಿ ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. (ಕಿತ್ತೂರ ವಿಧಾನಸಭಾ ಮತಕ್ಷೇತ್ರದಡಿ)
1.ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೀಸಲಾತಿ ಕಾಮಗಾರಿಗಳು (03). ಕಾಮಗಾರಿಗಳ ಇಂಡೆಂಟ್ ನಂಬರುಗಳು, 1216, 1218 & 1243 ಟೆಂಡರಿಗಿಟ್ಟ ಮೊತ್ತವು (ಜಿ.ಎಸ್.ಟಿ. ಒಳಗೊಂಡಿರುತ್ತದೆ) ರೂ. 14.995 ಲಕ್ಷಗಳು, ರೂ. 19.99 ಲಕ್ಷಗಳು, ರೂ. 48.47 ಲಕ್ಷಗಳು ಕ್ರಮವಾಗಿ ಇರುತ್ತವೆ. 2.ಸಾಮಾನ್ಯ ಕಾಮಗಾರಿಗಳು (02). ಕಾಮಗಾರಿಗಳ ಇಂಡೆಂಟ್ ನಂಬರುಗಳು. 1346 & 1347 ಇಟ್ಟ ಅಂದಾಜು ಟೆಂಡರ ಮೊತ್ತವು (ಜಿ.ಎಸ್.ಟಿ. ಒಳಗೊಂಡಿರುತ್ತದೆ) ರೂ. 63.11 ಲಕ್ಷಗಳು & ರೂ. 117.94 ಲಕ್ಷಗಳು ಕ್ರಮವಾಗಿ ಇರುತ್ತವೆ

ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿ.ಆರ್.ಬಿ.ಸಿ.ಸಿ. ವಿಭಾಗ ನಂ.3, ಗೋಕಾಕ ಕಚೇರಿಯ ಟೆಂಡರಗಳನ್ನು ದಿ: 16–08–2024 ರಿಂದ ದಿ:23–08–2024 ರಂದು 16.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. ಟೆಂಡರ ಪೂರ್ವಭಾವಿ ಸಭೆ (ಇಂಡೆಂಟ್ ನಂಬರ 1347 ಕ್ಕೆ ಮಾತ್ರ) ದಿನಾಂಕ 19–08–2024 11.00 ಗಂಟೆಗೆ. ಟೆಂಡರ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯವು ದಿನಾಂಕ 21–08–2024, 17.00 ಗಂಟೆಯವರೆಗೆ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ & ಸಮಯವು 23–08–2024 ರಂದು 16.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 26–08–2024, 11.00 ಗಂಟೆಗೆ, ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://www.kppp.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರಗಳಲ್ಲಿ ಯಾವುದೇ ಬದಲಾವಣೆಗಳು/ ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆಪಿಪಿ – ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–(ಹೆಚ್.ಎಸ್.ಕಾಖಂಡಕಿ) ಕಾರ್ಯನಿರ್ವಾಹಕ ಇಂಜಿನೀಯರು, ಕನೀನಿನಿ ಜಿಆರ್‌ಬಿಸಿಸಿ ವಿಭಾಗ ನಂ–3, ಗೋಕಾಕ.
DIPR/BGM/RO-NO-604/KSMCA/2024-25

ಗುರ್ಮೀತ್ ರಾಮ್ ರಹೀಮ್‌ಗೆ 21 ದಿನ ಬಿಡುಗಡೆ

ಚಂಡೀಗಢ (ಪಿಟಿಐ): ಅತ್ಯಾಚಾರ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ಡೇರಾ ಸಚ್ಚಾ ಸೌದಾ ಪಂಥದ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್



ಸಿಂಗ್ ಅವರು 21 ದಿನಗಳ 'ಫರ್ಲೋ (ದೀರ್ಘಾವಧಿ ಜೈಲು ಶಿಕ್ಷೆಗೆ ಒಳಗಾಗಿರುವವರಿಗೆ ತಾತ್ಕಾಲಿಕ ಬಿಡುಗಡೆ) ಮೇಲೆ ಹರಿಯಾಣದ ರೋಹ್ತಕ್‌ನ ಸುನಾರಿಯಾ ಜೈಲಿನಿಂದ ಮಂಗಳವಾರ ಬಿಡುಗಡೆಯಾಗಿದ್ದಾರೆ.

ತಾತ್ಕಾಲಿಕ ಬಿಡುಗಡೆ ಅವಧಿಯನ್ನು ಗುರ್ಮೀತ್ ಅವರು ಉತ್ತರಪ್ರದೇಶದ ಬರ್ನಾವದಲ್ಲಿರುವ ಡೇರಾ ಆಶ್ರಮದಲ್ಲಿ ಕಳೆಯಲಿದ್ದಾರೆ.

ಗುರ್ಮಿತ್‌ಅವರನ್ನುತಾತ್ಕಾಲಿಕವಾಗಿ ಬಿಡುಗಡೆ ಮಾಡಲು ಮುಂದಾಗಿರುವುದನ್ನು ಪ್ರಶ್ನಿಸಿ ಶಿರೋಮಣಿ ಗುರುದ್ವಾರ ಪ್ರಬಂಧಕ್ ಸಮಿತಿ (ಎಸ್‌ಜಿಪಿಸಿ) ಸಲ್ಲಿಸಿದ್ದ ಅರ್ಜಿಯನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ವಜಾಗೊಳಿಸಿದೆ.

'ಬಿಡುಗಡೆ ಅವಧಿಯಲ್ಲಿ ಗುರ್ಮೀತ್ ಅವರು ಡೇರಾ ಆಶ್ರಮದಲ್ಲಿಯೇ ಇರಬೇಕು. ವಾರಂಟ್‌ನಲ್ಲಿ ಉಲ್ಲೇಖವಾಗದ ಸ್ಥಳಗಳಿಗೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಅನುಮತಿಯಿಲ್ಲದೇ ತೆರಳುವಂತಿಲ್ಲ' ಎಂದು ಕೋರ್ಟ್ ಸೂಚಿಸಿದೆ. ಸಿರ್ಸಾ ಆಶ್ರಮದಲ್ಲಿ ಇಬ್ಬರು ಅನುಯಾಯಿಗಳ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಗುರ್ಮೀತ್ ಅವರಿಗೆ 20 ವರ್ಷಗಳ ಜೈಲುಶಿಕ್ಷೆ ವಿಧಿಸಲಾಗಿದೆ.

ಗುರ್ಮೀತ್ ಈ ಹಿಂದೆಯೂ ಹಲವು ಬಾರಿ 'ಫರ್ಲೋ' ಅಥವಾ ಪೆರೋಲ್ ಮೇಲೆ ಬಿಡುಗಡೆಯಾಗಿದ್ದರು. 'ನ್ಯಾಯಾಲಯದ ಅನುಮತಿಯಿಲ್ಲದೇ ಗುರ್ಮೀತ್ ಅವರಿಗೆ ಇನ್ನು ಮುಂದೆ ಪೆರೋಲ್ ನೀಡುವಂತಿಲ್ಲ' ಎಂದು ಹೈಕೋರ್ಟ್ ಫೆಬ್ರವರಿ 29ರಂದು ಹರಿಯಾಣ ಸರ್ಕಾರಕ್ಕೆ ಆದೇಶಿಸಿತ್ತು.

ಹಿಂಡೆನ್‌ಬರ್ಗ್ ವರದಿ: ಆರೋಪಗಳ ತನಿಖೆಗೆ ಕಾಂಗ್ರೆಸ್ ಪ್ರಮುಖರ ಸಭೆಯಲ್ಲಿ ಆಗ್ರಹ

'22ರಂದು ದೇಶವ್ಯಾಪಿ ಪ್ರತಿಭಟನೆ'



ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಮಂಗಳವಾರ ಪಕ್ಷದ ಪ್ರಮುಖರ ಸಭೆ ನಡೆಯಿತು ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರ ಕುರಿತು ಹಿಂಡೆನ್‌ಬರ್ಗ್ ತನ್ನ ಇತ್ತೀಚಿನ ವರದಿಯಲ್ಲಿ ಮಾಡಿರುವ ಆರೋಪಗಳ ಕುರಿತು ತನಿಖೆಯಾಗಬೇಕು ಎಂಬ ತನ್ನ ಒತ್ತಾಯವನ್ನು ತೀವ್ರಗೊಳಿಸಿರುವ ಕಾಂಗ್ರೆಸ್, ಈ ಸಂಬಂಧ ಆಗಸ್ಟ್ 22ರಂದು ದೇಶದಾದ್ಯಂತ ಪ್ರತಿಭಟನೆ ನಡೆಸುವುದಾಗಿ ಮಂಗಳವಾರ ಘೋಷಿಸಿದೆ.

'ಅದಾನಿ ಸಮೂಹದ ಕುರಿತು ಜಂಟಿ ಸಂಸದೀಯ ಸಮಿತಿಯಿಂದ (ಜೆಪಿಸಿ) ತನಿಖೆ ನಡೆಸಬೇಕು. ಸೆಬಿ ಅಧ್ಯಕ್ಷೆ ಮಾಧವಿ ಬುಚ್ ಅವರಿಗೆ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯುವ ಯಾವ ನೈತಿಕತೆಯೂ ಇಲ್ಲ. ಆದ್ದರಿಂದ, ಅವರನ್ನು ಆ ಸ್ಥಾನದಿಂದ ಕೆಳಗಿಳಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಲಾಗುವುದು' ಎಂದು ಕಾಂಗ್ರೆಸ್ ಹೇಳಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಮಂಗಳವಾರ ಪಕ್ಷದ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಘಟಕದ ಅಧ್ಯಕ್ಷರು, ರಾಜ್ಯ ಉಸ್ತುವಾರಿ ನಾಯಕರ ಸಭೆ ನಡೆಯಿತು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೂ ಸಭೆಯಲ್ಲಿ ಭಾಗವಹಿಸಿದ್ದರು.

ಹಿಂಡೆನ್‌ಬರ್ಗ್ ವರದಿಗೆ ಸಂಬಂಧಿಸಿದ 'ಅತ್ಯಂತ ದೊಡ್ಡ ಹಗರಣ'ದ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. 'ಸೆಬಿ ಹಾಗೂ ಅದಾನಿ ಸಂಬಂಧದ ಕುರಿತು ಮೋದಿ ಸರ್ಕಾರವು ವಿಸ್ತೃತ ತನಿಖೆ ನಡೆಸಬೇಕು. ಜೊತೆಗೆ, ಮಾಧವಿ ಅವರಿಂದ ತಕ್ಷಣವೇ ರಾಜೀನಾಮೆ ಪಡೆದುಕೊಳ್ಳಬೇಕು, ಅದಾನಿ ಪ್ರಕರಣ ಸಂಬಂಧ ಜೆಪಿಸಿ ರಚಿಸಬೇಕು' ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

'ಈ ಎಲ್ಲ ಪ್ರಕರಣಗಳಲ್ಲಿ ಪ್ರಧಾನಿ ಮೋದಿ ಅವರು ಸಂಪೂರ್ಣವಾಗಿ ತೊಡಗಿಕೊಂಡಿದ್ದಾರೆ. ಈಗ ಸೆಬಿ ಕೂಡ ಅದಾನಿಯೊಂದಿಗೆ ಸೇರಿಕೊಂಡಿದೆ ಎಂದು ತಿಳಿದು ಬಂದಿದೆ. ಸೆಬಿ ಅಧ್ಯಕ್ಷೆಯನ್ನು ಆ ಸ್ಥಾನದಿಂದ ಕೆಳಗಿಳಿಸಬೇಕು' ಎಂದು ಸುದ್ದಿಗಾರರೊಂದಿಗೆ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಒತ್ತಾಯಿಸಿದರು.

ಒಳಮೀಸಲಾತಿ ತೀರ್ಪಿನ ಕುರಿತೂ ಚರ್ಚೆ

ಪರಿಶಿಷ್ಟ ಜಾತಿಯವರಿಗೆ ನೀಡುವ ಮೀಸಲಾತಿಯಲ್ಲಿ, ರಾಜ್ಯ ಸರ್ಕಾರಗಳು ಒಳಮೀಸಲಾತಿ ನೀಡಬಹುದು ಎಂದು ಸುಪ್ರೀಂ ಕೋರ್ಟ್ ಈಚೆಗೆ ನೀಡಿದ್ದ ತೀರ್ಪಿನ ಕುರಿತೂ ಸಭೆಯಲ್ಲಿ ಚರ್ಚಿಸಲಾಯಿತು.

ತೀರ್ಪಿನ ಅಧ್ಯಯನ ನಡೆಸಲು ಖರ್ಗೆ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗುವುದು. ಆ ಬಳಿಕವೇ ಒಳಮೀಸಲಾತಿ ಕುರಿತು ಪಕ್ಷದ ನಿಲುವನ್ನು ಅಂತಿಮಗೊಳಿಸಲಾಗುವುದು ಎಂದು ಕಾಂಗ್ರೆಸ್ ಹೇಳಿದೆ. ಆದರೆ, ಕೆನೆಪದರ ಗುರುತಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿರುವುದಕ್ಕೆ ಪಕ್ಷವು ವಿರೋಧ ವ್ಯಕ್ತಪಡಿಸಿದೆ.

ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರು ತೀರ್ಪನ್ನು ಸ್ವಾಗತಿಸಿರುವ ಕುರಿತು ವೇಣುಗೋಪಾಲ್ ಅವರನ್ನು ಪತ್ರಕರ್ತರು ಪ್ರಶ್ನಿಸಿದಾಗ, 'ಪಕ್ಷವು ಯಾವ ನಿರ್ಧಾರ ತೆಗೆದುಕೊಳ್ಳುತ್ತದೆಯೊ, ಅದನ್ನು ರೆಡ್ಡಿ ಸೇರಿದಂತೆ ಎಲ್ಲರೂ ಪಾಲಿಸಬೇಕು' ಎಂದರು.

ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ತೀರ್ಪನ್ನು 'ಐತಿಹಾಸಿಕ' ಎಂದು ಬಣ್ಣಿಸಿದ್ದರು.

ಇತರ ಪ್ರಮುಖ ನಿರ್ಧಾರಗಳು

- ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಪೂಜಾ ಕೇಂದ್ರಗಳನ್ನು ಹಾಗೂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ನಡೆಯುತ್ತಿರುವ ದಾಳಿಯನ್ನು ನಿಲ್ಲಿಸುವ ಕುರಿತು ಕೇಂದ್ರ ಸರ್ಕಾರವು ಕ್ರಮ ಕೈಗೊಳ್ಳಬೇಕು. ಅಲ್ಲಿನ ಅಲ್ಪಸಂಖ್ಯಾತರು ಸುರಕ್ಷಿತ, ಗೌರವಯುತ ಹಾಗೂ ಸೌಹಾರ್ದಯುತ ಜೀವನ ನಡೆಸುವಂತಾಗಲು ಕೇಂದ್ರವು ಕಾರ್ಯಪ್ರವೃತ್ತವಾಗಬೇಕು
- ಹರಿಯಾಣ, ಮಹಾರಾಷ್ಟ್ರ, ಜಾರ್ಖಂಡ್, ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯಲಿರುವ ಚುನಾವಣೆಗಳ ತಯಾರಿ ಕುರಿತು ಚರ್ಚೆ ನಡೆಯಿತು. ಮೈತ್ರಿಯೊಂದಿಗೆ ಈ ಎಲ್ಲ ರಾಜ್ಯಗಳಲ್ಲಿ ಚುನಾವಣೆ ಎದುರಿಸಬೇಕೇ ಅಥವಾ ಬೇಡವೇ ಎನ್ನುವ ಕುರಿತು ಆಯಾ ರಾಜ್ಯಗಳ ನಾಯಕರೇ ನಿರ್ಧರಿಸಬೇಕು
- ಯಾವುದೇ ವಿಳಂಬವಿಲ್ಲದೆಯೇ ಜಾತಿ ಗಣತಿ ನಡೆಸಬೇಕು ಎಂದು ಒತ್ತಾಯಿಸಿ ಜಿಲ್ಲಾ ಮಟ್ಟದಿಂದ ರಾಷ್ಟ್ರಮಟ್ಟದವರೆಗೂ ಅಭಿಯಾನ ನಡೆಸಲಾಗುವುದು
- ಸಂವಿಧಾನದ ಮೇಲಿನ ದಾಳಿ, ಎಂಎಸ್‌ಪಿಗೆ ಕಾನೂನು ಖಾತರಿ, ಅಗ್ನಿಪಥ ಯೋಜನೆ ರದ್ದತಿ, ರೈಲು ಅವಘಡಗಳು, ಹವಾಮಾನ ಸಂಬಂಧಿತ ದುರಂತಗಳು ಹಾಗೂ ಕಟ್ಟಡಗಳ ಸೋರಿಕೆಯಂಥ ವಿಷಯಗಳ ಕುರಿತು ರಾಷ್ಟ್ರವ್ಯಾಪಿ ಅಭಿಯಾನ ನಡೆಸಬೇಕು

ಹಿಂಡೆನ್‌ಬರ್ಗ್ ವರದಿ ಉಲ್ಲೇಖಿಸಿ ಅರ್ಜಿ

ನವದೆಹಲಿ: ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಮತ್ತು ಅವರ ಪತಿ ಧವಳ್ ಬುಚ್ ಅವರು ವಿನೋದ್ ಅದಾನಿ ನಿಯಂತ್ರಣದ ನಿಧಿಯೊಂದರಲ್ಲಿ ಹೂಡಿಕೆ ಮಾಡಿದ್ದಾರೆ ಎಂದು ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಮಾಡಿರುವ ಆರೋಪಗಳನ್ನು ದಾಖಲಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿಯೊಂದನ್ನು ಸಲ್ಲಿಸಲಾಗಿದೆ.


ವಿನೋದ್ ಅವರು ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರ ಸಹೋದರ. 'ಆರೋಪಗಳು ಆಧಾರರಹಿತ ಎಂದು ಮಾಧವಿ ಅವರು ಸ್ಪಷ್ಟನೆ ನೀಡಿದ್ದರೂ, ಮೂರನೆಯ ವ್ಯಕ್ತಿಗಳು ಸಿದ್ಧಪಡಿಸುವ ವರದಿಗಳನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಈ ನ್ಯಾಯಾಲಯ ಹೇಳಿದ್ದರೂ, ಸಾರ್ವಜನಿಕರು ಮತ್ತು ಹೂಡಿಕೆದಾರರ ಮನಸ್ಸಿನಲ್ಲಿ ಅನುಮಾನಗಳು ಮೂಡಿವೆ. ಇಂತಹ ಸಂದರ್ಭದಲ್ಲಿ, ಬಾಕಿ ಇರುವ ತನಿಖೆಗಳನ್ನು ಪೂರ್ಣಗೊಳಿಸುವುದು ಸೆಬಿ ಪಾಲಿಗೆ ಅನಿವಾರ್ಯವಾಗುತ್ತದೆ' ಎಂದು ವಕೀಲ ವಿಶಾಲ್ ತಿವಾರಿ ಅವರು ಸಲ್ಲಿಸಿರುವ ಅರ್ಜಿಯಲ್ಲಿ ಹೇಳಲಾಗಿದೆ.

ಸುದ್ದಿ 2 ನಿಮಿಷ

ದೆಹಲಿ: ಧ್ವಜಾರೋಹಣ ನೆರವೇರಿಸಲಿರುವ ಕೈಲಾಶ್

ನವದೆಹಲಿ (ಪಿಟಿಐ): ದೆಹಲಿ ಸರ್ಕಾರ ಆಯೋಜಿಸಲಿರುವ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ರಾಷ್ಟ್ರಧ್ವಜಾರೋಹಣ ಮಾಡಲು ಗೃಹ ಸಚಿವ ಕೈಲಾಶ್ ಗೆಹಲೋತ್ ಅವರನ್ನು ಲೆಫ್ಟಿನೆಂಟ್ ಗವರ್ನರ್ (ಎಲ್‌ಜಿ) ವಿ.ಕೆ. ಸಕ್ಸೇನಾ ಅವರು ನಾಮನಿರ್ದೇಶನ ಮಾಡಿದ್ದಾರೆ ಎಂದು ರಾಜಭವನದ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಸರ್ಕಾರದ ಹಲವು ಹಿರಿಯ ಸಚಿವರನ್ನು ಪರಿಗಣಿಸದೆ, ಕೈಲಾಶ್ ಅವರನ್ನು ನಾಮನಿರ್ದೇಶನ ಮಾಡಿರುವುದು ಎಎಪಿ ಹಾಗೂ ಎಲ್‌ಜಿ ಸಚಿವಾಲಯದ ನಡುವೆ ಮತ್ತೊಂದು ಸುತ್ತಿನ ತಿಕ್ಕಾಟಕ್ಕೆ ವೇದಿಕೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.



'ಧ್ವಜಾರೋಹಣ ನೆರವೇರಿಸಲು ಕೈಲಾಶ್ ಅವರನ್ನು ಲೆಫ್ಟಿನೆಂಟ್ ಗವರ್ನರ್ ನಾಮನಿರ್ದೇಶನ ಮಾಡಿದ್ದಾರೆ. ಅದಕ್ಕೆ ಅನುಗುಣವಾಗಿ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬಹುದು' ಎಂದು ಎಲ್‌ಜಿ ಅವರ ಕಾರ್ಯದರ್ಶಿ ಆಶಿಶ್ ಕುಂದ್ರಾ ಅವರು ದೆಹಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ನರೇಶ್ ಕುಮಾರ್ ಅವರಿಗೆ ಲಿಖಿತವಾಗಿ ತಿಳಿಸಿದ್ದಾರೆ.

ಶಿಕ್ಷಣ ಸಚಿವೆ ಆತಿಶಿ ಅವರಿಗೆ ರಾಷ್ಟ್ರಧ್ವಜಾರೋಹಣ ನೆರವೇರಿಸಲು ಅನುವು ಮಾಡಿಕೊಡುವಂತೆ ಸಚಿವ ಗೋಪಾಲ್ ರಾಯ್ ಅವರ ನಿರ್ದೇಶನವನ್ನು ಜಾರಿಗೆ ತರಲು ದೆಹಲಿ ಸರ್ಕಾರದ ಆಡಳಿತ ಇಲಾಖೆಯು ಇದಕ್ಕೂ ಮುನ್ನ ನಿರಾಕರಿಸಿತ್ತು.

ಸಹೋದರಿ ವಿರುದ್ಧ ಪತ್ನಿ ಕಣಕ್ಕಿಳಿಸಿದ್ದು ತಪ್ಪು: ಅಜಿತ್

ಮುಂಬೈ (ಪಿಟಿಐ): ಲೋಕಸಭೆ ಚುನಾವಣೆಯಲ್ಲಿ ಸಹೋದರಿ ಸುಪ್ರಿಯಾ ಸುಳೆ ವಿರುದ್ಧ ಪತ್ನಿ ಸುನೇತ್ರಾ ಪವಾರ್ ಅವರನ್ನು ಕಣಕ್ಕಿಳಿಸಿದ್ದು ತಪ್ಪು ನಿರ್ಧಾರ ಎಂದು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ವಿಷಾದ ವ್ಯಕ್ತಪಡಿಸಿದ್ದಾರೆ.

ಜನಸಮ್ಮಾನ್ ಯಾತ್ರೆಯ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಎಲ್ಲ ಸಹೋದರಿಯರನ್ನು ಪ್ರೀತಿಸುತ್ತೇನೆ. ಮನೆಯೊಳಗೆ ರಾಜಕೀಯ ಪ್ರವೇಶಿಸದಂತೆ ನೋಡಿಕೊಳ್ಳಬೇಕು. ಸುನೇತ್ರಾ ಸ್ಪರ್ಧೆಯು ಎನ್‌ಸಿಪಿ ಸಂಸದೀಯ ಸಮಿತಿಯ ನಿರ್ಧಾರವಾಗಿತ್ತು. ಆ ನಿರ್ಧಾರ ತಪ್ಪು ಎಂದು ಈಗ ಅನಿಸುತ್ತಿದೆ' ಎಂದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ಬಾರಾಮತಿ ಕ್ಷೇತ್ರದಲ್ಲಿ ಎನ್‌ಸಿಪಿ (ಶರದ್ ಪವಾರ್) ಕಾರ್ಯಾಧ್ಯಕ್ಷೆ ಸುಪ್ರಿಯಾ ಸುಳೆ ವಿರುದ್ಧ ಅಜಿತ್ ಪವಾರ್ ಪತ್ನಿ ಸುನೇತ್ರಾ ಅವರು ಸ್ಪರ್ಧಿಸಿ ಸೋಲುಂಡಿದ್ದರು.

'ಇನ್ನು ಮುಂದೆ ರೈತರು, ಮಹಿಳೆಯರು ಮತ್ತು ಯುವಕರ ಪರವಾದ ಅಭಿವೃದ್ಧಿ ಮತ್ತು ಕಲ್ಯಾಣ ಯೋಜನೆಗಳ ಬಗ್ಗೆ ಮಾತ್ರ ಮಾತನಾಡಬೇಕೆಂದು ನಿರ್ಧರಿಸಿದ್ದೇನೆ. ಯಾವುದೇ ಟೀಕೆಗಳಿಗೆ ಪ್ರತಿಕ್ರಿಯಿಸುವುದಿಲ್ಲ' ಎಂದರು.

ಮುಂದುವರಿದ ವೈದ್ಯರ ಪ್ರತಿಭಟನೆ; ಸಿಗದ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋಲ್ಕತ್ತದಲ್ಲಿ ನಡೆದಿರುವ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ದೇಶದಾದ್ಯಂತ ವೈದ್ಯರಿಂದ ವ್ಯಾಪಕ ಖಂಡನೆ, ಆಕ್ರೋಶ ವ್ಯಕ್ತವಾಗುತ್ತಿದ್ದು, ಎರಡನೇ ದಿನವಾದ ಮಂಗಳವಾರ ಕೂಡ ವೈದ್ಯರ ಪ್ರತಿಭಟನೆ ದೇಶವ್ಯಾಪಿ ಮುಂದುವರಿದಿದೆ.

ವೈದ್ಯರ ಪ್ರತಿಭಟನೆಯಿಂದಾಗಿ ಆಸ್ಪತ್ರೆಗಳಲ್ಲಿ ಸೇವೆಗಳು ಸ್ತಬ್ಧಗೊಂಡಿದ್ದು, ಚಿಕಿತ್ಸೆ ನೀಡದೆ ವಾಪಸ್ ಕಳುಹಿಸುತ್ತಿದ್ದಾರೆ ಎಂದು ಕೆಲವು ರೋಗಿಗಳು ದೂರಿದ್ದಾರೆ.

ರಾಷ್ಟ್ರ ರಾಜಧಾನಿಯಲ್ಲಿ ಎಐಐಎಂಎಸ್‌ನಲ್ಲಿ ವೈದ್ಯರ ಮುಷ್ಕರ ಮುಂದುವರಿದಿದೆ. ಈ ಮೊದಲೇ ಅಪಾಯಿಂಟ್‌ಮೆಂಟ್ ತೆಗೆದುಕೊಂಡಿದ್ದ ರೋಗಿಗಳಿಗೆ ಮಾತ್ರ ಚಿಕಿತ್ಸೆ ನೀಡಲಾಗುತ್ತಿದೆ. ಅಪಾಯಿಂಟ್‌ಮೆಂಟ್ ಇಲ್ಲದೇ ದೂರದ ಸ್ಥಳಗಳಿಂದ ಆಸ್ಪತ್ರೆಗೆ ಬಂದವರನ್ನು ವಾಪಸ್ ಕಳುಹಿಸಲಾಯಿತು.

ಸುಮಾರು ಒಂದು ಸಾವಿರ ಸ್ಥಾನಿಕ ವೈದ್ಯರು 'ಸುರಕ್ಷತೆ ಇಲ್ಲದ ಕಡೆ, ಕರ್ತವ್ಯ ನಿರ್ವಹಿಸಲ್ಲ' ಮತ್ತು 'ಸಂತ್ರಸ್ತರಿಗೆ ನ್ಯಾಯ ಬೇಕು' ಎಂಬ ಸಂದೇಶದ ಬ್ಯಾನರ್ ಮತ್ತು ಪೋಸ್ಟರ್‌ಗಳನ್ನು ಆಸ್ಪತ್ರೆಯ ಆವರಣದಲ್ಲಿ ಪ್ರದರ್ಶಿಸಿ, ಘೋಷಣೆಗಳನ್ನು ಕೂಗಿದರು.

ಕಳೆದ ಗುರುವಾರ ಕೋಲ್ಕತ್ತದ ಆರ್.ಜಿ. ಕರ್ ವೈದ್ಯ ಕಾಲೇಜಿನಲ್ಲಿ ಕರ್ತವ್ಯ ನಿರತ 32 ವರ್ಷದ ಸ್ನಾತಕೋತ್ತರ ತರಬೇತಿ ವೈದ್ಯೆ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿರುವುದನ್ನು ಖಂಡಿಸಿ ಫೆಡರೇಷನ್ ಆಫ್ ರೆಸಿಡೆಂಟ್ ಡಾಕ್ಟರ್ಸ್ ಅಸೋಸಿಯೇಷನ್ (ಫೋರ್ಡಾ) ಕರೆ ನೀಡಿರುವ ರಾಷ್ಟ್ರವ್ಯಾಪಿ ಅನಿರ್ದಿಷ್ಟಾವಧಿ ಮುಷ್ಕರದ ಭಾಗವಾಗಿ ಈ ಪ್ರತಿಭಟನೆ ನಡೆಯುತ್ತಿದೆ.



ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆಯನ್ನು ಖಂಡಿಸಿ ಹೋರಾಟಗಾರರು ಮತ್ತು ವೈದ್ಯರು ಪ್ರತಿಭಟನೆ ನಡೆಸಿದರು —ಎಎಫ್‌ಪಿ ಚಿತ್ರ

ಇಂದು ಬಿಜೆಪಿ ಪ್ರತಿಭಟನೆ

'ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆರೋಗ್ಯ ಹಾಗೂ ಗೃಹ ಖಾತೆಗಳನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರಿಗೆ ರಕ್ಷಣೆ ಒದಗಿಸಲು ಮಮತಾ ಅವರು ವಿಫಲರಾಗಿದ್ದಾರೆ. ಮಮತಾ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಜನರು ಬೀದಿಗಿಳಿಯಬೇಕು. ಬಿಜೆಪಿ ಶಾಸಕರು ಕೂಡ ಈ ಕುರಿತು ಇಂದು (ಆಗಸ್ಟ್ 14) ಪ್ರತಿಭಟನೆ ನಡೆಸಲಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ, ಬಿಜೆಪಿಯ ಸುವೇಂದು ಅಧಿಕಾರಿ ತಿಳಿಸಿದರು.

- ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ವಿದ್ಯಾರ್ಥಿನಿಯೊಂದಿಗೆ ಹತ್ಯೆಯ ದಿನ ರಾತ್ರಿ ಒಟ್ಟಿಗೆ ಊಟ ಮಾಡಿದ್ದ ನಾಲ್ವರು ವೈದ್ಯರು ಸೇರಿ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ 25 ಮಂದಿಯನ್ನು ತನಿಖೆಗೆ ಬರುವಂತೆ ಸೂಚಿಸಲಾಗಿದೆ ಎಂದು ಪೊಲೀಸರು ತಿಳಿಸಿದರು
- ಪ್ರಕರಣವನ್ನು ಸಿಬಿಐಗೆ ನೀಡಬೇಕು, ಉದ್ಯೋಗಸ್ಥಳದಲ್ಲಿ ಸುರಕ್ಷತೆಗೆ ಒತ್ತು ನೀಡಬೇಕು ಎಂದು ಒತ್ತಾಯಿಸಿ ಜಾರ್ಖಂಡ್ ಹಾಗೂ ಚಂಡೀಗಢದಲ್ಲಿ ಜೂನಿಯರ್ ಡಾಕ್ಟರ್‌ಗಳು, ವೈದ್ಯಕೀಯ ವಿದ್ಯಾರ್ಥಿಗಳು ಮಂಗಳವಾರವೂ ಪ್ರತಿಭಟನೆ ಮುಂದುವರಿಸಿದರು
- ರಾಷ್ಟ್ರೀಯ ಮಹಿಳಾ ಆಯೋಗದ ಇಬ್ಬರು ಸದಸ್ಯರ ತಂಡವು ಆರ್.ಜಿ. ಕರ್ ವೈದ್ಯಕೀಯ ಕಾಲೇಜಿಗೆ ಮಂಗಳವಾರ ಭೇಟಿ ನೀಡಿತು. ತಂಡವು, ವಿದ್ಯಾರ್ಥಿನಿಯ ಅತ್ಯಾಚಾರ ಹಾಗೂ ಹತ್ಯೆ ನಡೆದ ಸೆಮಿನಾರ್ ಹಾಲ್‌ನ ಪರಿಶೀಲನೆ ನಡೆಸಿತು

ಮಹಿಳೆಯರ ಮೇಲೆ ಹೀನಕೃತ್ಯ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಯು ಅತ್ಯಗತ್ಯ. ಕೋಲ್ಕತ್ತದಲ್ಲಿ ಆಗಿರುವುದು ನಾಚಿಕೆಗೇಡಿನ ಕೃತ್ಯ

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ

ಉತ್ತರ ಪ್ರದೇಶದಾದ್ಯಂತ ವೈದ್ಯರು ಕೆಲಸ ಸ್ಥಗಿತಗೊಳಿಸಿ, ಮುಷ್ಕರ ನಡೆಸಿದರು. ಲಖನೌದ ಕೆ.ಜಿ. ವೈದ್ಯಕೀಯ ವಿಶ್ವವಿದ್ಯಾಲಯ (ಕೆಜಿಎಂಯು), ಸಂಜಯ್ ಗಾಂಧಿ ಪೋಸ್ಟ್ ಗ್ರಾಜ್ಯುಯೇಟ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ ವೈದ್ಯರು, ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿ, ಪ್ರತಿಭಟನೆ ನಡೆಸಿದರು. ವೈದ್ಯರ ಸುರಕ್ಷತೆಯ ಖಾತ್ರಿಗೆ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದರು.

ಗರ್ಲ್ಸ್ ಹಾಸ್ಟೆಲ್‌ಗಳ ಬಳಿ ಸೂಕ್ತ ಭದ್ರತೆ, ವಾರ್ಡ್‌ಗಳಲ್ಲಿ ಸಿ.ಸಿ.ಟಿ.ವಿ ಅಳವಡಿಕೆ, ಮಹಿಳಾ ವೈದ್ಯರ ಕ್ಯಾಬಿನ್‌ಗೆ ಪುರುಷರ ಪ್ರವೇಶ ನಿಷೇಧ ಸೇರಿ ಐದು ಅಂಶಗಳ ಬೇಡಿಕೆಗಳನ್ನು ಈಡೇರಿಸದಿದ್ದರೆ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಕೆಜಿಎಂಯು ಸ್ಥಾನಿಕ ವೈದ್ಯರು ಎಚ್ಚರಿಸಿದರು.

ವಾರಾಣಸಿ, ಪ್ರಯಾಗರಾಜ್, ಝಾನ್ಸಿ, ಕಾನ್ಪುರ, ಆಗ್ರಾ, ಮೀರತ್ ಸೇರಿ ವಿವಿಧೆಡೆ ವೈದ್ಯರು ಪ್ರತಿಭಟನೆ ನಡೆಸಿರುವುದು ವರದಿಯಾಗಿದೆ.

ಕೇರಳದಲ್ಲೂ ವೈದ್ಯರು ಮತ್ತು ಪಿ.ಜಿ ವೈದ್ಯ ವಿದ್ಯಾರ್ಥಿಗಳ ವಿವಿಧ ವೇದಿಕೆಗಳು ಪ್ರತಿಭಟನೆ ನಡೆಸಿವೆ. ಕೇರಳ ಸ್ನಾತಕೋತ್ತರ ವೈದ್ಯ ಪದವೀಧರರ ಸಂಘವು ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರಿಗೆ ಮನವಿ ಪತ್ರ ಸಲ್ಲಿಸಿದ್ದು, ಎಲ್ಲ ವೈದ್ಯಕೀಯ ಸಂಸ್ಥೆಗಳಲ್ಲಿ ತಕ್ಷಣವೇ ಭದ್ರತೆಯ ಪರಿಶೀಲನೆ ನಡೆಸುವಂತೆ ಆಗ್ರಹಿಸಿದೆ.

ಅಗರ್ತಲಾ ಸರ್ಕಾರಿ ವೈದ್ಯಕೀಯ ಕಾಲೇಜಿನ ವೈದ್ಯರು ಮತ್ತು ವಿದ್ಯಾರ್ಥಿಗಳು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಗೆ ಒತ್ತಾಯಿಸಿ ಪ್ರತಿಭಟಿಸಿದರು. ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಯ ಸ್ನಾತಕೋತ್ತರ ಸಂಸ್ಥೆಯಲ್ಲಿ ವೈದ್ಯಕೀಯ ಸೇವೆಗಳು ಭಾಗಶಃ ಸ್ಥಗಿತಗೊಂಡಿದ್ದವು.

ರಾಂಚಿಯ ಸರ್ಕಾರಿ ರಾಜೇಂದ್ರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ರಿಮ್ಸ್) ಕಿರಿಯ ವೈದ್ಯರು ಹೊರರೋಗಿಗಳ ವಿಭಾಗಗಳ ಸೇವೆಗಳು ಮತ್ತು ಶಸ್ತ್ರಚಿಕಿತ್ಸೆಗಳನ್ನು ಬಹಿಷ್ಕರಿಸಿದರು.

ಜೈಪುರದಲ್ಲಿ, ಸವಾಯಿ ಮಾನ್ ಸಿಂಗ್ ಆಸ್ಪತ್ರೆ ಸೇರಿದಂತೆ ಸರ್ಕಾರಿ ಆಸ್ಪತ್ರೆಗಳ ಸ್ಥಾನಿಕ ವೈದ್ಯರು ಮುಷ್ಕರದಲ್ಲಿ ಭಾಗವಹಿಸಿರುವುದರಿಂದ ರೋಗಿಗಳ ಚಿಕಿತ್ಸೆ ಮೇಲೆ ಪರಿಣಾಮ ಬೀರಿತು. ಮಹಾರಾಷ್ಟ್ರದಲ್ಲೂ ಸ್ಥಾನಿಕ ವೈದ್ಯರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ.

ತನಿಖೆಯ ಹೊಣೆ ಸಿಬಿಐಗೆ

ಒಂದನೇ ಪುಟದಿಂದ...

'ಘಟನೆ ಕುರಿತಂತೆ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಪ್ರಾಚಾರ್ಯ ಸಂದೀಪ್ ಘೋಷ್ ತ್ವರಿತವಾಗಿ ಕ್ರಮ ತೆಗೆದುಕೊಳ್ಳದಿದ್ದುದು ದುಃಖಕರ ಸಂಗತಿ' ಎಂದು ಪೀಠ ಹೇಳಿತು.

ಘಟನೆ ಬೆನ್ನಲ್ಲೇ, ದೀರ್ಘ ರಜೆ ಮೇಲೆ ತೆರಳುವಂತೆ ಪ್ರಾಚಾರ್ಯ ಘೋಷ್ ಅವರಿಗೆ ಹೈಕೋರ್ಟ್ ಸೂಚಿಸಿತ್ತು. ನಂತರ, ಸೋಮವಾರ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಘೋಷ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಕೆಲವೇ ಗಂಟೆಗಳ ನಂತರ, ಅವರನ್ನು ಕಲ್ಕತ್ತ ರಾಷ್ಟ್ರೀಯ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಚಾರ್ಯರನ್ನಾಗಿ ಹೇಗೆ ನೇಮಕ ಮಾಡಲಾಯಿತು ಎಂದು ಪೀಠ ಪ್ರಶ್ನಿಸಿತು.

ಸಂದೀಪ್ ಘೋಷ್ ಅವರ ರಾಜೀನಾಮೆ ಪತ್ರ ಹಾಗೂ ಅವರನ್ನು ಬೇರೆ ಕಾಲೇಜಿನ ಪ್ರಾಚಾರ್ಯರನ್ನಾಗಿ ನೇಮಕ ಮಾಡಿರುವುದಕ್ಕೆ ಸಂಬಂಧಿಸಿದ ನೇಮಕಾತಿ ಪತ್ರವನ್ನು ಹಾಜರುಪಡಿಸುವಂತೆ ಘೋಷ್ ಪರ ವಕೀಲರಿಗೆ ಪೀಠ ಸೂಚಿಸಿತು.

'ಮಧ್ಯಾಹ್ನ 3 ಗಂಟೆ ಒಳಗಾಗಿ, ದೀರ್ಘ ರಜೆ ಮೇಲೆ ತೆರಳುವಂತೆ ಅವರಿಗೆ (ಸಂದೀಪ್ ಘೋಷ್) ಹೇಳಿ; ಇಲ್ಲದೇ ಹೋದರೆ ಸೂಕ್ತ ಆದೇಶ ನೀಡಲಾಗುವುದು' ಎಂದು ಘೋಷ್ ಪರ ವಕೀಲರಿಗೆ ಪೀಠ ಹೇಳಿತು.

ತನಿಖೆ ಆರಂಭಿಸಿದ ಸಿಬಿಐ

ನವದೆಹಲಿ/ಕೋಲ್ಕತ್ತ(ಪಿಟಿಐ): ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐ ಮಂಗಳವಾರ ಕೈಗೆತ್ತಿಕೊಂಡಿದೆ.

ಸಿಬಿಐ ಅಧಿಕಾರಿಗಳ ತಂಡವೊಂದು, ವಿಧಿವಿಜ್ಞಾನ ವಿಜ್ಞಾನಿಗಳು ಹಾಗೂ ವೈದ್ಯಕೀಯ ತಜ್ಞರೊಂದಿಗೆ ದೆಹಲಿಯಿಂದ ಹೊರಡಲಿದ್ದು, ಕೋಲ್ಕತ್ತಕ್ಕೆ ಬುಧವಾರ ಭೇಟಿ ನೀಡಲಿದೆ ಎಂದು ತಿಳಿಸಿದ್ದಾರೆ.

ಐವರು ನಕ್ಸಲರ ಬಂಧನ

ಸುಕ್ಮಾ (ಪಿಟಿಐ): ಛತ್ತೀಸಗಡದ ಸುಕ್ಮಾ ಜಿಲ್ಲೆಯಲ್ಲಿ ಐವರು ನಕ್ಸಲರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಚಿಕೋಮೆಟ್ಟಾ ಗ್ರಾಮದ ಸಮೀಪವಿರುವ ಅರಣ್ಯದ ಬೆಟ್ಟದಲ್ಲಿ ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ), ಸಿಆರ್‌ಪಿಎಫ್‌ನ 165ನೇ ಬೆಟಾಲಿಯನ್ ಹಾಗೂ ಸ್ಥಳೀಯ ಪೊಲೀಸರು ಸೋಮವಾರ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಇವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಂಧಿತರಲ್ಲಿ ಉಈಕಾ ಚೈತು ಮಹಾರಾಷ್ಟ್ರದ ಗಡಚಿರೋಲಿಯಲ್ಲಿ ನಕ್ಸಲರ ಸಮಿತಿಯ ಸಕ್ರಿಯ ಸದಸ್ಯನಾಗಿದ್ದ. ಈತನ ತಲೆಗೆ ₹5 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದಿದ್ದಾರೆ.

ಆರು ಜಿಲೆಟಿನ್ ರಾಡ್‌ಗಳು, ಸ್ಫೋಟಕಗಳು, ಗನ್ ಪೌಡರ್, ಬ್ಯಾರೆಲ್ ಗ್ರೆನೇಡ್ ಲಾಂಚರ್ (ಬಿಜಿಎಲ್), ಶೆಲ್, ಕಾರ್ಡೆಕ್ಸ್ ವೈರ್, ಬ್ಯಾಟರಿಗಳು ಸೇರಿದಂತೆ ಸ್ಫೋಟಕಗಳಲ್ಲಿ ಬಳಸುವ ಇನ್ನಿತರ ವಸ್ತುಗಳನ್ನು ಬಂಧಿತರಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಈ ಪ್ರದೇಶದಲ್ಲಿ ಗಸ್ತು ತಿರುಗುವ ಭದ್ರತಾ ಸಿಬ್ಬಂದಿಯ ವಿರುದ್ಧ ದಾಳಿ ನಡೆಸಲು ನಕ್ಸಲರು ಈ ಸ್ಫೋಟಕಗಳನ್ನು ಹೊಂದಿದ್ದರು ಎಂದು ತಿಳಿಸಿದ್ದಾರೆ.

ಕೇಜ್ರಿವಾಲ್, ಕವಿತಾ ನ್ಯಾಯಾಂಗ ಬಂಧನ ವಿಸ್ತರಣೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಸೆ. 2ರವರೆಗೆ ವಿಸ್ತರಿಸಲಾಗಿದೆ.

ಈ ಹಿಂದೆ ನೀಡಿದ್ದ ನ್ಯಾಯಾಂಗ ಬಂಧನದ ಅವಧಿ ಮುಕ್ತಾಯವಾಗಿದ್ದರಿಂದ ಇಬ್ಬರನ್ನೂ ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯದ ಮುಂದೆ ಮಂಗಳವಾರ ಹಾಜರುಪಡಿಸಲಾಯಿತು. ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ ಅವರು ಬಂಧನದ ಅವಧಿ ವಿಸ್ತರಿಸಿ ಆದೇಶ ಹೊರಡಿಸಿದರು.

ಅತ್ಯಾಚಾರ: ಬಂಗಾಳ ಸರ್ಕಾರ, ಡಿಐಜಿಗೆ ಎನ್‌ಎಚ್‌ಆರ್‌ಸಿ ನೋಟಿಸ್

ನವದೆಹಲಿ (ಪಿಟಿಐ): ಕೋಲ್ಕತ್ತದಲ್ಲಿ ನಡೆದಿರುವ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ಪಶ್ಚಿಮಬಂಗಾಳ ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ಮಂಗಳವಾರ ನೋಟಿಸ್ ಜಾರಿ ಮಾಡಿದೆ.

ಎರಡು ವಾರಗಳ ಒಳಗೆ ಪ್ರಕರಣದ ಕುರಿತು ವರದಿ ನೀಡುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾ ನಿರ್ದೇಶಕರಿಗೆ ಆಯೋಗ ಸೂಚಿಸಿದೆ.

'ಆರ್.ಜಿ.ಕರ್ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಸಭಾಂಗಣದಲ್ಲಿ ವೈದ್ಯ ವಿದ್ಯಾರ್ಥಿನಿಯ ಶವ ಪತ್ತೆಯಾಗಿರುವ ಬಗ್ಗೆ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಆಯೋಗ ತಿಳಿಸಿದೆ. 'ವಿದ್ಯಾರ್ಥಿನಿಯು ಸಾಯುವ ಮೊದಲು ಅವಳನ್ನು ಹಿಂಸಿಸಿರುವುದಕ್ಕೆ ಅವಳ ಶವದ ಮೇಲಿದ್ದ ಗುರುತುಗಳೇ ಸಾಕ್ಷಿ. ಮಾಧ್ಯಮ ವರದಿಯಲ್ಲಿನ ಅಂಶಗಳ ಸತ್ಯಾಸತ್ಯತೆಯ ಬಗ್ಗೆ ಪರಿಶೀಲನೆ ನಡೆಸುತ್ತಿದ್ದು, ಆರೋಪ ಸಾಬೀತಾದರೆ, ಮಾನವ ಹಕ್ಕುಗಳ ಉಲ್ಲಂಘನೆಯಾಗಿರುವ ಬಗ್ಗೆ ಗಂಭೀರವಾಗಿ ಕ್ರಮ ಕೈಗೊಳ್ಳಲಾಗುವುದು' ಎಂದು ಆಯೋಗ ಹೇಳಿದೆ.

'ತನಿಖೆ ಯಾವ ಹಂತದಲ್ಲಿದೆ?': ಆರೋಪಿಯ ಮೇಲೆ ಕೈಗೊಂಡಿರುವ ಕ್ರಮಗಳು, ವಿದ್ಯಾರ್ಥಿನಿಯ ಕುಟುಂಬಸ್ಥರಿಗೆ ಪರಿಹಾರವನ್ನು ನೀಡಲಾಗಿದೆಯೆ ಮತ್ತು ಇಂತಹ ಘಟನೆಗಳು ಮರುಕಳಿಸದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿಯಲ್ಲಿ ತಿಳಿಸುವಂತೆ' ಆಯೋಗವು ಸೂಚಿಸಿದೆ.

'ಆರಂಭದಲ್ಲೇ ಕೊಲೆ ಪ್ರಕರಣ ಯಾಕೆ ದಾಖಲಿಸಲಿಲ್ಲ?'

ಕೋಲ್ಕತ್ತ (ಪಿಟಿಐ): ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಆರೋಪ ಕುರಿತು ತನಿಖೆಯ ಆರಂಭದಲ್ಲಿಯೇ ಯಾಕೆ ಕೊಲೆ ಪ್ರಕರಣ ದಾಖಲಿಸಲಿಲ್ಲ ಎಂದು ಪಶ್ಚಿಮ ಬಂಗಾಳ ಸರ್ಕಾರವನ್ನು ಕಲ್ಕತ್ತ ಹೈಕೋರ್ಟ್ ಮಂಗಳವಾರ ಪ್ರಶ್ನಿಸಿದೆ.

ಪ್ರಕರಣ ಕುರಿತು ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸುವಂತೆ ಕೋರಿ, ಕೊಲೆಯಾದ ವೈದ್ಯ ವಿದ್ಯಾರ್ಥಿನಿ ಪಾಲಕರು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಹಲವು ಪ್ರಶ್ನೆಗಳನ್ನು ಮುಂದಿಟ್ಟು ಪಶ್ಚಿಮ ಬಂಗಾಳ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಶಿವಜ್ಞಾನಂ ನೇತೃತ್ವದ ವಿಭಾಗೀಯ ಪೀಠ ಅರ್ಜಿ ವಿಚಾರಣೆ ನಡೆಸಿತು.

'ಕೊಲೆಗೆ ಸಂಬಂಧಿಸಿ ತಕ್ಷಣಕ್ಕೆ ಯಾವುದೇ ದೂರು ದಾಖಲಾಗಿರಲಿಲ್ಲ. ಹೀಗಾಗಿ, ಅಸಹಜ ಸಾವು ಪ್ರಕರಣ ದಾಖಲಿಸಲಾಯಿತು' ಎಂದು ಪಶ್ಚಿಮ ಬಂಗಾಳ ಸರ್ಕಾರ ಪರ ಹಾಜರಿದ್ದ ವಕೀಲರು ಪೀಠಕ್ಕೆ ತಿಳಿಸಿದರು.

'ವೈದ್ಯ ವಿದ್ಯಾರ್ಥಿನಿಯ ಮೃತದೇಹ ರಸ್ತೆ ಪಕ್ಕದಲ್ಲಿ ಸಿಕ್ಕಿರಲಿಲ್ಲ. ಅಲ್ಲದೇ, ಈ ಸಂಬಂಧ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಅಥವಾ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ದೂರು ದಾಖಲಿಸಬಹುದಿತ್ತು' ಎಂದು ಪೀಠ ಹೇಳಿತು. ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕೋರಿ ಹಲವರಿಂದ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ವಿಚಾರಣೆ ನಡೆಸಿದ ಪೀಠ, 'ತನಿಖಾ ಪ್ರಕ್ರಿಯೆಯಲ್ಲಿ ಏನೋ ನ್ಯೂನತೆ ಕಂಡುಬರುತ್ತಿದೆ' ಎಂದು ಅಭಿಪ್ರಾಯಪಟ್ಟಿತು.

ಇದಕ್ಕೂ ಮುನ್ನ, 'ಸರ್ಕಾರಿ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಹಿಂದಿನ ಪ್ರಾಚಾರ್ಯ ಸಂದೀಪ್ ಘೋಷ್ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆಯೇ' ಎಂಬ ಪೀಠದ ಪ್ರಶ್ನೆಗೆ, ಇಲ್ಲ ಎಂದು ಸರ್ಕಾರಿ ವಕೀಲರು ಉತ್ತರಿಸಿದರು.

'ಸರ್ಕಾರಿ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಚಿಕಿತ್ಸೆ ನೀಡಬೇಕಾದ ಗುರುತರ ಜವಾಬ್ದಾರಿ ವೈದ್ಯರ ಮೇಲಿದೆ' ಎಂದ ಪೀಠ, ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗುವಂತೆ ರಾಜ್ಯದ ವೈದ್ಯರಿಗೆ ಹೇಳಿತು.

ಮುಷ್ಕರ ನಡೆಸುತ್ತಿರುವ ವೈದ್ಯರೊಂದಿಗೆ ಮಾತುಕತೆ ನಡೆಸುವಂತೆ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಪೀಠ ಸೂಚಿಸಿತು.

ಸ್ವಾತಂತ್ರ್ಯೋತ್ಸವ: ಪಂಚಾಯತ್ ರಾಜ್ ಸಚಿವಾಲಯದಿಂದ ಆಹ್ವಾನ

ಪಂಚಾಯತ್, ಕ್ಷೇತ್ರ ಮಟ್ಟದ 'ಸಾಧಕಿ'ಯರು ಅತಿಥಿಗಳು

ನವದೆಹಲಿ: ರಾಜಧಾನಿಯಲ್ಲಿ ನಡೆಯುವ ಸ್ವಾತಂತ್ರ್ಯೋತ್ಸವ ಸಮಾರಂಭಕ್ಕೆ ವಿವಿಧ ರಾಜ್ಯಗಳಿಂದ 400ಕ್ಕೂ ಅಧಿಕ ಪಂಚಾಯತ್ ಸದಸ್ಯೆಯರು, 'ಲಾಖ್‌ಪತಿ ದೀದಿ'ಯರನ್ನು ವಿಶೇಷ ಅತಿಥಿಗಳಾಗಿ ಪಂಚಾಯತ್ ರಾಜ್ ಸಚಿವಾಲಯವು ಆಹ್ವಾನಿಸಿದೆ.

ಅಧಿಕಾರಿಗಳ ಪ್ರಕಾರ, ಬುಧವಾರದಂದು ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ವಿವಿಧ ರಾಜ್ಯಗಳಿಂದ ಆಹ್ವಾನಿಸಲಾದ 45 ಮಂದಿ ಲಾಖ್‌ಪತಿ ದೀದಿಯರು, 30 ಮಂದಿ ಡ್ರೋನ್ ದೀದಿಯರಿಗೆ ಸನ್ಮಾನಿಸುವರು.

ಮುಖ್ಯಾಂಶಗಳು

- ಲಾಖ್‌ಪತಿ ದೀದಿಯರು, ಡ್ರೋನ್ ದೀದಿಯರಿಗೆ ಬುಧವಾರ ಸನ್ಮಾನ
- ಆಹ್ವಾನಿತ ಸದಸ್ಯೆಯರಿಗಾಗಿ ರಾಷ್ಟ್ರೀಯ ಕಾರ್ಯಾಗಾರ
- 'ಇ–ಗ್ರಾಮಸ್ವರಾಜ್'ಗೆ ಚಾಲನೆ

ಗ್ರಾಮೀಣ ಮಹಿಳೆಯರ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬಿಗಳಾಗಿಸಲು ಕೇಂದ್ರ ಸರ್ಕಾರವು 'ನಮೋ ಡ್ರೋನ್ ದೀದಿ' ಮತ್ತು 'ಲಾಖ್‌ಪತಿ ದೀದಿ' ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ನಮೋ ಡ್ರೋನ್ ದೀದಿ ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘಗಳಿಗೆ (ಎಸ್‌ಎಚ್‌ಜಿ) ಡ್ರೋನ್ ಖರೀದಿಸಲು ಸಬ್ಸಿಡಿ ನೀಡಲಾಗುತ್ತದೆ. ಸ್ವಸಹಾಯ ಸಂಘಗಳಲ್ಲಿ ವಾರ್ಷಿಕ 1 ಲಕ್ಷಕ್ಕೂ ಅಧಿಕ ಆದಾಯವುಳ್ಳ ಸದಸ್ಯೆಯರನ್ನು 'ಲಾಖ್‌ಪತಿ ದೀದಿ' ಎಂದು ಗುರುತಿಸಲಾಗುತ್ತದೆ.

ಪಂಚಾಯಿತಿ ಸದಸ್ಯೆಯರನ್ನು ಪಂಚಾಯತ್ ರಾಜ್ ಸಚಿವ ರಾಜೀವ್ ರಂಜನ್ ಸಿಂಗ್ ಲಲನ್ ಅವರು ಸನ್ಮಾನಿಸುವರು.

ಅಲ್ಲದೆ, ಆಹ್ವಾನಿತ ಸದಸ್ಯೆಯರಿಗಾಗಿ ಅದೇ ದಿನ ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಮಾಜಿ ರಾಜ್ಯಪಾಲರಾದ ಕಿರಣ್ ಬೇಡಿ, ಸಚಿವಾಲಯದ ಹಿರಿಯ ಅಧಿಕಾರಿಗಳು ಮಾತನಾಡುವರು ಎಂದು ಹೇಳಿಕೆ ತಿಳಿಸಿದೆ.

ಇದೇ ವೇಳೆ 'ಭಾಷಿಣಿ' ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿರುವ ಬಹುಭಾಷಾ ವೇದಿಕೆ 'ಇ-ಗ್ರಾಮಸ್ವರಾಜ್'ಗೆ ಚಾಲನೆ ನೀಡಲಾಗುತ್ತದೆ. 22 ಭಾಷೆಗಳಲ್ಲಿ ಈ ಪೋರ್ಟಲ್ ಲಭ್ಯವಿದೆ. ರಾಜ್ಯವಾರು ಪಂಚಾಯತ್‌ಗಳ ವಿವರಗಳನ್ನು ಒದಗಿಸಲಿದೆ.

ಮಹಿಳಾ ಸದಸ್ಯೆಯರ ಕಾರ್ಯಾನುಭವ ವಿಸ್ತರಿಸುವ ಕ್ರಮವಾಗಿ ಕಾರ್ಯಕ್ರಮ ರೂಪಿಸಲಾಗಿದೆ. ರಾಜಧಾನಿಯ ಭೇಟಿ ಅವಧಿಯಲ್ಲಿ ಸದಸ್ಯೆಯರು ಪ್ರಧಾನಮಂತ್ರಿ ಸಂಗ್ರಹಾಲಯಕ್ಕೂ ಭೇಟಿ ನೀಡುವರು ಎಂದು ತಿಳಿಸಿದೆ.

ಕ್ಷೇತ್ರ ಮಟ್ಟದ ಸಾಧಕಿಯರಿಗೂ ಆಹ್ವಾನ: ಅಲ್ಲದೆ, ಮಹಿಳಾ ಸಬಲೀಕರಣ, ಮಕ್ಕಳ ಕಲ್ಯಾಣ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸುವಲ್ಲಿ ಗಣನೀಯ ಪಾತ್ರ ವಹಿಸಿರುವ 161 ಸದಸ್ಯೆಯರನ್ನು ಮುಖ್ಯಅತಿಥಿಗಳಾಗಿ ಆಹ್ವಾನಿಸಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರು, ಸಖಿ ಕೇಂದ್ರದ ನೌಕರರು, ಮಹಿಳಾ ಕಲ್ಯಾಣ ಸಮಿತಿ ಸದಸ್ಯರು, ಜಿಲ್ಲಾ ಮಕ್ಕಳ ಹಕ್ಕುಗಳ ಘಟಕಗಳ ಸದಸ್ಯೆಯರು ಇವರಲ್ಲಿ ಸೇರಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಹೇಳಿಕೆ ತಿಳಿಸಿದೆ.

ವಯನಾಡ್ ಭೂಕುಸಿತ: ತಜ್ಞರ ತಂಡದಿಂದ ಮೌಲ್ಯಮಾಪನ

ವಯನಾಡ್ (ಕೇರಳ) (ಪಿಟಿಐ): ಜಿಲ್ಲೆಯ ಭೂಕುಸಿತ ಪೀಡಿತ ಪ್ರದೇಶಗಳಿಗೆ ಐವರು ತಜ್ಞರ ತಂಡ ಮಂಗಳವಾರ ಭೇಟಿ ನೀಡಿದ್ದು, 200ಕ್ಕೂ ಹೆಚ್ಚು ಜನರ ಜೀವಹಾನಿಯಾದ ಈ ದುರಂತಕ್ಕೆ ನಿಜವಾದ ಕಾರಣ ಏನೆಂಬುದನ್ನು ನಿರ್ಣಯಿಸಲಿದೆ.

ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ನಿಯೋಜಿಸಿರುವ ರಾಷ್ಟ್ರೀಯ ಭೂ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಜಾನ್ ಮಥಾಯ್ ಅವರ ನೇತೃತ್ವದ ತಂಡವು ವಯನಾಡ್‌ನ ಮೇಪ್ಪಾಡಿ ಪಂಚಾಯಿತಿ ವ್ಯಾಪ್ತಿಯಲ್ಲಿ ಭೂಕುಸಿತ ಪೀಡಿತ ಪ್ರದೇಶಗಳನ್ನು ಪರಿಶೀಲಿಸಲಿದೆ. ಈ ತಂಡವು 2005ರ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತದೆ ಎಂದು ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ.

ತಂಡವು ವಿಪತ್ತು ಪ್ರದೇಶದ ವಿವಿಧ ಭಾಗಗಳಲ್ಲಿ ಮತ್ತು ಹತ್ತಿರದ ಸ್ಥಳಗಳಲ್ಲಿ ಸಂಭವನೀಯ ಅಪಾಯಗಳನ್ನು ನಿರ್ಣಯಿಸಲಿದೆ. ವಿಪತ್ತು ಹೇಗೆ ಸಂಭವಿಸಿತು ಮತ್ತು ಭೂಕುಸಿತದಲ್ಲಿ ಯಾವೆಲ್ಲ ವಿದ್ಯಮಾನಗಳು ಸಂಭವಿಸಿದವು ಎಂಬುದನ್ನು ಸಹ ಇದು ಮೌಲ್ಯಮಾಪನ ಮಾಡಲಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಪರಿಶೀಲನೆಯ ನಂತರ, ತಜ್ಞರ ತಂಡವು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದೆ. ಅಲ್ಲದೆ, ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಭೂ ಬಳಕೆಯ ಕುರಿತು ಸೂಕ್ತ ಶಿಫಾರಸು ಕೂಡ ಮಾಡಲಿದೆ.

ತಜ್ಞರ ತಂಡದಲ್ಲಿ ಸದಸ್ಯರಾಗಿ ಜಲಸಂಬಂಧಿತ ವಿಪತ್ತು ನಿರ್ವಹಣೆಯ ಶ್ರೇಷ್ಠತಾ ಕೇಂದ್ರದ (ಸಿಡಬ್ಲ್ಯುಆರ್‌ಎಂಸಿ) ಪ್ರಧಾನ ವಿಜ್ಞಾನಿ ಮತ್ತು ಮುಖ್ಯಸ್ಥೆ ಡಾ.ಟಿ.ಕೆ.ದೃಶ್ಯಾ, ಸುರತ್ಕಲ್‌ನ ಎನ್‌ಐಟಿಕೆ ಸಹ ಪ್ರಾಧ್ಯಾಪಕ ಡಾ.ಶ್ರೀವಲ್ಸಾ ಕೊಳತಯಾರ್, ಜಿಲ್ಲಾ ಮಣ್ಣು ಸಂರಕ್ಷಣಾ ಅಧಿಕಾರಿ ತಾರಾ ಮನೋಹರನ್ ಮತ್ತು ಕೇರಳ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಅಪಾಯ ವಿಶ್ಲೇಷಕ ಪಿ.ಪ್ರದೀಪ್ ಅವರು ಇದ್ದಾರೆ.

‘ವಂಶವಾಹಿ ತಾಯಿ’ ಎಂದು ಮಾತ್ರವೇ ಕರೆದುಕೊಳ್ಳಬಹುದು; ಬಾಂಬೆ ಹೈಕೋರ್ಟ್

‘ಅಂಡಾಣು ದಾನಿ ಜೈವಿಕ ತಾಯಿಯಲ್ಲ’

ಮುಂಬೈ (ಪಿಟಿಐ): ವೀರ್ಯ ಅಥವಾ ಅಂಡಾಣು ದಾನ ಮಾಡಿದವರು, ಆ ದಾನದಿಂದ ಜನಿಸುವ ಮಗುವಿನ ಮೇಲೆ ಕಾನೂನುಬದ್ಧ ಅಧಿಕಾರವನ್ನು ಹೊಂದಿರುವುದಿಲ್ಲ, ಆ ಮಗುವಿನ ಜೈವಿಕ ಪಾಲಕರು ತಾವು ಎಂದು ಹೇಳುವಂತೆಯೂ ಇಲ್ಲ ಎಂದು ಬಾಂಬೆ ಹೈಕೋರ್ಟ್ ಮಂಗಳವಾರ ಹೇಳಿದೆ.

ಐದು ವರ್ಷ ವಯಸ್ಸಿನ ತನ್ನ ಅವಳಿ ಹೆಣ್ಣುಮಕ್ಕಳನ್ನು ಭೇಟಿ ಮಾಡುವ ಹಕ್ಕು ತನಗಿದೆ ಎಂದು 42 ವರ್ಷ ವಯಸ್ಸಿನ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡುವ ಸಂದರ್ಭದಲ್ಲಿ ಹೈಕೋರ್ಟ್ ಈ ಮಾತು ಹೇಳಿದೆ.

ಬಾಡಿಗೆ ತಾಯ್ತನದ ಮೂಲಕ ಜನಿಸಿದ್ದ ಇಬ್ಬರು ಹೆಣ್ಣುಮಕ್ಕಳು ಪತಿ ಮತ್ತು ತನ್ನ ತಂಗಿಯ ಜೊತೆ ವಾಸಿಸುತ್ತಿದ್ದಾರೆ, ತಂಗಿಯೇ ಅಂಡಾಣು ದಾನ ಮಾಡಿದ್ದಳು ಎಂದು ಮಹಿಳೆಯು ಅರ್ಜಿಯಲ್ಲಿ ಹೇಳಿದ್ದರು. ಪತ್ನಿಯ ತಂಗಿ ಅಂಡಾಣು ದಾನ ಮಾಡಿದ್ದ ಕಾರಣ, ಅವಳಿ ಹೆಣ್ಣುಮಕ್ಕಳ ಜೈವಿಕ ತಾಯಿ ಎಂದು ಕರೆಸಿಕೊಳ್ಳುವ ಕಾನೂನುಬದ್ಧ ಹಕ್ಕು ಆಕೆಗೆ ಇದೆ ಎಂದು ಪತಿ ವಾದಿಸಿದ್ದರು. ತನ್ನ ಪತ್ನಿಗೆ ಅಂತಹ ಹಕ್ಕು ಇಲ್ಲ ಎಂದು ಹೇಳಿದ್ದರು.

ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಮಿಲಿಂದ ಜಾಧವ್ ನೇತೃತ್ವದ ಏಕಸದಸ್ಯ ಪೀಠವು ಈ ವಾದವನ್ನು ಒಪ್ಪಲಿಲ್ಲ. ಅಂಡಾಣು ದಾನ



ಮಾಡಿದ್ದರೂ ಮಕ್ಕಳ ಜೈವಿಕ ತಾಯಿ ಎಂದು ಹೇಳುವ ಹಕ್ಕು ತಂಗಿಗೆ ಇಲ್ಲ ಎಂದು ಪೀಠವು ಸ್ಪಷ್ಟಪಡಿಸಿದೆ.

ತಂಗಿಯ ಪಾತ್ರ ಅಂಡಾಣು ದಾನ ಮಾಡಿದ್ದು ಮಾತ್ರ, ಅದು ಸ್ವಇಚ್ಛೆಯಿಂದ ಮಾಡಿದ ದಾನ. ಅವರು ತನ್ನನ್ನು ‘ವಂಶವಾಹಿ ತಾಯಿ’ ಎಂದು ಮಾತ್ರವೇ ಕರೆದುಕೊಳ್ಳಬಹುದು ಎಂದು ಪೀಠ ಹೇಳಿದೆ.

ಈಗ ಬೇರೆ ಬೇರೆಯಾಗಿ ವಾಸಿಸುತ್ತಿರುವ ದಂಪತಿ, ಬಾಡಿಗೆ ತಾಯ್ತನದ ಒಪ್ಪಂದವನ್ನು 2018ರಲ್ಲಿ ಮಾಡಿಕೊಂಡಿದ್ದರು. ಆಗ ಬಾಡಿಗೆ ತಾಯ್ತನ (ನಿಯಂತ್ರಣ) ಕಾಯ್ದೆ–2021 ಜಾರಿಗೆ ಬಂದಿರಲಿಲ್ಲ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) 2005ರಲ್ಲಿ ರೂಪಿಸಿದ್ದ ಮಾರ್ಗಸೂಚಿ ಆಗ ಜಾರಿಯಲ್ಲಿತ್ತು, ಈ ಒಪ್ಪಂದವು ಅದಕ್ಕೆ ಅನುಗುಣವಾಗಿರಬೇಕು ಎಂದು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ನೆರವಾಗಲು ನೇಮಿಸಿದ್ದ ವಕೀಲರು ಪೀಠಕ್ಕೆ ಮಾಹಿತಿ ನೀಡಿದ್ದರು.

ಆ ಮಾರ್ಗಸೂಚಿಗಳಲ್ಲಿ ಇರುವ ನಿಯಮದ ಪ್ರಕಾರ, ದಾನಿ ಹಾಗೂ ಬಾಡಿಗೆ ತಾಯಿಯು ಪಾಲಕರಿಗೆ ಸಿಗುವ ಎಲ್ಲ ಹಕ್ಕುಗಳನ್ನು ತೊರೆಯಬೇಕಾಗುತ್ತದೆ ಎಂದು ಪೀಠ ಹೇಳಿದೆ. ಈ ಪ್ರಕರಣದಲ್ಲಿ ಅವಳಿ ಮಕ್ಕಳು ಅರ್ಜಿದಾರ ಮಹಿಳೆ ಹಾಗೂ ಅವರ ಪತಿಯ ಮಕ್ಕಳಾಗಿರುತ್ತಾರೆ ಎಂದು ಸಾರಿದೆ.

ದಂಪತಿಗೆ ಸಹಜವಾಗಿ ಗರ್ಭಧರಿಸುವುದಕ್ಕೆ ಸಾಧ್ಯವಿರಲಿಲ್ಲ. ಅರ್ಜಿದಾರ ಮಹಿಳೆಯ ತಂಗಿ ಅಂಡಾಣು ದಾನಕ್ಕೆ ಸ್ವಇಚ್ಛೆಯಿಂದ ಮುಂದೆ ಬಂದರು. 2018ರಲ್ಲಿ ಗರ್ಭಧರಿಸಿದ ಬಾಡಿಗೆ ತಾಯಿಯೊಬ್ಬರು, 2019ರ ಆಗಸ್ಟ್‌ನಲ್ಲಿ ಅವಳಿ ಮಕ್ಕಳಿಗೆ ಜನ್ಮ ನೀಡಿದರು ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

2019ರ ಏಪ್ರಿಲ್‌ನಲ್ಲಿ ನಡೆದ ಅಪಘಾತದಲ್ಲಿ ತಂಗಿಯ ಪತಿ ಹಾಗೂ ಅವರ ಮಗಳು ಮೃತಪಟ್ಟರು. ಅರ್ಜಿದಾರ ಮಹಿಳೆ ಹಾಗೂ ಅವರ ಪತಿ ನಡುವೆ ಮನಸ್ತಾಪ ಉಂಟಾಗಿ ಪತಿಯು 2021ರ ಮಾರ್ಚ್‌ನಲ್ಲಿ ಪತ್ನಿಗೆ ಮಾಹಿತಿ ನೀಡದೆ, ಮಕ್ಕಳೊಂದಿಗೆ ಇನ್ನೊಂದು ಫ್ಲ್ಯಾಟ್‌ನಲ್ಲಿ ವಾಸಿಸಲಾರಂಭಿಸಿದರು.

ಪತ್ನಿಯ ತಂಗಿ (ಅಂಡಾಣು ದಾನಿ) ರಸ್ತೆ ಅಪಘಾತದ ನಂತರ ಖಿನ್ನತೆಗೆ ಒಳಗಾಗಿದ್ದರು, ಮಕ್ಕಳ ಆರೈಕೆಯಲ್ಲಿ ತೊಡಗಿಕೊಂಡು ತನ್ನ ಜೊತೆ ವಾಸಿಸಲು ಆರಂಭಿಸಿದರು ಎಂದು ಪತಿ ಹೇಳಿದ್ದರು.

ತನ್ನ ಮಕ್ಕಳ ಭೇಟಿಗೆ ಅವಕಾಶ ನೀಡಬೇಕು ಎಂಬ ಮನವಿಯೊಂದಿಗೆ ಅರ್ಜಿದಾರ ಮಹಿಳೆಯು ಸ್ಥಳೀಯ ನ್ಯಾಯಾಲಯದ ಮೊರೆಹೋಗಿದ್ದರು. ಆದರೆ ಆ ನ್ಯಾಯಾಲಯವು ಈ ಮನವಿಯನ್ನು ಪುರಸ್ಕರಿಸಲಿಲ್ಲ. ಆಗ ಮಹಿಳೆಯು ಹೈಕೋರ್ಟ್ ಮೆಟ್ಟಿಲೇರಿದರು.

ಪತಂಜಲಿ: ನ್ಯಾಯಾಂಗ ನಿಂದನೆ ವಿಚಾರಣೆ ಕೈಬಿಟ್ಟ ಸುಪ್ರೀಂ ಕೋರ್ಟ್

ನವದೆಹಲಿ(ಪಿಟಿಐ): ‘ದಾರಿ ತಪ್ಪಿಸುವ ಜಾಹೀರಾತು’ಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಯೋಗಗುರು ರಾಮದೇವ್, ಅವರ ಆಪ್ತ ಬಾಲಕೃಷ್ಣ ಹಾಗೂ ಪತಂಜಲಿ ಆಯುರ್ವೇದ ಕಂಪನಿ ಕ್ಷಮೆ ಕೋರಿರುವುದನ್ನು ಒಪ್ಪಿಕೊಂಡಿರುವ ಸುಪ್ರೀಂ ಕೋರ್ಟ್, ಅವರ ವಿರುದ್ಧದ ನ್ಯಾಯಾಂಗ ನಿಂದನೆ ವಿಚಾರಣೆಯನ್ನು ಮಂಗಳವಾರ ಕೈಬಿಟ್ಟಿದೆ.

‘ಯೋಗ ಗುರು ರಾಮದೇವ್, ಬಾಲಕೃಷ್ಣ ಹಾಗೂ ಪತಂಜಲಿ ಆಯುರ್ವೇದ ಲಿಮಿಟೆಡ್ ಸಲ್ಲಿಸಿದ್ದ ಮುಚ್ಚಳಿಕೆ ಪತ್ರವನ್ನು ಪರಿಗಣಿಸಿದ ಸುಪ್ರೀಂ ಕೋರ್ಟ್, ನ್ಯಾಯಾಂಗ ನಿಂದನೆ ಪ್ರಕರಣವನ್ನು ಮುಕ್ತಾಯಗೊಳಿಸಿತು’ ಎಂದು ಅವರ ಪರ ವಕೀಲ ಗೌತಮ್ ತಾಲೂಕದ್ದಾರ್ ತಿಳಿಸಿದ್ದಾರೆ.

ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ನ್ಯಾಯಪೀಠ, ಇವರಿಗೆ ನ್ಯಾಯಾಂಗ ನಿಂದನೆ ನೋಟಿಸ್ ನೀಡಿ, ಮೇ 14ರಂದು ಆದೇಶ ಕಾಯ್ದಿರಿಸಿತ್ತು.

ಐಎಂಎ ದೂರು: ಕೋವಿಡ್ ಲಸಿಕೆ ಮತ್ತು ಅಲೋಪಥಿ ಔಷಧ ಪದ್ಧತಿ ಕುರಿತು ಯೋಗ ಗುರು ರಾಮದೇವ್, ಅವರ ಆಪ್ತ ಬಾಲಕೃಷ್ಣ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿ, ಭಾರತೀಯ ವೈದ್ಯಕೀಯ ಸಂಸ್ಥೆ (ಐಎಂಎ) ದಾಖಲಿಸಿದ್ದ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತ್ತು.

‘ಪತಂಜಲಿ ಆಯುರ್ವೇದ ಕಂಪನಿಯು ತನ್ನ ಉತ್ಪನ್ನಗಳು ಹಾಗೂ ಅವುಗಳ ಪರಿಣಾಮಕಾರಿತ್ವ ಕುರಿತ ಜಾಹೀರಾತಿಗೆ ಸಂಬಂಧಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಮುಚ್ಚಳಿಕೆ ಉಲ್ಲಂಘಿಸಿದ್ದು ಮೇಲ್ನೋಟಕ್ಕೆ ಕಂಡುಬರುತ್ತದೆ’ ಎಂದಿದ್ದ ಪೀಠ, ಫೆಬ್ರುವರಿ 27ರಂದು ರಾಮದೇವ್, ಬಾಲಕೃಷ್ಣ ಹಾಗೂ ಪತಂಜಲಿ ಆಯುರ್ವೇದ ಕಂಪನಿಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿತ್ತು.



ತಿರಂಗಾ... ಸಿಆರ್‌ಪಿಎಫ್ ಸಿಬ್ಬಂದಿ ಶ್ರೀನಗರದ ದಾಲ್ ಸರೋವರದ ದಂಡೆಯ ಮೇಲೆ ಮಂಗಳವಾರ ತಿರಂಗಾ ರ‍್ಯಾಲಿ ನಡೆಸಿದರು ಪಿಟಿಐ ಚಿತ್ರ

‘ಧರ್ಮನಿರಪೇಕ್ಷತೆಗಾಗಿ ಮತಾಂತರ ನಿಷೇಧ ಕಾಯ್ದೆ’

ಲಖನೌ: ಉತ್ತರ ಪ್ರದೇಶದ ಮತಾಂತರ ವಿರೋಧಿ ಕಾನೂನಿನ ಉದ್ದೇಶವು ದೇಶದ ಧರ್ಮನಿರಪೇಕ್ಷ ಮನೋಭಾವವನ್ನು ಪೋಷಿಸುವುದಾಗಿದೆ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

ತನ್ನನ್ನು ಮದುವೆಯಾಗಲು ಇಸ್ಲಾಂಗೆ ಮತಾಂತರ ಆಗುವಂತೆ ಹಿಂದೂ ಯುವತಿಯೊಬ್ಬಳ ಮೇಲೆ ಒತ್ತಡ ಹೇರಿದ ಆರೋಪ ಎದುರಿಸುತ್ತಿರುವ ಅಜೀಂ ಎನ್ನುವವರ ಜಾಮೀನು ಅರ್ಜಿಯನ್ನು ತಿರಸ್ಕರಿಸುವ ಸಂದರ್ಭದಲ್ಲಿ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್ವಾಲ್ ಅವರು ಈ ಮಾತು ಹೇಳಿದ್ದಾರೆ. ಅಜೀಂ ಅವರನ್ನು ಮತಾಂತರ ವಿರೋಧಿ ಕಾಯ್ದೆಯ ಅಡಿಯಲ್ಲಿ ಬಂಧಿಸಲಾಗಿದೆ.

‘ಉತ್ತರ ಪ್ರದೇಶ ಅಕ್ರಮ ಮತಾಂತರ ನಿಷೇಧ ಕಾಯ್ದೆಯ ಮೂಲ ಉದ್ದೇಶ ಹಾಗೂ ಅದನ್ನು ಜಾರಿಗೆ ತಂದಿದ್ದಕ್ಕೆ ಕಾರಣವು ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಪಡಿಸುವುದಾಗಿದ್ದು, ಇದು ದೇಶದ ಸಾಮಾಜಿಕ ಸೌಹಾರ್ದವನ್ನು ಪ್ರತಿಫಲಿಸುತ್ತದೆ’ ಎಂದು ಕೋರ್ಟ್ ಹೇಳಿದೆ.

ದೇಶದ ಸಂವಿಧಾನವು ಪ್ರತಿ ವ್ಯಕ್ತಿಗೂ ತನ್ನ ಧರ್ಮವನ್ನು ಪಾಲಿಸುವ ಹಾಗೂ ಅದನ್ನು ಪ್ರಚುರಪಡಿಸುವ ಹಕ್ಕನ್ನು ನೀಡುತ್ತದೆ. ಆದರೆ, ವ್ಯಕ್ತಿಗತವಾದ ಧಾರ್ಮಿಕ ಹಕ್ಕನ್ನು ಮತಾಂತರಿಸಲು ಇರುವ ಸಮಷ್ಟಿಯ ಹಕ್ಕು ಎಂದು ಅರ್ಥೈಸಬೇಕಿಲ್ಲ... ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಮತಾಂತರ ಮಾಡುತ್ತಿರುವ ಹಾಗೂ ಮತಾಂತರ ಮಾಡಬೇಕು ಎಂದು ಉದ್ದೇಶಿಸಿರುವ ವ್ಯಕ್ತಿಗಳಿಗಿಬ್ಬರಿಗೂ ಸಮಾನವಾಗಿ ಅನ್ವಯವಾಗುತ್ತದೆ ಎಂದು ಕೋರ್ಟ್ ಹೇಳಿದೆ.

‘ಈ ಪ್ರಕರಣದಲ್ಲಿ ಸಂತ್ರಸ್ತೆಯೇ ಮಾಹಿತಿದಾರಳೂ ಹೌದು. ಇಸ್ಲಾಂ ಅನ್ನು ಒಪ್ಪಿಕೊಳ್ಳುವಂತೆ ತನಗೆ ಅರ್ಜಿದಾರ ಹಾಗೂ ಆತನ ಕುಟುಂಬದ ಸದಸ್ಯರು ಬಲವಂತ ಮಾಡುತ್ತಿದ್ದಾರೆ ಎಂದು ಸಂತ್ರಸ್ತೆಯು ಎಫ್‌ಐಆರ್ ದಾಖಲಿಸಿದ್ದಾರೆ... ಆಕೆಯನ್ನು ಅರ್ಜಿದಾರ ಬಂಧನದಲ್ಲಿ ಇರಿಸಿದ್ದ’ ಎಂದು ಕೋರ್ಟ್ ಹೇಳಿದೆ.

ಕಾಯ್ದೆಯ ಸೆಕ್ಷನ್ 3 ಹಾಗೂ 8ರ ಉಲ್ಲಂಘನೆ ಆಗಿದೆ. ಇದು ಶಿಕ್ಷಾರ್ಹ. ಹೀಗಾಗಿ ಜಾಮೀನು ನೀಡಲು ಆಗದು ಎಂದು ಕೋರ್ಟ್ ಹೇಳಿದೆ.

ಜಾಮೀನು: ಅನಿವಾರ್ಯವಾದರೆ ಮಾತ್ರ ನಿರಾಕರಣೆ

ನವದೆಹಲಿ (ಪಿಟಿಐ): ಅನಿವಾರ್ಯವಾದ ಸಂದರ್ಭಗಳಲ್ಲಿ ಮಾತ್ರ ಜಾಮೀನು ಹಕ್ಕನ್ನು ನಿರಾಕರಿಸಬಹುದು. ಇದು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ(ಯುಎಪಿಎ) ವ್ಯಾಪ್ತಿಯಲ್ಲಿ ಬರುವ ಅಪರಾಧಗಳಿಗೂ ಅನ್ವಯವಾಗುತ್ತದೆ ಎಂದಿರುವ ಸುಪ್ರೀಂ ಕೋರ್ಟ್, ಈ ಕಾಯ್ದೆಯಡಿ ದಾಖಲಾದ ಪ್ರಕರಣದಲ್ಲಿ ಆರೋಪಿಯಾಗಿರುವ ವ್ಯಕ್ತಿಗೆ ಮಂಗಳವಾರ ಜಾಮೀನು ನೀಡಿದೆ.

‘ಜಾಮೀನು ನೀಡಲು ಅರ್ಹವಾದ ಪ್ರಕರಣಗಳಲ್ಲಿಯೂ, ನ್ಯಾಯಾಲಯಗಳು ಆರೋಪಿಗಳಿಗೆ ಜಾಮೀನು ನೀಡುವುದನ್ನು ನಿರಾಕರಿಸಲು ಆರಂಭಿಸಿದರೆ ಅದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುವುದು’ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ಜಲಾಲುದ್ದೀನ್ ಖಾನ್ ಎಂಬುವವರು ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಅಭಯ್ ಎಸ್‌.ಓಕಾ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಇದ್ದ ನ್ಯಾಯಪೀಠ ನಡೆಸಿತು.

‘ಆರೋಪಿಯ ವಿರುದ್ಧ ಪ್ರಾಸಿಕ್ಯೂಷನ್ ಹೊರಿಸಿರುವ ಅಪಾದನೆಗಳು ಗಂಭೀರ ಸ್ವರೂಪದ್ದಾಗಿರಬಹುದು. ಆದರೆ, ನ್ಯಾಯಾಲಯಗಳು ಕಾನೂನಿನ ಪ್ರಕಾರವೇ ಪ್ರಕರಣವನ್ನು ಪರಿಗಣಿಸಬೇಕು. ಅರ್ಹ ಪ್ರಕರಣಗಳಲ್ಲಿಯೂ ಜಾಮೀನು ನಿರಾಕರಿಸುವುದು ಸಂವಿಧಾನದ 21ನೇ ವಿಧಿ ಅಡಿ ಖಾತ್ರಿಪಡಿಸಲಾಗಿರುವ ಹಕ್ಕುಗಳ ಉಲ್ಲಂಘನೆ ಆಗುತ್ತದೆ’ ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣ ಏನು: 2022ರಲ್ಲಿ ಪಟ್ನಾದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಚುನಾವಣಾ ಪ್ರಚಾರ ಸಭೆ ಇತ್ತು. ಕಾರ್ಯಕ್ರಮದ ವೇಳೆ, ಭಯೋತ್ಪಾದನಾ ಕೃತ್ಯ ಎಸಗಲು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆ (ಈಗ ನಿಷೇಧಿತ) ಸಂಚು ರೂಪಿಸಿದೆ ಎಂಬ ಕುರಿತು ಫುಲ್ವಾರಿ ಶರೀಫ್ ಠಾಣೆ ಪೊಲೀಸರಿಗೆ ಮಾಹಿತಿ ಸಿಕ್ಕಿತ್ತು.

ಫುಲ್ವಾರಿ ಶರೀಫ್ ಪ್ರದೇಶದ ನಿವಾಸಿಯಾಗಿರುವ ಜಲಾಲುದ್ದೀನ್ ಖಾನ್, ಸಂಘಟನೆಯ ಸದಸ್ಯರಿಗೆ ತನ್ನ ಮನೆ ಬಾಡಿಗೆ ನೀಡಿದ್ದರು.

ಈ ಮನೆಯಲ್ಲಿ ಸಂಘಟನೆ ತನ್ನ ಸದಸ್ಯರಿಗೆ ತರಬೇತಿ ನೀಡುತ್ತಿತ್ತು ಎಂದು ಆರೋಪಿಸಲಾಗಿತ್ತು. ಹಾಗಾಗಿ, ಈ ಮನೆ ಮೇಲೆ ಬಿಹಾರ ಪೊಲೀಸರು 2022ರ ಜುಲೈ 11ರಂದು ದಾಳಿ ನಡೆಸಿದ್ದರು. ನಂತರ, ಎನ್‌ಐಎ ತನಿಖೆಯನ್ನು ಕೈಗೆತ್ತಿಕೊಂಡಿತ್ತು.

ಪಿಎಫ್‌ಐ ಸದಸ್ಯರಿಗೆ ತನ್ನ ಮನೆ ಬಾಡಿಗೆ ನೀಡಿದ್ದಕ್ಕಾಗಿ ಜಲಾಲುದ್ದೀನ್ ಖಾನ್ ವಿರುದ್ಧ ಯುಎಪಿಎ ಅಡಿ ಪ್ರಕರಣ ದಾಖಲಿಸಲಾಗಿತ್ತು.

ಶಾಜಿಯಾ ವಿಡಿಯೊ ತೆಗೆಯಿರಿ; ಹೈಕೋರ್ಟ್

ನವದೆಹಲಿ (ಪಿಟಿಐ): ಬಿಜೆಪಿ ನಾಯಕಿ ಶಾಜಿಯಾ ಇಲ್ಮಿ ಅವರು ವಿಡಿಯೊ ಪತ್ರಕರ್ತರೊಬ್ಬರನ್ನು ನಿಂದಿಸುತ್ತಿರುವ ಅರ್ಥ ನೀಡುವ ವಿಡಿಯೊ ಒಂದನ್ನು ಸಾಮಾಜಿಕ ಜಾಲತಾಣಗಳಿಂದ ತೆಗೆಯಬೇಕು ಎಂದು ಹಿರಿಯ ಪತ್ರಕರ್ತ ರಾಜದೀಪ್ ಸರ್ದೇಸಾಯಿ ಅವರಿಗೆ ದೆಹಲಿ ಹೈಕೋರ್ಟ್ ಮಂಗಳವಾರ ಸೂಚಿಸಿದೆ.



ರಾಜದೀಪ್

ಶಾಜಿಯಾ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮನಪ್ರೀತ್ ಪಿ.ಎಸ್. ಅರೋರಾ ಅವರು, ಈ ಮಧ್ಯಂತರ ಆದೇಶ ನೀಡಿದರು. ಟಿ.ವಿ. ಚರ್ಚೆಯ ಕಾರ್ಯಕ್ರಮ ಮುಗಿದ ನಂತರವೂ, ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನೀಡಿದ್ದ ಸಮ್ಮತಿಯನ್ನು ತಾವು ಹಿಂಪಡೆದ ನಂತರವೂ ತಮ್ಮ ಮಾತುಗಳನ್ನು ಚಿತ್ರೀಕರಿಸಿಕೊಳ್ಳುವ ಮೂಲಕ ಕ್ಯಾಮೆರಾಮನ್ ತಮ್ಮ ಮಾನಹಾನಿಗೆ ಕಾರಣರಾಗಿದ್ದಾರೆ, ಖಾಸಗಿತನಕ್ಕೆ ಧಕ್ಕೆ ತಂದಿದ್ದಾರೆ ಎಂದು ಶಾಜಿಯಾ ಅವರು ದೂರಿದ್ದಾರೆ.

ನ್ಯಾಯಾಲಯವು ವಿಚಾರಣೆಯನ್ನು ಆಗಸ್ಟ್ 16ಕ್ಕೆ ಮುಂದೂಡಿದೆ. ವಿಡಿಯೊವನ್ನು ಬಳಸಿಕೊಳ್ಳುವುದಕ್ಕೆ ಸರ್ದೇಸಾಯಿ ಅವರಿಗೆ ಮಾಧ್ಯಮ ಸಂಸ್ಥೆಯಿಂದ ಅನುಮತಿ ಇತ್ತೇ ಎಂಬ ಬಗ್ಗೆ ಕೋರ್ಟ್ ಅವರ ವಕೀಲರಿಂದ ಮಾಹಿತಿ ಕೇಳಿದೆ.

ಶಾಜಿಯಾ ಅವರು ಸರ್ದೇಸಾಯಿ ನಡೆಸಿಕೊಟ್ಟ ಚರ್ಚೆಯಲ್ಲಿ ಕಳೆದ ತಿಂಗಳು ಭಾಗವಹಿಸಿದ್ದರು. ಸರ್ದೇಸಾಯಿ ಮತ್ತು ಶಾಜಿಯಾ ಅವರ ನಡುವೆ ಬಿರುಸಿನ ವಾಗ್ವಾದ ನಡೆದ ನಂತರ ಶಾಜಿಯಾ ಅವರು ಮಧ್ಯದಲ್ಲೇ ಕಾರ್ಯಕ್ರಮದಿಂದ ಹೊರನಡೆದಿದ್ದರು.

ನಂತರ ಸರ್ದೇಸಾಯಿ ಅವರು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡ ವಿಡಿಯೊ ಒಂದು ಆಕ್ಷೇಪಾರ್ಹವಾಗಿದೆ, ತಮ್ಮ ಖಾಸಗೀತನಕ್ಕೆ ಧಕ್ಕೆ ತಂದಿದೆ ಎಂದು ಶಾಜಿಯಾ ಆರೋಪಿಸಿದ್ದಾರೆ.

ಫ್ಲಡ್‌ವಾಚ್ ಮೊಬೈಲ್ ಆ್ಯಪ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರವಾಹದ ಮುನ್ಸೂಚನೆ ನೀಡುವ ‘ಫ್ಲಡ್‌ವಾಚ್ ಇಂಡಿಯಾ’ ಮೊಬೈಲ್ ಅಪ್ಲಿಕೇಷನ್‌ನ 2ನೇ ಆವೃತ್ತಿಯನ್ನು ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಮಂಗಳವಾರ ಇಲ್ಲಿ ಅನಾವರಣಗೊಳಿಸಿದರು.

ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಆ್ಯಪ್ ಅಭಿವೃದ್ಧಿಪಡಿಸಿತ್ತು. ಮೊದಲ ಆವೃತ್ತಿಯಲ್ಲಿ ವಿವಿಧೆಡೆ ಇರುವ 200 ಪ್ರವಾಹ ನಿರ್ವಹಣಾ ಕೇಂದ್ರಗಳ ಮಾಹಿತಿ ಆಧರಿಸಿ ಮುನ್ಸೂಚನೆ ನೀಡಲಾಗುತ್ತಿತ್ತು.

ನವೀಕೃತ ಅಪ್ಲಿಕೇಷನ್‌ನಲ್ಲಿ ಹೆಚ್ಚುವರಿ 392 ಕೇಂದ್ರ ಸೇರಿ ಒಟ್ಟು 592 ಕೇಂದ್ರಗಳ ಮಾಹಿತಿ ಲಭ್ಯವಿದೆ.

ಈ ಮೂಲಕ ಬಳಕೆದಾರರಿಗೆ ದೇಶದಾದ್ಯಂತ ಮುನ್ಸೂಚನೆ ಕುರಿತ ಸಮಗ್ರ ಮಾಹಿತಿ ಸಿಗಲಿದೆ ಎಂದು ಹೇಳಿಕೆಯು ತಿಳಿಸಿದೆ.

ವಕ್ಫ್ ಮಸೂದೆ: ಜೆಪಿಸಿ ಮುಖ್ಯಸ್ಥರಾಗಿ ಜಗದಾಂಬಿಕ ಪಾಲ್ ನೇಮಕ

ನವದೆಹಲಿ (ಪಿಟಿಐ): ವಿವಾದಿತ ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲಿಸಲು ರಚಿಸಿರುವ ಸಂಸತ್ತಿನ ಜಂಟಿ ಸಮಿತಿಗೆ ಬಿಜೆಪಿಯ ಹಿರಿಯ ಸಂಸದ ಜಗದಾಂಬಿಕ ಪಾಲ್ ಅವರು ಮುಖ್ಯಸ್ಥರಾಗಲಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಪಾಲ್ ಅವರನ್ನು ಜಂಟಿ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿರುವ ಅಧಿಸೂಚನೆ ಶೀಘ್ರವೇ ಪ್ರಕಟವಾಗಲಿದೆ ಎಂದಿದ್ದಾರೆ.

ಪ್ರತಿಪಕ್ಷಗಳ ಪ್ರತಿಭಟನೆಯ ನಡುವೆ, ಸರ್ಕಾರವು ಈ ಮಸೂದೆಯನ್ನು ಉಭಯ ಸದನಗಳ ಜಂಟಿ ಸಮಿತಿಯ ಪರಿಶೀಲನೆಗೆ ಒಪ್ಪಿಸಲು ನಿರ್ಧರಿಸಿದೆ.

ಲೋಕಸಭೆಯಿಂದ 21 ಮತ್ತು ರಾಜ್ಯಸಭೆಯಿಂದ 10 ಸದಸ್ಯರನ್ನು ಹೊಂದಿರುವ ಈ ಸಮಿತಿಯು ಮುಂದಿನ ಅಧಿವೇಶನದ ವೇಳೆಗೆ ತನ್ನ ವರದಿಯನ್ನು ಸಲ್ಲಿಸಲಿದೆ.

ವಕ್ಫ್ (ತಿದ್ದುಪಡಿ) ಮಸೂದೆಯನ್ನು ಕಳೆದ ಗುರುವಾರ ಲೋಕಸಭೆಯಲ್ಲಿ ಮಂಡಿಸಲಾಯಿತು. ಪ್ರಸ್ತಾವಿತ ಕಾನೂನಿನಡಿ ಮಸೀದಿಗಳ ಕಾರ್ಯ-ನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡುವ ಉದ್ದೇಶವಿಲ್ಲ ಎಂದು ಸರ್ಕಾರ ಪ್ರತಿಪಾದಿಸಿದರೆ, ವಿಪಕ್ಷಗಳು ಇದು ಮುಸ್ಲಿಮರನ್ನು ಗುರಿಯಾಗಿಸಿದೆ ಮತ್ತು ಸಂವಿಧಾನದ ಮೇಲಿನ ದಾಳಿ ಎಂದು ಕಿಡಿಕಾರಿದ್ದವು. ತೀವ್ರ ಚರ್ಚೆಯ ನಂತರ ಸಂಸತ್ತಿನ ಜಂಟಿ ಸಮಿತಿಯ ಪರಿಶೀಲನೆಗೆ ಒಪ್ಪಿಸುವ ನಿರ್ಧಾರ ತೆಗೆದುಕೊಳ್ಳಲಾಗಿತ್ತು.

ಸಂಸದೀಯ ವ್ಯವಹಾರಗಳ ಖಾತೆಯನ್ನು ಹೊಂದಿರುವ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಸಮಿತಿಗೆ ಸದಸ್ಯರನ್ನು ಹೆಸರಿಸುವ ಸಂಬಂಧ ಮಂಡಿಸಿದ್ದ ಪ್ರಸ್ತಾವನೆಯನ್ನು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಶುಕ್ರವಾರ ಅಂಗೀಕರಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಗೋಖಲೆ ವಿರುದ್ಧ ದೋಷಾರೋಪ ನಿಗದಿ

ನವದೆಹಲಿ (ಪಿಟಿಐ): ಅಹಮದಾಬಾದ್‌ನ ಪಿಎಂಎಲ್‌ಎ ವಿಶೇಷ ನ್ಯಾಯಾಲಯವು ಟಿಎಂಸಿ ರಾಜ್ಯಸಭಾ ಸದಸ್ಯ ಸಾಕೇತ್ ಗೋಖಲೆ ಅವರ ವಿರುದ್ಧ ದೋಷಾರೋಪ ನಿಗದಿ ಮಾಡಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ತಿಳಿಸಿದೆ.



ಸಾಕೇತ್ ಗೋಖಲೆ

ಹಣದ ಅಕ್ರಮ ವರ್ಗಾವಣೆ ಪ್ರಕರಣಗಳ ವಿಚಾರಣೆಯನ್ನು ಈ ನ್ಯಾಯಾಲಯ ನಡೆಸುತ್ತದೆ. ಗೋಖಲೆ ಅವರು ಕ್ರೌಡ್ ಫಂಡಿಂಗ್ ಮೂಲಕ ಸಂಗ್ರಹಿಸಿದ್ದ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಗುಜರಾತ್ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು. ಅದನ್ನು ಆಧರಿಸಿ ಗೋಖಲೆ ವಿರುದ್ಧ ತನಿಖೆ ನಡೆಸಲಾಗಿತ್ತು.

ಗೋಖಲೆ ಅವರು ಟಿಎಂಸಿ ಪಕ್ಷದ ರಾಷ್ಟ್ರೀಯ ವಕ್ತಾರ ಕೂಡ ಹೌದು. ಗೋಖಲೆ ವಿರುದ್ಧ ಕಳೆದ ವರ್ಷ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ದೇಣಿಗೆ ಮೂಲಕ ಸಂಗ್ರಹಿಸಿದ ಭಾರಿ ಮೊತ್ತವನ್ನು ಷೇರು ವಹಿವಾಟುಗಳಿಗೆ, ಊಟಕ್ಕೆ ಹಾಗೂ ವೈಯಕ್ತಿಕವಾಗಿ ಇತರ ವೆಚ್ಚಗಳಿಗೆ ಬಳಸಿಕೊಳ್ಳಲಾಗಿದೆ ಎಂದು ಇ.ಡಿ. ಅಧಿಕಾರಿಗಳು ಕೋರ್ಟ್‌ಗೆ ತಿಳಿಸಿದ್ದರು. ಆರೋಪಗಳನ್ನು ಗೋಖಲೆ ಅವರು ನಿರಾಕರಿಸಿದ್ದಾರೆ.

ರಾಜಸ್ಥಾನದಲ್ಲಿ ಭಾರಿ ಮಳೆ

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಭಾರಿ ಮಳೆಯಾಗುತ್ತಿದ್ದು, ಕಳೆದ ಎರಡು ದಿನಗಳಲ್ಲಿ 22 ಮಂದಿ ಮೃತಪಟ್ಟಿದ್ದಾರೆ. ಹಲವು ಜಿಲ್ಲೆಗಳಲ್ಲಿ ಶಾಲೆಗಳಿಗೆ ಮಂಗಳವಾರ ರಜೆ ಘೋಷಿಸಲಾಗಿತ್ತು.

ಮಂಗಳವಾರ, ಬುಧವಾರ, ಗುರುವಾರ ಹಾಗೂ ಶುಕ್ರವಾರದಂದು ರಾಜ್ಯದ ಹಲವೆಡೆ ಭಾರಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಬಿಜೆಪಿ ಮುಖಂಡನ ಬಂಧನ

ಚೆನ್ನೈ (ಪಿಟಿಐ): ಶಿವಗಂಗಾ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿದ್ದ ಟಿ.ದೇವನಾಥನ್ ಯಾದವ್ ಅವರನ್ನು ಠೇವಣಿದಾರರಿಗೆ ವಂಚಿಸಿದ ಆರೋಪದ ಮೇಲೆ ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ತಮಿಳುನಾಡಿನ ಆರ್ಥಿಕ ವಿಭಾಗದ ಪೊಲೀಸರ ತಂಡವು ಆರೋಪಿಯನ್ನು ತಿರುಚಿರಾಪಳ್ಳಿಯಲ್ಲಿ ಬಂಧಿಸಿ ಹೆಚ್ಚಿನ ವಿಚಾರಣೆಗಾಗಿ ಚೆನ್ನೈಗೆ ಕರೆತಂದಿತು.

ದೇವನಾಥನ್ ಮುಖ್ಯಸ್ಥರಾಗಿರುವ ‘ಮೈಲಾಪೂರ್ ಹಿಂದೂ ಶಾಶ್ವತ್ ನಿಧಿ ಲಿಮಿಟೆಡ್’ ಸಂಸ್ಥೆಯು ಹೆಚ್ಚಿನ ಬಡ್ಡಿ ನೀಡುವುದಾಗಿ ಜನರಿಂದ ಹಣ ಪಡೆದು ನಂತರ ವಂಚಿಸಿತ್ತು. ಇದರಿಂದ ಮೋಸಹೋದ ನೂರಾರು ಮಂದಿ ಪ್ರತಿಭಟನೆ ನಡೆಸಿ, ದೂರು ದಾಖಲಿಸಿದ್ದರು.

ದೇವನಾಥನ್ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಂಡಿದ್ದರು.

ಶಿವಗಂಗಾ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯಿಂದ ಸ್ಪರ್ಧಿಸಿದ್ದ ಅವರು ಸೋಲುಂಡಿದ್ದರು.

ವೀಸಾ ಕೇಂದ್ರ ಪುನರಾರಂಭ

ಢಾಕಾ (ಪಿಟಿಐ): ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿರುವ ಭಾರತೀಯ ವೀಸಾ ಅರ್ಜಿ ಕೇಂದ್ರವು ಮಂಗಳವಾರದಿಂದ ಪುನಃ ಕಾರ್ಯಾರಂಭಿಸಿತು.

ಭಾರತೀಯ ವೀಸಾ ಅರ್ಜಿ ಕೇಂದ್ರವು (ಐವಿಎಸಿ) ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದು, ‘ಢಾಕಾದಲ್ಲಿ ಐವಿಎಸಿ ಪುನಃ ಕಾರ್ಯಾರಂಭಿಸಿದೆ. ಪಾಸ್‌ಪೋರ್ಟ್ ತೆಗೆದುಕೊಂಡು ಹೋಗುವುದಕ್ಕೆ ಸಂಬಂಧಿಸಿದಂತೆ ಅರ್ಜಿದಾರರಿಗೆ ಸಂದೇಶ ಕಳುಹಿಸಲಾಗುವುದು’ ಎಂದು ತಿಳಿಸಿದೆ.

ಸಂದೇಶ ಸ್ವೀಕರಿಸಿದ ನಂತರವಷ್ಟೇ ವೀಸಾ ಕೇಂದ್ರದ ಬಳಿ ಬರುವಂತೆ ಅದು ಮನವಿ ಮಾಡಿದೆ.

‘ನಿಯಮಿತವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಹೀಗಾಗಿ ಪ್ರಕ್ರಿಯೆ ಪೂರ್ಣಗೊಳ್ಳಲು ಸುದೀರ್ಘ ಸಮಯ ಬೇಕಾಗಬಹುದು, ದಯವಿಟ್ಟು ಸಹಕರಿಸಿ’ ಎಂದು ಕೋರಿದೆ.

ವಿವಾದಿತ ಉದ್ಯೋಗ ಮೀಸಲಾತಿಯನ್ನು ವಿರೋಧಿಸಿ ಅವಾಮಿ ಲೀಗ್ ನೇತೃತ್ವದ ಸರ್ಕಾರದ ವಿರುದ್ಧ ವ್ಯಾಪಕ ಪ್ರತಿಭಟನೆ ಆರಂಭವಾದ ನಂತರ ಶೇಖ್ ಹಸೀನಾ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಭಾರತಕ್ಕೆ ತೆರಳಿದ್ದರು.

ದೇಶದಲ್ಲಿ ಪರಿಸ್ಥಿತಿ ಉದ್ವಿಗ್ನಗೊಂಡ ನಂತರ ಎಲ್ಲಾ ವೀಸಾ ಕೇಂದ್ರಗಳನ್ನು ಮುಚ್ಚುವುದಾಗಿ ಐವಿಎಸಿ ಕಳೆದ ವಾರ ಘೋಷಿಸಿತ್ತು.

ಕಿರಾಣಿ ಅಂಗಡಿ ಮಾಲೀಕನ ಹತ್ಯೆ: ಕೊಲೆ ಪ್ರಕರಣ ದಾಖಲು

ಹಸೀನಾ ವಿರುದ್ಧ ತನಿಖೆ ಆರಂಭಿಸಿದ ಕೋರ್ಟ್

ಢಾಕಾ (ಎಎಫ್‌ಪಿ): ಬಾಂಗ್ಲಾದೇಶದಲ್ಲಿ ಕಳೆದ ತಿಂಗಳು ನಡೆದ ಹಿಂಸಾಚಾರದ ವೇಳೆ ಪೊಲೀಸರು ಕಿರಾಣಿ ಅಂಗಡಿ ಮಾಲೀಕನನ್ನು ಗುಂಡಿಕ್ಕಿ ಹತ್ಯೆ ಮಾಡಿದ ಪ್ರಕರಣ ಸಂಬಂಧ ಪದಚ್ಯುತ ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಅವರ ಆಡಳಿತದಲ್ಲಿದ್ದ ಆರು ಮಂದಿ ಪ್ರಮುಖರ ವಿರುದ್ಧದ ಕೊಲೆ ಪ್ರಕರಣದ ವಿಚಾರಣೆಯನ್ನು ಬಾಂಗ್ಲಾ ನ್ಯಾಯಾಲಯವು ಮಂಗಳವಾರ ಪ್ರಾರಂಭಿಸಿದೆ.

‘ಶೇಖ್ ಹಸೀನಾ ಮತ್ತು ಇನ್ನೂ ಆರು ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಖಾಸಗಿ ವ್ಯಕ್ತಿಯ ಪರವಾಗಿ ಮೊಕದ್ದಮೆ ಹೂಡಿರುವ ವಕೀಲ ಮಾಮುನ್ ಮಿಯಾ ಹೇಳಿದ್ದಾರೆ.

ಬಾಂಗ್ಲಾದೇಶದ ಕಾನೂನಿನಡಿ ಕ್ರಿಮಿನಲ್ ತನಿಖೆಯ ಮೊದಲ ಹಂತವಾದ ಆರೋಪಿಗಳ ವಿರುದ್ಧದ ಕೊಲೆ ಪ್ರಕರಣವನ್ನು ದಾಖಲಿಸಿಕೊಳ್ಳಲು ಢಾಕಾ ಮೆಟ್ರೊಪಾಲಿಟನ್ ನ್ಯಾಯಾಲಯವು ಪೊಲೀಸರಿಗೆ ಆದೇಶಿಸಿದೆ ಎಂದು ಅವರು ಹೇಳಿದರು.

ಹಸೀನಾ ಅವರ ಸರ್ಕಾರದಲ್ಲಿ ಗೃಹ ಸಚಿವರಾಗಿದ್ದ ಅಸಾದುಜ್ಜಮಾನ್ ಖಾನ್ ಮತ್ತು ಹಸೀನಾ ಅವರ ಅವಾಮಿ ಲೀಗ್ ಪಕ್ಷದ ಪ್ರಧಾನ ಕಾರ್ಯದರ್ಶಿ ಒಬೈದುಲ್ ಖಾದರ್ ಅವರ ಹೆಸರನ್ನು ಆರೋಪಿಗಳ ಪಟ್ಟಿಯಲ್ಲಿ ಉಲ್ಲೇಖಿಸಿ ನ್ಯಾಯಾಲಯಕ್ಕೆ ಮಿಯಾ ಸಲ್ಲಿಸಿದ್ದಾರೆ.

ಹಸೀನಾ ಅವರ ಸರ್ಕಾರದಿಂದ ನೇಮಕಗೊಂಡ ನಾಲ್ವರು ಉನ್ನತ ಪೊಲೀಸ್ ಅಧಿಕಾರಿಗಳನ್ನು ಪ್ರಕರಣದಲ್ಲಿ ಹೆಸರಿಸಲಾಗಿದೆ. ಸದ್ಯ ಈ ಅಧಿಕಾರಿಗಳು ತಮ್ಮ ಹುದ್ದೆಗಳನ್ನು ತೊರೆದಿದ್ದಾರೆ.

ಜುಲೈ 19ರಂದು ಪೊಲೀಸರು ಪ್ರತಿಭಟನೆಯನ್ನು ಹತ್ತಿಕ್ಕಲು ಗುಂಡು ಹಾರಿಸಿದ್ದರು. ಆಗ ಗುಂಡೇಟಿನಿಂದ ಕಿರಾಣಿ ಅಂಗಡಿಯ ಮಾಲೀಕ ಅಬು ಸೈಯದ್ ಮೃತಪಟ್ಟಿದ್ದರು. ಈ ಸಾವಿಗೆ ಏಳು ಜನರು ಹೊಣೆಗಾರರು ಎಂದು ಆರೋಪಿಸಿ, ಅಬು ಅವರ ಹಿತೈಷಿ ಅಮಿರ್ ಹಮ್ಜಾ ಶಾತಿಲ್ ಪರವಾಗಿ ಈ ಪ್ರಕರಣ ದಾಖಲಿಸಲಾಗಿದೆ ಎಂದು ‘ಡೈಲಿ ಸ್ಟಾರ್’ ಪತ್ರಿಕೆ ವರದಿ ಮಾಡಿದೆ.

ದಾಂದಲೆ, ಹಿಂಸಾಚಾರ ಕೃತ್ಯಗಳ ತನಿಖೆಗೆ ಶೇಖ್ ಹಸೀನಾ ಆಗ್ರಹ

ಢಾಕಾ/ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದ ದಾಂದಲೆ ಕೃತ್ಯಗಳ ಕುರಿತು ತನಿಖೆ ನಡೆಸಬೇಕು ಹಾಗೂ ಕೊಲೆ, ‘ಭಯೋತ್ಪಾದಕ ಕೃತ್ಯ’ಗಳಲ್ಲಿ ಭಾಗಿಯಾದವರ ಪತ್ತೆ ಹಚ್ಚಿ, ಶಿಕ್ಷೆಗೆ ಗುರಿಪಡಿಸುವ ಮೂಲಕ ನ್ಯಾಯ ಒದಗಿಸಬೇಕು ಎಂದು ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಒತ್ತಾಯಿಸಿದ್ದಾರೆ.

ಪ್ರಧಾನಿ ಸ್ಥಾನದಿಂದ ಆಗಸ್ಟ್ 5ರಂದು ಪದಚ್ಯುತಗೊಂಡ ಬಳಿಕ ಮೊದಲ ಬಾರಿಗೆ ಸಾರ್ವಜನಿಕ ಹೇಳಿಕೆ ನೀಡಿರುವ, 76 ವರ್ಷದ ಅವರು ಪ್ರತಿಭಟನೆಯ ಹೆಸರಿನಲ್ಲಿ ನಡೆದ ದಾಂದಲೆ, ಹಾಗೂ ಹಿಂಸಾಚಾರ ಕೃತ್ಯಗಳಲ್ಲಿ ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಮೃತಪಟ್ಟವರ ಸಾವಿಗೆ ನಾನು ತೀವ್ರ ಸಂತಾಪ ವ್ಯಕ್ತಪಡಿಸುತ್ತೇನೆ’ ಎಂದು ಹೇಳಿದ್ದಾರೆ.

ಅವರ ಪುತ್ರ, ಅಮೆರಿಕದಲ್ಲಿ ನೆಲಸಿರುವ ಸಾಜೀಬ್ ವಾಜೆದ್ ಅವರು ಬಂಗಾಳಿ ಭಾಷೆಯಲ್ಲಿ ಈ ಹೇಳಿಕೆಯನ್ನು ‘ಎಕ್ಸ್’ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಹಿಂದೂಗಳ ಭೇಟಿಯಾದ ಮೊಹಮ್ಮದ್ ಯೂನಸ್

ಢಾಕಾ (ಪಿಟಿಐ): ಸಂಕಷ್ಟದಲ್ಲಿರುವ ಹಿಂದೂ ಸಮುದಾಯವನ್ನು ಮಂಗಳವಾರ ಭೇಟಿಯಾದ ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್, ಮಧ್ಯಂತರ ಸರ್ಕಾರದ ಮೇಲೆ ವಿಶ್ವಾಸವಿಡುವಂತೆ ಮನವಿ ಮಾಡಿದ್ದಾರೆ.


ಢಾಕೇಶ್ವರಿ ದೇಗುಲದಲ್ಲಿ ಹಿಂದೂಗಳ ಜೊತೆ ಮಾತುಕತೆ ನಡೆಸಿ, ‘ಹಕ್ಕುಗಳು ಎಲ್ಲರಿಗೂ ಸಮಾನವಾದದ್ದು. ನಿಮ್ಮ ರಕ್ಷಣೆ ಮಾಡುವಲ್ಲಿ ನಾವು ವಿಫಲವಾದರೆ ಬಳಿಕ ನಮ್ಮನ್ನು ಟೀಕಿಸಿ’ ಎಂದರು.

‘ಸಂವಿಧಾನದ ಪ್ರಕಾರ ನಾವು ಜನರನ್ನು ಮುಸ್ಲಿಂ, ಹಿಂದೂ ಮತ್ತು ಬೌದ್ಧರು ಎಂದು ನೋಡುವುದಿಲ್ಲ ಆಡಳಿತ ವ್ಯವಸ್ಥೆ ಹದಗೆಟ್ಟಿರುವುದೇ ಸಮಸ್ಯೆಗಳಿಗೆ ಕಾರಣ. ಸರಿಪಡಿಸಬೇಕಾದ ಅಗತ್ಯವಿದೆ’ ಎಂದರು.



ಷೇರುಪೇಟೆ ವಹಿವಾಟು

692



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,347
ಇಂದಿನ ಅಂತ್ಯ	24,139
▼	208
ದಿನದ ಕನಿಷ್ಠ	24,116

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹232-471

ದ್ವಿತಳಿ (ಬಿ.ವಿ) ₹300-589

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹490
12 ಕ್ಕೆ	₹68
ಮೈಸೂರು	
100ಕ್ಕೆ	₹495

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹945 (945)
ಸೂರ್ಯಕಾಂತಿ (ರಿಫೈನ್ಡ್)	₹955 (955)
ಪಾಮೋಲಿನ್	₹913 (915)

ವಜ್ರ ಉದ್ಯಮಕ್ಕೆ ಸಂಕಷ್ಟ 65 ಕಾರ್ಮಿಕರು ಆತ್ಮಹತ್ಯೆ

ಸೂರತ್ (ಪಿಟಿಐ): ಜಾಗತಿಕ ಬಿಕ್ಕಟ್ಟಿನಿಂದಾಗಿ ಗುಜರಾತ್‌ನ ವಜ್ರ ಉದ್ಯಮವು ಅಡಕತ್ತರಿಗೆ ಸಿಲುಕಿದೆ ಎಂದು ಗುಜರಾತ್‌ನ ವಜ್ರ ಕಾರ್ಮಿಕರ ಒಕ್ಕೂಟ ಹೇಳಿದೆ.

ಉದ್ಯಮದ ಬೆಳವಣಿಗೆಯು ದಿನೇ ದಿನೇ ಕುಸಿಯುತ್ತಿದೆ. ವೆಚ್ಚ ಸರಿದೂಗಿಸುವ ಭಾಗವಾಗಿ ಕಂಪನಿಗಳು ಸಂಬಳ ಕಡಿತ ಮಾಡುತ್ತಿವೆ. ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸುತ್ತಿವೆ. ಇದರಿಂದ ಅವರಿಗೆ ಕೌಟುಂಬಿಕ ನಿರ್ವಹಣೆಗೆ ಹಣವಿಲ್ಲದಂತಾಗಿದೆ. ಕಳೆದ 16 ತಿಂಗಳಲ್ಲಿ 65 ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಒಕ್ಕೂಟದ ಅಧ್ಯಕ್ಷ ಭವೇಶ್ ಟಾಂಕ್ ತಿಳಿಸಿದ್ದಾರೆ.

ಕಾರ್ಮಿಕರ ಆತ್ಮಹತ್ಯೆ ತಡೆಗಟ್ಟುವ ನಿಟ್ಟಿನಲ್ಲಿ ಒಕ್ಕೂಟದಿಂದ ಜುಲೈ 15ರಂದು ಸಹಾಯವಾಣಿ ತೆರೆಯಲಾಗಿದ್ದು, ಇಲ್ಲಿಯವರೆಗೆ 1,600 ಕರೆಗಳನ್ನು ಸ್ವೀಕರಿಸಲಾಗಿದೆ ಎಂದು ಹೇಳಿದ್ದಾರೆ.

ಗುಜರಾತ್‌ನ ಸೂರತ್ ಒರಟು ವಜ್ರಗಳ ಕಟ್ ಮತ್ತು ಪಾಲಿಶ್‌ಗೆ ವಿಶ್ವದಲ್ಲಿಯೇ ಪ್ರಸಿದ್ಧಿ ಪಡೆದಿದೆ. ಇಲ್ಲಿ 2,500ಕ್ಕೂ ಹೆಚ್ಚು ಘಟಕಗಳಿದ್ದು, 10 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಈ ಉದ್ಯಮದಲ್ಲಿದ್ದಾರೆ.

ಕುಸಿತಕ್ಕೆ ಕಾರಣ ಏನು?: ಉಕ್ರೇನ್ ಮತ್ತು ರಷ್ಯಾ, ಇಸ್ರೇಲ್–ಗಾಜಾ ಬಿಕ್ಕಟ್ಟು ಜಾಗತಿಕ ಮಟ್ಟದಲ್ಲಿ ವಜ್ರ ಉದ್ಯಮದ ಮೇಲೆ ಪರಿಣಾಮ ಬೀರಿದೆ. ವಜ್ರದ ಪ್ರಮುಖ ಮಾರುಕಟ್ಟೆಯಾದ ಚೀನಾದಲ್ಲಿ ಬೇಡಿಕೆ ಕುಸಿದಿದೆ. ಜನವರಿಯಿಂದ ಇಲ್ಲಿಯವರೆಗೆ 50 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಒಕ್ಕೂಟ ಹೇಳಿದೆ. ಸಂಬಳ ಕಡಿತದಿಂದಾಗಿ ಉದ್ಯಮದಲ್ಲಿರುವ ಶೇ 30ರಷ್ಟು ಕಾರ್ಮಿಕರಿಗೆ ಮಕ್ಕಳ ಶಾಲಾ ಶುಲ್ಕ ಪಾವತಿಸಲು ಸಮಸ್ಯೆಯಾಗಿದೆ. ಮನೆ ಬಾಡಿಗೆ, ಗೃಹ ಮತ್ತು ವಾಹನ ಸಾಲದ ಮಾಸಿಕ ಕಂತು ಪಾವತಿಗೆ ಪರದಾಡುತ್ತಿದ್ದಾರೆ ಎಂದು ತಿಳಿಸಿದೆ.

‘ಚೀನಾದ ವರ್ತಕರು ನೈಸರ್ಗಿಕ ವಜ್ರಗಳನ್ನು ಖರೀದಿಸುತ್ತಿಲ್ಲ. ಇದರಿಂದ ಈ ಉದ್ಯಮದ ಸ್ಥಿತಿ ತೀವ್ರ ಹದಗೆಟ್ಟಿದೆ’ ಎಂದು ಇಂಡಿಯನ್ ಡೈಮಂಡ್ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷ ದಿನೇಶ್ ನವಾಡಿಯಾ ಹೇಳುತ್ತಾರೆ.

ಬೆಂಬಲ ಬೆಲೆಯಡಿ ಖರೀದಿ ಕೇಂದ್ರ ತೆರೆಯಲು ವಿಳಂಬ

ಹೆಸರುಕಾಳು ದರ ಕುಸಿತ

• ಬಸವರಾಜ ಹವಾಲ್ದಾರ



> ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರ ಆರಂಭಿಸಲು ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಲಾಗಿದೆ
>
> **ವಿ.ಡಿ. ಪಾಟೀಲ,** ಕಾರ್ಯದರ್ಶಿ, ಎಪಿಎಂಸಿ, ಬಾಗಲಕೋಟೆ

ಬಾಗಲಕೋಟೆ: ಸತತವಾಗಿ ಮಳೆ ಸುರಿಯುತ್ತಿರುವುದರಿಂದ ಹೆಸರುಕಾಳು ಬೆಳೆಗೆ ಹಳದಿ ರೋಗ ಕಾಡುತ್ತಿದ್ದು, ಬೆಲೆ ಕುಸಿದಿದೆ. ಇದರಿಂದ ರೈತರು ಕಂಗಾಲಾಗಿದ್ದಾರೆ.

ಬೆಂಬಲ ಬೆಲೆ ಘೋಷಿಸಿದ್ದರೂ ಖರೀದಿ ಕೇಂದ್ರಗಳು ಇನ್ನೂ ಆರಂಭಗೊಂಡಿಲ್ಲ. ಹೀಗಾಗಿ, ಮಾರುಕಟ್ಟೆಯಲ್ಲಿ ಲಭ್ಯವಿರುವ ಬೆಲೆಗೆ ರೈತರು ಹೆಸರುಕಾಳು ಮಾರಾಟ ಮಾಡುವಂತಾಗಿದೆ.

ಬಾಗಲಕೋಟೆ, ಗದಗ, ಯಾದಗಿರಿ, ಧಾರವಾಡ, ಕೊಪ್ಪಳ, ವಿಜಯಪುರ, ರಾಯಚೂರು ಸೇರಿ ವಿವಿಧ ಜಿಲ್ಲೆಗಳಲ್ಲಿ ಹೆಸರುಕಾಳು ಪ್ರಮುಖ ಬೆಳೆಯಾಗಿದೆ. 2.50 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಬೆಳೆಯಲಾಗಿದೆ.

ಬಾಗಲಕೋಟೆ, ಗದಗ, ಯಾದಗಿರಿ, ಹುಬ್ಬಳ್ಳಿ ಸೇರಿ ವಿವಿಧ ಕೃಷಿ ಉತ್ಪನ್ನ ಮಾರುಕಟ್ಟೆಗೆ ಹೆಸರುಕಾಳು ಆವಕ ಆಗುತ್ತಿದೆ. ಕ್ವಿಂಟಲ್‌ಗೆ ₹2,004ರಿಂದ ₹8,400ರ ವರೆಗೆ ಬೆಲೆ ಇದೆ. ಸರಾಸರಿ ಬೆಲೆ ₹5,290 ರಿಂದ ₹7,266 ಇದೆ.

ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಲ್‌ಗೆ ₹8,682 ದರ ನಿಗದಿಪಡಿಸಿದೆ. ಆದರೆ, ಖರೀದಿ ಕೇಂದ್ರ ಇನ್ನೂ ತೆರೆದಿಲ್ಲ ಎಂದು ರೈತರು ದೂರುತ್ತಾರೆ.

‘ಪ್ರತಿ ಎಕರೆಗೆ ನಾಲ್ಕು ಕ್ವಿಂಟಲ್ ಬೆಳೆ ಬರುತ್ತದೆ. ಎಕರೆಗೆ ₹25 ಸಾವಿರ ಖರ್ಚಾಗುತ್ತದೆ. ಬಾಗಲಕೋಟೆ ಎಪಿಎಂಸಿಯಲ್ಲಿ ಹೆಸರುಕಾಳು ಆರಂಭದಲ್ಲಿ ಪ್ರತಿ ಕ್ವಿಂಟಲ್‌ಗೆ ₹8,400 ಮಾರಾಟ ಆಗಿತ್ತು. ಈಗ ₹6 ಸಾವಿರದಿಂದ 8 ಸಾವಿರಕ್ಕೆ ಮಾರಾಟವಾಗುತ್ತಿದೆ. ಕಳೆದ ವರ್ಷ ಪ್ರತಿ ಕ್ವಿಂಟಲ್‌ಗೆ ₹10 ಸಾವಿರ ಬೆಲೆ ಸಿಕ್ಕಿತ್ತು’ ಎಂದು ತೆಗ್ಗಿಯ ರೈತ ಚಂದ್ರಶೇಖರ ಕಾಳನ್ನವರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೆಳೆ ಯಾವಾಗ ಬರುತ್ತದೆ ಎಂಬುದು ಅಧಿಕಾರಿಗಳಿಗೆ ಗೊತ್ತು. ವ್ಯಾಪಾರಿಗಳು ಖರೀದಿಸಿದ ನಂತರವೇ ಬೆಂಬಲ ಬೆಲೆ ಕೇಂದ್ರಗಳನ್ನು ತೆರೆಯಲಾಗುತ್ತದೆ. ಇದರಿಂದ ರೈತರಿಗೆ ಪ್ರಯೋಜನ ಆಗುವುದಿಲ್ಲ’ ಎಂದರು.

ಸೆ. 9ಕ್ಕೆ ಜಿಎಸ್‌ಟಿ ಮಂಡಳಿ ಸಭೆ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 9ರಂದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯ 54ನೇ ಸಭೆ ನಡೆಯಲಿದೆ.

ಜಿಎಸ್‌ಟಿ ಅಡಿ ರಚಿಸಿರುವ ನಾಲ್ಕು ಸ್ಲ್ಯಾಬ್‌ಗಳ ದರ ಪರಿಷ್ಕರಿಸುವಂತೆ ನಾಗರಿಕರು ಮತ್ತು ವರ್ತಕರು ಹಲವು ದಿನಗಳಿಂದ ಒತ್ತಾಯಿಸುತ್ತಿದ್ದಾರೆ. ಈ ತೆರಿಗೆ ಪ್ರಮಾಣ ಸರಳಗೊಳಿಸುವ ಸಂಬಂಧ ಪರಿಶೀಲನೆ ನಡೆಸಲು ಏಳು ಸಚಿವರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ.

ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಇದರ ಸಂಚಾಲಕರಾಗಿದ್ದಾರೆ. ದರ ಸರಳೀಕರಣ ಹಾಗೂ ಯಾವ ವಿಭಾಗಗಳಿಗೆ ವಿನಾಯಿತಿ ಸೌಲಭ್ಯ ನೀಡಬೇಕು ಎಂಬ ಬಗ್ಗೆ ಸಮಿತಿಯು ಸಭೆಯಲ್ಲಿ ವರದಿ ಮಂಡಿಸುವ ನಿರೀಕ್ಷೆಯಿದೆ. ಜಿಎಸ್‌ಟಿ ವರಮಾನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸಮಿತಿಯು ಅಧ್ಯಯನ ನಡೆಸಿ ವರದಿ ಸಲ್ಲಿಸಲಿದೆ.

ಸಭೆಯಲ್ಲಿ ಸಮಿತಿಯು ಕರಡು ವರದಿ ಮಂಡಿಸಿದರೂ ಅದರ ಬಗ್ಗೆ ಚರ್ಚಿಸಲಾಗುವುದು ಎಂದು ಜೂನ್ 23ರಂದು ನಡೆದ ಸಭೆಯಲ್ಲಿ ಸಚಿವೆ ನಿರ್ಮಲಾ ಹೇಳಿದ್ದರು.

ನಕಲಿ ಕಂಪನಿಗಳ ವಿರುದ್ಧ ಕಾರ್ಯಾಚರಣೆ



ನವದೆಹಲಿ (ಪಿಟಿಐ): ದೇಶದಾದ್ಯಂತ ಆಗಸ್ಟ್ 16ರಿಂದ ಅಕ್ಟೋಬರ್ 15ರ ವರೆಗೆ ಜಿಎಸ್‌ಟಿ ಅಧಿಕಾರಿಗಳು ನಕಲಿ ಕಂಪನಿಗಳ ನೋಂದಣಿ ವಿರುದ್ಧ ಎರಡನೇ ಹಂತದ ವಿಶೇಷ ಕಾರ್ಯಾಚರಣೆ ನಡೆಸಲಿದ್ದಾರೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ) ತಿಳಿಸಿದೆ.

ಕಳೆದ ವರ್ಷದ ಮೇ ತಿಂಗಳಿನಲ್ಲಿ ನಡೆದ ಮೊದಲ ಹಂತದ ಕಾರ್ಯಾಚರಣೆಯಲ್ಲಿ 22 ಸಾವಿರ ನಕಲಿ ಕಂಪನಿಗಳನ್ನು ಪತ್ತೆ ಹಚ್ಚಲಾಗಿತ್ತು. ಒಟ್ಟು ₹24 ಸಾವಿರ ಕೋಟಿ ವಂಚನೆ ಬೆಳಕಿಗೆ ಬಂದಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳನ್ನು ಒಳಗೊಂಡ ರಾಷ್ಟ್ರೀಯ ಸಮನ್ವಯ ಸಮಿತಿಯಿಂದ ಈ ಕಾರ್ಯಾಚರಣೆ ನಡೆಯಲಿದೆ.

ಜಿಎಸ್‌ಟಿ ಅಡಿ ವರ್ತಕರಿಗೆ ಗುರುತಿನ ಸಂಖ್ಯೆ (ಜಿಎಸ್‌ಟಿಐಎನ್) ನೀಡಲಾಗುತ್ತದೆ. ನಕಲಿ ಜಿಎಸ್‌ಟಿಐಎನ್ ಬಗ್ಗೆ ಅಧಿಕಾರಿಗಳು ತಪಾಸಣೆ ನಡೆಸಲಿದ್ದಾರೆ. ಕಂಪನಿಗಳು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆಯಲು ನಕಲಿ ಇನ್‌ವಾಯ್ಸ್ ಸಲ್ಲಿಸುತ್ತವೆ. ಈ ಬಗ್ಗೆ ತಪಾಸಣೆ ನಡೆಸಿ ತಪ್ಪಿತಸ್ಥರಿಂದ ತೆರಿಗೆ ವಸೂಲಿಗೆ ಕ್ರಮಕೈಗೊಳ್ಳಲಾಗುವುದು ಎಂದು ಮಂಡಳಿಯು ತಿಳಿಸಿದೆ.

ಎಥೆನಾಲ್ ಬೆಲೆ ಏರಿಕೆಗೆ ಕೇಂದ್ರ ಚಿಂತನೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 2025–26ನೇ ಆರ್ಥಿಕ ವರ್ಷದೊಳಗೆ ಪೆಟ್ರೋಲ್‌ನೊಂದಿಗೆ ಎಥೆನಾಲ್ ಮಿಶ್ರಣದ ಗುರಿಯನ್ನು ಶೇ 20ರಷ್ಟಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ.

ಹಾಗಾಗಿ, ಪ್ರಸಕ್ತ ಸಕ್ಕರೆ ಮಾರುಕಟ್ಟೆ ಋತುವಿನಲ್ಲಿ (ನವೆಂಬರ್–ಅಕ್ಟೋಬರ್) ಎಥೆನಾಲ್ ಬೆಲೆಯನ್ನು ಏರಿಕೆ ಮಾಡಲು ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.


ದರ ಪರಿಷ್ಕರಣೆ ಬಗ್ಗೆ ಈಗಾಗಲೇ ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಜಂಟಿ ಕಾರ್ಯದರ್ಶಿ ನೇತೃತ್ವದ ಸಮಿತಿಯು ಒಂದು ಸುತ್ತಿನ ಮಾತುಕತೆ ನಡೆಸಿದೆ.

2022–23ರ ಮಾರುಕಟ್ಟೆ ವರ್ಷದಿಂದ ಸರ್ಕಾರವು ಎಥೆನಾಲ್ ಬೆಲೆಯನ್ನು ಪರಿಷ್ಕರಿಸಿಲ್ಲ. ಪ್ರಸ್ತುತ ಕಬ್ಬಿನ ಹಾಲಿನಿಂದ ಉತ್ಪಾದಿಸುವ ಎಥೆನಾಲ್ ಬೆಲೆ ಪ್ರತಿ ಲೀಟರ್‌ಗೆ ₹65.61 ಇದೆ. ಬಿ–ಹೆವಿ ಮತ್ತು ಸಿ–ಹೆವಿ ಮೊಲಾಸಿಸ್‌ನಿಂದ (ಕಾಕಂಬಿ) ಉತ್ಪಾದಿಸುವ ಎಥೆನಾಲ್ ದರವು ಕ್ರಮವಾಗಿ ₹60.73 ಮತ್ತು ₹56.28 ಇದೆ.

ಜುಲೈ ಅಂತ್ಯಕ್ಕೆ ಪೆಟ್ರೋಲ್‌ನೊಂದಿಗೆ ಎಥೆನಾಲ್ ಮಿಶ್ರಣ ಪ್ರಮಾಣವು ಶೇ 13.3ರಷ್ಟಿದೆ.

ದೇಶದ ಒಟ್ಟು ಎಥೆನಾಲ್ ಉತ್ಪಾದನಾ ಸಾಮರ್ಥ್ಯವು 1,589 ಕೋಟಿ ಲೀಟರ್ ಆಗಿದೆ. 2023–24ರಲ್ಲಿ ತೈಲ ಕಂಪನಿಗಳು 505 ಕೋಟಿ ಲೀಟರ್ ಎಥೆನಾಲ್ ಖರೀದಿಸಿವೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮಹೇಶ್, ಬೆಂಗಳೂರು.

• **ಪ್ರಶ್ನೆ: 2004ರಲ್ಲಿ ನನ್ನ ಪತ್ನಿಯು ₹3 ಲಕ್ಷಕ್ಕೆ ಆಸ್ತಿಯೊಂದನ್ನು ಖರೀದಿಸಿದ್ದರು. ಪ್ರಸ್ತುತ ಅದರ ಮಾರುಕಟ್ಟೆ ಮೌಲ್ಯವು ಸುಮಾರು ₹1 ಕೋಟಿ ಆಗಿದೆ. ಅವರು ಸರ್ಕಾರಿ ಸ್ವಾಮ್ಯದ ಉದ್ದಿಮೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಶೇ 30ರ ಆದಾಯ ತೆರಿಗೆ ಶ್ರೇಣಿಯಲ್ಲಿ ಬರುತ್ತಾರೆ.**

ಈ ಆಸ್ತಿ ಮಾರಾಟ ಮಾಡುವ ಕುರಿತು ನನಗೆ ಕೆಲವು ಪ್ರಶ್ನೆಗಳಿವೆ;

ಇತ್ತೀಚಿನ ಆದಾಯ ತೆರಿಗೆ ಮಾರ್ಗಸೂಚಿ ಪ್ರಕಾರ ಲಾಭದ ಮೇಲೆ ಶೇ 12.50 ದರದಲ್ಲಿ (ಹಣದುಬ್ಬರ ಸೂಚ್ಯಂಕ ರಹಿತ ಲಾಭ) ಅಥವಾ ಶೇ 20ರ ದರದಲ್ಲಿ (ಹಣದುಬ್ಬರ ಸೂಚ್ಯಂಕ ಸಹಿತ ಲಾಭ) ತೆರಿಗೆ ವಿಧಿಸಲಾಗುವುದೇ? ಆ ಮಾರಾಟದ ಮೊತ್ತವನ್ನು ಅವರ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ತೋರಿಸಬೇಕೇ ಮತ್ತು ಇದಕ್ಕೆ ಹೆಚ್ಚುವರಿ ಶೇ 30ರಷ್ಟು ತೆರಿಗೆ ವಿಧಿಸಲಾಗುತ್ತದೆಯೇ?

ಮಾರಾಟದ ಮೊತ್ತವನ್ನು ಯಾವುದೇ ತೆರಿಗೆ ಉಳಿತಾಯ ಸಾಧನಗಳಲ್ಲಿ ಹೂಡಿ ತೆರಿಗೆ ಉಳಿಸುವ ಅವಕಾಶಗಳಿವೆಯೇ? ಈ ವ್ಯವಹಾರದಲ್ಲಿ ತೆರಿಗೆ ಕಡಿತ ಅನ್ವಯವಾಗುತ್ತದೆಯೇ? ತೆರಿಗೆ ಕಡಿತವನ್ನು ಯಾರು ಮಾಡಬೇಕು? ಮಾರಾಟಗಾರರೆ ಅಥವಾ ಕೊಳ್ಳುವವರೇ? ಕಡಿತ ಮಾಡಬೇಕಾದ ತೆರಿಗೆ ದರ ಎಷ್ಟು?

ಉತ್ತರ: ನಿಮ್ಮ ಆಸ್ತಿಯನ್ನು ಈಗ ಮಾರಾಟ ಮಾಡುವ ಉದ್ದೇಶ ಹೊಂದಿರುವುದರಿಂದ 2024ರ ಕೇಂದ್ರ ಬಜೆಟ್ ಘೋಷಣೆಗಳು ಅನ್ವಯವಾಗುತ್ತವೆ. ಇದರ ಉದ್ದೇಶಿತ ಹೊಸ ಪ್ರಸ್ತಾವದಂತೆ ನೀವು ಈಗಾಗಲೇ 2024ರ ಜುಲೈ 23ರ ಮೊದಲು ಆಸ್ತಿ ಖರೀದಿಸಿರುವುದರಿಂದ ನಿಮಗೆ ಎರಡು ಆಯ್ಕೆಗಳಲ್ಲಿ ಲಾಭದಾಯಕ ಆಯ್ಕೆಯನ್ನು ಪರಿಗಣಿಸುವ ಅವಕಾಶವಿದೆ.

ಮೊದಲನೆಯದು ದೀರ್ಘಾವಧಿ ತೆರಿಗೆ ಲೆಕ್ಕ ಹಾಕುವಾಗ ಹಣದುಬ್ಬರ ಸೂಚ್ಯಂಕ ಆಧರಿಸಿ ಈ ಹಿಂದೆ ಹೇಗಿತ್ತೋ ಅದೇ ರೀತಿ ಆಸ್ತಿಯ ಮೌಲ್ಯವನ್ನು ಪರಿಗಣಿಸಿ ತೆರಿಗೆ ಲೆಕ್ಕ ಹಾಕಬಹುದಾಗಿದೆ. ಬಳಿಕ ಲಾಭದ ಮೇಲೆ ಶೇ 20ರಷ್ಟು ತೆರಿಗೆ ಪಾವತಿಸಬೇಕಿದೆ.

ಎರಡನೆಯದು, ಹೊಸ ಬದಲಾವಣೆಯಂತೆ ಮಾರಾಟ ಮೌಲ್ಯ ಹಾಗೂ ಮೂಲ ಅಸಲು ಇವುಗಳ ನಡುವಿನ ಲಾಭದ ಮೇಲೆ ಶೇ 12.5ರ ದರದಲ್ಲಿ ತೆರಿಗೆ ಪಾವತಿಸಬೇಕಿದೆ.

ಒಂದು ವೇಳೆ ವಾಸವಿರುವ ಮನೆ ಮಾರಾಟ ಮಾಡಿ ಇನ್ನೊಂದು ಮನೆ ಖರೀದಿ ಮಾಡುವುದಿದ್ದರೆ ದೀರ್ಘಾವಧಿ ಬಂಡವಾಳ ಲಾಭದ ಮೇಲೆ ತೆರಿಗೆ ವಿನಾಯಿತಿ ಇದೆ. ಈ ಸಂದರ್ಭದಲ್ಲಿ ನಿಮ್ಮ ಲಾಭಾಂಶ ಏನಿದೆಯೋ ಆ ಮೊತ್ತಕ್ಕೆ ಕಡಿಮೆ ಆಗದ ರೀತಿ ಹೂಡಿಕೆ ಮಾಡಿದ್ದರೆ ಸೆಕ್ಷನ್ 54ರ ಅಡಿ ಸಂಪೂರ್ಣ ವಿನಾಯಿತಿ ಸಿಗುತ್ತದೆ. ಇಲ್ಲವಾದರೆ ಲಾಭ ಹಾಗೂ ಹೂಡಿಕೆಯಲ್ಲಿ ಏನು ವ್ಯತ್ಯಾಸವಿದೆಯೋ ಆ ಮೊತ್ತವು ತೆರಿಗೆಗೊಳಪಡುತ್ತದೆ.

ಮಾರಾಟ ಮಾಡುವ ಆಸ್ತಿ ಕೇವಲ ನಿವೇಶನವಾಗಿದ್ದು, ನಿಮ್ಮ ಮುಂದಿನ ಹೂಡಿಕೆ ವಾಸಯೋಗ್ಯ ಮನೆ ನಿರ್ಮಾಣ ಅಥವಾ ಖರೀದಿಗೆ ಉಪಯೋಗಿಸುವುದಿದ್ದರೆ ಸೆಕ್ಷನ್ 54ಎಫ್ ಅಡಿ ಮಾರಾಟ ಮೌಲ್ಯ ಹಾಗೂ ಹೂಡಿಕೆಯ ಮೌಲ್ಯದ ಅನುಪಾತದಲ್ಲಿ ತೆರಿಗೆ ವಿನಾಯಿತಿ ಸಿಗುತ್ತದೆ. ಅಲ್ಲದೆ, ಸೆಕ್ಷನ್ 54ಇಸಿ ಅಡಿ ಕ್ಯಾಪಿಟಲ್ ಗೇನ್ಸ್ (ಬಂಡವಾಳ ಗಳಿಕೆ) ಬಾಂಡ್‌ಗಳಲ್ಲೂ ನಿಗದಿತ ಸಂದರ್ಭಗಳಲ್ಲಿ ಹೂಡಿಕೆಗೂ ಅವಕಾಶವಿದೆ.

ಸೆಕ್ಷನ್ 194ಐಎ ಪ್ರಕಾರ ಭೂಮಿ ಖರೀದಿ ಮಾಡುವ ವ್ಯಕ್ತಿ, ಮಾರಾಟಗಾರರ ಪ್ಯಾನ್ ಸಂಖ್ಯೆಯಡಿ ಶೇ 1ರ ದರದಲ್ಲಿ ತೆರಿಗೆ ಕಡಿತ ಮಾಡಿ ಉಳಿದ ಮೊತ್ತವನ್ನು ಪಾವತಿಸಬೇಕಾಗುತ್ತದೆ. ಆದರೆ, ಈ ನಿಯಮ ₹50 ಲಕ್ಷಕ್ಕೂ ಅಧಿಕ ಮೌಲ್ಯದ ಯಾವುದೇ ಸ್ಥಿರಾಸ್ತಿ ವ್ಯವಹಾರಕ್ಕೆ ಮಾತ್ರ ಅನ್ವಯಿಸುತ್ತದೆ.

ಇನ್ನು ವೇತನಕ್ಕೆ ಗರಿಷ್ಠ ತೆರಿಗೆ ದರ ಅನ್ವಯಿಸಿದರೂ ಆಸ್ತಿ ಮಾರಾಟಕ್ಕೆ ಸಂಬಂಧಿಸಿದ ಲಾಭಕ್ಕೆ ತೆರಿಗೆ ಕಾಯ್ದೆಯಡಿ ಪ್ರತ್ಯೇಕ ದರ ಅನ್ವಯಿಸಲಿದೆ. ಇದರಿಂದ ಆ ದರಗಳನ್ನೇ ಪರಿಗಣಿಸಲಾಗುತ್ತದೆಯೆ ಹೊರತು ಒಂದೇ ಆದಾಯಕ್ಕೆ ಎರಡು ಬಾರಿ ತೆರಿಗೆ ಇರುವುದಿಲ್ಲ.

ಪರಮೇಶ್ವರಪ್ಪ, ಹುಬ್ಬಳ್ಳಿ.

• **ಪ್ರಶ್ನೆ: ನಾನು ಹಿರಿಯ ನಾಗರಿಕ (ವಯಸ್ಸು 65). 1984ರಲ್ಲಿ ನಮ್ಮ ತಂದೆಯವರು ₹25,000 ಕೊಟ್ಟು ತೆಗೆದುಕೊಂಡ ಜಾಗದಲ್ಲಿ 1987ರಲ್ಲಿ ಸುಮಾರು ₹2 ಲಕ್ಷ ವೆಚ್ಚದಲ್ಲಿ ಮನೆ ಕಟ್ಟಿಸಿದ್ದೇವೆ. 2020ರಲ್ಲಿ ಸುಮಾರು ₹5 ಲಕ್ಷ ವೆಚ್ಚದಲ್ಲಿ ಮೇಲ್ಮಹಡಿ ಕಟ್ಟಿಸಿದ್ದೇವೆ. ಈಗ ಮಾರಾಟ ಮಾಡಿದರೆ ಸುಮಾರು ₹1.25 ಕೋಟಿ ಲಭಿಸಲಿದೆ. ನಾನು ಅಜಮಾಸು ಎಷ್ಟು ದೀರ್ಘಕಾಲಿನ ಲಾಭದ ತೆರಿಗೆ ಕಟ್ಟಬೇಕಾಗುತ್ತದೆ. ತೆರಿಗೆ ಕಡಿಮೆ ಮಾಡಲು ಯಾವ ರೀತಿ ಪರಿಹಾರಗಳಿವೆ. ₹50 ಲಕ್ಷದವರೆಗೆ ಠೇವಣಿ ಇಡುವ ಯೋಜನೆ ಇದೆಯೇ? ಒಂದು ವೇಳೆ ನಗರ ಮಿತಿಯಿಂದ 8 ಕಿ.ಮೀ ಒಳಗಡೆ ಕೃಷಿ ಜಮೀನು ಖರೀದಿಸಿ ಫಾರಂ ಹೌಸ್ ಕಟ್ಟಿಸಿದರೆ ತೆರಿಗೆ ಉಳಿಸಬಹುದೇ?**

ಉತ್ತರ: ಈ ಮೇಲಿನ ಪ್ರಶ್ನೆಯಲ್ಲಿ ಈಗಾಗಲೇ ಉಲ್ಲೇಖಿಸಿರುವಂತೆ ನಿಮ್ಮ ತೆರಿಗೆಯನ್ನು ಲೆಕ್ಕ ಹಾಕಿಕೊಳ್ಳಬೇಕಾಗುತ್ತದೆ. ಹೆಚ್ಚುವರಿಯಾಗಿ ನೀವು ಗಮನಿಸಬೇಕಾದ ಅಂಶವೆಂದರೆ ನಿಮ್ಮ ಆಸ್ತಿಯ ಮೌಲ್ಯವು 2000ರ ಏಪ್ರಿಲ್ 1ಕ್ಕೆ ಎಷ್ಟಿತ್ತು ಎಂಬುದನ್ನು ಗೊತ್ತು ಮಾಡಿಕೊಳ್ಳಬೇಕು. ಅದರ ಮೇಲೆ ಸೂಚ್ಯಂಕ ಆಧರಿಸಿ ಲಾಭ ಲೆಕ್ಕ ಹಾಕಬೇಕು. ಅಲ್ಲದೆ, ಹೆಚ್ಚುವರಿ ಕಟ್ಟಡ ನಿರ್ಮಾಣಕ್ಕೂ ಇಂತಹ ಸೂಚ್ಯಂಕ ಆಧಾರಿತ ಲಾಭ ಲೆಕ್ಕ ಹಾಕಬೇಕು. ನಿಮಗೆ ಈ ಹಿಂದಿನಿಂದ ಚಾಲ್ತಿಯಲ್ಲಿರುವ ಹಣದುಬ್ಬರ ಸೂಚ್ಯಂಕ ಆಧಾರಿತ ತೆರಿಗೆ ಲೆಕ್ಕದ ಅನ್ವಯ ಹೆಚ್ಚುವರಿ ತೆರಿಗೆ ಬರುವುದಿದ್ದರೆ ಶೇ 12.50ರ ದರದಲ್ಲಿ ಬರುವ ಲಾಭಕ್ಕೆ ತೆರಿಗೆ ಕಟ್ಟಬಹುದು.

ನೀವು ಮನೆ ಮಾರಾಟ ಮಾಡುತ್ತಿರುವ ಕಾರಣ ಹೊಸ ಮನೆಯ ನಿರ್ಮಾಣ, ಖರೀದಿ, ಬಾಂಡ್‌ಗಳ ಖರೀದಿ ಇತ್ಯಾದಿಗಳಲ್ಲಿ ಹೂಡಿಕೆ ಮಾಡುವುದಕ್ಕೆ ಅವಕಾಶ ಇದೆ. ಕೃಷಿ ಭೂಮಿ ಮೇಲಿನ ಹೂಡಿಕೆಗೆ ತೆರಿಗೆ ಲಾಭ ಬರಲು ಕೃಷಿ ಭೂಮಿಯನ್ನಷ್ಟೇ ಮಾರಾಟ ಮಾಡಿ ಮರು ಹೂಡಿಕೆ ಮಾಡಿರಬೇಕು. ನಿಮ್ಮ ವಿಚಾರದಲ್ಲಿ ಮಾರಾಟ ಮಾಡುವ ಆಸ್ತಿ ಮನೆಯಾಗಿರುವುದರಿಂದ ಈ ಪ್ರಯೋಜನ ಸಿಗುವುದಿಲ್ಲ.

(ವಿ.ಸೂ: ಹೊಸ ನಿಯಮಗಳು ಗೆಜೆಟ್‌ನಲ್ಲಿ ಪ್ರಕಟವಾಗಲು ಕೆಲವು ದಿನ ಕಾಯಬೇಕಿದೆ. ಅದರಲ್ಲಿ ಯಾವುದೇ ಬದಲಾವಣೆಗಳಿದ್ದರೆ ಈ ವಿಚಾರಗಳನ್ನು ಮರು ಪರಿಶೀಲಿಸಬೇಕಾಗಬಹುದು)

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.

ಇ-ಮೇಲ್: businessdesk@prajavani.co.in

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಸಾಗರ		ಸಿದ್ದಾಪುರ	
ಕೋಕ	18000-28500	ಬಿಳಿಗೋಟು	13214-24469	ಬಿಳಿಗೋಟು	24699-29209
ಹೊಸತು	28500-38500	ಚಾಲಿ	28599-32300	ಚಾಲಿ	32509-35699
ಹಳತು	38500-47000	ಕೋಕ	11214-23899	ಕೋಕ	23699-25899
ಕಾರ್ಕಳ		ರಾಶಿ	38099-49509	ಕೆಂಪುಗೋಟು	25319-26319
ಹೊಸತು	25000-39000	ಸಿಪ್ಪೆಗೋಟು	17599-17670	ರಾಶಿ	44019-47899
ಹಳತು	30000-47000	ಶಿವಮೊಗ್ಗ		ಶಿರಸಿ	
ಚಿತ್ರದುರ್ಗ		ಬೆಟ್ಟೆ	46369-54699	ಬೆಟ್ಟೆ	32330-44001
ಅಪಿ	47839-48269	ಗೊರಬಲು	16469-36069	ಬಿಳಿಗೋಟು	22100-30600
ಬೆಟ್ಟೆ	34119-34589	ರಾಶಿ	28199-49899	ಚಾಲಿ	32108-37001
ಕೆಂಪುಗೋಟು	28610-29099	ಸರಕು	52900-83986	ಕೆಂಪುಗೋಟು	23089-27521
ರಾಶಿ	47329-47779				

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹239
ಆರ್‌ಎಸ್‌ಎಸ್-5	₹230
ಗುಡ್ ಲಾಟ್	₹219

(ಪ್ರತಿ ಕೆ.ಜಿಗೆ)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3000-3800
ಮಧ್ಯಮ	₹2500-3000
ಸಣ್ಣ	₹2000-2500



ರಕ್ಷಾ ಬಂಧನ ರಕ್ಷಾ ಬಂಧನ ಸಂಭ್ರಮದ ಅಂಗವಾಗಿ ಮಂಗಳವಾರ ಬಿಹಾರದ ಪಟ್ನಾ ಶಾಲೆಯ ವಿದ್ಯಾರ್ಥಿನಿಯರು ಯೋಧರಿಗೆ ರಾಖಿ ಕಟ್ಟಿದರು –ಪಿಟಿಐ ಚಿತ್ರ

ಸೆನ್ಸೆಕ್ಸ್ ಇಳಿಕೆ ಅಬಾಧಿತ

ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಮಂಗಳವಾರವೂ ದೇಶದ ಷೇರುಪೇಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು.

ಎಚ್‌ಡಿಎಫ್‌ಸಿ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಐಟಿಸಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಷೇರು ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು. ಜೊತೆಗೆ, ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಳವೂ ಇದಕ್ಕೆ ನೆರವಾಯಿತು. ಹೂಡಿಕೆದಾರರ ಸಂಪತ್ತು ₹4.52 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 692 ಅಂಶ (ಶೇ 0.87ರಷ್ಟು) ಕುಸಿದಿದ್ದು, 78,956 ಅಂಶಗಳಲ್ಲಿ ವಹಿವಾಟನ್ನು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 208 ಅಂಶ ಕುಸಿದಿದ್ದು, 24,139 ಅಂಶಗಳಲ್ಲಿ ಸ್ಥಿರಗೊಂಡಿತು.

‘ಜೂನ್‌ನಲ್ಲಿ ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಐದು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ. ಇದು ತಯಾರಿಕಾ ವಲಯದ ಮೇಲೆ ಪರಿಣಾಮ ಬೀರಲಿದೆ. ಮತ್ತೊಂದೆಡೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುತ್ತಿದ್ದಾರೆ. ಹಾಗಾಗಿ, ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ’ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೆನ್ಸೆಕ್ಸ್ ಗುಚ್ಛದಲ್ಲಿ ಬಜಾಜ್ ಫಿನ್‌ಸರ್ವ್, ಎಸ್‌ಬಿಐ, ಟಾಟಾ ಮೋಟರ್ಸ್, ಪವರ್ ಗ್ರಿಡ್ ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್ ಷೇರಿನ ಮೌಲ್ಯದಲ್ಲಿ ಕುಸಿತವಾಗಿದೆ. ಟೈಟನ್, ಎಚ್‌ಸಿಎಲ್ ಟೆಕ್, ನೆಸ್ಲೆ ಇಂಡಿಯಾ, ಸನ್ ಫಾರ್ಮಾ, ರಿಲಯನ್ಸ್ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಅದಾನಿ ಸಮೂಹದ 7 ಕಂಪನಿಗಳ ಷೇರಿನ ಮೌಲ್ಯ ಇಳಿಕೆ: ಅದಾನಿ ಸಮೂಹದ 10 ಕಂಪನಿಗಳ ಪೈಕಿ 7 ಕಂಪನಿಗಳ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಅದಾನಿ ವಿಲ್ಮರ್ (ಶೇ 2.37), ಅದಾನಿ ಎಂಟರ್‌ಪ್ರೈಸಸ್ (ಶೇ 1.92), ಅಂಬುಜಾ ಸಿಮೆಂಟ್ಸ್ (ಶೇ 1.86), ಅದಾನಿ ಪೋರ್ಟ್ಸ್ (ಶೇ 1.24), ಎಸಿಸಿ (ಶೇ 0.54), ಅದಾನಿ ಪವರ್ (ಶೇ 0.20) ಮತ್ತು ಎನ್‌ಡಿಟಿವಿ (ಶೇ 0.20) ಷೇರಿನ ಮೌಲ್ಯ ಕುಸಿದಿದೆ.

ಅದಾನಿ ಟೋಟಲ್ ಗ್ಯಾಸ್ (ಶೇ 1.94), ಅದಾನಿ ಗ್ರೀನ್ ಎನರ್ಜಿ (ಶೇ 1.38) ಹಾಗೂ ಅದಾನಿ ಎನರ್ಜಿ ಸಲ್ಯೂಷನ್ಸ್ (ಶೇ 0.70) ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯ ಇಳಿಕೆ: ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯ ಶೇ 3.5ರಷ್ಟು ಇಳಿಕೆಯಾಗಿದೆ. ಇದರಿಂದ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯದಲ್ಲಿ (ಎಂ–ಕ್ಯಾಪ್) ₹42,206 ಕೋಟಿ ಕರಗಿದೆ. ಒಟ್ಟು ಎಂ–ಕ್ಯಾಪ್ ₹12.21 ಲಕ್ಷ ಕೋಟಿ ಆಗಿದೆ.

ಮುಂಬೈ ಧಾರಣೆ (ಶೇಂಗಾ)

13-08-2024

ಜಾವಾ 70/80(ಹೊಸ)	11600-11700
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10200-10300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	885 (887)
ಪಾಮ್ ವಾರದ ಡೆಲಿವರಿ	911 (913)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹70,100 (69,700)

ಬೆಳ್ಳಿ ಕೆ.ಜಿ ₹80,600 (81,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9100-10260
ತಿಪಟೂರು	₹9700-10000
ತುರುವೇಕೆರೆ	₹9900-10200

ವಿನಿಮಯ ದರ

$ ಡಾಲರ್	83.97
£ ಪೌಂಡ್	107.40
€ ಯುರೊ	91.67
¥ ಯೆನ್ (100ಕ್ಕೆ)	57

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers

ಕವಿ ಲಾಜಿಸ್ಟಿಕ್ಸ್: ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ, ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9886683188/ 9738421001

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಹಿರಿಯೂರು ಸಮೀಪದ ಕೃಷಿ ಭೂಮಿಗೆ ನೋಡಿಕೊಳ್ಳಲು ಕುಟುಂಬ ಬೇಕು. ವಾಸದ ವ್ಯವಸ್ಥೆ ಪೂರೈಸಲಾಗುತ್ತದೆ. ತಿಂಗಳಿಗೆ ರೂ. 15000 ನೀಡಲಾಗುತ್ತದೆ. ಸಂಪರ್ಕಿಸಿ: 8123780770

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- . ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವೈಯಕ್ತಿಕ

Change of Name

CHANGE OF NAME
I, SHASHIKUMAR R.H. GOWDA S/o Late.R.K.Honnegowda, residing at Door No. 23, 3rd Main, Yadavagiri, Mysore - 570020 have changed my name from "SHASHIKUMAR R.H." to "SHASHIKUMAR R.H. GOWDA", before Sri.Shivakumara, Advocate & Notary, Mysore, as per the affidavit Dated 13.08.2024.
Sd/- SHASHIKUMAR R.H. GOWDA

ಪ್ರವಾಸ

Travel

18 ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ 10 ದೇಶಗಳು ವಿಮಾನದರ ವೀಸಾ ಪ್ರವೇಶದರ ಊಟ,ವಸತಿ ತೆರಿಗೆ ಟಿಪ್ಸ್ ಟೋಲ್ ವಿಮೆದರ ಟೂರ್ ಮ್ಯಾನೇಜರ್ ಬೆಂಗಳೂರಿನಿಂದ ಬೆಂಗಳೂರಿನ ತನಕ ಎಲ್ಲಾ ಸೇರಿರುತ್ತದೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9880079644 9900080793 9900093613

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 4 ದಿನಗಳು. 12.09.2024 ನವಗ್ರಹ ದೇವಸ್ಥಾನಗಳು ತಂಜಾವೂರು ಕುಂಭಕೋಣ ಶ್ರೀರಂಗಂ,ಚಿದಂಬರಂ ತಿರುನಲ್ಲಾರು ಇತ್ಯಾದಿ 18 ಕ್ಷೇತ್ರಗಳು 6500. 24.11.2024 ಗುಜರಾತ್ ಮಧ್ಯಪ್ರದೇಶ ಪ್ರವಾಸ. 9448390735 9449721678

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply


ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೂರನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಜಯಲಕ್ಷ್ಮಮ್ಮ (ನಿಧನ: 14–08–2021)
ಡಿ. ಕೆ. ಎಸ್. ರಾಮೇಗೌಡರು
ನಿರ್ದೇಶಕರು ದಿ ಸಿಟಿಜನ್ ಕೋ. ಆಪರೇಟಿವ್ ಬ್ಯಾಂಕ ಲಿ., ನಿರ್ದೇಶಕರು ಸತ್ಯನಾರಾಯಣ ಹೌಸಿಂಗ್ ಸೊಸೈಟಿ (ನಿವೃತ್ತ ಹಿರಿಯ ಟೆಕ್ನಿಕಲ್ ಅಧಿಕಾರಿ ಸಿಎಮ್‌ಟಿಐ) (ನಿಧನ: 22–10–2021)
ಅಮ್ಮ, ಅಪ್ಪ ಕಳೆದ ಅನುದಿನವೂ, ಅನುಕ್ಷಣವೂ ನಿಮ್ಮ ನೆನಪಿಗೆ ಅರ್ಪಣೆ. ಮಿಡಿದ ಪ್ರತಿ ಕಂಬನಿಯೂ ನಿಮ್ಮ ಪ್ರೀತಿ ವಾತ್ಸಲ್ಯಕ್ಕೆ ಸಮರ್ಪಣೆ.
ಇಂತಿ ದುಃಖತಪ್ತರು: ಶ್ರೀಮತಿ ಕೆ.ಆರ್. ನಾಗರತ್ನ ಮತ್ತು ಶ್ರೀ ಕೆ. ಶಿವಣ್ಣ ಶ್ರೀಮತಿ ಕೆ.ಆರ್. ಭಾರತಿ ಮತ್ತು ಶ್ರೀ ಜಿ.ಎಸ್. ಲೋಕೇಶ್ ಶ್ರೀಮತಿ ಕೆ.ಆರ್. ಭಾಮಿನಿ ಮತ್ತು ಶ್ರೀ ಎಸ್. ಆರ್. ಪ್ರಕಾಶ್ ಹಾಗೂ ಮೊಮ್ಮಕ್ಕಳು.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ವಿ.ಸಿ.ರಾಜು
ಮರಣ–03.08.2024
ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ ಪ್ರಾಂಶುಪಾಲರು,ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗ ವಿವೇಕಾನಂದ ಶಾಲಾ ಕಾಲೇಜುಗಳು ಬೆಂಗಳೂರು-560055

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ಯಾರಿಸ್‌ನಲ್ಲಿ 28ರಿಂದ ಪ್ಯಾರಾಲಿಂಪಿಕ್ಸ್ • ಭಾರತದಿಂದ 84 ಅಥ್ಲೀಟ್‌ಗಳ ದಂಡು ಭಾಗಿ

‘25ಕ್ಕೂ ಅಧಿಕ ಪದಕಗಳ ಗುರಿ’


ಜೈಪುರ (ಪಿಟಿಐ): ಇದೇ 28ರಿಂದ ಸೆ.8ರವರೆಗೆ ನಡೆಯುವ ಪ್ಯಾರಿಸ್ ಪ್ಯಾರಾಲಿಂಪಿಕ್ ಕ್ರೀಡೆಗಳಲ್ಲಿ ಭಾರತದ 84 ಕ್ರೀಡಾಪಟುಗಳ ದೊಡ್ಡ ದಂಡು ಪಾಲ್ಗೊಳ್ಳಲಿದೆ. ಈ ಕೂಟದಲ್ಲಿ 25ಕ್ಕೂ ಅಧಿಕ ಪದಕಗಳನ್ನು ಗೆಲ್ಲುವ ವಿಶ್ವಾಸವಿದೆ’ ಎಂದು ಭಾರತ ಪ್ಯಾರಾಲಿಂಪಿಕ್ ಸಮಿತಿ ಅಧ್ಯಕ್ಷ ದೇವೇಂದ್ರ ಝುಜಾರಿಯಾ ಹೇಳಿದ್ದಾರೆ.

ಈ ಬಾರಿಯ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಅತ್ಯುತ್ತಮ ಸಾಧನೆಯನ್ನು ಮಾಡಲಿದ್ದು, ಟೋಕಿಯೊ ಕೂಟದ ದಾಖಲೆಯನ್ನು ಮುರಿಯುವ ವಿಶ್ವಾಸವಿದೆ ಎಂದು ಪ್ಯಾರಾಲಿಂಪಿಕ್ಸ್‌ನಲ್ಲಿ ಸ್ವತಃ ಎರಡು ಚಿನ್ನದ ಪದಕ ಗೆದ್ದಿರುವ ಜಾವೆಲಿನ್ ಥ್ರೋ ಪಟುವಾಗಿದ್ದ ದೇವೇಂದ್ರ ಮಂಗಳವಾರ ತಿಳಿಸಿದ್ದಾರೆ.

ಭಾರತದಿಂದ ಹಿಂದೆಂದೂ ಇಷ್ಟೊಂದು ಸಂಖ್ಯೆಯ ಕ್ರೀಡಾಪಟುಗಳು ಪ್ಯಾರಾಲಿಂಪಿಕ್ಸ್‌ಗೆ ಆಯ್ಕೆಯಾಗಿರಲಿಲ್ಲ.

ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ತಂಡವು ದಾಖಲೆಯ 19 ಪದಕಗಳನ್ನು ಗೆದ್ದಿದೆ. ಕಳೆದ ವರ್ಷ ಹಾಂಗ್‌ಝೌನ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲೂ 111 ಪದಕಗಳನ್ನು ಜಯಿಸಿ, ಉತ್ತಮ ಸಾಧನೆ ಮೆರೆದಿತ್ತು.

‘ಪ್ಯಾರಾಲಿಂಪಿಕ್ಸ್‌ಲ್ಲಿ ಭಾಗವಹಿಸಲು ಭಾರತದ ಅತಿದೊಡ್ಡ ತಂಡ ಸಿದ್ಧವಾಗಿದೆ. ನಮ್ಮ ಕ್ರೀಡಾಪಟುಗಳ ಪ್ರದರ್ಶನವನ್ನು ಗಮನಿಸಿದಾಗ 25ಕ್ಕೂ ಹೆಚ್ಚು ಪದಕಗಳನ್ನು ಗೆಲ್ಲುವುದು ಖಚಿತ’ ಎಂದು ಹೇಳಿದ್ದಾರೆ.



ಭಾರತದ ಪ್ಯಾರಾ ಬಿಲ್ಗಾರ್ತಿ ಶೀತಲ್ ದೇವಿ –ಪಿಟಿಐ ಚಿತ್ರ

ಆರ್ಚರಿ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಕೆನೊಯಿಂಗ್, ಸೈಕ್ಲಿಂಗ್, ಬ್ಲೈಂಡ್ ಜುಡೊ, ಪವರ್ ಲಿಫ್ಟಿಂಗ್, ರೋಯಿಂಗ್, ಶೂಟಿಂಗ್, ಈಜು, ಟೇಬಲ್ ಟೆನಿಸ್ ಮತ್ತು ಟೇಕ್ವಾಂಡೊ ಸೇರಿದಂತೆ 12 ಕ್ರೀಡೆಗಳಲ್ಲಿ ಭಾರತ ಕ್ರೀಡಾಪಟುಗಳು ಕಣಕ್ಕೆ ಇಳಿಯಲಿದ್ದಾರೆ.

‘ಭಾರತದ ಕ್ರೀಡಾಪಟುಗಳು ಕಠಿಣ ತರಬೇತಿ ಪಡೆದು, ಉತ್ತಮ ಲಯದಲ್ಲಿದ್ದಾರೆ. ವಿಶೇಷವಾಗಿ ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಆರ್ಚರಿ ಮತ್ತು ಶೂಟಿಂಗ್‌ನಲ್ಲಿ ಅತ್ಯುತ್ತಮ ಫಲಿತಾಂಶಗಳನ್ನು ಎದುರು ನೋಡುತ್ತಿದ್ದೇವೆ’ ಎಂದಿದ್ದಾರೆ.

ಭಾರತ ತಂಡದಲ್ಲಿ ಅನುಭವಿಗಳೊಂದಿಗೆ ಯುವ ಅಥ್ಲೀಟ್‌ಗಳೂ ಇದ್ದಾರೆ. ಹಲವರಿಗೆ ಇದು ಎರಡನೇ ಅಥವಾ ಮೂರನೇ ಪ್ಯಾರಾಲಿಂಪಿಕ್ಸ್ ಆಗಿದೆ. ಏಷ್ಯನ್ ಪ್ಯಾರಾ ಗೇಮ್ಸ್ ಚಿನ್ನದ ಪದಕ ವಿಜೇತ, 39 ವರ್ಷ ವಯಸ್ಸಿನ ಅಮಿತ್ ಕುಮಾರ್ ಸರೋಹಾ ತಂಡದ ಹಿರಿಯ ಸದಸ್ಯರಾಗಿದ್ದಾರೆ. ಡಿಸ್ಕಸ್ ಥ್ರೋನಲ್ಲಿ (ಎಫ್ 51) ಅವರು ನಾಲ್ಕನೇ ಬಾರಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಪ್ಯಾರಾ ಬಿಲ್ಗಾರ್ತಿ ಶೀತಲ್ ದೇವಿ (17 ವರ್ಷ) ಭಾರತ ತಂಡದ ಅತ್ಯಂತ ಕಿರಿಯ ವಯಸ್ಸಿನ ಕ್ರೀಡಾಪಟು. ಅವರು ಕಳೆದ ವರ್ಷ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ವೈಯಕ್ತಿಕ ಕಾಂಪೌಂಡ್ ಮತ್ತು ಮಿಶ್ರ ತಂಡ ಸ್ಪರ್ಧೆಗಳಲ್ಲಿ ಚಿನ್ನ ಸೇರಿದಂತೆ ಮೂರು ಪದಕಗಳನ್ನು ಗೆದ್ದಿದ್ದರು.

ಪ್ಯಾರಾ ಶಟ್ಲರ್ ಭಗತ್‌ಗೆ 18 ತಿಂಗಳ ನಿಷೇಧ

ನವದೆಹಲಿ (ಪಿಟಿಐ): ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ನ ಡೋಪಿಂಗ್ ನಿಗ್ರಹ ನಿಯಮದ ‘ವಾಸ್ತವ್ಯ ಅಧಿನಿಯಮ’ ಉಲ್ಲಂಘಿಸಿದ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ ಪ್ರಮೋದ್ ಭಗತ್ ಅವರ ಮೇಲೆ 18 ತಿಂಗಳ ನಿಷೇಧ ಹೇರಲಾಗಿದೆ. ಟೋಕಿಯೊ ಪ್ಯಾರಾ ಕ್ರೀಡೆಗಳಲ್ಲಿ ಚಿನ್ನ ವಿಜೇತರಾಗಿದ್ದ ಅವರು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಅದನ್ನು ಉಳಿಸಿಕೊಳ್ಳುವ ಅವಕಾಶ ಕಳೆದುಕೊಂಡು ಆಘಾತ ಎದುರಿಸುವಂತಾಗಿದೆ.



‘2020ರ ಪ್ಯಾರಾಲಿಂಪಿಕ್ ಚಾಂಪಿಯನ್ ಪ್ರಮೋದ್ ಭಗತ್ ಅವರ ಮೇಲೆ 18 ತಿಂಗಳ ನಿಷೇಧ ಹೇರಲಾಗಿದ್ದು, ಅವರು ಪ್ಯಾರಿಸ್ 2024 ಪ್ಯಾರಾಲಿಂಪಿಕ್ಸ್ ಕಳೆದುಕೊಳ್ಳಲಿದ್ದಾರೆ ಎಂದು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಖಚಿತಪಡಿಸುತ್ತದೆ’ ಎಂದು ಫೆಡರೇಷನ್ ಮಂಗಳವಾರ ಹೇಳಿಕೆಯಲ್ಲಿ ತಿಳಿಸಿದೆ.

36 ವರ್ಷವಯಸ್ಸಿನ ಭಗತ್ ಅವರು ಎಸ್‌ಎಲ್3 ಅಥ್ಲೀಟ್ ಆಗಿದ್ದಾರೆ. ‘ಈ ನಿರ್ಧಾರದಿಂದ ಬೇಸರವಾಗಿದೆ. ತಾಂತ್ರಿಕ ಸಮಸ್ಯೆಯ ಪರಿಣಾಮ ಈ ರೀತಿ ಆಗಿದೆ’ ಎಂದಿದ್ದಾರೆ.

‘ನನ್ನ ಪಾಲಿಗೆ ಈ ನಿರ್ಧಾರ ಅತ್ಯಂತ ಕಠಿಣವೆನಿಸಿದೆ. ವಿಶ್ವ ಉದ್ದೀಪನ ಮದ್ದುಸೇವನೆ ತಡೆ ಸಂಸ್ಥೆ (ವಾಡಾ)ಯ ಬಗ್ಗೆ ನನಗೆ ಗೌರವವಿದೆ. ಅದು ಎಲ್ಲ ಆಟಗಾರರಿಗೆ ನಿಯಮದ ಚೌಕಟ್ಟು ರೂಪಿಸಿದೆ. ಆದರೆ ತಾಂತ್ರಿಕ ಕಾರಣ ಮುಂದಿಟ್ಟು ನಿಷೇಧ ಹೇರುವುದು ಸರಿಯಲ್ಲ’ ಎಂದು ಬಿಹಾರದವರಾದ ಭಗತ್ ಪಿಟಿಐಗೆ ತಿಳಿಸಿದ್ದಾರೆ.

‘ಇದು ಯಾವುದೇ ಮದ್ದು ಸೇವನೆಯಾದ ವಿಷಯವಲ್ಲ. ಇದು ವಾಸ್ತವ್ಯದ ವಿವರ ನೀಡಲಾಗದ ವಿಷಯ. ಎರಡು ಬಾರಿ ನಾನು ಬೇರೆ ಬೇರೆ ಸ್ಥಳಗಳಲ್ಲಿದ್ದ ಕಾರಣ ಪರೀಕ್ಷೆ ತಪ್ಪಿಸಿಕೊಂಡೆ. ಆದರೆ ಮೂರನೇ ಸಲ ನಾನು ಎಲ್ಲ ಸಾಕ್ಷ್ಯಾಧಾರಗಳೊಂದಿಗೆ ಸಜ್ಜಾಗಿದ್ದೆ. ಆದರೆ ಅವರು ನನ್ನ ಮನವಿ ಕೇಳಲಿಲ್ಲ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಅವರ ನಿಷೇಧ ಅವಧಿಯು 2025ರ ಸೆಪ್ಟೆಂಬರ್ 1ರವರೆಗೆ ಜಾರಿಯಲ್ಲಿ ಇರಲಿದೆ. ಭಗತ್, 2021ರ ಟೋಕಿಯೊ ಕ್ರೀಡೆಗಳ ಎಸ್‌ಎಲ್3 ವಿಭಾಗದ ಫೈನಲ್‌ನಲ್ಲಿ ಗ್ರೇಟ್ ಬ್ರಿಟನ್‌ನ ಡೇನಿಯಲ್ ಬೆತೆಲ್ ಅವರನ್ನು ಸೋಲಿಸಿ ಬ್ಯಾಡ್ಮಿಂಟನ್ ಚಿನ್ನ ಗೆದ್ದಿದ್ದರು.



ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಭಾರತ ಪುರುಷರ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ (ಎಡದಿಂದ ನಾಲ್ಕನೆಯವರು) ಮತ್ತು ಇತರ ಆಟಗಾರರು ಮಂಗಳವಾರ ತವರಿಗೆ ಬಂದಿದ್ದು, ನವದೆಹಲಿಯ ಇಂದಿರಾ ಗಾಂಧಿ ವಿಮಾನ ನಿಲ್ದಾಣದಲ್ಲಿ ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಅವರೊಂದಿಗೆ ಶೂಟರ್ ರಾಜೇಶ್ವರಿ ಕುಮಾರಿ ಇದ್ದರು –ಎಕ್ಸ್ ಚಿತ್ರ

ಹಾಕಿ: 2028ರಲ್ಲಿ ಚಿನ್ನ ಗೆಲ್ಲಲು ರೂಪುರೇಷೆ

‘ಸೆ.10ಕ್ಕೆ ಮೊದಲು ತಂಡದ ಜೊತೆ ಸಭೆ’

ನವದೆಹಲಿ (ಪಿಟಿಐ): 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕ್ರೀಡೆಗಳಲ್ಲಿ ಹಾಕಿಯಲ್ಲಿ ಚಿನ್ನದ ಪದಕ ಗೆಲ್ಲುವ ನಿಟ್ಟಿನಲ್ಲಿ ಭವಿಷ್ಯದ ಯೋಜನೆಗಳ ರೂಪುರೇಷೆ ಸಿದ್ಧಪಡಿಸಲು ಸೆಪ್ಟೆಂಬರ್ 10ಕ್ಕೆ ಮೊದಲು ತಾವು ಭಾರತ ಹಾಕಿ ತಂಡದ ಜೊತೆ ಸಭೆ ನಡೆಸುವುದಾಗಿ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಮಂಗಳವಾರ ತಿಳಿಸಿದರು.

ಭಾರತ ಪುರುಷರ ಹಾಕಿ ತಂಡ ಪ್ಯಾರಿಸ್ ಕ್ರೀಡೆಗಳಲ್ಲಿ ಕಂಚಿನ ಪದಕ ಗೆದ್ದುಕೊಂಡಿತ್ತು. ಮಂಗಳವಾರ ಬೆಳಿಗ್ಗೆ ಪ್ಯಾರಿಸ್‌ನಿಂದ ಬಂದಿಳಿದ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್, ಸಂಜಯ್, ಅಮಿತ್ ರೋಹಿದಾಸ್ ಮತ್ತು ಅಭಿಷೇಕ್ ಅವರನ್ನು ಸನ್ಮಾನಿಸಿದ ಅವರು ಮಾತನಾಡಿದರು.

‘ಪ್ಯಾರಿಸ್‌ನಲ್ಲಿ ಹಾಕಿ ತಂಡದ ಪ್ರದರ್ಶನ ಅಮೋಘವಾಗಿತ್ತು. ನಾವು ಚಿನ್ನದ ಪದಕ ಗೆಲ್ಲದೇ ಹೋಗಿರಬಹುದು. ಆದರೆ ಅದಕ್ಕೆ ತೀರಾ ಹತ್ತಿರವಾಗಿದ್ದೆವು.

ಸೆಮಿಫೈನಲ್‌ನಲ್ಲಿ ಸೋತರೂ ಆಟ ಮನಮೆಚ್ಚುವಂತಿತ್ತು’ ಎಂದು ಸಚಿವರು ಹೇಳಿದರು.

ಟೋಕಿಯೊ ಕ್ರೀಡೆಗಳಷ್ಟು ಪದಕ ಗೆಲ್ಲದಿದ್ದರೂ, ಪ್ಯಾರಿಸ್‌ನಲ್ಲಿ ಭಾಗವಹಿಸಿದ್ದ ಭಾರತದ ಪಾಳಯದ ಪ್ರದರ್ಶನ ಉತ್ತಮವಾಗಿತ್ತು ಎಂದರು.

2021ರಲ್ಲಿ ನಡೆದ ಕ್ರೀಡೆಗಳಲ್ಲಿ ಭಾರತ ಒಂದು ಚಿನ್ನ, ಎರಡು ಬೆಳ್ಳಿ, ನಾಲ್ಕು ಕಂಚಿನ ಪದಕ ಗೆದ್ದುಕೊಂಡಿತ್ತು. ಈ ಬಾರಿ ಒಂದು ಬೆಳ್ಳಿ ಮತ್ತು ಐದು ಕಂಚಿನ ಪದಕಗಳನ್ನು ಭಾರತದ ಕ್ರೀಡಾಪಟುಗಳು ಗೆದ್ದಿದ್ದಾರೆ. ಆದರೆ ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಏಳು ಸ್ಪರ್ಧೆಗಳಲ್ಲಿ ಪದಕಗಳು ಅಲ್ಪದರಲ್ಲೇ ಕೈತಪ್ಪಿದ್ದವು.

ಅರ್ಷದ್‌ಗೆ ₹1 ಕೋಟಿ, ಕಾರು ಉಡುಗೊರೆ

ಲಾಹೋರ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಐತಿಹಾಸಿಕ ಚಿನ್ನ ಗೆದ್ದ ಸಾಧನೆಗಾಗಿ ಪಾಕಿಸ್ತಾನದ ಜಾವೆಲಿನ್ ಥ್ರೋ ತಾರೆ ಅರ್ಷದ್ ನದೀಮ್ ಅವರಿಗೆ ಮಂಗಳವಾರ ಪಂಜಾಬ್ ಪ್ರಾಂತ್ಯ ಸರ್ಕಾರವು ₹1 ಕೋಟಿ ಮತ್ತು ವಿಶೇಷ ನಂಬರ್ ಪ್ಲೇಟ್‌ನ ಹೊಸ ಕಾರನ್ನು ಬಹುಮಾನವಾಗಿ ನೀಡಿದೆ.

ನದೀಂ ಮತ್ತು ಅವರ ಕುಟುಂಬವು ಪಂಜಾಬ್ ಪ್ರಾಂತ್ಯದ ಖಾನೆವಾಲ್ ಜಿಲ್ಲೆಯ ಮಿಯಾನ್ ಚಾನು ಗ್ರಾಮದಲ್ಲಿ ವಾಸಿಸುತ್ತಿದ್ದು, ಅಲ್ಲಿಗೆ ಭೇಟಿ ನೀಡಿದ ಪಂಜಾಬ್ ಪ್ರಾಂತ್ಯ ಮುಖ್ಯಮಂತ್ರಿ ಮರಿಯಮ್ ನವಾಜ್ ನಗದು ಬಹುಮಾನದ ಚೆಕ್ ಮತ್ತು ಕಾರಿನ ಕೀ ಅನ್ನು ಅರ್ಷದ್ ಅವರಿಗೆ ಹಸ್ತಾಂತರಿಸಿದರು.


ಆಗಸ್ಟ್ 8ರಂದು ಪ್ಯಾರಿಸ್‌ನಲ್ಲಿ ನದೀಂ ಅವರು 92.97 ಮೀಟರ್ ದೂರ ಜಾವೆಲಿನ್ ಎಸೆದು, ಒಲಿಂಪಿಕ್ಸ್ ದಾಖಲೆಯೊಂದಿಗೆ ಚಿನ್ನ ಗೆದ್ದಿದ್ದರು. ಹೀಗಾಗಿ, ‘92.97’ ವಿಶೇಷ ನಂಬರ್ ಪ್ಲೇಟ್‌ನ ಕಾರನ್ನೇ ಅವರಿಗೆ ಉಡುಗುರೆಯಾಗಿ ನೀಡಲಾಯಿತು.

‘ಅರ್ಷದ್ ನಮ್ಮ ರಾಷ್ಟ್ರದ ಹೆಮ್ಮೆ. ಅವರು ಪಾಕಿಸ್ತಾನದ ಕೀರ್ತಿಯನ್ನು ಉತ್ತುಂಗಕ್ಕೆ ಏರಿಸಿದ್ದಾರೆ. ಆದ್ದರಿಂದ ಎಲ್ಲಾ ರೀತಿಯ ಬಹುಮಾನ ಪಡೆಯಲು ಅವರು ಅರ್ಹರು’ ಎಂದು ಮರಿಯಮ್ ಹೇಳಿದರು. ಮುಖ್ಯಮಂತ್ರಿಯ ಸೂಚನೆಯ ಮೇರೆಗೆ ಹೊಸ ಕಾರಿಗೆ ವಿಶೇಷ ನಂಬರ್‌ನ ಪ್ಲೇಟ್ ಅನ್ನು ಸಿದ್ಧಪಡಿಸ ಲಾಗಿದೆ ಎಂದು ಸ್ಥಳದಲ್ಲಿದ್ದ ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

ಮರಿಯಮ್ ಅವರು ಇದೇ ವೇಳೆ ನದೀಮ್ ಅವರ ಕೋಚ್ ಸಲ್ಮಾನ್ ಇಕ್ಬಾಲ್ ಭಟ್ ಅವರಿಗೆ ₹ 50 ಲಕ್ಷದ ಚೆಕ್ ಅನ್ನು ಬಹುಮಾನವಾಗಿ ನೀಡಿದರು.



ಪಂಜಾಬ್ ಪ್ರಾಂತ್ಯ ಮುಖ್ಯಮಂತ್ರಿ ಮರಿಯಮ್ ನವಾಜ್ ಅವರು ಮಂಗಳವಾರ ಅರ್ಷದ್ ನದೀಮ್ ಅವರೊಂದಿಗೆ ಮಾತನಾಡಿದರು –ಎಕ್ಸ್ ಚಿತ್ರ



ಅರ್ಷದ್ ನದೀಮ್ ಅವರಿಗೆ ನೀಡಲಾದ ಕಾರಿನ ನಂಬರ್ ಪ್ಲೇಟ್

27 ವರ್ಷ ವಯಸ್ಸಿನ ನದೀಂ ಅವರು ಒಲಿಂಪಿಕ್ ಚಿನ್ನದ ಪದಕ ಗೆದ್ದ ಪಾಕಿಸ್ತಾನದ ಮೊದಲ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ ಆಗಿದ್ದಾರೆ. ಪ್ಯಾರಿಸ್‌ನಲ್ಲಿ ಭಾರತದ ನೀರಜ್ ಚೋಪ್ರಾ ಅವರು ಋತುವಿನ ಅತ್ಯುತ್ತಮ ಸಾಧನೆಯೊಂದಿಗೆ (89.45 ಮೀಟರ್) ಬೆಳ್ಳಿ ಗೆದ್ದಿದ್ದರು. ನದೀಮ್ ಅವರ ಮೂಲಕ ಪಾಕಿಸ್ತಾನಕ್ಕೆ 40 ವರ್ಷಗಳ ಬಳಿಕ ಚಿನ್ನದ ಪದಕ ದಕ್ಕಿದೆ. 1984ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಪಾಕ್ ಪುರುಷರ ಹಾಕಿ ತಂಡ ಚಿನ್ನ ಗೆದ್ದಿತ್ತು.

ವಿನೇಶ್ ಫೋಗಟ್ ಪ್ರಕರಣ ತೀರ್ಪು 16ಕ್ಕೆ ಮುಂದೂಡಿಕೆ

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್ ಫೈನಲ್‌ನಿಂದ ಅನರ್ಹಗೊಂಡಿರುವ ತಮಗೆ ಬೆಳ್ಳಿ ಪದಕ ನೀಡಬೇಕೆಂದು ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಅವರು ಸಲ್ಲಿಸಿರುವ ಮೇಲ್ಮನವಿಗೆ ಸಂಬಂಧಿಸಿ ಕ್ರೀಡಾ ಮಧ್ಯಸ್ಥಿಕೆ ನ್ಯಾಯಮಂಡಳಿಯ (ಸಿಎಎಸ್) ಅಡ್‌ಹಾಕ್ ವಿಭಾಗವು ತನ್ನ ತೀರ್ಪನ್ನು ಆಗಸ್ಟ್ 16ರವರೆಗೆ ಮುಂದೂಡಿದೆ.

ಮಂಗಳವಾರ ಈ ಸಂಬಂಧ ತೀರ್ಪು ಹೊರ ಬೀಳಬಹುದೆಂಬ ನಿರೀಕ್ಷೆಯಿತ್ತು. ಹೀಗಾಗಿ ಕಾಯುವಿಕೆ ಮುಂದುವರಿದಿದೆ.

29 ವರ್ಷದ ವಿನೇಶ್, ಮಹಿಳೆಯರ 50 ಕೆ.ಜಿ. ಫ್ರೀಸ್ಟೈಲ್ ಕುಸ್ತಿ ಸ್ಪರ್ಧೆಯ ಫೈನಲ್ ತಲುಪಿದ್ದರು. ಆದರೆ ಫೈನಲ್ ಸೆಣಸಾಟದಂದು (ಆ. 7ರಂದು) ಬೆಳಿಗ್ಗೆ ತೂಕ ನೋಡುವಾಗ ನಿಗದಿಗಿಂತ 100 ಗ್ರಾಂ ಅಧಿಕ ತೂಗಿದ ಕಾರಣ ಅವರನ್ನು ಅನರ್ಹಗೊಳಿಸಲಾಗಿತ್ತು.

‘ವಿನೇಶ್ ಫೋಗಟ್ ವಿರುದ್ಧ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ’ ಈ ಪ್ರಕರಣದಲ್ಲಿ ತೀರ್ಪು ನೀಡಬೇಕಾಗಿದ್ದ ಡಾ.ಅನ್ನಾಬೆಲ್ ಬೆನೆಟ್ ಅವರಿಗೆ ಸಿಎಎಸ್‌ನ ಅಡ್‌ಹಾಕ್ ಸಮಿತಿ ಆಗಸ್ಟ್ 16ರ (ಶುಕ್ರವಾರ) ಸಂಜೆ 6 ಗಂಟೆಯವರೆಗೆ (ಪ್ಯಾರಿಸ್ ಕಾಲಮಾನ) ಹೆಚ್ಚುವರಿ ಕಾಲಾವಕಾಶ ಒದಗಿಸಿದೆ’ ಎಂದು ಭಾರತ ಒಲಿಂಪಿಕ್ ಸಂಸ್ಥೆಯ ಪ್ರಕಟಣೆ ತಿಳಿಸಿದೆ.



ವಿನೇಶ್ ಫೋಗಟ್

‘ಕ್ಯೂಬಾದ ಕುಸ್ತಿಪಟು ಯುಸ್ನೇಲಿಸ್ ಗುಜ್ಮಾನ್ ಲೋಪೆಝ್ ಜೊತೆ ತಮಗೂ ಜಂಟಿಯಾಗಿ ಬೆಳ್ಳಿಯ ಪದಕ ನೀಡಬೇಕು’ ಎಂದು ಮನವಿಯಲ್ಲಿ ವಿನೇಶ್ ಆಗ್ರಹಿಸಿದ್ದರು.

ವಿನೇಶ್ ಅವರೆದುರು ಯುಸ್ನೇಲಿಸ್ ಗುಜ್ಮಾನ್ ಸೆಮಿಫೈನಲ್‌ನಲ್ಲಿ ಸೋತಿದ್ದರು. ಆದರೆ ವಿನೇಶ್ ಅನರ್ಹಗೊಂಡ ಕಾರಣ ಅವರು ಫೈನಲ್‌ನಲ್ಲಿ ಆಡುವ ಅರ್ಹತೆ ಪಡೆದಿದ್ದರು.

ಪದಕಕ್ಕೆ ವಿನೇಶ್ ಯೋಗ್ಯರಾಗಿದ್ದರು: ಶ್ರೀಜೇಶ್

ನವದೆಹಲಿ (ಪಿಟಿಐ): ಮಹಿಳೆಯರ 50 ಕೆ.ಜಿ. ತೂಕ ವಿಭಾಗ ದಲ್ಲಿ ಫೈನಲ್ ತಲುಪಿ, ಕೇವಲ 100 ಗ್ರಾಂ ಅಧಿಕ ತೂಕವಿದ್ದ ಕಾರಣಕ್ಕೆ ಅನರ್ಹಗೊಂಡ ಭಾರತದ ವಿನೇಶ್ ಫೋಗಟ್ ಪದಕಕ್ಕೆ ಯೋಗ್ಯವಾದವರು ಎಂದು ಭಾರತ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅಭಿಪ್ರಾಯಪಟ್ಟಿದ್ದಾರೆ.

ಒಲಿಂಪಿಕ್ಸ್ ಆರಂಭದಲ್ಲಿ ಅದೇ ತಮ್ಮ ಕೊನೆಯ ಅಂತರ ರಾಷ್ಟ್ರೀಯ ಟೂರ್ನಿ ಎಂದು ಪ್ರಕಟಿಸಿದ್ದ ಶ್ರೀಜೇಶ್ ಕಂಚು ಗೆದ್ದ ಭಾರತ ತಂಡದಲ್ಲಿ ಗಮನಸೆಳೆಯುವ ಪ್ರದರ್ಶನ ನೀಡಿದ್ದರು.

‘ವಿನೇಶ್ ಎದುರಿಸಿದ್ದ ಶೋಚನೀಯ ಸ್ಥಿತಿಯಲ್ಲಿ ನಾನಿದ್ದರೆ ಏನು ಮಾಡುತ್ತಿದ್ದೆನೊ ಏನೋ? ಆ ಆಘಾತಕ್ಕೆ ಯಾವ ರೀತಿ ಪ್ರತಿಕ್ರಿಯಿಸಬೇಕೆಂಬುದೇ ತೋಚುತ್ತಿರಲಿಲ್ಲ’ ಎಂದು ಹೇಳಿದರು. ‘ನಾನು ಕಂಚಿನ ಪದಕಕ್ಕೆ ಆಡುವ ದಿನ ಬೆಳಿಗ್ಗೆ ಅವರನ್ನು ಭೇಟಿಯಾಗಿದ್ದೆ. ನನಗೆ ಶುಭ ಹಾರೈಸಿದ್ದರು ಅವರು ನಿಜವಾದ ಹೋರಾಟಗಾರ್ತಿ’ ಎಂದರು.

ಬೆಂಗಳೂರು ರೇಸ್

ಕ್ಸಾರ್ ಗೆಲ್ಲುವ ನಿರೀಕ್ಷೆ

ಕರ್ನಾಟಕ ಸಬ್–ರಿಯಾ ಕಪ್ ಬುಧವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ಸಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಟ್ರೂ ಪಂಚ್ 6, ಕ್ಯಾಸ್ಕಾಯ್ಸ್ 8, ಸ್ಟಾರ್ ಹಾನರ್ 5
2ನೇ ರೇಸ್: ಸ್ವಾರ್ಮ್ ಶ್ಯಾಡೊ 3, ಸ್ಟ್ರಾವಿನ್‌ಸ್ಕಿ 4, ಜೂನ್ 8
3ನೇ ರೇಸ್: ಐರಿಷ್ ರಾಕ್‌ಸ್ಟಾರ್ 6, ಸಸ್ಸಿ 8, ಅಲ್ಡಿಲಾ 5
4ನೇ ರೇಸ್: ಜೆರ್ಸಿ ಕಿಂಗ್ 2, ಬೋರ್ಬನೇರ್ 4, ನೆವರ್ ಗೀವ್ ಇನ್ 1
5ನೇ ರೇಸ್: ಕ್ಸಾರ್ 3, ಇಂಡಿಯನ್ ಬ್ಲೂ, ಅಮ್ರೆಲಿ 2
6ನೇ ರೇಸ್: ಎಸ್ಟೆಫಾನಿಯಾ 4, ಅಲಸೆರೊ 2, ಸನ್‌ಲಿಟ್ ಪಾತ್ 3
7ನೇ ರೇಸ್: ಕೇಪ್ರಿ ಗರ್ಲ್ 7, ಅಲ್ಟಾಮಾಂಟೆ 3, ಅಲ್ಟಿಮೇಟ್ ಸ್ಟ್ರೈಕರ್ 2

ಉತ್ತಮ ಬೆಟ್: ಜೆರ್ಸಿ ಕಿಂಗ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

P.E.S.COLLEGE OF ENGINEERING, MANDYA
An Autonomous Institution under VTU, Belagavi , Aided by the Govt. of Karnataka)
Affiliated to VTU, Belagavi, Approved by AICTE, New Delhi.
Phone No.: 08232-220043, 238683, 238042, Fax : 08232-222075

No: PES/EST/2024-25/ Date : 14-08-2024

CORRIGENDUM

In the previous notification dated 03-03-2020, for backlog recruitment issued for the posts of Professors and Associate Professors, the qualification and experience for the said posts mentioned **“As per AICTE Regulations-2006”**, it shall be read **“As per the AICTE Regulations-2019, dated 01-03-2019”**. Other than this, the conditions mentioned in the notification shall apply as it is. Only those applicants who had applied earlier shall submit their applications as per the revised qualification i.e., as per the AICTE Regulations-2019 along with documents of qualifications, experience (teaching/research/industry) and research publications on or before 26-08-2024. Incomplete applications and applications submitted after the last date will not be considered.

Sd/- (Dr. H.M. Nanjundaswamy) **Principal**
Sd/- (Sri K.S. Vijay Anand) **Chairman, Governing Council**

ಮುನ್ನಡೆಯಲ್ಲಿ ಫ್ರಾನ್ಸ್‌ನ ಲಗ್ರಾವ್

ಸೇಂಟ್ ಲೂಯಿ (ಅಮೆರಿಕ): ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರು ಸೇಂಟ್ ಲೂಯಿ ರ್‍ಯಾಪಿಡ್ ಮತ್ತು ಬ್ಲಿಟ್ಸ್ ಟೂರ್ನಿಯ ರ್‍ಯಾಪಿಡ್ ವಿಭಾಗದ ಮೂರನೇ ಸುತ್ತಿನ ನಂತರ ಐದು ಪಾಯಿಂಟ್‌ಗಳೊಡನೆ ಅಗ್ರಸ್ಥಾನದಲ್ಲಿದ್ದಾರೆ.

ಭಾನುವಾರ ನಡೆದ ಮೊದಲ ಪಂದ್ಯದಲ್ಲಿ ಹಿಕಾರು ನಕಾಮುರಾ ಜೊತೆ ‘ಡ್ರಾ’ ಮಾಡಿಕೊಂಡ ಲಗ್ರಾವ್ ನಂತರದ ಎರಡು ಪಂದ್ಯಗಳಲ್ಲಿ ‘ಎಂಡ್‌ಗೇಮ್’ ಕೌಶಲ ಪ್ರದರ್ಶಿಸಿ ಯುವ ತಾರೆಗಳಾದ ಆರ್. ಪ್ರಜ್ಞಾನಂದ ಮತ್ತು ನಾಡಿರ್ಬೆಕ್ ಅಬ್ದುಸತ್ತಾರೋವ್ ವಿರುದ್ಧ ಜಯಗಳಿಸಿದರು. ಗೆಲುವಿಗೆ ಎರಡು ಪಾಯಿಂಟ್, ‘ಡ್ರಾ’ಕ್ಕೆ ಒಂದು ಪಾಯಿಂಟ್ ನೀಡಲಾಗುತ್ತದೆ.

ಭಾರತದ ತಾರೆ ಪ್ರಜ್ಞಾನಂದ ಅವರಿಗೆ ಟೂರ್ನಿಯಲ್ಲಿ ಒಳ್ಳೆಯ ಆರಂಭ ಸಿಗಲಿಲ್ಲ. ಅಮೆರಿಕದ ಅರೋನಿಯನ್ ವಿರುದ್ಧ ಕಪ್ಪುಕಾಯಿಗಳಲ್ಲಿ ಆಡಿ ‘ಡ್ರಾ’ ಮಾಡಿಕೊಂಡಿದ್ದ ಪ್ರಜ್ಞಾನಂದ ನಂತರದ ಪಂದ್ಯಗಳಲ್ಲಿ ಲಗ್ರಾವ್ ಮತ್ತು ನಿಪೊಮ್‌ನಿಯಾಷಿ ವಿರುದ್ಧ ಸೋತಿದ್ದು ಹಿನ್ನಡೆಗೆ ಕಾರಣವಾಯಿತು. ಪ್ರಜ್ಞಾನಂದ ಮತ್ತು ಹಾಲಿ ಚಾಂಪಿಯನ್ ಫ್ಯಾಬಿಯಾನೊ ಕರುವಾನಾ ಅವರು ಮೂರು ಪಂದ್ಯಗಳ ನಂತರ ತಲಾ ಒಂದು ಪಾಯಿಂಟ್ ಮಾತ್ರ ಗಳಿಸಿ 10 ಆಟಗಾರರ ಕಣದಲ್ಲಿ ಕ್ರಮವಾಗಿ 9 ಮತ್ತು ಹತ್ತನೇ ಸ್ಥಾನದಲ್ಲಿದ್ದಾರೆ.

ಕ್ಯೂಬನ್–ಅಮೆರಿಕನ್ ಗ್ರ್ಯಾಂಡ್ ಮಾಸ್ಟರ್ ಎಲ್.ಡೊಮಿಂಗೆಝ್ ಪೆರೆಝ್ ಅವರು ತಮ್ಮ ಮೂರು ಪಂದ್ಯಗಳಲ್ಲಿ ಒಂದು ಗೆದ್ದು (ಕರುವಾನಾ ವಿರುದ್ಧ), ಉಳಿದ ಎರಡನ್ನು (ಕ್ರಮವಾಗಿ ಅಲಿರೇಜಾ ಫೀರೋಜ ಮತ್ತು ಅಬ್ದುಸತ್ತಾರೋವ್) ಡ್ರಾ ಮಾಡಿಕೊಂಡು ಉತ್ತಮ ಆರಂಭ ಪಡೆದರು.

ಕ್ರೀಡಾ ಸಚಿವಾಲಯದಿಂದ ವೈಯಕ್ತಿಕ ಹಣಕಾಸಿನ ನೆರವು ಪಡೆದಿಲ್ಲ: ಅಶ್ವಿನಿ

ನವದೆಹಲಿ (ಪಿಟಿಐ): ‘ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸಲು ಕ್ರೀಡಾ ಸಚಿವಾಲಯದಿಂದ ಯಾವುದೇ ವೈಯಕ್ತಿಕ ಹಣಕಾಸಿನ ನೆರವು ಪಡೆದಿಲ್ಲ. ಜೊತೆಗೆ ವೈಯಕ್ತಿಕ ತರಬೇತುದಾರನನ್ನು ನಿಯೋಜಿಸುವಂತೆ ಸಲ್ಲಿಸಿದ ಕೋರಿಕೆಯನ್ನು ತಿರಸ್ಕರಿಸಲಾಗಿತ್ತು’ ಎಂದು ಬ್ಯಾಡ್ಮಿಂಟನ್ ಡಬಲ್ಸ್ ಆಟಗಾರ್ತಿ ಅಶ್ವಿನಿ ಪೊನ್ನಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ಯಾರಿಸ್‌ಗೆ ತೆರಳಿದ ಭಾರತದ ಅಥ್ಲೀಟ್‌ಗಳಿಗೆ ಆರ್ಥಿಕ ನೆರವು ನೀಡಿದ ಕುರಿತು ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ವಿವರವಾದ ದಾಖಲೆಗಳನ್ನು ಬಿಡುಗಡೆ ಮಾಡಿತ್ತು. ಅದರಂತೆ ಅಶ್ವಿನಿ ಅವರಿಗೆ ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆಯಡಿ (ಟಿಒಪಿಎಸ್) ₹4.50 ಲಕ್ಷವನ್ನು ನೀಡಲಾಗಿತ್ತು. ವಾರ್ಷಿಕ ಕ್ಯಾಲೆಂಡರ್ ಅಡಿಯಲ್ಲಿ ₹1.48 ಕೋಟಿ ಒದಗಿಸಲಾಗಿದೆ. ಅದರಲ್ಲಿ ಆಟಕ್ಕೆ ಅಗತ್ಯವಿರುವ ಸಲಕರಣೆ, ಅಂತರ ರಾಷ್ಟ್ರೀಯ ಸ್ಪರ್ಧೆ ಹಾಗೂ ಸಹ ಆಟಗಾರರ ಖರ್ಚು ಸೇರಿದೆ ಎಂದು ಹೇಳಲಾಗಿತ್ತು.



‘ಈ ಮಾಹಿತಿ ನಿಜಕ್ಕೂ ಆಘಾತಕಾರಿ. ನಮಗೆ ಇಷ್ಟೊಂದು ಹಣ ಕೊಟ್ಟಿರುವುದಾಗಿ ದೇಶಕ್ಕೆ ಸಾರಿರುವುದು ಹಾಸ್ಯಾಸ್ಪದ. ನನಗೆ ಯಾವುದೇ ಹಣ ನೀಡಿಲ್ಲ. ರಾಷ್ಟ್ರೀಯ ಶಿಬಿರದ ಕುರಿತು ಮಾತನಾಡಲಾಗಿದೆ. ಆಗ ನೀಡಿದ ₹1.5 ಕೋಟಿ ಎಲ್ಲಾ ಆಟಗಾರರ ಮೇಲೂ ಖರ್ಚು ಮಾಡಲಾಗಿತ್ತು’ ಎಂದು ಕರ್ನಾಟಕದ ಅಶ್ವಿನಿ ಅವರು ಪಿಟಿಐಗೆ ಪ್ರತಿಕ್ರಿಯಿಸಿದ್ದಾರೆ.

‘ನಮಗೆ ನಿರ್ದಿಷ್ಟ ಕೋಚ್ ಇರಲಿಲ್ಲ. ನನ್ನ ವೈಯಕ್ತಿಕ ಕೋಚ್‌ಗೆ ನಾನೇ ಸಂಭಾವನೆಯನ್ನು ನೀಡಿದ್ದೇನೆ. ನಾನು ಯಾರಿಂದಲೂ ಹಣ ಪಡೆದಿಲ್ಲ. 2023ರ ನವೆಂಬರ್‌ವರೆಗೂ ನನ್ನದೇ ಖರ್ಚಿನಲ್ಲಿ ತರಬೇತಿ ಪಡೆದು ಆಡಿದ್ದೇನೆ. ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ನಂತರವಷ್ಟೇ ನನ್ನನ್ನು ಟಿಒಪಿಎಸ್ (ಟಾಪ್ಸ್) ವ್ಯಾಪ್ತಿಗೆ ಸೇರ್ಪಡೆಗೊಳಿಸಲಾಯಿತು’ ಎಂದು 34 ವರ್ಷದ ಅಶ್ವಿನಿ ಹೇಳಿದ್ದಾರೆ.

2010, 2014 ಮತ್ತು 2018ರ ಕಾಮನ್‌ವೆಲ್ತ್ ಗೇಮ್ಸ್‌ನ ಡಬಲ್ಸ್ ಸ್ಪರ್ಧೆಯಲ್ಲಿ ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದಿರುವ ಅಶ್ವಿನಿ ಅವರು ಮೂರನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು. ಪ್ಯಾರಿಸ್‌ನಲ್ಲಿ ತನಿಶಾ ಕ್ರಾಸ್ಟೊ ಜೊತೆ ಕಣಕ್ಕೆ ಇಳಿದು, ಗುಂಪು ಹಂತದಲ್ಲೇ ನಿರ್ಗಮಿಸಿದ್ದರು.

‘ಪ್ಯಾರಿಸ್‌ನಲ್ಲಿ ನಾನು ಚೆನ್ನಾಗಿ ಆಡಿಲ್ಲ. ಅಲ್ಲಿ ಕೋಚ್ ಇಲ್ಲದಿದ್ದರೂ ಸಹ. ಸೋಲಿನ ಜವಾಬ್ದಾರಿಯನ್ನು ನಾನೇ ವಹಿಸಿಕೊಳ್ಳುತ್ತೇನೆ’ ಎಂದಿದ್ದಾರೆ.

ಮನು ಭಾಕರ್- ನೀರಜ್ ಚೋಪ್ರಾ ಆತ್ಮೀಯ ಮಾತುಕತೆಯ ವಿಡಿಯೊ

ವದಂತಿಗೆ ತೆರೆ ಎಳೆದ ರಾಮ್‌ಕಿಶನ್


ನವದೆಹಲಿ: ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಹಾಗೂ ಶೂಟಿಂಗ್ ತಾರೆ ಮನು ಭಾಕರ್ ಅವರು ಆತ್ಮೀಯವಾಗಿ ಮಾತನಾಡಿರುವ ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿದ್ದು ಇವರಿಬ್ಬರು ವಿವಾಹವಾಗಲಿದ್ದಾರೆ ಎಂಬ ವದಂತಿಗಳಿಗೆ ಎಡೆಮಾಡಿಕೊಟ್ಟಿತ್ತು. ಆದರೆ ಮನು ಅವರ ತಂದೆ ರಾಮ್‌ಕಿಶನ್ ಇದೆಲ್ಲದಕ್ಕೆ ತೆರೆ ಎಳೆದಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ಮೂಲಕ 26 ವರ್ಷ ವಯಸ್ಸಿನ ನೀರಜ್ ಮತ್ತು 22 ವರ್ಷ ವಯಸ್ಸಿನ ಮನು ಗಮನ ಸೆಳೆದಿದ್ದರು. ಶೂಟಿಂಗ್‌ನ ವೈಯಕ್ತಿಕ ವಿಭಾಗ ಮತ್ತು ಮಿಶ್ರ ವಿಭಾಗದಲ್ಲಿ ಮನು ಭಾಕರ್ ಅವಳಿ ಕಂಚಿನ ಪದಕ ಗೆದ್ದರೆ, ನೀರಜ್ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಇಬ್ಬರೂ ಹರಿಯಾಣ ರಾಜ್ಯದವರು.

ಒಲಿಂಪಿಕ್ಸ್ ಸಮಾರೋಪದಂದು ನೀರಜ್, ಮನು ಹಾಗೂ ಆಕೆಯ ತಾಯಿ ಸುಮೇಧಾ ಭಾಕರ್ ಸಂಭಾಷಣೆ ನಡೆಸುವ ಎರಡು ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಒಂದು ವಿಡಿಯೊದಲ್ಲಿ ನೀರಜ್ ಮತ್ತು ಮನು ಸಂಭಾಷಣೆ ನಡೆಸುತ್ತಿರುವುದು ಕಾಣುತ್ತಿದೆ. ಆದರೆ ಪರಸ್ಪರ ಮುಖ ನೋಡಿಕೊಂಡು ಮಾತನಾಡಲು ನಾಚಿಕೊಳ್ಳುತ್ತಿದ್ದಾರೆ. ಕೊನೆಯಲ್ಲಿ ನೀರಜ್ ಜೊತೆ ಫೋಟೊಗೆ ಪೋಸ್ ಕೊಡುವಂತೆ ಮನುಗೆ ಸುಮೇಧಾ ಹೇಳುತ್ತಿದ್ದಾರೆ.



ಮನು ಭಾಕರ್ –ಪಿಟಿಐ ಚಿತ್ರ



ನೀರಜ್ ಚೋಪ್ರಾ –ಪಿಟಿಐ ಚಿತ್ರ

ಮತ್ತೊಂದು ವಿಡಿಯೊದಲ್ಲಿ ನೀರಜ್ ಮತ್ತು ಸುಮೇಧಾ ಸಂಭಾಷಣೆ ನಡೆಸುತ್ತಾರೆ. ಅದರಲ್ಲಿ ನೀರಜ್ ಅವರ ಕೈಯನ್ನು ತಮ್ಮ ತಲೆಯ ಮೇಲೆ ಇಟ್ಟು ಪ್ರಮಾಣ ಮಾಡಿಸಿಕೊಳ್ಳುತ್ತಿರುವ ದೃಶ್ಯವಿದೆ. ಈ ವಿಡಿಯೊಗಳನ್ನು ಮೆಚ್ಚಿಕೊಂಡಿರುವ ನೆಟ್ಟಿಗರು, ಮದುವೆ ಫಿಕ್ಸಾ? ಎಂದು ಕಾಲೆಳೆದಿದ್ದಾರೆ.

ಒಲಿಂಪಿಕ್ಸ್ ಸಮಾರೋಪ ಸಮಾರಂಭದಲ್ಲಿ ನೀರಜ್ ಮತ್ತು ಮನು ಭಾರತದ ಧ್ವಜಧಾರಿಗಳಾಗಿ ಕಾಣಿಸಿಕೊಳ್ಳಬೇಕಿತ್ತು. ಆದರೆ, ನಿವೃತ್ತಿ ಘೋಷಿಸಿದ ಭಾರತ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರನ್ನು ಧ್ವಜಧಾರಿಯಾಗಿ ನೋಡಲು ಇಷ್ಟಪಡುವುದಾಗಿ ನೀರಜ್ ಹೇಳಿದ್ದರು.

ಮದುವೆ ಬಗ್ಗೆ ಯೋಚಿಸಿಲ್ಲ: ನೀರಜ್–ಮನು ಮದುವೆಯ ವದಂತಿ ಕುರಿತು ‘ದೈನಿಕ್ ಭಾಸ್ಕರ್’ಗೆ ಪ್ರತಿಕ್ರಿಯಿಸಿ ರುವ ರಾಮ್‌ಕಿಶನ್, ‘ಮನು ಇನ್ನೂ ತುಂಬಾ ಚಿಕ್ಕವಳು. ಅವಳಿಗೆ ಮದುವೆಯ ವಯಸ್ಸು ಆಗಿಲ್ಲ. ಆಕೆಯ ಮದುವೆ ಬಗ್ಗೆ ಈಗ ಯೋಚಿಸುತ್ತಿಲ್ಲ. ಸುಮೇಧಾ ಅವರು ನೀರಜ್‌ನನ್ನು ತನ್ನ ಮಗನಂತೆ ಭಾವಿಸಿದ್ದಾರೆ’ ಎಂದು ಅವರು ಹೇಳಿದ್ದಾರೆ.

ನೀರಜ್ ಚಿಕ್ಕಪ್ಪ ಕೂಡಾ ಪ್ರತಿಕ್ರಿಯಿಸಿದ್ದು, ‘ನೀರಜ್ ಪದಕ ಗೆದ್ದಾಗ ಇಡೀ ದೇಶಕ್ಕೆ ಆತನ ಬಗ್ಗೆ ತಿಳಿಯಿತು. ಅದೇ ರೀತಿ ಆತ ಮದುವೆಯಾದಾಗಲೂ ಎಲ್ಲರಿಗೂ ತಿಳಿಯುತ್ತದೆ’ ಎಂದಿದ್ದಾರೆ.

‘ಮುಂದಿನ ಒಲಿಂಪಿಕ್ಸ್‌ನಲ್ಲೂ ಬಹುಪದಕದ ಗುರಿ’

ನವದೆಹಲಿ (ಪಿಟಿಐ): ಪ್ಯಾರಿಸ್‌ನಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿರುವ ಮನು ಭಾಕರ್ ಮುಂದಿನ ಒಲಿಂಪಿಕ್ಸ್‌ನಲ್ಲೂ ಬಹುಪದಕಗಳನ್ನು ಜಯಿಸುವ ಗುರಿ ಹೊಂದಿರುವುದಾಗಿ ಹೇಳಿದ್ದಾರೆ.

‘ಪ್ಯಾರಿಸ್‌ನಲ್ಲಿ ನಾವೆಲ್ಲರೂ ಪದಕಗಳನ್ನು ಗೆಲ್ಲಲು ಶ್ರಮಿಸುತ್ತೇವೆ. ಒಂದಕ್ಕಿಂತ ಅಧಿಕ ಪದಕಗಳನ್ನು ಗೆದ್ದರೆ ನಿಜವಾಗಿಯೂ ಉತ್ತಮವಾಗಿರುತ್ತದೆ. ಭವಿಷ್ಯದಲ್ಲಿ ಭಾರತಕ್ಕೆ ಇನ್ನೂ ಹಲವು ಒಲಿಂಪಿಕ್ಸ್ ಪದಕಗಳನ್ನು ಗೆಲ್ಲುವ ಗುರಿ ಹೊಂದಿದ್ದೇನೆ’ ಎಂದು ಅವರು ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

‘ಸಮಾರೋಪ ಸಮಾರಂಭದಲ್ಲಿ ಭಾರತದ ಧ್ವಜಧಾರಿಯಾಗಿರುವುದು ಜೀವಮಾನದ ಅವಕಾಶವಾಗಿದೆ. ಈ ಅವಕಾಶ ಸಿಕ್ಕಿದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ’ ಎಂದು ಅವರು ಹೇಳಿದ್ದಾರೆ.

ಮೂರು ತಿಂಗಳು ವಿರಾಮ: ‘ಮನು, ಮೂರು ತಿಂಗಳು ವಿರಾಮ ತೆಗೆದುಕೊಳ್ಳಲು ನಿರ್ಧರಿಸಿರುವುದರಿಂದ ಅಕ್ಟೋಬರ್‌ನಲ್ಲಿ ನಡೆಯಲಿರುವ ವಿಶ್ವಕಪ್‌ನಿಂದ ಹೊರಗುಳಿಯಬಹುದು’ ಎಂದು ಅವರ ಕೋಚ್ ಜಸ್ಪಾಲ್ ರಾಣಾ ಹೇಳಿದ್ದಾರೆ.

#ಫ್ರೇಮ್ಸ್ ಆಫ್ ಫ್ರೀಡಂ

ಪ್ರಜಾವಾಣಿ

presented by ACTIVA



ತ್ರಿವರ್ಣ ಧ್ವಜದ ಜೊತೆಗೆ ನಿಮ್ಮ ಭಾವಚಿತ್ರವನ್ನು ಸೆರೆಹಿಡಿದು ರಾಷ್ಟ್ರಧ್ವಜದ ಮೇಲೆ ನಿಮಗಿರುವ ಪ್ರೀತಿ ಮತ್ತು ಗೌರವವನ್ನು ತೋರಿಸಿ.

1. ಭಾರತದ ಧ್ವಜದೊಂದಿಗೆ ಸೆಲ್ಫಿ ತೆಗೆದುಕೊಳ್ಳಿ
2. ಈ ವಾಕ್ಯವನ್ನು ಪೂರ್ಣಗೊಳಿಸಿ, ನಿಮ್ಮ ಸೆಲ್ಫಿಯನ್ನು ನಿಮ್ಮ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳಿ: ನಾನು ಭಾರತೀಯನಾಗಿರುವುದಕ್ಕೆ ಹೆಮ್ಮೆಪಡುತ್ತೇನೆ ಏಕೆಂದರೆ ....
3. ನಿಮ್ಮ ಸಂದೇಶವನ್ನು 16.08.2024 ರೊಳಗೆ, #FramesOfFreedom ಅನ್ನು ಬಳಸಿಕೊಂಡು ನಿಮ್ಮ ಫೀಡ್‌ನಲ್ಲಿ @prajavani ಯನ್ನು ಟ್ಯಾಗ್ ಮಾಡಿ, ಅಥವಾ pv@prajavani.co.in ಗೆ ಈಮೇಲ್ ಮಾಡಿ, ಅಥವಾ 7338018541 ಗೆ ವಾಟ್ಸಾಪ್ ಮಾಡಿ.

ಉತ್ತಮ ಭಾವಚಿತ್ರಗಳನ್ನು ಆಯ್ಕೆ ಮಾಡಿ, ಪ್ರಜಾವಾಣಿಯಲ್ಲಿ ಪ್ರಕಟಿಸಲಾಗುವುದು.

*ಷರತ್ತುಗಳು ಅನ್ವಯ

ಪ್ರಜಾವಾಣಿ prajavani.net Follow Us

‘ಥೋರ್ಪ್ ಸಾವಿಗೆ ರೈಲು ಅವಘಢ ಕಾರಣ’



ಗ್ರಹಾಂ ಥೋರ್ಪ್

ಲಂಡನ್ (ಎಎಫ್‌ಪಿ): ಇಂಗ್ಲೆಂಡ್‌ನ ಮಾಜಿ ಬ್ಯಾಟರ್ ಗ್ರಹಾಂ ಥೋರ್ಪ್ ಅವರು ರೈಲು ನಿಲ್ದಾಣವೊಂದರ-ಲ್ಲಿ ಸಂಭವಿಸಿದ ಅವಘಡದಲ್ಲಿ ರೈಲು ಬಡಿದು ಸಾವಿಗೀಡಾಗಿದ್ದರು ಎಂಬುದು ನ್ಯಾಯಾಲಯವೊಂದರಲ್ಲಿ ನಡೆದ ವಿಚಾರಣೆಯ ವೇಳೆ ಬಯಲಾಗಿದೆ.

ಮಂಗಳವಾರ ಅವರ ಸಾವಿನ ಕಾರಣಕ್ಕೆ ಸಂಬಂಧಿಸಿ ವಿಚಾರಣೆ ನಡೆದಿದೆ.

55 ವರ್ಷದ ಥೋರ್ಪ್ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದರು ಎಂದು ಸೋಮವಾರ ಅವರ ಪತ್ನಿ ‘ದಿ ಟೈಮ್ಸ್’ಗೆ ನೀಡಿದ್ದ ಸಂದರ್ಶನದಲ್ಲಿ ಮೊದಲ ಬಾರಿ ಬಹಿರಂಗಪಡಿಸಿದ್ದರು.

ನೈರುತ್ಯ ಲಂಡನ್‌ನ ಈಶರ್ ರೈಲು ನಿಲ್ದಾಣದಲ್ಲಿ ಆಗಸ್ಟ್ 4ರಂದು ಥೋರ್ಪ್ ಗಂಭೀರ ಗಾಯಗಳೊಂದಿಗೆ ಸಾವಿಗೀಡಾಗಿದ್ದರು ಎಂದು ಸರ್ರೆಯ ವಿಚಾರಣಾ ನ್ಯಾಯಾಲಯದಲ್ಲಿ ತಿಳಿಸಲಾಗಿದೆ.

ಅಲ್ಪಾವಧಿಯ ವಿಚಾರಣೆಯಲ್ಲಿ ನ್ಯಾಯಾಲಯದ ಕೊರೊನರ್ ಆಗಿರುವ ಸೈಮನ್ ವಿಕೆನ್ಸ್ ಅವರು ಥೋರ್ಪ್ ಸಾವಿನ ಕುರಿತಾದ ಹೇಳಿಕೆಯನ್ನು ಧ್ವನಿ-ಮುದ್ರಿಸಿಕೊಂಡರು.

ಈ ಪ್ರಕರಣದ ಪೂರ್ಣಪ್ರಮಾಣದ ತನಿಖೆಯ ದಿನಾಂಕವನ್ನು ಮುಂದೆ ತಿಳಿಸಲಾಗುವುದು ಎಂದರು.

ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿದ್ದ ಥೋರ್ಪ್ 1993 ರಿಂದ 2005ರ ಅವಧಿಯಲ್ಲಿ ಇಂಗ್ಲೆಂಡ್ ತಂಡದಲ್ಲಿ ಆಡಿದ್ದರು. ನಂತರ ಕೋಚ್ ಕೂಡ ಆಗಿದ್ದರು.

ಈ ಮೊದಲು ಥೋರ್ಪ್ ಕುಟುಂಬದವರು ಅವರ ಸಾವಿನ ಕಾರಣವನ್ನು ಬಹಿರಂಗಪಡಿಸಿರಲಿಲ್ಲ.

ಅ.6ರಿಂದ ಬಾಂಗ್ಲಾ ವಿರುದ್ಧ ಟಿ20 ಸರಣಿ

ನವದೆಹಲಿ (ಪಿಟಿಐ): ಭಾರತ ಮತ್ತು ಬಾಂಗ್ಲಾದೇಶ ನಡುವಣ ಟಿ20 ಸರಣಿಯ ವೇಳಾಪಟ್ಟಿಯಲ್ಲಿ ಅಲ್ಪ ಬದಲಾವಣೆಯಾಗಿದ್ದು, ಸರಣಿಯ ಮೊದಲ ಪಂದ್ಯವು ಅಕ್ಟೋಬರ್ 6ರಂದು ಧರ್ಮಶಾಲಾ ಬದಲು ಗ್ವಾಲಿಯರ್‌ನಲ್ಲಿ ನಡೆಯಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮಂಗಳವಾರ ತಿಳಿಸಿದೆ.

ಹಿಮಾಚಲಪ್ರದೇಶ ಕ್ರಿಕೆಟ್ ಸಂಸ್ಥೆ, ಧರ್ಮಶಾಲಾದ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಕೈಗೆತ್ತಿಕೊಂಡಿರುವ ಕಾರಣ ಈ ಬದಲಾವಣೆ ಮಾಡಲಾಗಿದೆ ಎಂದು ಮಂಡಳಿಯ ಮಾಧ್ಯಮ ಪ್ರಕಟಣೆ ತಿಳಿಸಿದೆ.

ಇದು ಗ್ವಾಲಿಯರ್‌ನ ಹೊಸ, ಶ್ರೀಮಂತ್ ಮಾಧವರಾವ್ ಸಿಂಧ್ಯಾ ಕ್ರಿಕೆಟ್ ಕ್ರೀಡಾಂಗಣದ-ಲ್ಲಿ ನಡೆಯಲಿರುವ ಮೊದಲ ಅಂತರರಾಷ್ಟ್ರೀಯ ಪಂದ್ಯವಾಗಲಿದೆ. 2010ರಲ್ಲಿ ಭಾರತ– ದಕ್ಷಿಣ ಆಫ್ರಿಕಾ ಪಂದ್ಯದ ನಂತರ ಈ ನಗರದಲ್ಲಿ ಯಾವುದೇ ಪ್ರಮುಖ ಪಂದ್ಯ ನಡೆದಿಲ್ಲ. ಆ ಪಂದ್ಯದಲ್ಲಿ ಕ್ರಿಕೆಟ್ ಕಣ್ಮಣಿ ಸಚಿನ್ ತೆಂಡೂಲ್ಕರ್ ದ್ವಿಶತಕ ಹೊಡೆದಿದ್ದು, ಈ ಸಾಧನೆಗೈದ ಮೊದಲ ಬ್ಯಾಟರ್ ಎನಿಸಿದ್ದರು.

ಭಾರತ ಮತ್ತು ಇಂಗ್ಲೆಂಡ್ ನಡುವಣ ಟಿ20 ಸರಣಿಯ ಪಂದ್ಯಗಳ ಆತಿಥ್ಯದಲ್ಲೂ ಬದಲಾವಣೆ ಆಗಿದೆ. ಮೊದಲ ಟಿ20 ಪಂದ್ಯದ ಆತಿಥ್ಯ ವಹಿಸಬೇಕಿದ್ದ ಚೆನ್ನೈ, ಪರಿಷ್ಕೃತ ಪಟ್ಟಿಯ ಪ್ರಕಾರ ಎರಡನೇ ಟಿ20 ಪಂದ್ಯದ ಆತಿಥ್ಯ ವಹಿಸಲಿದೆ. ಕೋಲ್ಕತ್ತದ ಈಡನ್‌ಗಾರ್ಡನ್‌ನಲ್ಲಿ ಮೊದಲ ಟಿ20 ಪಂದ್ಯ ನಡೆಯಲಿದೆ.

ಮೊದಲ ಟಿ20 ಪಂದ್ಯ ಜನವರಿ 22ರಂದು (2025) ನಡೆಯಲಿದೆ. ಎರಡನೇ ಏಕದಿನ ಪಂದ್ಯವನ್ನು ಜನವರಿ 25ರಂದು ನಿಗದಿ ಮಾಡಲಾಗಿದೆ.



Toyota Mobility Service Conversion | Fleet | Leasing · TOYOTA U TRUST Buy | Sell | Exchange - Used car · TOYOTA FINANCIAL SERVICES

KARNATAKA: **Bengaluru:** Nandi Toyota, Banashankari 2nd Stage Ph: 7022340713; Nandi Toyota, Banaswadi Ph: 7022340713; Nandi Toyota, Bannerghatta Main Road Ph: 7022340713; Nandi Toyota, Bommanahalli Ph: 7022340713; Nandi Toyota, Hosur Road Ph: 9945255800; Nandi Toyota, Kanakapura Main Road Ph: 9740409858; Nandi Toyota, Queens Road Ph: 9741310066; Nandi Toyota, Whitefield Ph: 7022340713; Ravindu Toyota, K R Puram Ph: 8058245555; Ravindu Toyota, Magadi Road Ph: 8058245555; Ravindu Toyota, Marathahalli Ph: 8058245555; Ravindu Toyota, Rajajinagar Ph: 8058245555; Ravindu Toyota, Victoria Road Ph: 8058245555; Ravindu Toyota, Yeshwanthpur Ph: 8058245555; Viva Toyota, Airport Road, Hunasamarahalli Ph: 9900030617; Viva Toyota, Hebbal Ph: 9900027736; Viva Toyota, Kogilu, Yelahanka Ph: 9900030617; Viva Toyota, Mysore Road Ph: 9900030620; Viva Toyota, Vidayaranyapura Ph: 9900027736; **Bagalkot:** Shodha Toyota, Navnagar Ph: 8147599463; **Belgaum:** Shodha Toyota, Shahapur Ph: 8147599461; Shodha Toyota, Poona-Bangalore Road Ph: 9035246694; **Bellary:** BJS Toyota, Bisanahalli, Anantapur Road Ph: 7829927943; **Bijapur:** Shodha Toyota, Chitradurga-Sholapur Road Ph: 9606484983; **Chikkamagaluru:** Shakti Toyota, Kadur Bypass Road Ph: 9686652728; **Davangere:** Shodha Toyota, Old Pune-Bangalore Road Ph: 9008952277; **Gulbarga:** Karuna Toyota, Bilgundi Garden Ph: 7829990010; **Hassan:** Shakti Toyota, Katihalli Industrial Area Ph: 9686652728; **Hospet:** BJS Toyota, Rajiv Nagar Ph: 7829927943; **Hubli:** Shodha Toyota, Hubli-Dharwad Road Ph: 9606454722; **Hunsur:** Palace Toyota, Hunsur Road Ph: 8971701735; **Kadur:** Shakti Toyota, Haruvanalli Village Ph: 9686652728; **Kodagu:** Palace Toyota, Kushalnagara Ph: 7022671919; **Kolar:** Ravindu Toyota, P C Halli Ph: 9606090040; **Madikeri:** Palace Toyota, Cauvery Hall Ph: 7022671919; **Mandya:** Palace Toyota, Guttalu Grama Ph: 9538874907; **Mangalore:** United Toyota, Bunt's Hostel Ph: 9686687581; United Toyota, Padil Ph: 9686687581; **Mysore:** Palace Toyota, Hootagalli Ph: 9538874906; Palace Toyota, Krishnamurthy Puram Ph: 9538874936; **Raichur:** Karuna Toyota, Near Yermers Camp Cross, Hyderabad Road Ph: 7829990021; **Shivamogga:** Shakti Toyota, Bypass Road Ph: 9686652728; **Sagar:** Shakti Toyota, BH Road Ph: 081-83200402; **Tumkur:** Ravindu Toyota, Sadashivnagar Ph: 9379189796; **Udupi:** United Toyota, Udyavara Ph: 9686687581.

dentsu/pv blr/05/24



^ನಿಯಮ ಮತ್ತು ಷರತ್ತುಗಳು ಅನ್ವಯ. ##ಪೈನ್ ಲ್ಯಾಬ್ಸ್ ಮಶಿನ್‌ಗಳ ಮೂಲಕ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಮಾಡಿದ EMI ವಹಿವಾಟುಗಳಿಗೆ ಮಾತ್ರ ಎಲ್ಲ Honda ಟೂ-ವೀಲರ್ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಕೊಡುಗೆ ಲಭ್ಯವಿರುತ್ತದೆ. ##ಗ್ರಾಹಕರು ರೂ. 5000 ವರೆಗೆ 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಪಡೆಯಬಹುದಾಗಿದೆ. ##ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್‌ಗೆ ಮಾಡಿದ ಒಂದು ವಹಿವಾಟಿನ ಮೇಲೆ ಮಾನ್ಯವಾಗಿದೆ. ##2024 ಆಗಸ್ಟ್ 31ರ ವರೆಗೆ ಕ್ಯಾಶ್‌ಬ್ಯಾಕ್ ಕೊಡುಗೆ ಮಾನ್ಯವಾಗಿದೆ. ##ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಸ್ಕೀಮ್ ಲಭ್ಯವಿದೆ. **ಹಣಕಾಸು ಯೋಜನೆ ಮತ್ತು ಕ್ರೆಡಿಟ್ ಸೌಲಭ್ಯವು IDFC ಫಸ್ಟ್ ಬ್ಯಾಂಕ್‌ನ ("ಬ್ಯಾಂಕ್") ವಿವೇಚನೆಯ ಮೇರೆಗೆ ಸೀಮಿತ ಅವಧಿಗೆ ಮಾತ್ರ ಲಭ್ಯವಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ. *ಮೂಲ: HMSI ಆಂತರಿಕ ಡೇಟಾ ಆಧಾರದಲ್ಲಿ 2001 ಜೂನ್ ಇಂದ 2024 ಜೂನ್‌ವರೆಗಿನ ಬ್ರ್ಯಾಂಡ್ Activaದ ಸಂಚಿತ ಮಾರಾಟ ಅಂಕಿಅಂಶ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com